ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೨

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೮

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಆವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೮ ಸಂಚಿಕೆ ೨

೩೦

ಫೆಬ್ರುವರಿ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೮

MANAVIKA KARNATAKA, Kannada quarterly (Humanities) of the University of Mysore, Volume 8, Number 2, February 1978. Edited by Dr. B. R. Gopal and Dr. B. S. Srikantaradhya.

ಪ್ರಕಾಶಕರು : ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ-570 012

ಮುದ್ರಕರು : ಹರ್ಷ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು–570 008

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ಕೆ. ಜಿ. ರಾಜಲಕ್ಷ್ಮಿ — C/o ಡಾ. ಕೆ. ಎಂ. ಗೋಪಾಲರಾವ್, ರುಕ್ಮಿಣಿ ನಿಲಯ, ಹೊನ್ನಾಳಿ–೫೭೭೨೧೭.

೨ ಬಾ. ವೇ. ಶ್ರೀಧರ — ಸಹಾಯಕ ಸಂಪಾದಕ, ಕನ್ನಡ–ಕನ್ನಡ ನಿಘಂಟು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೧೨

೩ ಒ. ಡಿ. ಹೆಗ್ಗಡೆ — ಅಧ್ಯಾಪಕ, ಅರ್ಥಶಾಸ್ತ್ರವಿಭಾಗ, ಸ್ನಾತಕೋತ್ತರ ಕೇಂದ್ರ, ಮಂಗಳಗಂಗೋತ್ರಿ, ಕೊಣಾಜೆ.

೪ ಡಾ. ಎಸ್. ವೇಣುಗೋಪಾಲಚಾರ್ಯ — ನಂ. 237, ಅಶೋಕನಗರ, ಮಂಡ್ಯ–೫೭೧೪೦೧

೫ ಕೆ. ಮೊಹಮ್ಮದ್ ಶರೀಫ್ — ಶಾಸನ ಸಹಾಯಕರು, ಎಪಿಗ್ರಾಫಿಯ ಕರ್ನಾಟಿಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

೬ ಡಿ. ಎಸ್. ಸೀತಾರಾಮಯ್ಯ — ಮುಖ್ಯಸ್ಥರು, ಶಿಕ್ಷಣವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬.

೭ ನಾಡಿಗ ಕೃಷ್ಣಮೂರ್ತಿ — ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು ಪತ್ರಿಕೋದ್ಯಮ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬.

೮ ಎಸ್. ಶ್ರೀಧರಮೂರ್ತಿ — ಸಂಶೋಧನ ಸಹಾಯಕ, ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦೦೦೬.

೯ ಪು. ತಿ. ನರಸಿಂಹಾಚಾರ್ — ೨ನೆಯ ಮೈನ್ ರಸ್ತೆ, ಜಯಲಕ್ಷ್ಮಿಪುರಂ ಮೈಸೂರು-೫೭೦ ೦೧೨.

೧೦ ಈಚನೂರು ರಾಜರತ್ನಂ — ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ರೂರಲ್ ಕಾಲೇಜು, ಕನಕಪುರ, ಬೆಂಗಳೂರು ಜಿಲ್ಲೆ

ಕೆ. ಜಿ. ರಾಜಲಕ್ಷ್ಮಿ

ಮನು ಕಂಡಂತೆ ಸ್ತ್ರೀ

ಸಾಹಿತ್ಯ ಯಾವುದೇ ಒಂದು ಅಧ್ಯಯನಕ್ಕೆ ಅತ್ಯಗತ್ಯ. ಈ ಮೂಲಕ ಈಗ ನಡೆಯುತ್ತಿರುವುದು ಸಾಮಾಜಿಕವೋ, ಸಾಂಸ್ಕೃತಿಕವೋ ಅಥವಾ ಈ ಎರಡೂ ಒಳಗೊಂಡಂತೆ ಇರುವ, ಆದರೆ ಅವಕ್ಕಿಂತಲೂ ಬೇರೆಯದಾದ ಅಂಶವೊಂದರ ಅಧ್ಯಯನ. ಸದ್ಯಕ್ಕಂತೂ ಇದನ್ನು ಸಾಮಾಜಿಕ ಅಧ್ಯಯನವೆಂದೇ ತಿಳಿಯೋಣ. ಇಂದಿನ ಸಮಾಜದ ಪ್ರತ್ಯಕ್ಷದರ್ಶಿಗಳು ಹಿಂದಿನ ಸಮಾಜವನ್ನು ಸಾಹಿತ್ಯದ ಮೂಲಕವೇ ಕಾಣಬೇಕಿರುವುದರಿಂದ ಆ ಬಗ್ಗೆ ನಿಖರವಾದ ಅರಿವುಂಟಾಗಲು ಸಾಧ್ಯವಿಲ್ಲ. ಏಕೆಂದರೆ ಸಮೀಪದಿಂದ, ಸೂಕ್ಷ್ಮವಾಗಿ ಕಂಡಲ್ಲದೇ ಒಳಗಿನ ವಿಷಯಗಳು ತಿಳಿಯಲಾರವು. ದೂರದಿಂದ ನೋಡುವಾಗ ಮೇಲಿನವು ಹಾಗೂ ಸ್ಥೂಲವಾಗಿರುವಂತಹವು ಮಾತ್ರ ಕಾಣುತ್ತವೆ ಹಿಂದಿನ ಸಮಾಜವನ್ನು ಅಷ್ಟೇನೂ ಗಮನಿಸದಂತೆ ನೋಡಿದರೆ ನಮಗೆ ದೊರೆಯುವುದು ಕೇವಲ ಮೇಲ್ನೋಟವಷ್ಟೇ. ಅದರ ಒಳಹೊಕ್ಕು ನೋಡಬೇಕಾದರೆ ಸಾಮಾಜಿಕ ಅಧ್ಯಯನಕ್ಕೆಂದೇ ಮೀಸಲಾದ ಕೃತಿಗಳ ಒಳಹೊಕ್ಕು ನೋಡಬೇಕಾಗುತ್ತದೆ. ಆಗ ಮಾತ್ರ ಅಂದಿನ ಸಮಾಜದ ಬಗ್ಗೆ ಹೆಚ್ಚು ಸ್ಪಷ್ಟವಾದ ತಿಳಿವಳಿಕೆ ಸಾಧ್ಯ. ಇಂತಹ ಸಮಾಜದ ಚಿತ್ರವನ್ನು ಕೊಡಬಲ್ಲ ಕೃತಿಗಳಲ್ಲಿ ಮನುಸ್ಮೃತಿಯೂ ಒಂದು

ಮನುಸ್ಮೃತಿ ಕೇವಲ ಒಂದು ಪವಿತ್ರ ಧರ್ಮಗ್ರಂಥವಷ್ಟೇ ಅಲ್ಲ, ಒಂದು ಕಾಲದ ಸಾಮಾಜಿಕ ಅಧ್ಯಯನಕ್ಕೆ ತಕ್ಕುದಾದ ಶಾಸನಗ್ರಂಥ ಇದರ ಕಾಲವನ್ನು ದಂತ ಕಥೆಗಳು ಅನಾದಿ ಎಂದು ತಿಳಿಸಿದರೆ ಇತಿಹಾಸ ಹಾಗೂ ಭಾಷಾವಿಜ್ಞಾನಿಗಳ ತೀರ್ಮಾನವು ಕ್ರಿ.ಪೂ. 3ನೆಯ ಶತಮಾನದಿಂದ ಕ್ರಿ.ಶ. 3ನೆಯ ಶತಮಾನದ ನಡುವಣ ಅವಧಿ ಎಂಬುದು. ಇದೊಂದು ಸಾಮಾಜಿಕ ಅಧ್ಯಯನದ ಕೃತಿಯಾದರೂ ಮೂಲವು ಶುದ್ಧರೂಪದಲ್ಲಿ ಇಂದು ದೊರೆಯುತ್ತಿಲ್ಲ. ಅಂದಿನ ಇದರ ಜನಪ್ರಿಯತೆ ಅನಂತರದ ಹಲಕೆಲವರು ತಮ್ಮ ದೃಷ್ಟಿಕೋನಗಳನ್ನು ಇದರಲ್ಲಿ ಸೇರಿಸುವಂತೆ ಪ್ರೇರೇಪಿಸಿತು. ಈ ಕಾರಣದಿಂದ ಮನುಸ್ಮೃತಿಯು ಯಾವೊಂದು ಕಾಲದ, ಯಾವೊಂದು ವ್ಯಕ್ತಿಯ ಅಭಿಪ್ರಾಯವಲ್ಲ. ಮೂಲ ಯಾವುದು, ಸೇರ್ಪಡೆ ಯಾವುದು ಎಂಬುದೇ ತಿಳಿಯದಂತೆ ಬೆರೆತಿರುವ ಶಾಸನ ; ಅಭಿಪ್ರಾಯಗಳು ಅನೇಕ ಕಡೆಗಳಲ್ಲಿ ಯಾವೊಂದನ್ನೂ ಸ್ಪಷ್ಟವಾಗಿ ತಿಳಿಯಲಾರದಂತೆ ಮಾಡಿ ಗೊಂದಲವನ್ನೆಬ್ಬಿಸುತ್ತವೆ. ಇಷ್ಟೆಲ್ಲಾ ಇದ್ದಾಗಲೂ ಇಂದಿಗೂ ಇದೊಂದು ಅತ್ಯುತ್ತಮ ಶಾಸನಗ್ರಂಥವಾಗಿ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿರುವುದು ಒಂದು ವಿಶೇಷವೇ ಸರಿ.

ಸ್ತ್ರೀಗೆ ಸಮಾಜವು ನೀಡಿದ ಸ್ಥಾನವು ಸಮಾಜದ ಅಂದಿನ ಸ್ಥಿತಿಯನ್ನು ಸೂಚಿಸುತ್ತದೆ. ಸಮಾಜದ ಅವಿಭಾಜ್ಯ ಅಂಗವಾಗಿರುವ ಸ್ತ್ರೀಗೆ ಸಮಾಜವಿತ್ತ ಸ್ಥಾನವನ್ನು ತಿಳಿಯದೇ ಯಾವೊಂದು ಸಮಾಜರಚನೆಯ ಅಧ್ಯಯನವೂ ಪೂರ್ಣವೆನಿಸದು. ಸಾಹಿತ್ಯವು ಪ್ರಚಲಿತವಿರುವ ಎಲ್ಲಾ ಕಾಲದಲ್ಲಿಯೂ ಸಮಾಜದಲ್ಲಿ ಸ್ತ್ರೀಯ ಸ್ಥಾನಮಾನವು ಸ್ವಲ್ಪಂಶವಾದರೂ ಅದ

ರಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ ಎಲ್ಲರಲ್ಲಿಯೂ ಹಿಂದಿನ ಕಾಲದಲ್ಲಿ ನಮ್ಮ ಸಮಾಜದಲ್ಲಿ ಸ್ತ್ರೀಗೆ ಉತ್ತಮ, ಉನ್ನತ ಸ್ಥಾನವಿದ್ದಿತೆಂಬ ಭಾವನೆ ಇದೆ. ಆದರೆ ಅಂದಿನ ಸಮಾಜದ ಪ್ರೇಕ್ಷಕರು ನಾವಲ್ಲವಾದ್ದರಿಂದ ಸಾಹಿತ್ಯದ ಸಹಾಯದಿಂದ ನೋಡಬೇಕು. ಇನ್ನೊಂದೆರಡು ಶತಮಾನಗಳ ನಂತರದ ಭಾರತದ ಪೀಳಿಗೆಯು ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ತಮ್ಮ ದೇಶದಲ್ಲಿ ಸ್ತ್ರೀಯು ಅತ್ಯುನ್ನತ ಸ್ಥಾನ ಹೊಂದಿದ್ದಳೆಂದು ಭಾವಿಸಬಹುದು. ಇದಕ್ಕೆ ಅವರಿಗೆ ದೊರೆಯುವ ಆಧಾರ ಭಾರತದ ಪ್ರಧಾನಿಗಳಲ್ಲೊಬ್ಬರು ಸ್ತ್ರೀಯಾಗಿದ್ದುದು. ಆದರೆ ವಾಸ್ತವವಾಗಿ ಹಾಗಿದೆಯೆ? ಇದೇ ರೀತಿಯಲ್ಲಿಯೇ ಸಾಮಾನ್ಯ ಸ್ತ್ರೀಯ ಸ್ಥಾನಮಾನಗಳನ್ನು ಮೇಲ್ನೋಟಕ್ಕೇ ತಿಳಿಯುವುದು ಅಸಾಧ್ಯ. ಇತಿಹಾಸದಲ್ಲಿ ಕೆಲವು ಉನ್ನತ ಸ್ಥಾನ ಪಡೆದ (ಉದಾ. ರಾಣಿಯರು) ಸ್ತ್ರೀಯರ ಬಗ್ಗೆ ಮಾತ್ರ ತಿಳಿಯಬಹುದಷ್ಟೇ. ಆದರೆ ಸಮಾಜದ ಅಧ್ಯಯನಕ್ಕೆ ಬೇಕಾಗುವುದು ಸಾಮಾನ್ಯ ಸ್ತ್ರೀ' ಪಡೆದ ಸ್ಥಾನ.

ಸ್ತ್ರೀ ಪರಾಧೀನೆ ಎನ್ನುವುದನ್ನೂ ಸ್ತ್ರೀ ಪೂಜಾರ್ಹಳು ಎನ್ನುವುದನ್ನೂ ಸಮರ್ಥಿಸಲು ಸಾಮಾನ್ಯವಾಗಿ ಆರಿಸುವ ಆಧಾರ, ತೋರಿಸುವ ಸಾಕ್ಷ್ಯ ಮನುಸ್ಮೃತಿ. • ಈ ಎರಡೂ ಹೇಳಿಕೆಗಳು ಪರಸ್ಪರ ವಿರೋಧವಾಗಿ ಕಂಡುಬಂದರೂ ಇವುಗಳ ಆಕರ ಗ್ರಂಥ ಒಂದೇ ಎಂಬುದಂತೂ ನಿಜ. ಒಳಹೊಕ್ಕು ಅದರ ಸ್ಪಷ್ಟ ಉದ್ದೇಶವನ್ನು ಹುಡುಕ ಹೊರಟಾಗ ಕಾಣುವ ದೃಶ್ಯ ಈ ಎರಡಕ್ಕಿಂತಲೂ ಬಹಳವೇನೂ ಭಿನ್ನವಾಗಿರದಿದ್ದರೂ ಇವುಗಳ ಕಲಸುಮೇಲೋಗರದಂತೆ ಕಾಣಬಹುದು.

ಮನುಸ್ಮೃತಿಯು ಪ್ರಾರಂಭದಲ್ಲಿ ಬ್ರಹ್ಮನು ತನ್ನ ದೇಹವನ್ನು ಇಬ್ಭಾಗ ಮಾಡಿಕೊಂಡಾಗ ಒಂದರಿಂದ ಪುರುಷನೂ ಮತ್ತೊಂದರಿಂದ ಸ್ತ್ರೀಯೂ ಸೃಷ್ಟಿಯಾದರೆಂದು ತಿಳಿಸುತ್ತದೆ.

> ದ್ವಿಧಾ ಕೃತ್ವಾಽತ್ಮನೋ ದೇಹೇನರ್ಧೇನ ಪುರುಷೋಽಭವತ್ ।
> ಅರ್ಧೇನ ನಾರೀ ತಸ್ಯಾಂ ಚ ವಿರಾಜಮಸೃಜತ್ಪ್ರಭುಃ ॥[1]

ಇಬ್ಬರೂ ಸಮಾನರೆಂದೇ ಸೃಷ್ಟಿಯಾದರೂ ಇಲ್ಲಿ ನಮಗೆ ದೊರೆಯುವುದು ಪುರುಷಪ್ರಧಾನ ಸಮಾಜ. ಪುರುಷನ ಕರ್ತವ್ಯವು ಸಮಾಜದೆಡೆಗಾದರೆ ಸ್ತ್ರೀಯದು ಪುರುಷನೆಡೆಗೆ. ಈ ಕಾರಣದಿಂದ ಸ್ತ್ರೀಯನ್ನು ಪುರುಷಸಂಬಂಧಿಯಾಗಿಯೇ ಗಮನಿಸಿ ಅಧ್ಯಯನ ಮಾಡಬೇಕಾಗುತ್ತದೆ. ಇದಕ್ಕಾಗಿ ನಾಲ್ಕು ಭಾಗಗಳಲ್ಲಿ ಆಕೆಯ ಸ್ಥಾನಮಾನಗಳನ್ನು ಗುರುತಿಸುವ ಯತ್ನ ಮಾಡಬಹುದು: ೧ ಮಗಳು, ೨ ಮಡದಿ, ೩ ಮಾತೆ, ಮತ್ತು ೪ ವಿಧವೆ—ಈ ರೀತಿಯಲ್ಲಿ ಸಮಾಜದೆಡೆಗಿನ ಆಕೆಯ ಕರ್ತವ್ಯ ಅಥವಾ ಬಾಳ್ವೆಯ ರೀತಿಯನ್ನು ಅಧ್ಯಯನ ಮಾಡಬಹುದು.

ಮಗಳು ಕೋಮಲತೆಯ ಪರಾಕಾಷ್ಠೆ. ಮಗಳು ಹುಟ್ಟಿದೊಡನೆಯೇ ತಂದೆಗೆ ಆಕೆಯ ವಿವಾಹದ ಚಿಂತೆ. ಮನುಸ್ಮೃತಿಯು ಬಾಲ್ಯವಿವಾಹವನ್ನು ಕುರಿತು ಹೇಳುತ್ತದೆಯಾದರೂ ಅದೊಂದು ಕಡ್ಡಾಯ ವಿಧಿಯೆಂದು ತಿಳಿಸುವುದಿಲ್ಲ. ಸೂತ್ರಗಳ ಕಾಲದಲ್ಲಿ ಪ್ರಚಲಿತವಿದ್ದ ವರದಕ್ಷಿಣೆಯನ್ನು ಮನುಸ್ಮೃತಿ ವಿರೋಧಿಸುತ್ತದೆಯಾದ್ದರಿಂದ ವಿವಾಹವು ಆರ್ಥಿಕವಾಗಿ ಅಂಥ ತೊಂದರೆಗಳನ್ನು ಒಡ್ಡುತ್ತಿದ್ದಿರಲಾರದು. ಕನ್ಯೆಯು ಹೊಂದಿರಬೇಕಾದ ಹಲವು ಗುಣಗಳು ಮತ್ತು ಹೊಂದಿರಬಾರದ ದೋಷಗಳು ಅದನ್ನೊಂದು ಸಮಸ್ಯೆಯನ್ನಾಗಿಸಿದ್ದವೇನೋ.

ಪ್ರಮಾಣಬದ್ಧವಾದ, ಮೃದುವಾದ ಅಂಗಾಂಗಗಳನ್ನುಳ್ಳ, ಸೌಮ್ಯವಾದ ಹೆಸರುಳ್ಳ, ಹಂಸ ಅಥವಾ ಗಜಗಮನೆಯಾದ, ನಯವಾದ ಕೇಶ ಮತ್ತು ದಂತಗಳನ್ನುಳ್ಳವಳು ಮಾತ್ರವೇ

---

1 'ಮನುಸ್ಮೃತಿ', ಅಧ್ಯಾಯ I, ಶ್ಲೋಕ 32

ವಿವಾಹಯೋಗ್ಯಳು.[1] ಕೆಂಪು ಕಣ್ಣುಗಳು, ಕಂದುಕೂದಲು, ವಾಚಾಳಿತನ, ಅಧಿಕ ಬೆಳವಣಿಗೆ, ನಕ್ಷತ್ರ, ಪಕ್ಷಿ, ಮರ, ಪರ್ವತ ಮೊದಲಾದವುಗಳ ಹೆಸರು—ಇವುಗಳನ್ನು ಹೊಂದಿದವಳು ವಿವಾಹಕ್ಕೆ ಅನರ್ಹಳು. ಇವು ಕನ್ಯೆಯಲ್ಲಿನ ದೋಷಗಳಾದರೆ ಇನ್ನು ಅವಳ ಕುಲದಲ್ಲಿನ ಕೆಲವು ದೋಷಗಳೂ ಅವಳನ್ನು ವಿವಾಹಕ್ಕೆ ಅನರ್ಹಳಾಗಿಸುತ್ತವೆ. ವೈದಿಕ ಆಚರಣೆಗಳಲ್ಲಿ ವಿಶೇಷ ಗಮನ ನೀಡದಿರುವ, ವಂಶಪಾರಂಪರ್ಯ ರೋಗಗಳೆಂದು ಪರಿಗಣಿಸಲಾದ ಕುಷ್ಠ, ಬಿಳಿಮಚ್ಚೆ, ಮೂಲವ್ಯಾಧಿ, ಅಗ್ನಿಮಾಂದ್ಯ, ಅಪಸ್ಮಾರ ಮುಂತಾದ ರೋಗಗಳಿರುವ, ಗಂಡುಸಂತಾನವಿಲ್ಲದ ಕುಟುಂಬಗಳ ಹಾಗೂ ತಂದೆ ತಿಳಿದಿರದ ಕನ್ಯೆಗೆ ವಿವಾಹದ ಅಧಿಕಾರವಿಲ್ಲ. ಸೋದರರಿಲ್ಲದವಳು ಪುತ್ರಿಕಾಧರ್ಮದ ಕಾರಣದಿಂದಲೂ ತಂದೆಯನ್ನು ತಿಳಿಯದವಳು ಸಪಿಂಡವಿರಬಹುದೆಂಬ ಕಾರಣ ದಿಂದಲೂ ತಿರಸ್ಕೃತಳಾಗುವಳು. ಒಳ್ಳೆಯ ಕುಲದ, ಸುಂದರನಾದ, ತನ್ನದೇ ವರ್ಣದ ವರನು ಸಿಗದಿದ್ದಲ್ಲಿ ಕನ್ಯೆಯು ತನ್ನ ಅಂತ್ಯದವರೆಗೂ ತಂದೆಯ ಮನೆಯಲ್ಲಿ ಉಳಿಯುವುದೇ ಮೇಲು.[2] ಋತುಮತಿಯಾಗುವ ಮೊದಲೇ ತಂದೆಯಾದವನು ಮಗಳಿಗೆ ವಿವಾಹ ಮಾಡ ಬೇಕು. ಆದರೆ ಹಾಗೆ ಮಾಡದಿದ್ದಲ್ಲಿ ಆಕೆಯೇನೂ ತನ್ನವರಿಂದ, ತನ್ನ ಸಮಾಜದಿಂದ ಬಹಿಷ್ಕೃತಳಾಗುತ್ತಿರಲಿಲ್ಲ. ಋತುಮತಿಯಾದ ಮಗಳ ಮೇಲಿನ ಅಧಿಕಾರವನ್ನು ಮಾತ್ರ ತಂದೆ ಕಳೆದುಕೊಳ್ಳುತ್ತಿದ್ದನಾದರೂ ಅನಂತರವೂ ತನ್ನ ಕರ್ತವ್ಯಪಾಲನೆಗಾಗಿ ತನ್ನ ಮಗಳ ವಿವಾಹದ ಪ್ರಯತ್ನವನ್ನು ಮುಂದುವರಿಸುತ್ತಿದ್ದ. ಋತುಮತಿಯಾದ ಕನ್ಯೆಯು ಮೂರು ವರ್ಷಗಳವರೆಗೆ ಕಾದು, ತಂದೆಯು ತನ್ನ ವಿವಾಹವನ್ನು ನಡೆಸದಿದ್ದಲ್ಲಿ, ತನ್ನ ಪತಿಯನ್ನು ತಾನೇ ಆರಿಸಿಕೊಳ್ಳಬಹುದು. ವಿವಾಹ ವಯೋಮಿತಿ-ವಧುವಿಗೆ ಎಂಟು ಅಥವಾ ಹನ್ನೆರಡು ವರ್ಷಗಳು; ವರನಿಗೆ ಕ್ರಮವಾಗಿ ಇಪ್ಪತ್ತು ಅಥವಾ ಇಪ್ಪತ್ತನಾಲ್ಕು ವರ್ಷಗಳು. ವಿವಾಹ ಕಾಲದಲ್ಲಿ ವಧುವಿಗೆ ವರನ ಕಡೆಯವರಿಂದ ವಿವಾಹನಿಧಿಯನ್ನು ನೀಡಲಾಗುತ್ತಿತ್ತು. ಅದೊಂದೇ ಆಕೆಯ ಮತ್ತು ಆಕೆಯೊಬ್ಬಳ ಆಸ್ತಿ; ಅದರ ಮೇಲೆ ಬೇರೆಯವರಿಗೆ ಅಧಿಕಾರವಿಲ್ಲ.

ವಿವಾಹ ನಿಶ್ಚಯವಾದ ಬಾಲಿಕೆಗೆ 'ವಾಗ್ದತ್ತಾ' ಎನ್ನುವರು. ಅಂಥವಳ ಭಾವೀ ಪತಿಯು ಮೃತನಾದಲ್ಲಿ ಆಕೆ ಜೀವಮಾನಪರ್ಯಂತ ಅವಿವಾಹಿತಳಾಗಿ ತನ್ನ ತಂದೆಯ ಮನೆಯಲ್ಲೇ ಉಳಿಯಬೇಕು. ಆಕೆಯನ್ನು ಬೇರೊಬ್ಬರಿಗೆ ವಿವಾಹ ಮಾಡಿಕೊಟ್ಟಲ್ಲಿ ಆಕೆಯ ತಂದೆ ಅಸತ್ಯವನ್ನು ಗೌರವಿಸಿದ ಅಪರಾಧಕ್ಕಾಗಿ ಶಿಕ್ಷಾರ್ಹನಾಗುತ್ತಾನೆ. ವಾಗ್ದತ್ತೆಯು ವಿವಾಹನಿಧಿಯನ್ನು ಸ್ವೀಕರಿಸಿದ್ದಲ್ಲಿ ಅದನ್ನು ಹಿಂದಿರುಗಿಸಬೇಕು ಅಥವಾ ತಾನೇ ಇಷ್ಟಪಟ್ಟಲ್ಲಿ ತನ್ನ ಭಾವೀ ಮೈದುನನನ್ನು ಆಕೆ ವಿವಾಹವಾಗಬಹುದು.

ಒಬ್ಬ ಕನ್ಯೆ ವಿವಾಹಯೋಗ್ಯಳಾಗಿರಬೇಕಾದರೆ ಅಧಿಕವಾದ ದೈಹಿಕ ಬೆಳವಣಿಗೆ ಇರಕೂಡ ದೆಂದು ತಿಳಿಸುತ್ತದೆ ಮನುಸ್ಮೃತಿ. ಆದರೆ ಇದನ್ನು ನಿಯಂತ್ರಿಸುವುದು ಆಕೆಯ ಕೈಯಲ್ಲಿದೆಯೆ? ಅಂತೆಯೇ ಆಕೆಯ ದೇಹದ ಲಕ್ಷಣ-ದೋಷಗಳಿಗೆ ಆಕೆಯೇ ಬಾಧ್ಯಳೇ? ತಾರಾ, ರೇವತೀ, ರೋಹಿಣೀ, ಕೋಕಿಲಾ ಮುಂತಾದ ಹೆಸರುಳ್ಳ ಕನ್ಯೆಯರಿಗೆ ವಿವಾಹವೇ ಇಲ್ಲ. ನಾಮಕರಣ ಮಾಡುವವನು ಆಕೆಯ ತಂದೆ. ತಂದೆಯ ತಪ್ಪಿಗೆ ಮಗಳು ಹೊಣೆಯೇ? ವಂಶಪಾರಂಪರ್ಯ ರೋಗಗಳನ್ನು ಹೊಂದಿದ ಕುಲದ ಕನ್ಯೆಯನ್ನು ಯಾರೂ ವಿವಾಹವಾಗಕೂಡದೆನ್ನುವುದನ್ನು—ಆ

---

1 ಅವ್ಯಂಗಾಂಗೀಂ ಸೌಮ್ಯನಾಮ್ನೀಂ ಹಂಸವಾರಣಗಾಮಿನೀಮ್ ।
ತನುಲೋಮಕೇಶದಶನಾಂ ಮೃದ್ವಂಗೀ ಮುದ್ವಹೇ ಸ್ತ್ರಿಯಮ್ ॥
ಅಧ್ಯಾಯ III, ಶ್ಲೋಕ 10

2 ಕಾಮಮಾಮರಣಾತ್ತಿಷ್ಠೇದ್ಗೃಹೇ ಕನ್ಯರ್ತುಮತ್ಯಪಿ ।
ನಚೈವೈನಾಂ ಪ್ರಯಚ್ಛೇತ್ತು ಗುಣಹೀನಾಯ ಕರ್ಹಿಚಿತ್ ॥
ಅಧ್ಯಾಯ IX, ಶ್ಲೋಕ 89

ರೋಗಗಳು ಮುಂದೆ ತನ್ನ ಸಂತಾನದಲ್ಲಿಯೂ ಕಂಡುಬಂದೀತೆಂಬ ಭಯದ ಕಾರಣವಿರಬಹುದೆಂದು—ಒಪ್ಪಬಹುದಾದರೂ ಅವೇ ರೋಗಗಳಿಂದ ಕೂಡಿದ ಪುರುಷನಿಗೇಕೆ ವಿವಾಹ ನಿಷಿದ್ಧವಲ್ಲ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಅದಕ್ಕೆ ಸಮರ್ಪಕ ಉತ್ತರವಂತೂ ದೊರೆಯಲಾರದು. ವಾಗ್ದತ್ತೆಯ ಭಾವೀಪತಿಯು ಮೃತನಾದಲ್ಲಿ ಆಕೆಯು ವಿಧವೆಯಾದಂತೆ. ಅಂದ ಮೇಲೆ ಆಕೆ ತನ್ನ ತಂದೆಯ ಮನೆಯಲ್ಲಿಯೇ ಏಕೆ ಉಳಿಯಬೇಕು? ತನ್ನ ಭಾವೀಪತಿಯ ಮನೆಯೇ ಆಕೆಯ ನಿವಾಸವಾಗಬೇಕಲ್ಲವೆ? ವಿವಾಹನಿಧಿಯನ್ನು ಆಕೆ ಸ್ವೀಕರಿಸಿದ್ದಲ್ಲಿ, ಆಕೆ ವಿಧವೆಯೆಂದೇ ಪರಿಗಣಿತಳಾಗಿರುವಾಗ, ಅದನ್ನು ಹಿಂತಿರುಗಿಸಬೇಕಾದ ಅಗತ್ಯವಾದರೂ ಏನು? ಹಾಗೆ ಆಕೆಯಿಂದ ಅದನ್ನು ಸ್ವೀಕರಿಸುವುದರಿಂದ ವಿಧವೆಯೋರ್ವಳ ಆಸ್ತಿ ಅಥವಾ ಜೀವನಾಧಾರವನ್ನೇ ಕಸಿದುಕೊಂಡಂತಾಗುವುದಿಲ್ಲವೆ?

ಮಡದಿಯಾಗಿ ಸ್ತ್ರೀಯ ಸ್ಥಾನಮಾನವೇನೆಂಬುದನ್ನು ಅರಿಯುವ ಯತ್ನವನ್ನಿಲ್ಲಿ ಮಾಡಬಹುದು. ಸ್ತ್ರೀಗೆ ವಿವಾಹವೇ ವೈದಿಕ ಸಂಸ್ಕಾರ ಮತ್ತು ಪತಿಯೇ ಗುರುವು.

> ವೈವಾಹಿಕೋ ವಿಧಿಃ ಸ್ತ್ರೀಣಾಂ ಸಂಸ್ಕಾರೋ ವೈದಿಕಃ ಸ್ಮೃತಃ ।
> ಪತಿಸೇವಾ ಗುರೌವಾಸೋ ಗೃಹಾರ್ಥೋಽಗ್ನಿಪರಿಕ್ರಿಯಾ ॥[1]

ಕನ್ಯೆಯನ್ನು ದಾನದ ಮೂಲಕ ಪುರುಷನಿಗೊಪ್ಪಿಸಲಾಗುವುದು ವಿವಾಹದ ದಿನದಿಂದ ಆಕೆ ಆತನ ಸ್ವತ್ತಾಗುವಳು. ಸದಾಕಾಲವೂ ಆಕೆ ತನ್ನ ಪತಿಗೆ ಅಧೀನಳಾಗಿಯೇ ಇರಬೇಕು. ಪತ್ನಿಯ ಬಳಿ ಇರುವ, ಆಕೆ ಗಳಿಸುವ ಎಲ್ಲಾ ಸ್ವತ್ತೂ, ತಾನೇ ತನ್ನ ಪತಿಗೆ ಅಧೀನೆಯಾದ್ದರಿಂದ, ಪತಿಗೇ ಸೇರಿದ್ದು. ಸಮುದ್ರವನ್ನು ಸೇರಿದ ನದಿಯು ಉಪ್ಪಿನ ಗುಣವನ್ನು ಹೊಂದುವಂತೆ ಪತ್ನಿಯು ಪತಿಯ ಒಳ್ಳೆಯ ಅಥವಾ ಕೆಟ್ಟ ಗುಣಗಳನ್ನು ಹೊಂದುತ್ತಾಳೆ.

ವಿವಾಹಾನಂತರ ಪತಿಪತ್ನಿಯರು ಒಬ್ಬರನ್ನೊಬ್ಬರು ಅಗಲಕೂಡದು. ಎಲ್ಲಾ ವಿಷಯಗಳಲ್ಲೂ ಕೊನೆಯವರೆಗೂ ಪರಸ್ಪರ ಹೊಂದಾಣಿಕೆಯಿರಬೇಕು. ಅಂಥ ಮನೆಯಲ್ಲಿ ಮಾತ್ರ ಸುಖದ ಸಾಮ್ರಾಜ್ಯವಿರುತ್ತದೆ.

> ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವಚ ।
> ಯಸ್ಮಿನ್ನೇವ ಕುಲೇ ನಿತ್ಯಂ ಕಲ್ಯಾಣಂ ತತ್ರ ವೈ ಧ್ರುವಮ್ ॥[2]

> ಅನ್ಯೋನ್ಯಸ್ಯಾವ್ಯಭಿಚಾರೋ ಭವೇದಾಮರಣಾಂತಿಕಃ ।
> ಏಷ ಧರ್ಮಃ ಸಮಾಸೇನ ಜ್ಞೇಯಃ ಸ್ತ್ರೀಪುಂಸಯೋಃ ಪರಃ ॥[3]

> ತಥಾ ನಿತ್ಯಂ ಯತೇಯಾತಾಂ ಸ್ತ್ರೀಪುಂಸೌ ತು ಕೃತಕ್ರಿಯಾ ।
> ಯಥಾ ನಾಭಿಚರೇತಾಂ ತೌ ವಿಯುಕ್ತಾವಿತರೇತರಮ್ ॥[4]

ಪತಿ ತನ್ನ ಪತ್ನಿಯನ್ನು ಪರಿತ್ಯಜಿಸುವಂತಿಲ್ಲ. ಏಕೆಂದರೆ ಆಕೆ ಆತನಿಗೆ ಭಗವಂತನ ಕೊಡುಗೆ. ಆಕೆ ಮನೆಯನ್ನು ಬೆಳಗುವ ಜ್ಯೋತಿ. ಮನೆಗೆ ಇನ್ನೊಂದು ಹೆಸರೇ ಮಡದಿ. ಸಂತೋಷದಿಂದ ಬುದ್ಧಿವಂತಿಕೆಯಿಂದ ಮನೆಗೆಲಸಗಳನ್ನು ನಿರ್ವಹಿಸುತ್ತಾ, ಆಯವ್ಯಯಗಳನ್ನು ಜಾಣ್ಮೆಯಿಂದ ನೋಡಿಕೊಳ್ಳುತ್ತಾ, ಮನೆಯನ್ನು ಶುಚಿಯಾಗಿಟ್ಟುಕೊಂಡು ತನ್ನ ಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಬೇಕು ಪತ್ನಿಯಾದವಳು. ಪತಿಯೂ ಆಕೆ ಸಂತೋಷದಿಂದಿರುವಂತೆ ನೋಡಿಕೊಳ್ಳಬೇಕು. ಏಕೆಂದರೆ ಅಸಂತುಷ್ಟ ಪತ್ನಿಯು ತನ್ನ ಪತಿಗೆ ಸುಖವನ್ನು ನೀಡಲಾರಳು; ವಂಶಾಭಿವೃದ್ಧಿ ಕಾರ್ಯವು ನಡೆಯಲಾರದು.

1 ಅಧ್ಯಾಯ II, ಶ್ಲೋಕ 67 2 ಅಧ್ಯಾಯ III, ಶ್ಲೋಕ 60
3 ಅಧ್ಯಾಯ IX, ಶ್ಲೋಕ 101 4 ಅಧ್ಯಾಯ IX, ಶ್ಲೋಕ 102

ಪತಿಯು ಎಷ್ಟೇ ದುರ್ಬಲನಾಗಿದ್ದರೂ ತನ್ನ ಪತ್ನಿಯನ್ನು ರಕ್ಷಿಸುವ ಪ್ರಯತ್ನವನ್ನು ಮಾಡಬೇಕು. ಆತ ಕಾರಣಾಂತರದಿಂದ ಪ್ರವಾಸ ಹೋಗಬೇಕಾದಲ್ಲಿ ತನ್ನ ಪತ್ನಿಯ ಜೀವಿತದ ವ್ಯವಸ್ಥೆಯನ್ನು ಮಾಡಿಟ್ಟು ಹೋಗಬೇಕು. ಹಾಗೊಂದು ವೇಳೆ ಮಾಡದೇ ಹೋದಲ್ಲಿ ಆಕೆಯು ದೋಷರಹಿತ ಕಾರ್ಯಗಳಿಂದ ತನ್ನ ಬದುಕನ್ನು ಸಾಗಿಸಬೇಕು. ಆತನ ಅಗಮನಕ್ಕಾಗಿ ಗರಿಷ್ಠ ಎಂಟು ವರ್ಷಗಳ ಕಾಲ ಕಾಯಬೇಕು. ಅನಂತರ ಆತನನ್ನರಸಿ ಹೊರಡಬೇಕು. ಒಬ್ಬ ಪತಿ ತನ್ನನ್ನು ದ್ವೇಷಿಸುವ ಪತ್ನಿಗೆ ಒಂದು ವರ್ಷದ ಮಿತಿಯನ್ನು ನೀಡಿ, ಆ ಅವಧಿಯಲ್ಲೂ ಆಕೆ ತನ್ನನ್ನು ತಿದ್ದಿಕೊಳ್ಳದ ಪಕ್ಷದಲ್ಲಿ, ಆಕೆಗೆ ತಾನಿತ್ತ ಒಡವೆ ವಸ್ತುಗಳನ್ನು ಅಥವಾ ಆಕೆಯ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡು ಆಕೆಯೊಡನೆ ಬಾಳುವುದನ್ನು ನಿಲ್ಲಿಸಬಹುದು. ಜೂಜು ಕೋರ, ಕುಡುಕ ಅಥವಾ ರೋಗಿಷ್ಠ ಪತಿಯಲ್ಲಿ ಅನಾಸಕ್ತೆಯಾದ ಪತ್ನಿಯ ಒಡವೆಗಳನ್ನು ಮರ ಪಡಿಸಿಕೊಳ್ಳುವುದಷ್ಟೇ ಅಲ್ಲದೆ ಮೂರು ತಿಂಗಳ ಕಾಲ ಪತಿಯೊಡನಿರುವ ಅವಕಾಶವನ್ನೂ ಕಿತ್ತುಕೊಳ್ಳಲಾಗುವುದು. ಅಶಕ್ತತೆ, ಕೆಟ್ಟರೋಗ, ಉನ್ಮಾದ, ಹಾದಿ ತಪ್ಪುವಿಕೆ—ಈ ಕಾರಣ ಗಳಿಂದಾಗಿ ಪತ್ನಿಯಿಂದ ತಿರಸ್ಕೃತನಾದ ಪತಿಗೆ ಆಕೆಯನ್ನು ತ್ಯಜಿಸಲೂ ಆಭರಣಗಳನ್ನು ಮರ ಪಡಿಸಿಕೊಳ್ಳಲೂ ಯಾವ ಅಧಿಕಾರವೂ ಇರುವುದಿಲ್ಲ. ಪತ್ನಿಯು ಮಾದಕ ದ್ರವ್ಯಗಳನ್ನು ಸೇವಿಸು ತ್ತಿದ್ದರೆ, ಕೆಟ್ಟ ಕೆಲಸ ಮಾಡಿದರೆ, ಪತಿಯನ್ನು ವಿರೋಧಿಸುತ್ತಿದ್ದರೆ, ದುಂದುಗಾರಿಕೆ ಮಾಡು ತ್ತಿದ್ದರೆ, ಪತಿಯನ್ನು ಮತ್ತಿತರ ಬಂಧುಗಳನ್ನು ಹೊಡೆಯುತ್ತಿದ್ದರೆ ಪತಿಯು ಮರುವಿವಾಹ ಮಾಡಿಕೊಳ್ಳಬಹುದು. ಪತ್ನಿಯು ಬಂಜೆಯಾದಲ್ಲಿ ಎಂಟನೆಯ ವರ್ಷದಲ್ಲಿ, ಮಕ್ಕಳು ಮೃತ ರಾಗಿದ್ದರೆ ಹತ್ತನೆಯ ವರ್ಷದಲ್ಲಿ, ಗಂಡುಮಕ್ಕಳಿಲ್ಲದಿದ್ದರೆ ಹನ್ನೊಂದನೆಯ ವರ್ಷದಲ್ಲಿ ಮರು ವಿವಾಹ ಮಾಡಿಕೊಳ್ಳಬಹುದು. ಪತ್ನಿಯು ಪತಿಗೆ ಒಪ್ಪಿಗೆಯಾಗದ ಮಾತನ್ನಾಡಿದರೆ ಆ ಕ್ಷಣದಲ್ಲೇ ಆತ ಮರುಮದುವೆಯಾಗಬಹುದು.

> ವಂಧ್ಯಾಷ್ಟಮೇಽಧಿವೇದ್ಯಾಬ್ದೇ ದಶಮೇ ತು ಮೃತಪ್ರಜಾ ।
> ಏಕಾದಶೇ ಸ್ತ್ರೀಜನನೀ ಸದ್ಯಸ್ತ್ವಪ್ರಿಯವಾದಿನೀ ॥[1]

ಸುಗುಣೆಯಾದ ಮತ್ತು ಪ್ರಿಯಳಾದ ಪತ್ನಿಯು ಅನಾರೋಗ್ಯಕ್ಕೆ ತುತ್ತಾದರೆ ಆಕೆಯ ಅನುಮತಿ ಯನ್ನು ಪಡೆದೇ ಪತಿಯು ಮರುವಿವಾಹವಾಗಬೇಕು. ಆಕೆಯನ್ನು ಹೀನಾಯವಾಗಿ ಕಾಣ ಕೂಡದು. ಪತಿಯ ಮರುಮದುವೆಯ ಕಾರಣದಿಂದ ಕೋಪಗೊಂಡು ಮನೆಯನ್ನು ಬಿಟ್ಟ ಪತ್ನಿ ಯನ್ನು ಆಕೆಯ ಕೋಪ ಇಳಿಯುವವರೆಗೂ ತವರಿಗೆ ಕಳಿಸಬೇಕು ಅಥವಾ ಬಂಧನದಲ್ಲಿಡ ಬೇಕು. ಪತ್ನಿಯು ತನ್ನ ಪತಿಯಿಂದ ಬೇರಾಗಲು ಬಯಸಲೇ ಕೂಡದು. ನಿಜವಾದ ಪತ್ನಿಯು ಪತಿಯು ದುರ್ಗುಣಗಳ ಗಣಿಯಾಗಿದ್ದರೂ ಆತನನ್ನು ಪೂಜಿಸುವವಳು. ಯೋಗ್ಯನಲ್ಲದ, ಮನೆಯಿಂದ ಹೊರಗಡೆಯೇ ಸುಖವನ್ನರಸುವ ಪತಿಯನ್ನೂ ದೇವರಂತೆ ತಿಳಿದು ಪೂಜಿಸಬೇಕು. ಪತಿಗೆ ವಿಧೇಯಳಾಗಿರುವುದೊಂದರಿಂದಲೇ ಸ್ವರ್ಗದಲ್ಲಿ ಆಕೆಯ ಸ್ಥಾನ ಭದ್ರವಾಗುವುದು. ಪತಿಯ ಅನುಮತಿ ಇಲ್ಲದೇ ಯಾವುದೇ ವ್ರತ, ಉಪವಾಸಗಳನ್ನೂ ಆಚರಿಸಕೂಡದು. ದಾನ ವನ್ನೂ ನೀಡಕೂಡದು.

ಮುತ್ತೈದೆಯಾಗಿ ಮಡಿದ ವಿಧೇಯಳಾದ ಮಡದಿಯ ಶರೀರವನ್ನು 'ಅಗ್ನಿಹೋತ್ರ' ದಿಂದ ಯಜ್ಞ ಸಾಮಗ್ರಿಗಳೊಡನೆ ಆಕೆಯ ಪತಿ ದಹನಕ್ರಿಯೆ ನಡೆಸಬೇಕು. ಈ ರೀತಿಯಾಗಿ ಯಜ್ಞಾಗ್ನಿಯನ್ನು ಸ್ಮಶಾನದಲ್ಲಿ ಕೊಟ್ಟ, ಬಳಿಕ ಮತ್ತೊಮ್ಮೆ ಮದುವೆಯಾಗಿ ಮತ್ತೆ ಅದನ್ನು ಮನೆಯಲ್ಲಿ ಬೆಳಗಿಸಬಹುದು. ಏಕೆಂದರೆ ಪತ್ನಿಯಿಲ್ಲದೇ ಯಜ್ಞಕಾರ್ಯವನ್ನು ನಡೆಸುವಂತಿಲ್ಲ. ಬ್ರಾಹ್ಮಣ ವರ್ಣದಲ್ಲಿ ಮಾತ್ರವೇ ಮನೆಯಲ್ಲಿ ಯಜ್ಞಕಾರ್ಯವಿರುವುದರಿಂದ ಈ ವಿಧಿಯನ್ವಯ ಆ ವರ್ಣಕ್ಕೆ ಮಾತ್ರ.

1 ಅಧ್ಯಾಯ IX, ಶ್ಲೋಕ 81

ಪತಿಯು ತನ್ನ ಪತ್ನಿಯನ್ನು ಸಂತೋಷದಿಂದಿರುವಂತೆ ನೋಡಿಕೊಳ್ಳಬೇಕೆಂಬುದರ ಕಾರಣ ಆಕೆ ಸಂತೋಷವಾಗಿರಲಿ ಎನ್ನುವುದಾಗಿರದೆ ವಂಶಾಭಿವೃದ್ಧಿ ಕಾರ್ಯ ನಡೆಯಲೆಂಬುದು ಪತ್ನಿಯಾದವಳಿಗೆ ಮಕ್ಕಳನ್ನು, ಅದೂ ಗಂಡುಮಕ್ಕಳನ್ನು, ಹೆರುವುದೊಂದೇ ಕೆಲಸವೇ? ಕೇವಲ ವಂಶಾಭಿವೃದ್ಧಿಗಾಗಿಯೇ ಅಂದಿನ ವಿವಾಹಗಳು ನಡೆಯುತ್ತಿದ್ದವೆಂಬುದಂತೂ ಸ್ಪಷ್ಟ. ದುಂದುಗಾರ, ಕುಡುಕ ಪತಿಯ ಬಗ್ಗೆ ಅನಾಸಕ್ತಿ ತಾಳಿದ ಪತ್ನಿಯು ತನ್ನ ಒಡವೆಗಳನ್ನು ಕಳೆದುಕೊಳ್ಳುವುದಷ್ಟೇ ಅಲ್ಲ, ಮೂರು ತಿಂಗಳ ಕಾಲ ಪತಿಯೊಡನಿರುವ ಅವಕಾಶವನ್ನೂ ಕಳೆದುಕೊಳ್ಳಬೇಕಿತ್ತು. ತನಗಿರುವ ಎಲ್ಲಾ ಆಶ್ರಯಗಳನ್ನೂ ಕಳೆದುಕೊಂಡ ಆಕೆ ನಿರ್ಗತಿಕಳಾಗುವಳು. ಹೊರಗಿನ ಪ್ರಪಂಚವನ್ನು ಕಾಣುವ ಅವಕಾಶವೇ ಇರದ, ಮನೆಯನ್ನೇ ತನ್ನ ಸರ್ವಸ್ವವೆಂದು ಭಾವಿಸಿದ, ಸ್ವತಂತ್ರ ಬಾಳ್ವೆಯನ್ನರಿಯದ ಸ್ತ್ರೀ ಕೊನೆಗೆ ಆಧಾರವಿಲ್ಲದೆ, ಬಾಳಲು ಸಾಧ್ಯವಾಗದೆ, ಸೋತು ಪತಿಯೆಡೆಗೇ ಹಿಂದಿರುಗುವಳೆಂಬುದು ಅವಳಿಗೆ ನೀಡುವ ಈ ಶಿಕ್ಷೆಯ ಹಿನ್ನೆಲೆಯೇ? ಇಲ್ಲವಾದರೆ ಅವೇ ದುರ್ಗುಣಗಳು ಆಕೆಯಲ್ಲಿದ್ದಾಗ, ಆಕೆ ಬದುಕಿದ್ದಂತೆಯೇ, ಆಕೆಯ ಪತಿ ಮರುವಿವಾಹ ಮಾಡಿಕೊಳ್ಳಬಹುದೆಂಬ ಅವಕಾಶವನ್ನು ಕೊಡುವ ಕಾರಣವೇನಿತ್ತು? ಇಷ್ಟೇ ಅಲ್ಲದೆ ಆತನ ಮರುಮದುವೆಯಿಂದ ಕೋಪಗೊಳ್ಳುವ ಅಧಿಕಾರವೂ ಆಕೆಯ ಪಾಲಿಗಿರಲಿಲ್ಲ!

ಗಂಡು ಮಕ್ಕಳನ್ನು ಹಡೆದ ಸ್ತ್ರೀಗೆ ಅತ್ಯುನ್ನತ ಸ್ಥಾನವಿದೆ. ತಂದೆ ಹಾಗೂ ಗುರುವಿಗಿಂತಲೂ ಹೆಚ್ಚಿನವಳು ತಾಯಿ.

ಉಪಾಧ್ಯಾಯಾನ್ ದಶಾಚಾರ್ಯ ಆಚಾರ್ಯಾಣಾಂ ಶತಂ ಪಿತಾ ।
ಸಹಸ್ರಂ ತು ಪಿತೄನ್ಮಾತಾ ಗೌರವೇಣಾತಿರಿಚ್ಯತೇ ॥1

ಮಾತೆ ಭೂಮಿಯ ಪ್ರತಿರೂಪ. ಮಾತೃಭಕ್ತಿಯಿಂದ ಪುರುಷನಿಗೆ ಇಹಪರಗಳಲ್ಲಿ ಉತ್ತಮ ಸ್ಥಾನ. ಮಾತೆ ದಕ್ಷಿಣಾಗ್ನಿಗೆ ಸಮಾನಳಾದವಳು. ತಾಯಿ, ತಂದೆ, ಗುರು—ಇವರೇ ಮೂರು ಲೋಕಗಳು ಮತ್ತು ಧರ್ಮಗಳು. ತಾಯಿ ಇಷ್ಟಪಡದ ಕೆಲಸವನ್ನು ಯಾರೂ ಮಾಡಬಾರದು. ತಂದೆ ಇಲ್ಲವಾಗ ಮಗನೇ ತಾಯಿಯ ರಕ್ಷಕನಾಗಬೇಕು. ತಾಯಿಯನ್ನು ರಕ್ಷಿಸಲಾರದ ಮಗನು ಕರ್ತವ್ಯವಿಮುಖನಾದ ಅಪಾದನೆಗೆ ಗುರಿಯಾಗುವನು.

ತಾಯಿಯ ಮರಣಾನಂತರ ಆಕೆಯ ಆಸ್ತಿಯು ಅವಳ ಅವಿವಾಹಿತ ಮಗಳಿಗೆ ಸೇರಬೇಕು; ಆಕೆಯೇ ಅದರ ಏಕಮಾತ್ರ ಉತ್ತರಾಧಿಕಾರಿಣಿ. ಅವಿವಾಹಿತ ಪುತ್ರಿ ಇಲ್ಲದಿದ್ದ ಪಕ್ಷದಲ್ಲಿ ಗಂಡು ಮಕ್ಕಳಿಗೆ ಆಸ್ತಿ ಹಂಚಿಕೆಯಾಗುವುದು

ಮಾತೆಯಾಗಿ ಸ್ತ್ರೀಯ ಸ್ಥಾನವೂ ಅಷ್ಟೇ. ಗಂಡುಮಕ್ಕಳಿದ್ದಲ್ಲಿ ಮಾತ್ರ ಮಾತೆ ಆಕೆ. ಅದಿಲ್ಲದೆ ಕೇವಲ ಹೆಣ್ಣು ಮಕ್ಕಳಿಗೇ ಆಕೆ ಮಾತೆಯಾದರೆ ಆಕೆ ಕೇಳಬೇಕಾದ್ದು ಪತಿಯ ಮರುವಿವಾಹದ ಮಾತೇ!

ಅತ್ಯಂತ ಮರುಕ ಮೂಡಿಸುವ ಸ್ಥಾನ ವಿಧವೆಯದು. ಎರಡನೆಯ ವಿವಾಹವೂ ಎರಡನೆಯ ಪತಿಯೂ ಯಾವ ಹೆಣ್ಣಿಗೂ ಯಾವ ಶಾಸ್ತ್ರದಲ್ಲಿಯೂ ಹೇಳಿಲ್ಲ

ನೋದ್ವಾಹಿಕೇಷು ಮಂತ್ರೇಷು ನಿಯೋಗಃ ಕೀರ್ತ್ಯತೇ ಕ್ವಚಿತ್ ।
ನ ವಿವಾಹವಿಧಾವುಕ್ತಂ ವಿಧವಾವೇದನಂ ಪುನಃ ॥2

1 ಅಧ್ಯಾಯ II, ಶ್ಲೋಕ 145

2 ಅಧ್ಯಾಯ IX, ಶ್ಲೋಕ 65

ಶುದ್ಧವಾದ ಹೂವು, ಹಣ್ಣು, ಬೇರುಗಳ ಸೇವನೆಯಿಂದಲೇ ಜೀವಿಸುತ್ತಾ ಆಕೆ ತನ್ನ ದೇಹವನ್ನು ಸವೆಸಬೇಕು. ಯಾವ ಪುರುಷನ ಹೆಸರನ್ನೂ ಉಚ್ಚರಿಸಕೂಡದು. ಮಾತು, ಕೃತಿ, ಮನಸ್ಸುಗಳನ್ನು ಹಿಡಿತದಲ್ಲಿಟ್ಟುಕೊಂಡ, ಮೃತನಾದರೂ ಪತಿಯನ್ನು ಮೀರದವಳನ್ನು 'ಸಾಧ್ವಿ' ಎನ್ನುವರು. ಅಂಥವಳು ಮಾತ್ರವೇ ಸ್ವರ್ಗದಲ್ಲಿ ತನ್ನ ಪತಿಯೊಡನೆ ಸ್ಥಾನ ಪಡೆಯುತ್ತಾಳೆ. ಪತಿಲೋಕವನ್ನು ಪಡೆಯಲು ಬಯಸುವವಳು ಪತಿಗೆ ವಿರೋಧವಾದುದೇನನ್ನೂ ಮಾಡಕೂಡದು. ಸಾಧ್ವಿಯಾದವಳು ಪತಿಯ ಮರಣಾನಂತರವೂ ಪರಿಶುದ್ಧಳಾಗಿದ್ದಲ್ಲಿ 'ಬ್ರಹ್ಮಚಾರಿ' ಸಮಾನಳು. ಆಕೆ ಪುತ್ರಹೀನಳಾಗಿದ್ದರೂ ಸ್ವರ್ಗವನ್ನು ಪಡೆಯುತ್ತಾಳೆ.

ಮಕ್ಕಳನ್ನು ಹೊಂದಬಯಸುವ, ಆದರೆ ಮಕ್ಕಳಿಲ್ಲದ, ವಿಧವೆಯು ತನ್ನ ಪತಿಯ ತಮ್ಮ ಅಥವಾ ಸಪಿಂಡ ಅಥವಾ ಸಗೋತ್ರದ ಯಾರಾದರೊಬ್ಬನ ಜೊತೆಗೂಡಿ ಮಗುವನ್ನು ಪಡೆಯಬಹುದು. 'ನಿಯೋಗ'ವೆಂಬ ಹೆಸರಿನ ಈ ಆಚರಣೆ ಬ್ರಾಹ್ಮಣೇತರ ವರ್ಣದವರಿಗೆ ಮಾತ್ರ ಅನ್ವಯವಾಗುವುದು. ಬ್ರಾಹ್ಮಣ ವಿಧವೆಯು ಚಾರಿತ್ರ್ಯಶುದ್ಧಿಯಿಂದಲೇ ಪತಿಲೋಕವನ್ನು ಪಡೆಯಬಲ್ಲಳೇ ವಿನಾ ಮಕ್ಕಳಿಂದಲ್ಲ. ಭಾವೀಪತಿಯ ಮರಣಾನಂತರ ವಾಗ್ದತ್ತೆಯು ಇಷ್ಟಪಟ್ಟಲ್ಲಿ ಭಾವೀಮೈದುನನನ್ನು ವಿವಾಹವಾಗಬಹುದೇ ಹೊರತು ಬೇರಾರನ್ನೂ ಆಗುವಂತಿಲ್ಲ. ವಿಧವೆಯ ಆಸ್ತಿಯ ರಕ್ಷಣೆ ಅರಸನ ಹೊಣೆ.

ಪುರುಷ ತನ್ನ ಪತ್ನಿ ಬದುಕಿರುವಂತೆಯೇ ಮರುವಿವಾಹವಾಗಬಹುದು. ಆದರೆ ಸ್ತ್ರೀ ಪತಿಯ ಮರಣಾನಂತರವೂ ಇನ್ನೊಂದು ವಿವಾಹವಾಗುವಂತಿಲ್ಲ. ಬಿಳಿಯ ಸೀರೆಯುಟ್ಟು ಹೂವು, ಹಣ್ಣು, ಬೇರುಗಳ ಸೇವನೆಯಿಂದ ಜೀವ ಸವೆಸಬೇಕು, ಜೀವನ ಸಾಗಿಸಬೇಕು ! ಭಾವೀಪತಿಯ ಮರಣಾನಂತರವೂ ಆಕೆಗೆ ಬಾಳಿಲ್ಲವೆಂದರೆ ಎಷ್ಟು ಶೋಚನೀಯ. ಆತನಿಗೆ ಒಬ್ಬನಾದರೂ ತಮ್ಮನಿದ್ದರೆ ಆಕೆ ಬಾಳುವೆ ನಡೆಸುವ ಸಂಭವವಾದರೂ ಇದೆ. ಭಾವೀಪತಿಯೇ ಕೊನೆಯ ಮಗನಾಗಿದ್ದರೆ ಅವಿವಾಹಿತೆಯಾದರೂ ವೈಧವ್ಯದ ಪಟ್ಟ ಹೊತ್ತು ವಿರಕ್ತ ಬಾಳನ್ನು ಸಾಗಿಸಬೇಕು !

ಮನುಸ್ಮೃತಿ ಸ್ತ್ರೀಯರ ಸ್ವಭಾವ, ಅಧಿಕಾರ, ಕರ್ತವ್ಯಗಳನ್ನು ಕುರಿತು ತಿಳಿಸುತ್ತದೆ. ಆ ಅಂಶಗಳನ್ನೂ ಇಲ್ಲಿ ವಿವೇಚಿಸಬೇಕಾಗುತ್ತದೆ.

ಪುರುಷನನ್ನು ಮರುಳುಗೊಳಿಸುವುದೇ ಸ್ತ್ರೀಯ ಸ್ವಭಾವ. ಸ್ತ್ರೀ ಮೂರ್ಖರನ್ನು ಮಾತ್ರವಲ್ಲದೆ ವಿದ್ಯಾವಂತರನ್ನೂ ಕಾಮಕ್ರೋಧಾದಿಗಳ ಪ್ರಭಾವಕ್ಕೊಳಗಾದಾಗ ಹಾದಿ ತಪ್ಪುವಂತೆ ಮಾಡುವಳು. ಆಕೆ ಯೌವನಕ್ಕಾಗಲೀ ರೂಪಕ್ಕಾಗಲೀ ಬೆಲೆ ಕೊಡುವುದಿಲ್ಲ. ಯುವಕನೋ ಮುದುಕನೋ, ಸುರೂಪಿಯೋ ಕುರೂಪಿಯೋ ಎಂಬುದೇನನ್ನೂ ಗಮನಿಸದೆ ಕೇವಲ ಪುರುಷನಿಗಾಗಿ ಹಾತೊರೆಯುವಳು. ಆಕೆ ಸ್ಥಿರಪ್ರೇಮವಿಲ್ಲದ ಚಂಚಲಚಿತ್ತೆ. ಈ ಕಾರಣದಿಂದ ಯಾವನೊಬ್ಬನೂ ತಾಯಿಯಾಗಲಿ, ಸೋದರಿಯಾಗಲಿ ಅಥವಾ ಮಗಳಾಗಲಿ—ಇವರೊಡನೆ ಏಕಾಂತದಲ್ಲಿ ಇರಕೂಡದು. ಸ್ತ್ರೀಯರಿಗೆಂದೇ ಮನುಸ್ಮೃತಿ ಸಾರುವ ಕೆಲವು ಗುಣಗಳು :

> ಶಯ್ಯಾಸನಮಲಂಕಾರೋ ಕಾಮಂ ಕ್ರೋಧಮನಾರ್ಜವಂ ।
> ದ್ರೋಹಭಾವಂ ಕುಚರ್ಯಾಂ ಚ ಸ್ತ್ರೀಭ್ಯೋ ಮನುರಕಲ್ಪಯತ್ ॥[1]

ಕುಡಿತ, ದುರ್ಜನ ಸಹವಾಸ, ಪತಿಯಿಂದ ದೂರವಲ್ಲಿರುವುದು, ತಿರುಗಾಡುವುದು, ಹಗಲಿನಲ್ಲಿ ನಿದ್ರಿಸುವುದು, ಬೇರೆಯವರ ಮನೆಯಲ್ಲಿ ವಾಸಿಸುವುದು—ಈ ಆರು ಸ್ತ್ರೀಯಲ್ಲಿ ಇರಬಾರದ ದುರ್ಗುಣಗಳು.

> ಪಾನಂ ದುರ್ಜನಸಂಸರ್ಗಃ ಪತ್ಯಾ ಚ ವಿರಹೋऽಟನಮ್ ।
> ಸ್ವಪ್ನೋऽನ್ಯಗೇಹವಾಸಶ್ಚ ನಾರೀ ಸಂದೂಷಣಾನಿ ಷಟ್ ॥[2]

---

1 ಅಧ್ಯಾಯ IX, ಶ್ಲೋಕ 17 2 ಅಧ್ಯಾಯ IX, ಶ್ಲೋಕ 13

ಪವಿತ್ರಗ್ರಂಥಗಳ ಸಹಾಯದಿಂದ ನಡೆಸುವ ಯಾವ ಕಾರ್ಯಗಳನ್ನು ಸ್ತ್ರೀ ನಡೆಸಕೂಡದು. ಏಕೆಂದರೆ ಶಾಸ್ತ್ರಜ್ಞಾನವಿಲ್ಲದ ಆಕೆ ಅಸತ್ಯದ ಮೂರ್ತಿ; ಅಷ್ಟೇ ಅಪವಿತ್ರಳು.

> ನಾಸ್ತಿ ಸ್ತ್ರೀಣಾಂ ಕ್ರಿಯಾ ಮಂತ್ರೈರಿತಿ ಧರ್ಮೇ ವ್ಯವಸ್ಥಿತಿಃ ।
> ನಿರಿಂದ್ರಿಯಾ ಹ್ಯಮಂತ್ರಾಶ್ಚ ಸ್ತ್ರೀಭ್ಯೋಽನೃತಮಿತಿ ಸ್ಥಿತಿಃ ॥[1]

ಸ್ತ್ರೀ ತನ್ನ ಕುಟುಂಬದ ಯಾವನಾದರೂ ಪುರುಷ ಸದಸ್ಯನಿಗೆ ಅಧೀನಳಾಗಿರಬೇಕು. ತನ್ನ ಇಚ್ಛಾನುಸಾರ ಆಕೆಯೆಂದೂ ನಡೆಯಕೂಡದು. ತನ್ನ ರಕ್ಷಕನಿಂದ ಎಂದೂ ಬೇರಾಗಲು ಬಯಸಕೂಡದು. ಸ್ವಾತಂತ್ರ್ಯದ ಹಕ್ಕು ಆಕೆಗೆಂದೂ ಇಲ್ಲ.

> ಅಸ್ವತಂತ್ರಾಃ ಸ್ತ್ರಿಯಃ ಕಾರ್ಯಾಃ ಪುರುಷೈಃ ಸ್ವೈರ್ದಿವಾನಿಶಮ್ ।
> ವಿಷಯೇಷು ಚ ಸಜ್ಜಂತ್ಯಃ ಸಂಸ್ಥಾಪ್ಯಾ ಆತ್ಮನೋ ವಶೇ ॥[2]
>
> ಬಾಲಯಾ ವಾ ಯುವತ್ಯಾ ವಾ ವೃದ್ಧಯಾ ವಾಽಪಿ ಯೋಷಿತಾ ।
> ನ ಸ್ವತಂತ್ರೇಣ ಕರ್ತವ್ಯಂ ಕಿಂಚಿತ್ಕಾರ್ಯಂ ಗೃಹೇಷ್ವಪಿ ॥[3]
>
> ಪಿತ್ರಾ ಭರ್ತ್ರಾ ಸುತೈರ್ವಾಽಪಿ ನೇಚ್ಛೇದ್ವಿರಹಮಾತ್ಮನಃ ।
> ಏಷಾ ಹಿ ವಿರಹೇಣ ಸ್ತ್ರೀ ಗರ್ಹ್ಯೇ ಕುರ್ಯಾದುಭೇ ಕುಲೇ ॥[4]
>
> ಬಾಲ್ಯೇ ಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯ ಯೌವನೇ ।
> ಪುತ್ರಾಣಾಂ ಭರ್ತರಿ ಪ್ರೇತೇ ನ ಭಜೇತ್ ಸ್ತ್ರೀ ಸ್ವತಂತ್ರತಾಮ್ ॥[5]

ಎಲ್ಲಾ ರಕ್ಷಣೆಗಳಿದ್ದೂ ತನ್ನನ್ನು ತಾನು ರಕ್ಷಿಸಿಕೊಂಡಾಗಲೇ ಆಕೆಗೆ ನಿಜವಾದ ರಕ್ಷಣೆ. ಎಲ್ಲ ರಕ್ಷಣೆಗಳಿದ್ದೂ ತನ್ನನ್ನು ತಾನು ರಕ್ಷಿಸಿಕೊಳ್ಳದಿದ್ದರೆ ಆಕೆ ಅರಕ್ಷಿತಳೇ.

> ಅರಕ್ಷಿತಾ ಗೃಹೇ ರುದ್ಧಾಃ ಪುರುಷೈರಾಪ್ತಕಾರಿಭಿಃ ।
> ಆತ್ಮಾನಮಾತ್ಮನಾ ಯಾಸ್ತು ರಕ್ಷೇಯುಸ್ತಾಃ ಸುರಕ್ಷಿತಾಃ ॥[6]

ಸ್ತ್ರೀ ಇಷ್ಟೆಲ್ಲಾ ಅವಲಂಬನೆಗಳ ನಡುವೆ ಕುಟುಂಬದ ಪ್ರತಿಯೊಬ್ಬರಿಂದ ಗೌರವವನ್ನು ಪಡೆಯುತ್ತಾಳೆ.

> ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ ।
> ಯತ್ರೈತಾಸ್ತು ನ ಪೂಜ್ಯಂತೇ ಸರ್ವಾಸ್ತತ್ರಾಫಲಾಃ ಕ್ರಿಯಾಃ ॥[7]
>
> ಜಾಮಯೋ ಯಾನಿ ಗೇಹಾನಿ ಶಪಂತ್ಯಪ್ರತಿಪೂಜಿತಾಃ ।
> ತಾನಿ ಕೃತ್ಯಾಹತಾನೀವ ವಿನಶ್ಯಂತಿ ಸಮಂತತಃ ॥[8]
>
> ತಸ್ಮಾದೇತಾಃ ಸದಾ ಪೂಜ್ಯಾ ಭೂಷಣಾಚ್ಛಾದನಾಶನೈಃ ।
> ಭೂತಿಕಾಮೈರ್ನರೈರ್ನಿತ್ಯಂ ಸತ್ಕಾರೇಷೂತ್ಸವೇಷು ಚ ॥[9]

---

1 ಅಧ್ಯಾಯ IX, ಶ್ಲೋಕ 18
2 ಅಧ್ಯಾಯ IX, ಶ್ಲೋಕ 2
3 ಅಧ್ಯಾಯ V, ಶ್ಲೋಕ 147
4 ಅಧ್ಯಾಯ V, ಶ್ಲೋಕ 149
5 ಅಧ್ಯಾಯ V, ಶ್ಲೋಕ 148
6 ಅಧ್ಯಾಯ IX, ಶ್ಲೋಕ 12
7 ಅಧ್ಯಾಯ III, ಶ್ಲೋಕ 56
8 ಅಧ್ಯಾಯ III, ಶ್ಲೋಕ 58
9 ಅಧ್ಯಾಯ III, ಶ್ಲೋಕ 59

ಸ್ತ್ರೀಗೆ ಗೌರವವಿರದ ಮನೆ ಆಕೆಯ ಶಾಪದಿಂದ ನಾಶವಾಗುತ್ತದೆ. ಆ ಕಾರಣದಿಂದಲೇ ಸಮಾರಂಭ, ಶುಭದಿನಗಳಲ್ಲಿ ಏಳಿಗೆ ಬಯಸುವ ಜನರು ಒಡವೆ, ಆಹಾರ, ವಸ್ತ್ರಗಳನ್ನಿತ್ತು ಸ್ತ್ರೀಯನ್ನು ಗೌರವಿಸುತ್ತಾರೆ.

ಕೆಲವು ವಿಶೇಷ ಸಂದರ್ಭಗಳಲ್ಲಿ ಸ್ತ್ರೀ ಅತಿಥಿಗಿಂತಲೂ ಹೆಚ್ಚಿನ ಮಾನ್ಯತೆ ಪಡೆಯುತ್ತಾಳೆ. ಕನ್ಯೆ, ರೋಗಿ, ನವವಿವಾಹಿತೆ, ಗರ್ಭಿಣಿ ಸ್ತ್ರೀಯರಿಗೆ ಅತಿಥಿಗಿಂತಲೂ ಮೊದಲು ಯಾವ ಆಚಾರವನ್ನೂ ಗಮನಿಸದೆ ಊಟವನ್ನು ಬಡಿಸಬಹುದು. ದಾರಿಯಲ್ಲಿ ಎದುರಾಗುವ ಸ್ತ್ರೀಗೆ ಮಾರ್ಗವನ್ನು ಬಿಟ್ಟುಕೊಡಬೇಕು

ಪುರುಷನನ್ನು ಮರುಳುಗೊಳಿಸುವುದು ಸ್ತ್ರೀಸ್ವಭಾವವೆಂದು ಮನುಸ್ಮೃತಿಯಲ್ಲಿ ಹೇಳಿದ್ದರೂ ವಾಸ್ತವವಾಗಿ ಪುರುಷನನ್ನು ಮರುಳಾಗಿಸುವುದು ಸ್ತ್ರೀಯಲ್ಲ, ಆತನಲ್ಲಿರುವ ದೌರ್ಬಲ್ಯ. ತಾನು ಸ್ಥಿತಪ್ರಜ್ಞನೂ ಸ್ಥಿರಸ್ವಭಾವದವನೂ ಆಗಿದ್ದರೆ ಅವನೇಕೆ, ಹೇಗೆ ಮರುಳಾಗುತ್ತಾನೆ? ಸ್ತ್ರೀಯನ್ನು ಸ್ಥಿರಪ್ರೇಮವಿಲ್ಲದವಳು ಎಂದು ಹೇಳಿದ್ದರೂ ಮತ್ತು ಆಕೆಗೆ ಒಂದು ವೇಳೆ ಚಾಂಚಲ್ಯವಿದ್ದರೂ ಅದನ್ನು ಹೊರಗೆಡವಲೂ ಅವಕಾಶವಿಲ್ಲವಲ್ಲ! ತನ್ನ ಪತಿಯೊಬ್ಬನಲ್ಲೇ–ಆತನು ಬದುಕಿರಲಿ, ಇಲ್ಲದಿರಲಿ–ತನ್ನೆಲ್ಲಾ ಪ್ರೀತಿಯನ್ನೂ ಕೇಂದ್ರೀಕರಿಸುವಂತೆ ಒತ್ತಡ ಹೇರಿಸಿಕೊಂಡ ಸ್ತ್ರೀ ಚಂಚಲಚಿತ್ತೆ! ತನ್ನ ಗೃಹಕೃತ್ಯಗಳನ್ನಲ್ಲದೆ ಬೇರೇನನ್ನೂ ಯೋಚಿಸುವ ಸ್ವಾತಂತ್ರ್ಯವನ್ನೂ ಹೊಂದಿರದ ಸ್ತ್ರೀ ಚಿತ್ತಚಂಚಲ. ತನ್ನ ಮನಸ್ಸಿಗೆ ಬಂದಷ್ಟು ಜನರನ್ನು ವಿವಾಹವಾಗಬಹುದಾದ ಪುರುಷನ ಪ್ರೇಮ ಅದೆಷ್ಟು ಸ್ಥಿರವಿದ್ದೀತು? ಇಂದ್ರಿಯಗಳ ಸೆಳೆತವನ್ನು ಜ್ಞಾನಿಯೂ ತಪ್ಪಿಸಿಕೊಳ್ಳಲಾರ ಎನ್ನುವ ಮನುಸ್ಮೃತಿಯೇ ಅಜ್ಞಾನಿಯನ್ನಾಗಿ ಉಳಿಸಿದ ಸ್ತ್ರೀಯ ಮೇಲೆ ಅದೆಷ್ಟು ದೋಷಗಳನ್ನು ಹೊರಿಸುತ್ತದೆ? ಆ ದೋಷಗಳೆಲ್ಲ ನೈಜವೆ? ಇರಬಹುದಾದ ದೋಷಗಳಿಗೆ ಆಕೆಯದೇ ಪೂರ್ಣ ಜವಾಬ್ದಾರಿಯೆ? ಪುರುಷನ ದೌರ್ಬಲ್ಯಕ್ಕೆ ಕಾರಣ, ಹೊಣೆ ಸ್ತ್ರೀ. 'ಸ್ತ್ರೀಯರು ತಮ್ಮ ಯಾವುದೇ ತಪ್ಪಿಗೂ ಹೊಣೆಯಾಗುವುದಿಲ್ಲ; ಅವರು ತಪ್ಪುಮಾಡಿದರೆಂದರೆ ಅದು ಅವರ ಅರಕ್ಷಣೆಯ ಫಲ' ಎಂದು ಸಾರುವ ಮನುಸ್ಮೃತಿಯೇ ಪುರುಷನ ತಪ್ಪಿಗೂ ಆಕೆಯನ್ನು ಹೊಣೆಯಾಗಿಸುತ್ತದೆ. ಎಂಥ ವಿಪರ್ಯಾಸ! ವೇದಜ್ಞಾನವನ್ನು ಹೊಂದಲು ಅವಕಾಶವೇ ಇಲ್ಲದಾಕೆ ವೇದಜ್ಞಾನವಿಲ್ಲದ್ದರಿಂದ ಅಸತ್ಯದ ಮೂರ್ತಿ ಎಲ್ಲಾ ವರ್ಣಗಳ ಸ್ತ್ರೀಯರನ್ನೂ ಪರೋಕ್ಷವಾಗಿ ಶೂದ್ರರೆಂದು ಹೇಳಿದೆ. ವರ್ಣಧರ್ಮಕ್ಕಿಂತಲೂ ಬಲವಾಗಿ ಕಾಣುತ್ತದೆ ಸ್ತ್ರೀಪುರುಷರ ಕೀಳುಮೇಲೆಂಬ ತಾರತಮ್ಯ. ಸ್ತ್ರೀ ತನ್ನ ವರ್ಣದ ಅಥವಾ ಅದಕ್ಕಿಂತ ಮೇಲೆಂದು ಪರಿಗಣಿತವಾದ ವರ್ಣದ ಪುರುಷನೊಡನೆ ವಿವಾಹವಾಗಬೇಕು. (ಉದಾ–ಶೂದ್ರಳು ಯಾವ ವರ್ಣದ ಪುರುಷನನ್ನು ಬೇಕಾದರೂ ವಿವಾಹಮಾಡಿಕೊಳ್ಳಬಹುದು; ಆದರೆ ಬ್ರಾಹ್ಮಣ ಸ್ತ್ರೀ ಬ್ರಾಹ್ಮಣನನ್ನು ಮಾತ್ರ ವಿವಾಹವಾಗಬೇಕು) ಅಂತೆಯೇ ಪುರುಷನು ತನ್ನ ಹಾಗೂ ತನ್ನ ವರ್ಣಕ್ಕಿಂತ ಕೆಳಗಿನ ವರ್ಣದ ಸ್ತ್ರೀಯರನ್ನು ವಿವಾಹವಾಗಬಹುದು. ಇದರ ಹಿನ್ನೆಲೆ ಪತ್ನಿ ಪತಿಗಿಂತ ಯಾವ ರೀತಿಯಿಂದಲೂ ಮೇಲೆನಿಸವಳೆನಿಸಬಾರದೆಂಬುದೇ ಇರಬಹುದೇನೋ! ಸ್ತ್ರೀಯನ್ನು ಪೂಜಾರ್ಹಳೆಂದು ಹೇಳಿರುವುದು ಕೇವಲ ಆಕೆಯಿಂದ ತಮ್ಮ ಕುಲಕ್ಕೆ, ತಮಗೆ ಯಾವ ಹಾನಿಯೂ ಉಂಟಾಗದಿರಲೆಂದು ಇದನ್ನು ಸ್ತ್ರೀಗೆ ಸಲ್ಲುತ್ತಿದ್ದ ಗೌರವವೆಂದು ಭಾವಿಸುವುದು ಸರಿಯಾದೀತೇ? ಆಕೆ ಒಂದು ವ್ಯಕ್ತಿಯೇ ಅಲ್ಲ, ಕೇವಲ ದಾಸಿ.

ಸ್ತ್ರೀಯನ್ನು ತನ್ನದೇ ಆದ ಆಸೆ ಆಕಾಂಕ್ಷೆಗಳನ್ನು ಹೊಂದಿದ ವ್ಯಕ್ತಿಯೆಂದು ಗಣನೆಗೇ ತೆಗೆದುಕೊಂಡಿಲ್ಲ. ಆಭರಣ ಹಾಗೂ ಪುರುಷ ಇವೆರಡೇ ಆಕೆಯ ಹೆಬ್ಬಯಕೆಗಳೆಂದು ಹೇಳಿವೆ. ಎರಡು ಕುಟುಂಬಗಳ ಸುಖದುಃಖಗಳು ಸ್ತ್ರೀಯ ಗುಣಶ್ರದ್ಧೆಯನ್ನಾಧರಿಸಿರುವುದರಿಂದ ತಮ್ಮ ಕುಟುಂಬದ ಕ್ಷೇಮಕ್ಕೋಸ್ಕರ ಆಕೆಗೆ ಗೌರವ, ಮಾನ್ಯತೆಗಳನ್ನು ನೀಡುವ ನಾಟಕ ನಡೆದಿದೆ. ಒಂದು ಕುಲದ ಅಭಿವೃದ್ಧಿಗೆ ಕಾರಣಳಾದ ಆಕೆಯೇ ಅದರ ಸಂಪೂರ್ಣ ಹೊಣೆಗಾರ್ತಿ. ಪರೋಕ್ಷವಾಗಿ ಆಕೆಯ ಎಲ್ಲಾ ಆಲೋಚನೆಗಳನ್ನೂ ಮನೆಯತ್ತಲೇ ಕೇಂದ್ರೀಕರಿಸಲಾಗಿದೆ ಗೃಹದಲ್ಲಿ

ಪ್ರಮುಖ ಹಾಗೂ ಗುರುತರ ಸ್ಥಾನವನ್ನು ನೀಡಲಾಗಿದೆ. ಪುರುಷನು ಸ್ವರ್ಗದ ಹಾದಿಯನ್ನು ಸುಲಭವಾಗಿ ಕ್ರಮಿಸುವಂತೆ ಮಾಡುವುದರಿಂದ ಮಾತೆಗೆ ವಿಶೇಷ ಮಾನ್ಯತೆ ಇದೆ. ಗಂಡು ಸಂತಾನವಿಲ್ಲದಿದ್ದವನು 'ಪುತ್' ಎಂಬ ನರಕದಲ್ಲಿ ಬೀಳುತ್ತಾನೆ. ಇದನ್ನು ತಪ್ಪಿಸುವಳೆಂಬ ಒಂದೇ ಕಾರಣದಿಂದ ಮಾತೆಗೆ ಮಹತ್ತ್ವ. ದುರ್ಗುಣಗಳ ಸಂಗ್ರಹವೆಂಬ ಬಿರುದು ಹೊತ್ತ ಸ್ತ್ರೀಗೆ ಪುರುಷನಿಗೆ ದೊರೆತಿರದ ಕೆಲವು 'ರಿಯಾಯಿತಿ'ಗಳು ದೊರೆತಿವೆ. ವಿದ್ಯಾಭ್ಯಾಸ, ಸ್ವಂತ ವಿಚಾರಗಳ ಅಭಿವ್ಯಕ್ತಿ, ತನ್ನಿಚ್ಛೆಯಂತೆ ಕೆಲಸಮಾಡುವುದು, ಸ್ವರಕ್ಷಣೆ, ಕೊನೆಗೆ ಸ್ವರ್ಗಸೇರಲು (ಆಕೆಯಪಾಲಿಗೆ ಅದು ಪತಿಲೋಕ) ಮಕ್ಕಳ ಅವಶ್ಯಕತೆ. ಇವು ಯಾವುವೂ ಸ್ತ್ರೀಗೆ ಬೇಕಿಲ್ಲ. ಪುರುಷನಿಗೆಲ್ಲಿ ಈ ಭಾಗ್ಯ? ಆತ ಸ್ತ್ರೀಯ ರಕ್ಷಕನಾಗಿ ಶ್ರಮಿಸಬೇಕು !

ಹೆಚ್ಚುಕಡಿಮೆ ಎಲ್ಲಾ ಧರ್ಮಗ್ರಂಥಗಳೂ ಸ್ತ್ರೀಗೆ ಪರಾಧೀನತೆಯನ್ನೇ ತಿಳಿಸುವಾಗ ಮನುಸ್ಮೃತಿಯೂ ಅವುಗಳ ಸಾಲಿಗೇ ಸೇರಬೇಕಾದುದು, ಸೇರಿದುದು ಸಹಜವೇ. ಋಗ್ವೇದ ಕಾಲದಲ್ಲಿ ಸ್ತ್ರೀಗೆ ಇದ್ದ ಸ್ವತಂತ್ರ ವ್ಯಕ್ತಿತ್ವ, ಪುರುಷನಿಗೆ ಸಮಾನವಾದ ಸ್ಥಾನಮಾನಗಳು ಮನುಸ್ಮೃತಿಯ ವೇಳೆಗೆ ಮಾಯವಾಗಿವೆ. ಸ್ತ್ರೀಯ ವ್ಯಕ್ತಿತ್ವ, ಚಿಂತನೆ, ಕಾರ್ಯ ಮತ್ತು ಸ್ವಾತಂತ್ರ್ಯಗಳ ಕಡೆ ಗಮನ ನೀಡದೆ ರಕ್ಷಣೆಗೆ ಪ್ರಾಮುಖ್ಯಕೊಡಲಾಗಿದೆ ಮತ್ತು ಇದನ್ನು ಉನ್ನತ ಆಧ್ಯಾತ್ಮಿಕ ತತ್ತ್ವಗಳ ನೆರವಿನಿಂದ ಸಮರ್ಥಿಸಲು ಯತ್ನಿಸಲಾಗಿದೆ. ಮನುಸ್ಮೃತಿ ಸ್ತ್ರೀಸ್ವಾತಂತ್ರ್ಯವನ್ನು ವಿರೋಧಿಸುತ್ತದೆ ಎಂಬುದು ಸ್ಪಷ್ಟ. ಅಂದಿನ ಅಂಥ ಪರಿಸ್ಥಿತಿ, ಸ್ತ್ರೀಯ ಅಧೀನತೆಗೆ ಕಾರಣವೇನೆಂಬುದು ತಿಳಿಯದು. ಸಮಾಜದ ಸುವ್ಯವಸ್ಥೆಗೆ ಇದು ಅಗತ್ಯ ಎಂಬ ಮಾತನ್ನು ಪ್ರಾಚೀನ ಧರ್ಮಾನುಯಾಯಿಗಳು ಹೇಳಬಹುದಾದರೂ ಇಂಥ ನಿರ್ಬಂಧ ಹೆಣ್ಣಿಗೆ ಮಾತ್ರವೇ ಏಕೆ ಎಂಬ ಪ್ರಶ್ನೆಗೂ ಅವರು ಉತ್ತರಿಸಬೇಕಾಗುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಸ್ತ್ರೀ ಪರಾವಲಂಬಿಯಾದುದು ಇಂದು–ನಿನ್ನೆಯಲ್ಲ, ಶತಮಾನಗಳಿಂದ ನಡೆದುಬಂದಿರುವ ರೀತಿ ಇದು. ಆ ಪರಿಸ್ಥಿತಿಗೆ, ನಿರ್ಬಂಧಕ್ಕೆ ಹೊಂದಿಕೊಳ್ಳಲು ಆಕೆ ಬಹಳಷ್ಟು ಹೆಣಗಿರಬಹುದು. ತನ್ನನ್ನು ಬಂಧಿಸಿದ್ದ ಸಂಕೋಲೆಗಳಿಂದ ಸಂಪೂರ್ಣವಾಗಿ ಕಳಚಿಕೊಂಡು ಹೊರಬರಲು ಇಂದಿಗೂ ಆಕೆಗೆ ಸಾಧ್ಯವಾಗಿಲ್ಲ. ಆದರೆ ತುಳಿತಕ್ಕೆ ಸಿಲುಕಿ ಮೂಗು ನೆಲತಾಗುವಂತೆ ಬಾಗಿದ್ದ ಸ್ತ್ರೀ ಈಗ ನೇರವಾಗಿ ನಿಲ್ಲುವ ಶಕ್ತಿಯನ್ನು ಮತ್ತೆ ಪಡೆಯಲು ಪ್ರಯತ್ನಿಸುತ್ತಿರುವುದು ಸಂತೋಷದ, ಸಮಾಧಾನದ ಸಂಗತಿ. ಬಾಗಲು ತೆಗೆದುಕೊಂಡಷ್ಟೇ ಅಥವಾ ಅದಕ್ಕಿಂತ ಹೆಚ್ಚು ಸಮಯವನ್ನೇ ನೇರವಾಗಿ ನಿಲ್ಲಲು ತೆಗೆದುಕೊಳ್ಳಬೇಕಾಗಬಹುದು. ಆಕೆಯ ಶ್ರದ್ಧೆ ಅತೀ ಅಗತ್ಯ ಈ ದಿಸೆಯಲ್ಲಿ.

ಮೂಲ : ಡಾ। ಆರ್. ವಿ. ಗೋಪಾಲಕೃಷ್ಣನ್
ಅನುವಾದ : ಬಾ. ವೇ. ಶ್ರೀಧರ

ಕಾಲದ ಸದುಪಯೋಗ *

ರುಡ್‌ಯಾರ್ಡ್ ಕಿಪ್ಲಿಂಗನ 'ಇಫ್' ಎಂಬ ಕವನದ ಪ್ರಸಿದ್ಧ ಪಂಕ್ತಿಗಳು ನಮ್ಮಲ್ಲಿ ಅನೇಕರಿಗೆ ನೆನಪಿರಬಹುದು :

ಅರುವತ್ತು ಚಣಗಳನು ಒಳಕೊಂಡ ನಿಮಿಷ, ಬರಿದೆ ಕಳೆದೊಡೆ ನಿನ್ನ ಕ್ಷಮಿಸಲೊಲ್ಲದ ನಿಮಿಷ
ಅಂತಪ್ಪ ಆ ನಿಮಿಷದರುವತ್ತು ಚಣಗಳಂ ಓಟದಿಂದಲೆ ನೀನು ತುಂಬಿ ಗೆದ್ದೊಡೆ ಮಗುವೆ
ಈ ಜಗಮುಂ ಮೇಣದರ ಸಕಲ ಭೋಗಾದಿಗಳುಂ ನಿನ್ನದೇ ಆದಪುವು
ಅದಕಿಂತ ಮಿಗಿಲಾಗಿ ನೀನೊರ್ವ ಮಾನವನೆ ದಿಟಕು ಆದಪೆ ಮಗುವೆ

ಕಿಪ್ಲಿಂಗನ ಕಾಲದಲ್ಲಿ ಜನರಿಗೆ 'ನಿಂತು ದಿಟ್ಟಿಸಲು' ಸಾಕಷ್ಟು ಕಾಲಾವಕಾಶವಿತ್ತು. ಆದರೂ ಅವನು ಕಾಲಕ್ಕಿರುವ ಎರಡು ಮುಖಗಳನ್ನು ಒತ್ತಿ ಹೇಳಿದನು. ಒಂದು 'ಕಳೆದರೆ ಅದು ಕ್ಷಮಿಸಲೊಲ್ಲದ್ದು' ಎಂಬುದು, ಇನ್ನೊಂದು 'ಒಂದೊಂದು ನಿಮಿಷವೂ ಅರುವತ್ತು ಸೆಕೆಂಡುಗಳ ಬೆಲೆಯುಳ್ಳದ್ದು' ಎಂಬುದು.

ನಿಜ, ನಮ್ಮಲ್ಲಿರುವ ಒಂದೇ ಒಂದು ಅಮೂಲ್ಯ ಸಂಪನ್ಮೂಲವೆಂದರೆ ಕಾಲ. ಅದು ಅಜೇಯವಾದದ್ದು ಮತ್ತು ಕಳೆದರೆ ನಮ್ಮನ್ನು ಕ್ಷಮಿಸಲೊಲ್ಲದ್ದು. ಸಾಮಗ್ರಿಗಳು, ಯಂತ್ರಗಳು, ಹಣ ಮುಂತಾದ ಇತರ ಸಂಪನ್ಮೂಲಗಳಂತಲ್ಲದೆ ಕಾಲವು ವಿಶಿಷ್ಟ ರೀತಿಯದು. ಅದನ್ನು ವಿಸ್ತರಿಸಲು ಸಾಧ್ಯವಿಲ್ಲ, ಕೂಡಿಟ್ಟುಕೊಳ್ಳಲು ಸಾಧ್ಯವಿಲ್ಲ, ಆತುರಪಡಿಸಲು ಸಾಧ್ಯವಿಲ್ಲ, ಇಲ್ಲವೆ ತಡೆಯಲೂ ಸಾಧ್ಯವಿಲ್ಲ. ನಿಜಕ್ಕೂ ಕಾಲವನ್ನು ನಾವು ನಿಯಂತ್ರಿಸಲಾರೆವು, ಉಪಯೋಗಿಸಬಹುದು ಅಷ್ಟೆ. ಪ್ರತಿದಿನವೂ ಪ್ರತಿಯೊಬ್ಬರಿಗೂ ಸಮಪ್ರಮಾಣದ ಕಾಲ ಉಂಟು. ನಾವು ನಾಯಕರೇ ಆಗಿರಲಿ, ಸಾಮಾನ್ಯರೇ ಆಗಿರಲಿ, ನಮ್ಮ ಗೆಲವು ಸೋಲೆಲ್ಲ ಕಾಲವನ್ನು ನಾವು ಸರಿಯಾಗಿ ವಿನಿಯೋಗಿಸಲು ಎಷ್ಟುಮಟ್ಟಿಗೆ ಕಲಿತಿದ್ದೇವೆ ಎಂಬುದನ್ನೇ ಅವಲಂಬಿಸಿದೆ ಎಂದು ಇತಿಹಾಸವೇ ಹೇಳುತ್ತದೆ.

ಕಿಪ್ಲಿಂಗ್ ಹೇಳಿದ 'ಅರವತ್ತು ಸೆಕೆಂಡ್ ಬೆಲೆಯುಳ್ಳ ನಿಮಿಷ' ಎಂಬುದೇ ಈಗಿನ ಕೈಗಾರಿಕಾ ಎಂಜಿನಿಯರುಗಳ ಹೇಳುವ 'ನಿಮಿಷ ಒಂದಕ್ಕೆ ಅರವತ್ತು ನಿಮಿಷ ಮಾನ' ಎಂಬ ಕಲ್ಪನೆಗೆ ಸಮಾನವಾದದ್ದು. ಹೀಗಾಗಿ ಕಾಲದ ಬಳಕೆಯ ಉಪಯುಕ್ತತೆಯ ಮೌಲ್ಯಮಾಪನ ಮಾಡುವುದೇ ಅದರ ಪ್ರಯತ್ನ. ಸ್ವಿಜರ್ಲೆಂಡಿನ ಒಬ್ಬ ಗೃಹಸ್ಥ ತಾನು ಬದುಕಿದ 65 ವರ್ಷಗಳನ್ನು ಹೀಗೆ ವಿಶ್ಲೇಷಿಸಿದನಂತೆ:

---

* ಆಕಾಶವಾಣಿ ಕೃಪೆಯಿಂದ

ಹಾಸಿಗೆಯಲ್ಲಿ ಕಳೆದದ್ದು : 26 ವರ್ಷ

ತಿನ್ನುವುದರಲ್ಲಿ ಕಳೆದದ್ದು : 6 ವರ್ಷ

ದುಡಿಮೆಯಲ್ಲಿ ಕಳೆದದ್ದು : 21 ವರ್ಷ

ಕೋಪದಲ್ಲಿ ಕಳೆದದ್ದು : 6 ವರ್ಷ

ನಿದಾನಿಗಳಿಗಾಗಿ ಕಾಯುವುದರಲ್ಲಿ ಕಳೆದದ್ದು : 5 ವರ್ಷ

ಕ್ಷೌರ, ನಗು, ಮಕ್ಕಳನ್ನು ಛೀಮಾರಿ ಹಾಕುವುದು, ಮೂಗು ಸೀಸುವುದು, ಸಿಗಾರು ಹಚ್ಚುವುದು ಇವೇ ಮುಂತಾದ ಹಲವು ರೀತಿ ಕಳೆದದ್ದು : 1 ವರ್ಷ

ಆಲೋಚಿಸುವುದಕ್ಕೇ ಆಗಲಿ, ತನ್ನ ಗುರಿಗಳನ್ನು ಕುರಿತು ಯೋಜಿಸಿ ಸಾಧಿಸುವುದಕ್ಕೇ ಆಗಲಿ ಎಳ್ಳಷ್ಟು ಕಾಲವನ್ನೂ ಅವನು ಬಳಸಲಿಲ್ಲವೆಂದು ತೋರುತ್ತದೆ.

ನಮ್ಮ ಬದುಕಿನಲ್ಲಿ ಸುಮಾರು ಒಂದು ತಿಂಗಳ ಕಾಲವನ್ನು ನಾವು ಈ ರೀತಿ ಆಳವಾದ ವಿಶ್ಲೇಷಣೆಗೆ ಒಳಪಡಿಸಿದ್ದೇ ಆದರೆ, ತಿಳಿಯ ಬರುವ ಅಂಶಗಳು ನಮಗೆ ಆಘಾತವನ್ನೇ ಉಂಟು ಮಾಡುತ್ತವೆ. ಅದಿಲ್ಲದಿದ್ದರೂ ಕನಿಷ್ಠ ಪಕ್ಷ ಬೆರಗುಗೊಳಿಸುತ್ತವೆ. ಕಾಲವನ್ನು ನಾವು ಉಪಯುಕ್ತವಾಗಿ ಬಳಸಿದ್ದೇವೆ ಎಂದುಕೊಂಡದ್ದು ಅದು ಹೇಗಾಗಬೇಕೆಂದು ಬಯಸಿದ್ದೆವೋ ಅದರಲ್ಲಿ ಅರ್ಧವಷ್ಟೂ ಆಗಿಲ್ಲ ಎಂದು ಕಂಡುಬರುತ್ತದೆ. ಆದ್ದರಿಂದ ಈಗಲೇ ನಾವು ಕಾಲಹರಣಕ್ಕೆ ಕಾರಣವಾದ ಅಂಶಗಳನ್ನು ಕಂಡುಹಿಡಿಯುವುದು ಮೊದಲ ಹೆಜ್ಜೆ. ಬಳಿಕ ಪ್ರಜ್ಞಾಪೂರ್ವಕವಾಗಿ ನಮ್ಮ ಕಾಲವನ್ನು ಹೆಚ್ಚು ಪರಿಣಾಮಕಾರಿಯಾಗಿ ವಿನಿಯೋಗಿಸಲು ಪ್ರಯತ್ನಿಸುವುದು ಮುಂದಿನ ಹೆಜ್ಜೆ.

ವ್ಯಕ್ತಿ ಸಾಮಾನ್ಯರಾದ ನಾವು ನಮ್ಮ ಸಮಯವನ್ನು ಉತ್ತಮ ರೀತಿಯಲ್ಲಿ ವಿನಿಯೋಗಿಸುವ ವಿಧಾನಗಳ ಬಗ್ಗೆ ಮೊದಲು ನೋಡೋಣ. ನಮ್ಮ ವ್ಯವಹಾರಗಳನ್ನು ನಾವೇ ಮಾಡಿಕೊಂಡು ಆ ಮೂಲಕ ನಮ್ಮ ಕಾಲದ ಉಪಯುಕ್ತತೆಯನ್ನು ದ್ವಿಗುಣಗೊಳಿಸಿಕೊಳ್ಳಲು ಇರುವ ತಂತ್ರಗಳನ್ನು ಸುಧಾರಿಸಲು ಹಲವಾರು ತತ್ವಗಳಿವೆ. ನಮ್ಮ ದಿನಚರಿಯ ಕಾರ್ಯಕ್ರಮಗಳಲ್ಲಿಯೂ ಮತ್ತೆ ಮತ್ತೆ ನಾವು ಮಾಡುವ ಕಾರ್ಯಗಳಲ್ಲಿಯೂ ಕಾಲದ ಮತ್ತು ಪರಿಶ್ರಮಗಳ ಮಿತವ್ಯಯವನ್ನು ಸಾಧಿಸುವುದು ಮೊದಲನೆಯದು ಮತ್ತು ಅತ್ಯಂತ ಸುಲಭವಾದದ್ದು. ಇಲ್ಲದೆ ಹೋದರೆ ಅತ್ಯಂತ ಅಮೂಲ್ಯವಾದ ಇತರ ಕಾರ್ಯಗಳನ್ನು ಮಾಡಲು ಬೇಕಾದ ಕಾಲವನ್ನೆಲ್ಲ ನಮ್ಮ ದಿನಚರಿಯೇ ನುಂಗಿಹಾಕಿಬಿಡುತ್ತದೆ.

ಶ್ರೀ ಫ್ರಾಂಕ್ ಬಂಕರ್ ಗಿಲ್ಬರ್ತ್ ಎಂಬಾತನ ಹೆಸರನ್ನು ನೀವು ಬಹುಶಃ ಕೇಳಿರಬಹುದು. 'ಚಲನ ಅಧ್ಯಯನದ ಜನಕ' ಎಂಬುದು ಆತನ ಜನಪ್ರಿಯವಾದ ಹೆಸರು. ಚಲನೆಯ ಮಿತವ್ಯಯವನ್ನೇ ತನ್ನ ಜೀವನ ವಿಧಾನವನ್ನಾಗಿ ಆತ ಅಭ್ಯಾಸ ಮಾಡಿದ. ಇವನ ಕಾರ್ಯ ಚಟುವಟಿಕೆಯ ಒಂದು ಅತಿರೇಕದ ನಿದರ್ಶನ ಕೊಡಬಹುದಾದರೆ, ತನ್ನ ಮೇಲಂಗಿಯ ಗುಂಡಿಗಳನ್ನು ಮೇಲಿಂದ ಕೆಳಕ್ಕೆ ಹಾಕುವ ಬದಲು ಕೆಳಗಿನಿಂದ ಮೇಲಕ್ಕೆ ಹಾಕಿಕೊಂಡು ಬರುತ್ತಿದ್ದ. ಏಕೆಂದರೆ ಕೆಳಗಿನಿಂದ ಮೇಲಕ್ಕೆ ಹಾಕಿದರೆ ಆ ಕ್ರಿಯೆಗೆ ಮೂರೇ ಸೆಕೆಂಡುಗಳು ಸಾಕಾಗುತ್ತಿತ್ತು. ಮೇಲಿಂದ ಕೆಳಕ್ಕೆ ಹಾಕಿದರೆ ಏಳು ಸೆಕೆಂಡ್‌ಗಳು ಬೇಕಾಗುತ್ತಿತ್ತು. ಕ್ಷೌರ ಮಾಡಿಕೊಳ್ಳುವಾಗ ನೊರೆ ಹಚ್ಚಲು ಎರಡು ಬ್ರಷ್‌ಗಳನ್ನು ಉಪಯೋಗಿಸುತ್ತಿದ್ದ. ಹಾಗೆ ಮಾಡುವುದರಿಂದ ಕ್ಷೌರಕ್ಕೆ ಅವಶ್ಯವಾದ ಸಮಯದಲ್ಲಿ ಹದಿನೇಳು ಸೆಕೆಂಡು ಕಡಿಮೆ ಆಗುತ್ತಿತ್ತು.

ಕೆಲಸ ಮಾಡುವಾಗ ಇಟ್ಟಿಗೆ ಇಡುವವರು ಚಲನವಲನಗಳಲ್ಲಿ ವಿನಿಯೋಗಿಸುವ ಕಾಲವನ್ನು ಗಿಲ್‌ಬ್ರೆತ್ ಅಧ್ಯಯನ ಮಾಡಿ ಒಂದು ಸುಧಾರಿತ ವಿಧಾನವನ್ನು ಕಂಡುಹಿಡಿದ. ಉದಾಹರಣೆಗೆ ಹೊರ ಇಟ್ಟಿಗೆ ಇಡುವುದರಲ್ಲಿ ಚಲನೆಗಳನ್ನು ಹದಿನೆಂಟರಿಂದ 4 $^1/_2$ಗೆ ಇಳಿಸಿದನು ; ಒಳ

ಇಟ್ಟಿಗೆ ಇಡುವುದರಲ್ಲಿ 18 ಚಲನೆಗಳನ್ನು 2ಕ್ಕೆ ಇಳಿಸಿದನು. ಇದರಿಂದ ಉತ್ಪಾದನೆಯು ಪ್ರತಿ ಮಾನವ-ಗಂಟೆಗೆ (man-hour) 120ರಿಂದ 350 ಇಟ್ಟಿಗೆಗೆ ಏರಿತು. ಈ ಚಲನ ಮಿತವ್ಯಯದ ತತ್ತ್ವಗಳನ್ನು ನಿರೂಪಿಸಿ ಅನಾವಶ್ಯಕ ಚಲನೆಗಳನ್ನು ಆತ ನಿವಾರಿಸಿದ. ಇದರಿಂದ ಬಳಸಿದ ಕಾಲವೂ ಕಡಮೆಯಾಯಿತು, ಬಳಲಿಕೆಯೂ ಕಡಮೆಯಾಯಿತು.

ಯಾರೋ ಗಿಲ್‌ಬ್ರೆತ್‌ನನ್ನು "ಸಮಯವನ್ನು ಹೀಗೆ ಏಕೆ ಉಳಿಸಬೇಕು?" ಎಂದು ಕೇಳಿದಾಗ ಆತ ಉತ್ತರ ಕೊಟ್ಟಿದ್ದು : "ಏಕೆಂದರೆ ನಿಮಗೆ ಕೆಲಸವೇ ಅತ್ಯಂತ ಇಷ್ಟವಾದರೆ ಕೆಲಸಕ್ಕಾಗಿ ; ಇಲ್ಲವೆ ವಿದ್ಯಾಭ್ಯಾಸ, ಸೌಂದರ್ಯ, ಕಲೆ, ಸುಖ—ಇವುಗಳಿಗಾಗಿ ನಿಮ್ಮ ಮನಸ್ಸೆಲ್ಲ ಅವುಗಳಲ್ಲಿದ್ದರೆ".

ಈ ಮಾತು ನಮ್ಮನ್ನು ನಮ್ಮ ಮುಂದಿನ ಕಲ್ಪನೆಗೆ ತರುತ್ತದೆ. ಅದೆಂದರೆ 'ಬದುಕಿನ ಗುರಿಗಳ ಯೋಜನೆ' ಎಂಬುದು. 'ಯೋಜನೆಮಾಡುವುದರಿಂದಲ್ಲ ಜನ ವಿಫಲವಾಗುವುದು, ಯೋಜನೆ ಮಾಡುವುದರಲ್ಲಿ ಅವರು ವಿಫಲರಾಗುವುದು' ಎಂಬುದೊಂದು ಮುತ್ತಿನ ಮಾತು. ನಮ್ಮ ನಿಮ್ಮ ಮೌಲ್ಯಗಳು ಹಾಗೂ ಸಾಮರ್ಥ್ಯಗಳನ್ನವಲಂಬಿಸಿ ದೀರ್ಘಾವಧಿ ಗುರಿಗಳನ್ನು ಹಾಕಿಕೊಂಡು. ಸಕಾಲಕ್ಕೆ ಅವುಗಳನ್ನು ಸಾಧಿಸಲು ಪ್ರಜ್ಞಾಪೂರ್ವಕವಾಗಿ ಯೋಜಿಸುವುದು ಇವುಗಳಿಂದ ಹಿತವಾದ ಕಾರ್ಯಗಳನ್ನು ಮಾಡುವಲ್ಲಿ ನಮ್ಮ ಸಾಮರ್ಥ್ಯವನ್ನೆಲ್ಲ ರೂಢಿಸಿಕೊಳ್ಳಲು—ಮತ್ತು ನಮ್ಮ ಸಮಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತದೆ. ಅಂಥ ಯೋಜನೆಯು ವಾಸ್ತವಿಕವೂ ಕಾರ್ಯಸಾಧ್ಯವೂ ಆಗಿರಬೇಕೆಂಬುದನ್ನು ಹೇಳಬೇಕಾಗಿಲ್ಲ. ನಮ್ಮ ಯೋಜನೆಗಳನ್ನು ಅತ್ಯಂತ ಆಧುನಿಕ ಬೆಳವಣಿಗೆಗಳಿಗೆ ಸರಿಯಾಗಿ ಹೊಂದಿಸಿಕೊಳ್ಳಲು ನಾವು ಕ್ಲುಪ್ತ ಕಾಲಗಳಲ್ಲಿ ಪುನಃ ಪುನಃ ಪರಿಶೀಲನೆ ಮಾಡುತ್ತಿರಬೇಕು. ಹೀಗೆ ಮಾಡುವುದರಿಂದ ನಾವು ಎತ್ತ ಸಾಗುತ್ತಿದ್ದೇವೆಂಬುದು ಖಚಿತವಾಗುತ್ತದೆ

ಪ್ರತಿದಿನವೂ ನಾವು ಅನೇಕಾನೇಕ ಕೆಲಸಗಳಲ್ಲಿ—ದಿನಚರಿಯ ಕೆಲಸಗಳಲ್ಲಿ ಇಲ್ಲವೆ ಬೇರೆಯ ಕೆಲಸಗಳಲ್ಲಿ—ಅವುಗಳ ಉಪಯುಕ್ತತೆಯನ್ನು ಎಚ್ಚರಿಕೆಯಿಂದ ವಿಶ್ಲೇಷಿಸಿ ನೋಡಿದರೆ ಸುಪ್ರಸಿದ್ಧ ಸಂಖ್ಯಾಶಾಸ್ತ್ರಜ್ಞ ವಿಲ್‌ಫ್ರೆಡೋ ಪರೆಟೋನ ಅಭಿಪ್ರಾಯವನ್ನು ನಾವು ಒಪ್ಪಬೇಕಾಗುತ್ತದೆ. ನಮ್ಮ ಚಟುವಟಿಕೆಗಳಲ್ಲಿ ಶೇ. 20ರಷ್ಟು ಮಾತ್ರವೇ ಶೇ. 80ರಷ್ಟು ಆರ್ಥಿಕ ಅಥವಾ ಉತ್ಪಾದಕ ಫಲಿತಾಂಶಗಳನ್ನು ನೀಡುತ್ತವೆ ಎಂದು ಆತ ಹೇಳುತ್ತಾನೆ. ಆದ್ದರಿಂದ ಆಯಾ ದಿನದ ಕಾರ್ಯಕ್ರಮವನ್ನು ಹಾಕಿಕೊಳ್ಳುವಾಗ ಇಂಥ ಕೆಲವೇ ಕೆಲವು ಮುಖ್ಯ ಚಟುವಟಿಕೆಗಳಿಗಾಗಿ ಕಾಲವನ್ನು ಹಂಚಿಕೊಳ್ಳುವುದರಿಂದ ಕಾಲದ ಉಪಯುಕ್ತತೆಯನ್ನು ಉತ್ತಮಪಡಿಸಿಕೊಳ್ಳುವುದು ಸಾಧ್ಯವಾಗುತ್ತದೆ. ಆದರೆ ಈ ಮಾತನ್ನು ಹೇಳುವುದು ಸುಲಭ, ಮಾಡುವುದು ಕಷ್ಟ. ಏಕೆಂದರೆ ನಾವು ಸಾಮಾನ್ಯವಾಗಿ ಕೆಲಸಮಾಡುವ ಸನ್ನಿವೇಶದಲ್ಲಿ ಮೂವತ್ತು ನಿಮಿಷಗಳಷ್ಟು ಅಲ್ಪ ಅವಧಿಯಲ್ಲಿ ಕೂಡ—ಹಲವೊಂದು ಸಲ ಮನಸ್ಸು ಎಲ್ಲೋ ಹೋಗಿಬರುತ್ತದೆ. ಆದಾಗ್ಯೂ ಉದ್ದೇಶಪೂರ್ವಕವಾಗಿ ಕಾಲವನ್ನು ಹೀಗೆ ಉತ್ತಮತರ ಕಾರ್ಯಗಳಿಗಾಗಿ ವಿಭಾಗಿಸಿಕೊಳ್ಳುವುದರಿಂದ ನಮ್ಮ ಕಾಲೋಪಯೋಗವನ್ನು ಸುಮಾರು ಶೇ. 10ರಷ್ಟು ಉತ್ತಮಪಡಿಸಿಕೊಳ್ಳಬಹುದು

ಆದರೆ ಈ ರೀತಿ ಸಮಯದ ಹಂಚಿಕೆಯನ್ನು ಮಾಡಿಕೊಳ್ಳದೆ ಹೋದರೆ ಪಾರ್ಕಿನ್‌ಸನ್ನನ ಮೊದಲ ನಿಯಮ ಎಷ್ಟು ಸತ್ಯ ಎಂಬುದನ್ನು ನಾವು ಪುನಃ ಕಂಡುಕೊಳ್ಳುತ್ತಾಗುತ್ತದೆ. ಆ ನಿಯಮ ಹೀಗೆ ಹೇಳುತ್ತದೆ : "ನಡೆಸಬೇಕಾದ ಕೆಲಸದ ಪ್ರಮಾಣವನ್ನೇ ಆಗಲಿ ಉಪಯುಕ್ತತೆಯನ್ನೇ ಆಗಲಿ ಲೆಕ್ಕಿಸದೆ, ಇರುವ ಕಾಲವನ್ನೆಲ್ಲ ಹೇಗೋ ತುಂಬಿದರಾಯಿತು ಎಂದು ಕೆಲಸದ ಪ್ರಮಾಣವನ್ನು ಹೆಚ್ಚಿಸುತ್ತಾ ಹೋಗುವುದು." ವಾಸ್ತವಿಕವಾದ ಹಾಗೂ ಅಗತ್ಯ ಕೆಲಸಗಳಿಗೆ ಕಾಲವನ್ನು ನಿಗದಿಗೊಳಿಸುವುದರಿಂದ ಮಾತ್ರವೆ ಕೆಲಸದ ಪ್ರಮಾಣವನ್ನು ಕುಗ್ಗಿಸಿ, ಸಾಕಾಗದ ಕಾಲವನ್ನು ಬಿಡುಗಡೆಗೊಳಿಸುವುದು ಸಾಧ್ಯವಾಗುತ್ತದೆ.

ಕಾಲವನ್ನು ತಿಂದುಹಾಕುವ ಅನಾವಶ್ಯಕವಾದ ಚಟುವಟಿಕೆಗಳನ್ನು ನಿವಾರಿಸುವ ಇನ್ನೊಂದು ವಿಧಾನವೆಂದರೆ ನಮ್ಮ ಎಲ್ಲ ಕಾರ್ಯ ಚಟುವಟಿಕೆಗಳನ್ನೂ ಈ ಮೂರು ವರ್ಗಗಳಲ್ಲಿ ಒಂದಕ್ಕೆ ಸೇರಿಸುವುದು.

ಅ ವರ್ಗ: ಅತ್ಯಗತ್ಯವಾದ ಕೆಲಸಗಳು—ಇವುಗಳನ್ನು ತಾನೇ ಮಾಡಬೇಕು

ಬ ವರ್ಗ: ಮುಖ್ಯವಾದ ಕೆಲಸಗಳು—ಕಾಲ ಇದ್ದರೆ ತಾನೇ ಮಾಡಬೇಕು.

ಕ ವರ್ಗ: ಗೌಣವಾದ ಕೆಲಸಗಳು—ಇವುಗಳನ್ನು ಇತರರು ಸುಲಭವಾಗಿ ಮಾಡಬಹುದು. ಅವರಿಗೆ ವಹಿಸಿಕೊಡತಕ್ಕದ್ದು.

ಈ ಬಗೆಯಾಗಿ ವರ್ಗೀಕರಿಸಿ ನೋಡಿದಾಗ ನಮ್ಮ ಸಮಯದಲ್ಲಿ ಎಷ್ಟು ಭಾಗ—ಬಹುಶಃ ಮೂರನೆ ಒಂದಕ್ಕಿಂತ ಹೆಚ್ಚು ಭಾಗ—ಅತ್ಯಗತ್ಯ ಚಟುವಟಿಕೆಗಳನ್ನು ನಿರ್ವಹಿಸಲು ದೊರಕುತ್ತದೆ ಎಂಬುದನ್ನು ತಿಳಿದರೆ ಆಶ್ಚರ್ಯವಾಗುತ್ತದಲ್ಲವೆ? ವಿಶೇಷವಾಗಿ ನಾಯಕರಾಗಿರುವವರು ತಮ್ಮ ಸಾಮರ್ಥ್ಯವನ್ನೂ ತನ್ಮೂಲಕ ತಮ್ಮ ಅನುಯಾಯಿಗಳ ಕಾರ್ಯಕ್ಷಮತೆಯನ್ನೂ ಹೀಗೆ ವರ್ಧಿಸಿಕೊಳ್ಳಬಹುದು.

ಇನ್ನು ಕೊನೆಯ ಕಲ್ಪನೆ—ಇದು ಕೊನೆಯದಾದರೂ ಕನಿಷ್ಠವಾದದ್ದಲ್ಲ. ಪ್ರತಿಯೊಬ್ಬನೂ ಆರೋಗ್ಯವಾದ ದೇಹ ಹಾಗೂ ಜಾಗೃತವಾಗಿರುವ ಮನಸ್ಸುಗಳುಳ್ಳವನಾಗಿ ತನ್ನ ದಿನನಿತ್ಯದ ಸ್ಥಿತಿಗತಿಗಳಿಗನುಗುಣವಾಗಿ ಪ್ರಕೃತ ಕಾಲವನ್ನು ವಿನಿಯೋಗಿಸುತ್ತಾ ಹೋಗುವುದರಿಂದ ಮಾತ್ರವೇ ತನ್ನ ಕಾಲವನ್ನು ಅತ್ಯಂತ ಉಪಯುಕ್ತವಾಗಿ ಬಳಸುವುದು ಸಾಧ್ಯ. ತನ್ನ ಆಲೋಚನೆಯನ್ನು ನುಡಿ ಮತ್ತು ನಡೆಗಳಲ್ಲಿ ಹೊಂದಿಸಿಕೊಂಡು ಬಾಳುವುದಕ್ಕೆ ಅತ್ಯಂತ ಕಠಿಣವಾದ ಆತ್ಮ ಸಂಯಮ, ಆತ್ಮ ನಿಯಂತ್ರಣಗಳು ಅವಶ್ಯವಾಗುತ್ತವೆ, ನಿಜ. ಅವನ್ನು ಸಾಧಿಸಿದ ವ್ಯಕ್ತಿಯೇ ತನ್ನ ಸಮಯವನ್ನು ಹೆಚ್ಚು ಹೆಚ್ಚು ಉಪಯುಕ್ತವಾಗಿ ವಿನಿಯೋಗಿಸಬಲ್ಲ.

ನಾವು ಸಮಯವನ್ನು ಆರು ಬಗೆಯಾಗಿ ಕಳೆಯುತ್ತೇವೆಂದು ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಕೆಲಸ, ಬೌದ್ಧಿಕ ಕ್ರೀಡೆಗಳು, ಏಕಾಂತತೆ, ಧಾರ್ಮಿಕ ಕ್ರಿಯೆಗಳು, ವಿನೋದ ವಿಹಾರಗಳು ಮತ್ತು ಅಂತರಂಗ ವಿಷಯಗಳು ಇವೇ ಆ ಆರು ಬಗೆ. ಉತ್ಪಾದನಶೀಲ ಕೆಲಸಕ್ಕೆ ಚ್ಯುತಿ ತರುವ ನಮ್ಮ ನರಗಳನ್ನೆಲ್ಲ ಕ್ಷೀಣಗೊಳಿಸುವ ಬೌದ್ಧಿಕ ಕ್ರೀಡೆಗಳಿಗೇ ಹೆಚ್ಚು ಸಮಯವನ್ನು ವಿನಿಯೋಗಿಸುವ ಪ್ರವೃತ್ತಿ ನಮ್ಮಲ್ಲಿದೆ ಎಂದೂ ಅವರು ಎಚ್ಚರಿಸುತ್ತಾರೆ. ಉಳಿದ ಐದರಲ್ಲೂ ತಕ್ಕಷ್ಟು ಕಡಿತ ಮಾಡಿದರೆ ನಾವು ನಮ್ಮ ಕೆಲಸಕ್ಕಾಗಿ ಬೇಕಾದ ವೇಳೆಯನ್ನು ಬುದ್ಧಿಪೂರ್ವಕ ಹೆಚ್ಚಿಸಿಕೊಳ್ಳುವುದು ಸಾಧ್ಯವಿದೆ. ಉತ್ಪಾದನಶೀಲ ಕಾರ್ಯಪ್ರವೃತ್ತಿ ಎಂದರೆ ಕೌಶಲ, ಸಂಕಲ್ಪ ಇವುಗಳ ಬೆರಕೆ. ಇಂಥ ಪ್ರವೃತ್ತಿಯು ಕಾಲವನ್ನು ವ್ಯವಸ್ಥೆ ಮಾಡುವ ಸಾಮರ್ಥ್ಯವನ್ನು ಹೆಚ್ಚು ಮಾಡುತ್ತದೆ. ಆಗ ನಾವು ಹ್ಯಾಜ್‌ಲಿಟ್‌ನೊಡನೆ ದನಿಗೂಡಿಸಿ ಹೀಗೆ ಹಾಡಬಹುದು:

ಹೆಚ್ಚು ಕೆಲಸ ಮಾಡಿದಷ್ಟೂ ಇನ್ನೂ ಹೆಚ್ಚು ಕೆಲಸ ಮಾಡಿಯೇವು
ಹೆಚ್ಚು ಕಾರ್ಯ ಮಗ್ನರಾದಷ್ಟೂ ಹೆಚ್ಚು ಬಿಡುವ ಪಡೆದೇವು

ಈಗ ಸಂಸ್ಥೆಗಳು ಸಮಾಜ ಮತ್ತು ರಾಷ್ಟ್ರದ ದೃಷ್ಟಿಗಳಿಂದ ಕಾಲವನ್ನು ಇನ್ನೂ ಚೆನ್ನಾಗಿ ವಿನಿಯೋಗಿಸುವುದು ಹೇಗೆಂದು ನೋಡೋಣ. ಏಕೆಂದರೆ ಯಾವನೂ ಒಂಟಿಯಾಗಿ ಬದುಕುವುದಿಲ್ಲ. ಆದ್ದರಿಂದ ಒಬ್ಬನ ಕಾಲವ್ಯವಸ್ಥೆಯು ಯಾರೊಂದಿಗೆ ಅವನು ಕೆಲಸ ಮಾಡುತ್ತಿರುವನೋ ಆ ಗುಂಪಿನ ಕಾಲವ್ಯವಸ್ಥೆಯನ್ನು ಅವಲಂಬಿಸುತ್ತದೆ. ಕಾಲದ ಉಪಯೋಗವನ್ನು ಹಲವು ಪಟ್ಟು ಹೆಚ್ಚಿಸುವ ಅಗತ್ಯ ಮತ್ತು ಅವಕಾಶ ನಮ್ಮ ದೇಶದಲ್ಲಿ, ಅದರಲ್ಲೂ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಅಗಾಧವಾಗಿದೆ. ಕಾಲಪ್ರಜ್ಞೆಯಿರುವ ಮುಖಂಡರು ತಮ್ಮೆಲ್ಲ ಬುದ್ಧಿಶಕ್ತಿಯನ್ನೂ ಸಂಘಟನಾಸಾಮರ್ಥ್ಯವನ್ನೂ ಉಪಯೋಗಿಸಿ ತಮ್ಮ ತಮ್ಮ ಘಟಕಗಳ ಮೂಲಕ ಕಾಲವನ್ನು ಉಪಯುಕ್ತವಾಗಿ ಬಳಸುವುದನ್ನು ಉತ್ತಮಪಡಿಸಲು ಪ್ರಯತ್ನಿಸಬೇಕಾ

ಗುತ್ತದೆ. ಅದರಿಂದ ಅದರೊಂದಿಗೆ ಕೆಲಸಮಾಡುವವರ ಸಮಯವು ಹೆಚ್ಚು ಉತ್ಪಾದಕವಾಗುತ್ತದೆ. ಕಾರ್ಯಕ್ಕೆ ಅಡಚಣೆ ಬರುವುದು ಆಡಳಿತ ವ್ಯವಸ್ಥೆಯ ಮೇಲ್ಮಟ್ಟದಲ್ಲಿ. ಆದ್ದರಿಂದ ಸಮರ್ಥ ನಾಯಕರಾದ ಅವರು ಸದಾ ತಮ್ಮದೇ ಸಮಯದ ಉಪಯೋಗವನ್ನು ಪರೀಕ್ಷಿಸಿಕೊಳ್ಳುತ್ತ ಅದರ ಉಪಯುಕ್ತತೆಯನ್ನು ಹೆಚ್ಚಿಸಿಕೊಳ್ಳುತ್ತಿರಬೇಕು. ಕಾಲಹರಣವನ್ನು ನಿವಾರಿಸಿ, ನಮ್ಮ ಸಾಮೂಹಿಕ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸಬೇಕಾದರೆ, ಆಡಳಿತವನ್ನು ವಿಕೇಂದ್ರೀಕರಿಸುವುದು, ಅಧಿಕಾರವನ್ನು ಹಲವರಿಗೆ ಹದವರಿತು ವಹಿಸಿ ಕೊಡುವುದು, ಒಬ್ಬೊಬ್ಬ ವ್ಯಕ್ತಿಯನ್ನೂ ನಿರ್ದಿಷ್ಟ ಗುರಿಗಳನ್ನು ಸಾಧಿಸುವಲ್ಲಿ ಹೊಣೆಗಾರನನ್ನಾಗಿ ಮಾಡುವುದು, ಕಾರ್ಯವಿಧಾನ ಮತ್ತು ಕಾಗದ ಪತ್ರ ವ್ಯವಹಾರಗಳನ್ನು ಸರಳಗೊಳಿಸುವುದು, ಇನ್ನೂ ಚೆನ್ನಾಗಿ ಸಾಮೂಹಿಕ ಕಾರ್ಯ ಮಾಡಿಸುವುದು, ಅವರವರ ಪಾತ್ರಗಳನ್ನು ಅವರವರು ನಿರ್ವಹಿಸುವಂತೆ ಏರ್ಪಡಿಸುವುದು—ಇವೆಲ್ಲವನ್ನೂ ಇನ್ನೂ ಅಧಿಕ ಪ್ರಮಾಣದಲ್ಲಿ ಅನುಸರಿಸಬೇಕು. ಈಗಾಗುತ್ತಿರುವ ಕಾಲವಿಳಂಬದ ರೋಗಕ್ಕೆ ಇದು ಅತ್ಯಂತ ತುರ್ತಾದ ಔಷಧ.

ಸಮಷ್ಟಿ ಪ್ರಯತ್ನಕ್ಕೆ ವ್ಯಕ್ತಿಯು ನೀಡಬಹುದಾದ ತನ್ನ ಪಾಲಿನ ಕೊಡುಗೆಯು ತಂಡದ ಬಲವನ್ನು ಹೆಚ್ಚಿಸುವಂತಿರಬೇಕೇ ಹೊರತು ಅದನ್ನು ಕುಗ್ಗಿಸುವಂತಿರಕೂಡದು. ಈ ಸಹಯೋಗ ತತ್ವಕ್ಕೆ ನಾವೆಲ್ಲರೂ ಪ್ರಜ್ಞಾಪೂರ್ವಕವಾಗಿ ಶಿಸ್ತಿನ ಪ್ರಯತ್ನ ಕೈಗೊಳ್ಳಬೇಕು. ಸರಳವಾದ ನಿದರ್ಶನ ಬೇಕೆಂದರೆ ಸಿಟಿ ಬಸ್ಸನ್ನು ತೆಗೆದುಕೊಳ್ಳಿ. ಬಸ್ ನಿಲ್ದಾಣಗಳಲ್ಲಿ ನಮ್ಮಲ್ಲಿ ಎಷ್ಟು ಮಂದಿ ಕ್ಯೂ ನಿಲ್ಲುವ ಅಭ್ಯಾಸ ಮಾಡಿಕೊಂಡಿದ್ದೇವೆ? ಹತ್ತುವಾಗ ಇಳಿಯುವಾಗ ವಿಳಂಬವಾಗದಂತೆ ಶಿಸ್ತಿನಿಂದ ಹತ್ತಿ ಇಳಿದು ಮಾಡುತ್ತೇವೆ? ನಮ್ಮಲ್ಲಿ ಕೆಲವರು ಟಿಕೆಟ್ ಶುಲ್ಕಕ್ಕೆ ಸರಿಯಾದ ಚಿಲ್ಲರೆ ಹಣವನ್ನು ಇಟ್ಟುಕೊಳ್ಳುವುದನ್ನು, ಕಂಡಕ್ಟರನಿಗೆ ಅದನ್ನು ಕೊಡುವುದನ್ನು ಉಪೇಕ್ಷಿಸುತ್ತೇವೆ. ಈ ಬಗೆಯ ಉಪೇಕ್ಷೆಯಿಂದ ಬಸ್ಸಿನ ಶೇ. 20ರಷ್ಟು ಉತ್ಪಾದಕ ಸಮಯ ಹಾಳಾಗಬಹುದು ಎಂಬುದನ್ನು ನಾವು ಮನಗಾಣುವುದಿಲ್ಲ.

ಕಾಲವನ್ನು ಹಾಳುಮಾಡುವ ಇನ್ನೊಂದು ಅಂಶವೆಂದರೆ ಅಗಾಧ ಪ್ರಮಾಣದಲ್ಲಿ ನಡೆಯುತ್ತಿರುವ ಸಭೆಗಳು ಮತ್ತು ಅವುಗಳಿಗಾಗಿ ಬೇಕಾದ ಪ್ರಯಾಣಗಳು. ಅನೇಕ ವೇಳೆ ಇಂಥ ಸಭೆಗಳು ಸಕಾಲಕ್ಕೆ ಪ್ರಾರಂಭ ಆಗುವುದಿಲ್ಲ, ಸಕಾಲಕ್ಕೆ ಮುಗಿಯುವುದೂ ಇಲ್ಲ; ಅತಿ ದೀರ್ಘ ಕಾಲ ನಡೆಯುತ್ತವೆ. ನಿಮಿಷಗಳನ್ನು ಉಳಿಸಲು ಹೊರಟು ಅಕ್ಷರಶಃ ಗಂಟೆಗಳನ್ನು ಹಾಳುಮಾಡುತ್ತವೆ. ಇಂಥ ಸಭೆಗಳನ್ನು ಕನಿಷ್ಠ ಮಟ್ಟಕ್ಕೆ ಇಳಿಸಿ ಅವುಗಳಿಂದ ಗರಿಷ್ಠ ಪ್ರಯೋಜನವನ್ನು ಪಡೆದುಕೊಳ್ಳಲು ಸಂಸ್ಥೆಗಳಿಗೆ ಅವಕಾಶವಿದೆ. ಅದು ಅವುಗಳ ಹೊಣೆಗಾರಿಕೆಯೂ ಹೌದು. ಇಲ್ಲದೆ ಹೋದರೆ ಅಸಮರ್ಥ ಸಂಸ್ಥೆಗಳಿಗೆ ರಿಯಾಯತಿ ತೋರಿಸಿದ ಹಾಗಾಗುತ್ತದೆ.

ಕಾಲವೇ ಕಾಂಚನ, ವಿಳಂಬವೇ ವಿನಾಶ ಎಂಬುದನ್ನು ನಾವು ಮನಗಾಣತಕ್ಕದ್ದು. ನಮ್ಮ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಈ ಪಾಠವನ್ನು ನಾವು ದುರ್ಗಮವಾದ ಹಾದಿ ಹಿಡಿದು ಕಲಿತಿದ್ದೇವೆ ನಮ್ಮ ಯೋಜನೆಗಳಲ್ಲಿ ಪರಿಣಾಮಕಾರಿಯಾದ ಕಾಲವ್ಯವಸ್ಥೆ ಮಾಡದಿದ್ದ ಕಾರಣ ಕೋಟಿಗಟ್ಟಲೆ ರೂಪಾಯಿ ವೆಚ್ಚವಾಗಿದೆ, ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಇವನ್ನು ನಾವು ತಡೆಯಲಾರೆವು. ಒಂದು ನಿದರ್ಶನ ಇದು : 1960ರ ದಶಕದಲ್ಲಿ ನಮ್ಮ ಕೃತಕ ಗೊಬ್ಬರ ತಯಾರಿಕೆಯ ಯೋಜನೆಗಳು ಪೂರ್ತಿಗೊಳ್ಳಲು ಹೆಚ್ಚುಕಡಮೆ 60 ತಿಂಗಳು ಹಿಡಿಯಿತು, ಅಂದಾಜು ಮಾಡಿದ್ದ 42 ಕ್ಕಿಂತ 18 ತಿಂಗಳು ಹೆಚ್ಚಾಯಿತು. ಮುಂದುವರಿದ ರಾಷ್ಟ್ರಗಳಲ್ಲಿ ಇಂಥ ಯೋಜನೆಗಳು ಅಂದಾಜಿಗಿಂತ ನಮ್ಮಲ್ಲಿನ ಅಂದಾಜು ಕಾಲವೆ ಶೇ. 50ರಷ್ಟು ಹೆಚ್ಚು. ವರ್ಷಕ್ಕೆ 1,00,000 ಟನ್ನು ಉತ್ಪಾದನಾ ಸಾಮರ್ಥ್ಯದ ಒಂದು ಕೃತಕ ಗೊಬ್ಬರ ಕಾರ್ಖಾನೆಯ ನಿರ್ಮಾಣ ಒಂದು ವರ್ಷ ವಿಳಂಬವಾದರೆ ಅದರ ನಷ್ಟ 11 ಕೋಟಿ ರೂ. ಎಂದು ಆಗಲೇ ಲೆಕ್ಕ ಹಾಕಲಾಗಿತ್ತು.

ಥೋರೋ ಹೇಳಿದಂತೆ :

“ನಿನ್ನ ಪಶ್ಚಾತ್ತಾಪಗಳ ಪೂರ್ಣಫಲವನ್ನು ಪಡೆದುಕೊ
ಎದೆಯಾಳದಿಂದ ಹುಟ್ಟಿದ ಪಶ್ಚಾತ್ತಾಪವೇ ಹೊಸದಾದ ಬದುಕು.”

ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಆಗುವ ವಿಳಂಬವನ್ನು ಅಲ್ಲಿಂದೀಚೆಗೆ ಗುರ್ತಿಸಲಾಗಿದೆ ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಮರ್ಪಕ ಪ್ರಮಾಣದಲ್ಲಿ ಉತ್ತಮವಾದ ಸಾಧ್ಯತಾ ಅಧ್ಯಯನಗಳು (feasibility studies) ವಾಸ್ತವಿಕವಾದ ಯೋಜನಾ ಪರಿಶೀಲನೆಗಳು, ಯೋಜನೆಗಳ ಕಾರ್ಯಗತತ್ವ ಹಾಗೂ ಮೌಲ್ಯಮಾಪನಗಳನ್ನು ಕುರಿತು ಕೇಂದ್ರ ಹಾಗೂ ರಾಜ್ಯಮಟ್ಟಗಳೆರಡರಲ್ಲೂ ಸೂಕ್ತವಾದ ಅಧ್ಯಯನ ತಂಡಗಳ ರಚನೆ, ಸಂದಿಗ್ಧ ಹಂತಗಳ ವಿಶ್ಲೇಷಣೆ, ವೆಚ್ಚ ನಿಯಂತ್ರಣ ಮತ್ತು ಮೌಲ್ಯ ವ್ಯವಸ್ಥೆ ಇವೇ ಮೊದಲಾದ ವ್ಯವಹಾರ ತಂತ್ರಗಳನ್ನು ಕಾರ್ಯಗತಗೊಳಿಸಲು ತಕ್ಕ ಸಿಬ್ಬಂದಿಗೆ ತರಬೇತು ಇವೆಲ್ಲ ಕ್ರಮಗಳು ಈಗ ಜಾರಿಗೆ ಬಂದಿವೆ. ವಿಳಂಬ ನಿವಾರಣೆ ಮತ್ತು ನಿರ್ದಿಷ್ಟ ಕಾಲದಲ್ಲಿ ವೆಚ್ಚದಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುವಿಕೆ ಇದರಿಂದ ಸಾಧ್ಯವಾಗುತ್ತಿದೆ. ಇದು ಇನ್ನೂ ತ್ವರಿತಗೊಳ್ಳಬೇಕು, ಯೋಜನೆಗಳು ಮತ್ತು ಯೋಜಿತ ಕಾರ್ಯಕ್ರಮಗಳ ಪರಿಣಾಮಕಾರೀ ವ್ಯವಸ್ಥೆಯಲ್ಲಿ ಒಂದು ಕ್ರಾಂತಿಯೇ ಆಗಬೇಕು.

ಹೆಚ್ಚು ಪರಿಣಾಮಕಾರೀ ಕಾಲ ವಿನಿಯೋಗದ ಜವಾಬುದಾರಿ ಬಹುಮಟ್ಟಿಗೆ ಮುಖಂಡರನ್ನು ಅವಲಂಬಿಸಿದೆ. ನಿವಾರಿಸಬಹುದಾದ ವಿಳಂಬಗಳನ್ನು ಗುರುತಿಸುವುದು, ಅವುಗಳನ್ನು ನಿವಾರಿಸಲು ಶ್ರಮಿಸುವುದು ಅವರ ಕರ್ತವ್ಯ. ಸಾಮೂಹಿಕ ಪ್ರಯತ್ನಗಳಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಿಗಳೊಡನೆ ವ್ಯವಹರಿಸುವುದು ಮೊದಲ ಅಗತ್ಯ. ತಂಡದ ಸದಸ್ಯರೂ ಅದೇ ಗುರಿ ಸಾಧನೆಗಾಗಿ ನಿಷ್ಠೆ ತಳೆಯುವುದರಿಂದ ಉತ್ತಮತರ ಫಲಿತಗಳು ಬರಲೇಬೇಕು

ಸಂಗ್ರಹಿಸಿ ಹೇಳುವುದಾದರೆ ನಮ್ಮ ಕಾಲವನ್ನು ಉತ್ತಮ ರೀತಿಯಲ್ಲಿ ವಿನಿಯೋಗಿಸುವುದು ಒಂದು ವಿಕಾಸವಾಗುತ್ತ ಹೋಗುವ ಪ್ರಕ್ರಿಯೆ. ಅದರಲ್ಲಿ ದಿನದಿಂದ ದಿನಕ್ಕೆ, ವರ್ಷದಿಂದ ವರ್ಷಕ್ಕೆ, ಪ್ರಗತಿ ಸಾಧಿಸಲು ತುಂಬ ಅವಕಾಶ ಉಂಟು. ವ್ಯಕ್ತಿಗಳಾಗಿ ನಮಗೆ ಒಂದು ದಿನಕ್ಕೆ 24 ಗಂಟೆಗಳು ಮಾತ್ರ ಕಾಲವುಂಟು. ಒಂದು ರಾಷ್ಟ್ರವಾಗಿ ನಾವು ಸ್ವಾವಲಂಬನ ಮತ್ತು ಬೆಳವಣಿಗೆಗಳ ವೇಗವನ್ನು ವರ್ಧಿಸಬೇಕು ಆದ್ದರಿಂದ ನಾವು ನಮ್ಮ ಕಾಲ ಮತ್ತು ಶ್ರಮವನ್ನು ಮಿತವ್ಯಯಗೊಳಿಸಿಕೊಂಡು ಸೂಕ್ತವಾದ ದಿಕ್ಕಿನಲ್ಲಿ ಅವುಗಳನ್ನು ಹೂಡುವುದು ಒಳಿತು. ನಮ್ಮ ಅಮರ ಕವಿ ಕಾಳಿದಾಸನ ಸುಪ್ರಸಿದ್ಧ ಶ್ಲೋಕದ ಅನುವಾದವೊಂದನ್ನು ಈ ಸಂದರ್ಭದಲ್ಲಿ ಉದ್ಧರಿಸುವುದು ಸೂಕ್ತ:

ಇಂದೆಂಬ ದಿನವ ನೀನೆಚ್ಚರದಿ ನೋಡಿಕೊಳ್,
ಅದುವೆ ನಿನ್ನಯ ಬಾಳು, ಬಾಳಿನುಸಿರು
ಅದರ ಅಲ್ಪಾವಧಿಯೊಳಿದೆ ನಿನ್ನ ಜೀವನದ
ಬಗೆಬಗೆಯ ನಿಜತೆ, ಮೇಣ್ ಬೆಳವಣಿಗೆ, ಆನಂದ,
ಸಾಧನೆಯ ಹಿರಿಮೆ ಚೆಲುವಿನಾ ಗರಿಮೆ
ನಿನ್ನೆ ಎಂಬುದು ಕನಸು, ನಾಳೆ ಎಂಬುದು ಭ್ರಾಂತಿ
ಇಂದೊಂದೆ ದಿಟಕು ನಿಜ ಸರಿಯಾಗಿ ಬಾಳದನು.
ಇಂದೆಂಬ ದಿನವನು ನೀನಿಂತು ಬಾಳುವೊಡೆ
ಕಳೆದ ನಿನ್ನೆಗಳೆಲ್ಲ ಸೊಗದ ಕನಸಾಗುವುವು
ಬರುವ ನಾಳೆಗಳೆಲ್ಲ ಶುಭದ ಕುರುಹಾಗುವುವು
ಇಂದೆಂಬ ಈ ದಿನವನೆಚ್ಚರದಿ ನೋಡಿಕೊಳ್
ಇದುವೆ ಮುಂಜಾನೆಗೆ ನೀನೆಸಗುವಾ ನಮನ.

ಒ. ಡಿ. ಹೆಗ್ಗಡೆ

ಬಹುರಾಷ್ಟ್ರೀಯ ನಿಗಮಗಳು-ಒಂದು ವಿವೇಚನೆ*

ಬಹುರಾಷ್ಟ್ರೀಯ ನಿಗಮಗಳ (Multi National Corporations or Transnational Corporations) ಕಾರ್ಯಾಚರಣೆಗಳು ಇತ್ತೀಚಿನ ದಿನಗಳಲ್ಲಿ ಬಹಳ ವಿವಾದಕ್ಕೆ ಒಳಗಾಗಿವೆ. ಈ ಬಗೆಯ ನಿಗಮಗಳನ್ನು ಪ್ರಥಮ ಬಾರಿಗೆ ಅಮೇರಿಕನ್ನರು ವಿಶ್ವ ವಾಣಿಜ್ಯಕ್ಕೆ ಪರಿಚಯ ಮಾಡಿಕೊಟ್ಟರು. ಅಲ್ಲದೆ ಇಂದಿಗೂ ಕೂಡ ಪ್ರಪಂಚದ ಬಹುರಾಷ್ಟ್ರೀಯ ನಿಗಮಗಳ ಬಹುಪಾಲು ಅಮೇರಿಕಾ ರಾಷ್ಟ್ರಕ್ಕೆ ಸೇರಿವೆ. ಈ ನಿಗಮಗಳು ತಮ್ಮ ಕಾರ್ಯವ್ಯಾಪ್ತಿಯನ್ನು ಆರ್ಥಿಕ ಕ್ಷೇತ್ರಕ್ಕೂ ಮೀರಿ ವಿಸ್ತರಿಸಿವೆ. ಇದರಿಂದಾಗಿ ಇವುಗಳು ಬಹುತೇಕ ದೇಶಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯಾಚರಣೆಯಲ್ಲಿ ಪ್ರವೇಶ ಮಾಡಿವೆ. ಬಹುರಾಷ್ಟ್ರೀಯ ನಿಗಮಗಳ ಸರ್ವವ್ಯಾಪಕವಾದ ಪ್ರಭಾವಕ್ಕೆ ಅವುಗಳು ಬಂಡವಾಳ ಸಂಪನ್ಮೂಲಗಳ ಪೂರೈಕೆಯ ಮೇಲೆ ಹೊಂದಿರುವ ಅಗಾಧ ಹಿಡಿತವು ಬಹುಮಟ್ಟಿಗೆ ಕಾರಣವಾಗಿದೆ. ಆದ್ದರಿಂದ ಬಂಡವಾಳದ ಮೇಲಿನ ಹಿಡಿತ ಮತ್ತು ಸ್ವಾಮ್ಯ, ಬಂಡವಾಳದ ಸಂಗ್ರಹ ಮತ್ತು ಪೂರೈಕೆಯಲ್ಲಿನ ಹೆಚ್ಚಳ, ಬಂಡವಾಳದ ಸ್ವರೂಪ ಹಾಗೂ ಸಂಬಂಧಪಟ್ಟ ತಂತ್ರಜ್ಞಾನ, ಸಂಶೋಧನೆ ಮತ್ತು ಬೆಳವಣಿಗೆಗಳಲ್ಲಿನ ಹೂಟಿಯ ಮೂಲಕ ಅಭಿವೃದ್ಧಿ—ಮುಂತಾದ ವಿಚಾರಗಳ ಕೂಲಂಕಷವಾದ ವಿವೇಚನೆಯಿಂದ ಬಹುರಾಷ್ಟ್ರೀಯ ನಿಗಮಗಳ ಕಾರ್ಯಾಚರಣೆಯ ಬಗ್ಗೆ ತಿಳಿಯುವುದು ಸಾಧ್ಯವಾಗುತ್ತದೆ.

ಬಹು ರಾಷ್ಟ್ರೀಯ ನಿಗಮಗಳಿಗೆ ಸಂಬಂಧಿಸಿದ ಸಾಹಿತ್ಯವನ್ನು ಎರಡು ಬಗೆಯದಾಗಿ ವಿಂಗಡಿಸಬಹುದಾಗಿದೆ. ಮೊದಲನೆಯದಾಗಿ, ಬಹು ರಾಷ್ಟ್ರೀಯ ನಿಗಮಗಳ ಸ್ಥಾಪನೆಯಿಂದ ಉಂಟಾಗುವ ಆರ್ಥಿಕ ಅನುಕೂಲತೆಗಳನ್ನು ಕುರಿತು ಹೇಳುವುದು. ಎರಡನೆಯದಾಗಿ, ಬಹು ರಾಷ್ಟ್ರೀಯ ನಿಗಮಗಳು ವಿಕಾಸಶೀಲ ದೇಶಗಳಲ್ಲಿ ಕನಿಕರರಹಿತವಾದ ಆರ್ಥಿಕಶೋಷಣೆಯಲ್ಲಿ ತೊಡಗಿವೆ. ಹಾಗೂ ಈ ಬಗೆಯ ಸಂಸ್ಥೆಗಳು ಅಭಿವೃದ್ಧಿ ಹೊಂದಿದ ದೇಶಗಳ ಆರ್ಥಿಕ ಸಾಮ್ರಾಜ್ಯಶಾಹಿ ನೀತಿಯ ಅನುಷ್ಠಾನವಾದ ಬೆಳವಣಿಗೆಗೆ ಪ್ರೋತ್ಸಾಹಕರವಾಗಿವೆ ಎಂಬ ಮಾರ್ಕ್ಸಿಸ್ಟ್ ವಾದಕ್ಕೆ ಸಂಬಂಧಿಸಿದ ಸಾಹಿತ್ಯ. ಇತ್ತೀಚೆಗೆ ಅಮೆರಿಕ ಸಂಯುಕ್ತ ಸಂಸ್ಥಾನದ ಸೆನೆಟಿನ ಉಪಸಮಿತಿ ನಡೆಸಿದ ಸಮೀಕ್ಷೆಗಳಿಂದ ಮಾರ್ಕ್ಸಿಸ್ಟರ ವಾದಕ್ಕೆ ಹೆಚ್ಚು ಪುರಾವೆ ದೊರೆತಿದೆ. ಈ ಎರಡೂ ಬಗೆಯ ವಾದ–ಪ್ರತಿವಾದಗಳ ಕೂಲಂಕಷ ವಿವೇಚನೆಯೇ ಈ ಲೇಖನದ ಪ್ರಮುಖ ಉದ್ದೇಶವಾಗಿದೆ.

ಬಹು ರಾಷ್ಟ್ರೀಯ ನಿಗಮಗಳು ಬೃಹತ್ ಪ್ರಮಾಣದ್ದಾಗಿದ್ದು ಬಹುಮುಖ ಏಕಸ್ವಾಮ್ಯ (oligopoly) ಮಾರುಕಟ್ಟೆಯನ್ನು ಪ್ರತಿನಿಧಿಸುವ ಕೈಗಾರಿಕೆಗಳಾಗಿವೆ. ಈ ನಿಗಮಗಳ ಮಾರಾಟ ಮತ್ತು ಆಸ್ತಿಯ ಪ್ರಮಾಣವು ಅಗಾಧವಾಗಿ (ಬಿಲಿಯನ್ ಡಾಲರ್‌ಗಳಲ್ಲಿ) ಹೆಚ್ಚಿದೆ. ಬಹು ರಾಷ್ಟ್ರೀಯ ನಿಗಮಗಳ ಕಾರ್ಯಾಚರಣೆಯ ವ್ಯಾಪ್ತಿಯ ವಿಶ್ಲೇಷಣೆಯನ್ನು ಅದರ ಅರ್ಥ ವ್ಯಾಖ್ಯೆಯ ಮೂಲಕ ಪ್ರಾರಂಭಿಸೋಣ.

ಬಹುರಾಷ್ಟ್ರೀಯ ಉದ್ಯಮ ನಿಗಮಗಳ ಉಗಮ ಮತ್ತು ಅರ್ಥವ್ಯಾಪ್ತಿ

ಬಹು ರಾಷ್ಟ್ರೀಯ ನಿಗಮಗಳ ಅರ್ಥವ್ಯಾಪ್ತಿಯ ಬಗ್ಗೆ ಅರ್ಥಶಾಸ್ತ್ರಜ್ಞರಲ್ಲಿ ಒಮ್ಮತದ ಅಭಿಪ್ರಾಯವಿಲ್ಲ. ಏಕೆಂದರೆ ಈ ನಿಗಮಗಳನ್ನು ವ್ಯಾಖ್ಯಾನಿಸಲು ಅವರುಗಳು ಅನುಸರಿಸುವ ಸೂತ್ರಗಳು ಬೇರೆಬೇರೆಯಾಗಿವೆ. ಇಲ್ಲಿ ಕೆಲವು ಪ್ರಮುಖ ವ್ಯಾಖ್ಯೆಗಳನ್ನು ಮಾತ್ರ ನೀಡಲು ಪ್ರಯತ್ನಿಸಲಾಗಿದೆ. ಒಂದು ನೂರು ಮಿಲಿಯನ್ ಡಾಲರ್‌ಗಳ ವ್ಯಾಪಾರ ವಹಿವಾಟಿಲ್ಲದಿರುವ ಯಾವುದೇ ಅಂತರರಾಷ್ಟ್ರೀಯ ನಿಗಮವು ಬಹುದೇಶಿ ನಿಗಮವಾಗಲಾರದು ಎಂದು ಪ್ರೊಫೆಸರ್ ರೇಮಂಡ್ ವರ್ನನ್‌ರವರು ಅಭಿಪ್ರಾಯ ಪಡುವರು. ಪ್ರೊಫೆಸರ್ ವರ್ನನ್‌ರವರ ಅರ್ಥವ್ಯಾಪ್ತಿಯು ಅಂತರರಾಷ್ಟ್ರೀಯವಾಗಿ ತನ್ನ ಅನೇಕ ಸಂಸ್ಥೆಗಳನ್ನು ಹೊಂದಿರುವ ಹಾಗೂ ಪಿತೃ ಘಟಕ ಹಾಗೂ ಅದರ ಉಪಘಟಕಗಳ ಸಮಗ್ರ ಮಾರಾಟ ಪ್ರಮಾಣ ಒಂದು ನೂರು ಮಿಲಿಯನ್ ಡಾಲರ್‌ಗಳಾಗಿರಬೇಕು ಎಂಬ ಅಂಶದ ಆಧಾರದ ಮೇಲೆ ರೂಪುಗೊಂಡಿದೆ. ಈ ಅರ್ಥವ್ಯಾಪ್ತಿಯು ಹೆಚ್ಚು ಸಂಕುಚಿತವೂ ಹಾಗೂ ಅಸಮಂಜಸವಾದುದೂ ಆಗಿದೆ. ಏಕೆಂದರೆ ಮಾರಾಟ ಪ್ರಮಾಣವು ಬಹು ರಾಷ್ಟ್ರೀಯ ನಿಗಮಗಳ ಕಾರ್ಯಪ್ರಮಾಣವನ್ನು ನಿರ್ಧರಿಸಬಲ್ಲುದೇನೋ ನಿಜ, ಆದರೆ ಬಹುರಾಷ್ಟ್ರೀಯ ನಿಗಮಗಳ ಕಾರ್ಯಚಟುವಟಿಕೆಗಳ ಪೂರ್ಣ ಸ್ವರೂಪವನ್ನು ಪರಿಚಯ ಮಾಡಿಕೊಡುವುದಕ್ಕೆ ಸಮರ್ಥವಾಗಿಲ್ಲ.

“ಯಾವುದಾದರೂ ಉತ್ಪಾದನಾ ನಿಗಮವು ಒಂದಕ್ಕಿಂತ ಹೆಚ್ಚು ರಾಷ್ಟ್ರಗಳಲ್ಲಿ ಉತ್ಪಾದನಾ ಸೌಲಭ್ಯಗಳನ್ನು ಹೊಂದಿದ್ದ ಪಕ್ಷದಲ್ಲಿ ಅದನ್ನು ಬಹುರಾಷ್ಟ್ರೀಯ ನಿಗಮ ಎಂಬುದಾಗಿ ಕರೆಯಲಾಗುತ್ತದೆ. ಈ ಅರ್ಥದಲ್ಲಿ ಕೇವಲ ತಾಂತ್ರಿಕಜ್ಞಾನ ವರ್ಗಾವಣೆ ಅಥವ ಅಂತರರಾಷ್ಟ್ರೀಯವಾಗಿ ವಾಣಿಜ್ಯ ವ್ಯವಹಾರಗಳಲ್ಲಿ ತೊಡಗಿರುವ ಯಾವುದೇ ದೇಶದೊಂದಿಗಿನ ಬಹುವ್ಯಾಪಿ ಘಟಕಗಳು ಬಹುರಾಷ್ಟ್ರೀಯ ವಾಣಿಜ್ಯ ನಿಗಮಗಳೆನಿಸುವುದಿಲ್ಲ.”[1] ಈ ಬಹುರಾಷ್ಟ್ರೀಯ ನಿಗಮಗಳ ಅಸ್ತಿತ್ವವು ಸಾರ್ವತ್ರಿಕವಾಗಿದೆ. ಅಂದರೆ ಇವುಗಳು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳೆರಡರಲ್ಲೂ ಇತ್ತೀಚಿನ ಎರಡು–ಮೂರು ದಶಕಗಳಲ್ಲಿ ಕಂಡುಬರುತ್ತಿವೆ. ಈ ಕಾರಣದಿಂದಾಗಿ ಈ ಬಗೆಯ ನಿಗಮಗಳು ಪ್ರಪಂಚ ವಾಣಿಜ್ಯ ಮತ್ತು ಆರ್ಥಿಕತೆಯಲ್ಲಿ ಹೆಚ್ಚು ಪ್ರಾಮುಖ್ಯ ಪಡೆಯಲಾರಂಭಿಸಿವೆ. ಹೈಲ್ ಬ್ರೋನರ್ ಎಂಬ ಆರ್ಥಿಕ ತಜ್ಞರ ಮಾತುಗಳಲ್ಲಿ ಹೇಳುವುದಾದರೆ, “ಬಹುರಾಷ್ಟ್ರೀಯ ನಿಗಮಗಳ ಪ್ರಸ್ತುತದರದ ಬೆಳವಣಿಗೆಯು ಮುಂದುವರಿದರೆ ಕ್ರಿಸ್ತಶಕ ೨೦೦೦ದ ಸಮಯಕ್ಕೆ ಅವುಗಳು ಉತ್ಪಾದಿಸುವ ಸರಕುಗಳ ಪ್ರಮಾಣವು ಆ ಸರಕುಗಳ ಪ್ರಪಂಚ ಉತ್ಪಾದನೆಯ ಅರ್ಧದಷ್ಟಾಗುತ್ತದೆ.”[2] ಅಭಿವೃದ್ಧಿ ಹೊಂದಿದ ಮತ್ತು ವಿಕಾಸಶೀಲ ರಾಷ್ಟ್ರಗಳೆರಡರ ಕೈಗಾರಿಕಾಭಿವೃದ್ಧಿಯಲ್ಲಿ ಸಕ್ರಿಯ ಪಾತ್ರವಹಿಸಿ ಪ್ರವರ್ಧಮಾನಕ್ಕೆ ಬರುತ್ತಿರುವ ಈ ಬಹುರಾಷ್ಟ್ರೀಯ ನಿಗಮಗಳ ಉದಯಕ್ಕೆ ಈ ಎರಡೂ ರೀತಿಯ ರಾಷ್ಟ್ರಗಳಲ್ಲಿ ಬೇರೆ ಬೇರೆ ಆರ್ಥಿಕ ಕಾರಣಗಳಿವೆ.

ಅಭಿವೃದ್ಧಿ ಹೊಂದಿದ ದೇಶಗಳಾದ ಅಮೇರಿಕಾ, ಜಪಾನ ಮತ್ತು ಐರೋಪ್ಯಖಂಡದ ಬಹುತೇಕ ದೇಶಗಳಲ್ಲಿ ಬಹುರಾಷ್ಟ್ರೀಯ ನಿಗಮಗಳು ಅಸ್ತಿತ್ವದಲ್ಲಿವೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಅಭಿವೃದ್ಧಿ ಹೊಂದಿದ ದೇಶಗಳು ವಿಕಾಸಶೀಲ ರಾಷ್ಟ್ರಗಳಿಂದ ಯಥೇಚ್ಛವಾಗಿ ನೈಸರ್ಗಿಕ ಸಂಪನ್ಮೂಲವನ್ನು ಆಮದು ಮಾಡಿಕೊಳ್ಳುತ್ತಿವೆ. ಈ ನಿಗಮಗಳು ಪ್ರಾರಂಭದಲ್ಲಿ ಖನಿಜೋದ್ಯಮ ಮತ್ತು ಕಚ್ಚಾಸಾಮಗ್ರಿಗಳ ಪೂರೈಕೆಯ ಮೇಲೆ ಪ್ರಭುತ್ವ ಸಾಧಿಸಿಕೊಂಡು ನಂತರ ವಿಕಾಸಶೀಲ ದೇಶಗಳ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಕ್ಕೆ ಕಾಲಿರಿಸಿದುವು. ಬಹುತೇಕ ವಿಕಾಸಶೀಲ ದೇಶಗಳು ಇನ್ನೂ ಮಂದಗತಿಯಲ್ಲಿ ಕೈಗಾರಿಕಾಭಿವೃದ್ಧಿಯತ್ತ ಸಾಗುತ್ತಿರುವುದರಿಂದ ಅವರ ಅಗತ್ಯವನ್ನು ಪೂರೈಸಿಕೊಳ್ಳುವುದಕ್ಕಾಗಿ ನೈಸರ್ಗಿಕ ಸಂಪನ್ಮೂಲವನ್ನು ರವಾನಿಸಿ ವಿದೇಶೀ ವಿನಿಮಯವನ್ನು ಗಳಿಸುತ್ತಿವೆ. ಅಭಿವೃದ್ಧಿ ಹೊಂದಿದ ದೇಶಗಳು ಹೀಗೆ ನೈಸರ್ಗಿಕ ಸಂಪನ್ಮೂಲ ಪಡೆದು ಹೊಸ ಹೊಸ ತಾಂತ್ರಿಕ ಜ್ಞಾನ ರೂಢಿಸುವುದರ ಮೂಲಕ ಬೃಹತ್ ಪ್ರಮಾಣದಲ್ಲಿ

ಬಂಡವಾಳ ಸರಕುಗಳನ್ನು ಉತ್ಪಾದಿಸಬಲ್ಲ ಮೂಲವಾಗಿವೆ. ಈ ಅಂಶದಿಂದಾಗಿ ಬಹುರಾಷ್ಟ್ರೀಯ ನಿಗಮಗಳ ಕಾರ್ಯಾಚರಣೆಯು ವ್ಯಾಪ್ತಿ ಅಭಿವೃದ್ಧಿ ಹೊಂದಿದ ದೇಶಗಳಲ್ಲೂ ವಿಸ್ತರಿಸಿದೆ. ಉದಾಹರಣೆಗೆ 1950ರ ದಶಕದ ಅಮೇರಿಕಾ ದೇಶದ 3/4 ಭಾಗ ನೇರ ಖಾಸಗಿ ವಿದೇಶೀ ಹೂಡಿಕೆ ಅಭಿವೃದ್ಧಿ ದೇಶಗಳಲ್ಲೇ ಕೇಂದ್ರೀಕೃತಗೊಂಡಿದೆ.

ವಿಕಾಸಶೀಲ ರಾಷ್ಟ್ರಗಳು ತ್ವರಿತ ಕೈಗಾರಿಕಾಭಿವೃದ್ಧಿ ಸಾಧಿಸಲು ಹವಣಿಸುತ್ತಿವೆ. ಅಂತೆಯೇ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ವಿಶ್ವದ ದೀರ್ಘಕಾಲೀನ ಕೈಗಾರಿಕಾ ಸಾಮರ್ಥ್ಯವನ್ನು ವಿಸ್ತರಿಸಬಲ್ಲ ಶಕ್ತಿ ಪಡೆದಿವೆ. ಇದರಿಂದಾಗಿ ಈ ನಿಗಮಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ವಿಕಾಸಶೀಲ ದೇಶಗಳಲ್ಲಿ ಹೆಚ್ಚು ವ್ಯಾಪ್ತಿಯಿದೆ. ಅಂದರೆ ಇವುಗಳು ಈ ದೇಶಗಳ ತ್ವರಿತ ಕೈಗಾರಿಕೀಕರಣಕ್ಕೆ ಸಹಕಾರಿಯಾಗಬಲ್ಲವು. ಹೇಗೆಂದರೆ, ಈ ಎಲ್ಲಾ ನಿಗಮಗಳು ಅಗಾಧ ಹಣಕಾಸು ಸಂಪನ್ಮೂಲ, ನವೀನ ತಂತ್ರಜ್ಞಾನ, ವ್ಯವಸ್ಥಾ ಮತ್ತು ಸಂಘಟನಾ ಸಾಮರ್ಥ್ಯಗಳನ್ನು ಪಡೆದಿವೆ. ಈ ಕಾರಣಗಳಿಂದಾಗಿ ಇಂತಹ ಬಹುರಾಷ್ಟ್ರೀಯ ನಿಗಮಗಳು ತಮ್ಮ ಪಿತೃಸಂಸ್ಥೆಯಿರುವ ರಾಷ್ಟ್ರ ಮತ್ತು ಉಪಘಟಕಗಳಿರುವ ಅಭಿವೃದ್ಧಿ ಹೊಂದಿದ ಹಾಗೂ ಪ್ರಗತಿಪಥದಲ್ಲಿರುವ ದೇಶಗಳೆರಡರ ಆರ್ಥಿಕಾಭಿವೃದ್ಧಿಯಲ್ಲಿ ನಿರಂತರವಾಗಿ ಪ್ರಧಾನ ಪಾತ್ರವಹಿಸಬಹುದು. ಇದರಿಂದಾಗಿಯೇ ಬಹುರಾಷ್ಟ್ರೀಯ ನಿಗಮಗಳ ಕಾರ್ಯಾಚರಣೆಯನ್ನು "ಬಂಡವಾಳ ಮತ್ತು ಉತ್ಪಾದನೆಯ ಅಂತರರಾಷ್ಟ್ರೀಕರಣ" ಎಂಬುದಾಗಿ ಕರೆಯಲಾಗುವುದು. ಒಟ್ಟಿನಲ್ಲಿ, "ಅತ್ಯಂತ ಸಂಕ್ಷಿಪ್ತವಾಗಿ ಬಹುರಾಷ್ಟ್ರೀಯ ನಿಗಮಗಳನ್ನು–ಕೈಗಾರಿಕಾಸ್ಥಾವರ, ಗಣಿಗಳು, ವ್ಯಾಪಾರ ಮತ್ತು ಸೇವಾಕ್ಷೇತ್ರಗಳ ಮೇಲೆ ಎರಡು ಅಥವ ಎರಡಕ್ಕಿಂತ ಹೆಚ್ಚು ದೇಶಗಳಲ್ಲಿ ಹತೋಟಿ ಹೊಂದಿದ ಉದ್ದಿಮೆಗಳು ಎಂದು ಕರೆಯಬಹುದು"[3]

ಈ ಬಹುರಾಷ್ಟ್ರೀಯ ನಿಗಮಗಳ ಸ್ಥಾಪನೆಯಿಂದ ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಬೇರೆ ಬೇರೆ ತೆರನಾದ ಸಮಸ್ಯೆಗಳು ಉದ್ಭವವಾಗಿವೆ. ಈ ನಿಗಮಗಳು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಉಂಟುಮಾಡಬಹುದಾದ ಸಮಸ್ಯೆಗಳು ತಾಂತ್ರಿಕವೂ ಹಾಗೂ ಹಣಕಾಸಿಗೆ ಸಂಬಂಧಿಸಿದುವೂ ಆಗಿವೆ. ಅಲ್ಲದೆ ಅಭಿವೃದ್ಧಿಹೊಂದಿದ ರಾಷ್ಟ್ರ ತನ್ನದೇ ಆದ ಬಹುರಾಷ್ಟ್ರೀಯ ನಿಗಮಗಳನ್ನು ಇತರೇ ಅಭಿವೃದ್ಧಿ ಹೊಂದಿದ ಹಾಗೂ ವಿಕಾಸಶೀಲ ರಾಷ್ಟ್ರಗಳಲ್ಲಿ ಹೊಂದಿದೆ. ಜೊತೆಗೆ ಅದೇ ರಾಷ್ಟ್ರ ಬೇರೆ ದೇಶಗಳ ಬಹುರಾಷ್ಟ್ರೀಯ ನಿಗಮಗಳನ್ನು ತನ್ನಲ್ಲೇ ಸ್ಥಾಪಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದೆ. ಇದೊಂದು ಕುತೂಹಲದಾಯಕವಾದ ಸಂಗತಿಯೆನಿಸುತ್ತದೆ. ಆದರೆ ವಿಕಾಸಶೀಲರಾಷ್ಟ್ರಗಳಲ್ಲಿ ಸ್ಥಾಪಿಸಲ್ಪಡುವ ಬಹುರಾಷ್ಟ್ರೀಯ ನಿಗಮಗಳು ರಾಜಕೀಯ ಮತ್ತು ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ತೀವ್ರ ಸ್ವರೂಪದ ಸಮಸ್ಯೆಗಳನ್ನುಂಟುಮಾಡುತ್ತವೆ. ಈ ಕಾರಣದಿಂದಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ಪ್ರಗತಿಯಲ್ಲಿ ಬಹುರಾಷ್ಟ್ರೀಯ ನಿಗಮಗಳು ಸಕ್ರಿಯ ಪಾತ್ರ ವಹಿಸುವಂತೆ ಮಾಡಲು ಪರಸ್ಪರ ನಂಬಿಕೆ, ತಿಳುವಳಿಕೆ ಮತ್ತು ಒಡಂಬಡಿಕೆಗಳ ಮೂಲಕ ದೀರ್ಘಕಾಲ ಉಳಿಯುವ ಹಾಗೂ ಹೆಚ್ಚು ಫಲಪ್ರದವಾದ ಪ್ರಯತ್ನಗಳು ಅಗತ್ಯ.

ವಿಶ್ವದ ಇತ್ತೀಚಿನ ಆರ್ಥಿಕಾಭಿವೃದ್ಧಿಯು ಅನೇಕ ದೇಶಗಳಲ್ಲಿ ಉತ್ಪಾದನಾ ಘಟಕಗಳನ್ನು ಪಡೆದ ಬೃಹತ್ ಪ್ರಮಾಣದ ಕೈಗಾರಿಕಾ ಘಟಕಗಳ ಪ್ರಭಾವಕ್ಕೆ ಬಹುಮಟ್ಟಿಗೆ ಒಳಗಾಗಿದೆ. ಇಂತಹ ಘಟಕಗಳು ಅನುಭೋಗಿ ಮತ್ತು ಬಂಡವಾಳ ಸರಕುಗಳೆರಡನ್ನೂ ಉತ್ಪಾದಿಸುತ್ತಿದ್ದು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ತಮ್ಮ ಹುಟ್ಟನ್ನು ಪಡೆದು ತಮ್ಮ ಉಪಘಟಕಗಳ ಮೂಲಕ ವಿಶ್ವವ್ಯಾಪಿಯಾದ ತಮ್ಮ ಆರ್ಥಿಕ ಮತ್ತು ರಾಜಕೀಯ ಜಾಲವನ್ನು ನಿರ್ಮಿಸುತ್ತಿವೆ. ಬಹುರಾಷ್ಟ್ರೀಯ ನಿಗಮಗಳು ಕಬ್ಬಿಣ ಮತ್ತು ಉಕ್ಕು, ವಿವಿಧ ಬಗೆಯ ರಸ್ತೆಸಾರಿಗೆ ವಾಹನಗಳು, ವಿವಿಧ ಬಗೆಯ ಉತ್ಪನ್ನ ಮುಂತಾದ ಉದ್ಯಮಗಳಲ್ಲಿ ತೊಡಗಿದ್ದು ಅವುಗಳ ಬೆಳವಣಿಗೆ ಹಾಗೂ ಅದಕ್ಕೆ ಪೂರಕವಾದ ಸಂಶೋಧನೆ ಮತ್ತು ಸರಕು ಬೆಳವಣಿಗೆ ಕ್ರಮಾವಳಿಯ ಮೇಲೆ

ಸಂಪೂರ್ಣ ಹಿಡಿತವನ್ನು ಸಾಧಿಸಿವೆ. ಪೆಟ್ರೋಲಿಯಂ ಮತ್ತು ಕಚ್ಚಾ ಪೆಟ್ರೋಲಿಯಂ ಪದಾರ್ಥಗಳು, ರಾಸಾಯನಿಕ ಪದಾರ್ಥಗಳು, ಖನಿಜಗಳು—ಮುಂತಾದ ಕೈಗಾರಿಕೋತ್ಪನ್ನಗಳಲ್ಲಿ ತೊಡಗಿರುವ ಬಹುಮುಖಿ ಸ್ವಾಮ್ಯ ಉದ್ದಿಮೆಗಳು ಭೌಗೋಳಿಕವಾಗಿ ಮಾರುಕಟ್ಟೆಯನ್ನು ಹಂಚಿಕೊಳ್ಳಲು ಪರಸ್ಪರ ಒಡಂಬಡಿಕೆಗಳನ್ನು ಮಾಡಿಕೊಳ್ಳುವವು. ಈ ಕಾರಣದಿಂದಾಗಿಯೇ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳನ್ನು ಬಹುಮುಖಿ ಸ್ವಾಮ್ಯ (oligopoly) ಸಂಸ್ಥೆಗಳೆಂದು ಕರೆಯಲಾಗುವುದು.

ವಿಕಾಸಶೀಲ ದೇಶಗಳಲ್ಲಿ ಬಹುರಾಷ್ಟ್ರೀಯ ನಿಗಮಗಳ ಸ್ಥಾಪನೆಯಿಂದ ಉಂಟಾಗಬಹುದಾದ ಆರ್ಥಿಕ ಅನುಕೂಲತೆಗಳನ್ನು ಮೊದಲು ವಿವರಿಸಿ ನಂತರ ಲಭ್ಯವಿರುವ ಅಂಕಿಅಂಶಗಳ ಆಧಾರದ ಮೇಲೆ ಹೇಗೆ ಈ ನಿಗಮಗಳ ಕಾರ್ಯಾಚರಣೆಯು ಮಾರ್ಕ್ಸಿಸ್ಟ್‌ವಾದಕ್ಕೆ ಪುರಾವೆ ನೀಡುವುದು ಎಂಬುದನ್ನು ಸ್ಪಷ್ಟಪಡಿಸೋಣ.

ನೇರ ವಿದೇಶೀ ಹೂಟಿ

ಈ ಬಹುರಾಷ್ಟ್ರೀಯ ನಿಗಮಗಳು ಹಾಗೂ ಬಂಡವಾಳವು ನೇರ ಬಂಡವಾಳ ತೊಡಗಿಸುವಿಕೆ ನೀತಿಯ ಅವಿಭಾಜ್ಯ ಅಂಗವಾಗಿದೆ. ಪಿತೃ ಘಟಕಗಳಿಂದ ಯಾವುದೇ ಇತರ ದೇಶದಲ್ಲಿ ಸ್ಥಾಪಿಸಲ್ಪಟ್ಟಿರುವ ಉಪಘಟಕಕ್ಕೆ ನೀಡಲಾಗುವ ಸಾಲವು ನೇರ ವಿದೇಶಿ ಹೂಟಿಗೆ ಸಂಬಂಧಿಸಲ್ಪಟ್ಟಿರುತ್ತದೆ. ಪಿತೃಸಂಸ್ಥೆಯು ಬಂಡವಾಳವನ್ನು ವಿದೇಶಿ ವಿನಿಮಯದ ರೂಪದಲ್ಲಿ ನೀಡಬಹುದು ಅಥವ ಬಂಡವಾಳ ಸರಕುಗಳ ರೂಪದಲ್ಲಿ ನೀಡಬಹುದು. ಅಂದರೆ ವಿದೇಶಗಳಲ್ಲಿರುವ ಯಾವುದೇ ಪಿತೃನಿಗಮದ ಉಪಘಟಕಗಳಿಗೆ ವರ್ಗಾಯಿಸಲ್ಪಡುವ ಸಂಪನ್ಮೂಲಗಳು ನೇರ ವಿದೇಶಿ ಹೂಟಿಯಲ್ಲಿ ಸೇರಿಸಲ್ಪಡುತ್ತವೆ. ಒಟ್ಟಿನಲ್ಲಿ ಬಹುರಾಷ್ಟ್ರೀಯ ನಿಗಮಗಳು ತಮ್ಮ ಪಿತೃರಾಷ್ಟ್ರಗಳಿಂದ ತರುವ ಎಲ್ಲಾ ರೀತಿಯ ಸಂಪನ್ಮೂಲಗಳು ವಿಕಾಸಶೀಲ ದೇಶಗಳಿಗೆ ಬಹು ಆಕರ್ಷಣೀಯವಾಗಿ ಪರಿಣಮಿಸುತ್ತವೆ. ಬಹು ರಾಷ್ಟ್ರೀಯ ನಿಗಮಗಳು 1968–72ರ ನಡುವೆ ವಿಕಾಸಶೀಲ ರಾಷ್ಟ್ರಗಳಲ್ಲಿ ತೊಡಗಿಸಿರುವ ಬಂಡವಾಳದ ಪ್ರಮಾಣವು ಸುಮಾರು 3.5 ಬಿಲಿಯನ್ ಡಾಲರುಗಳ ಪ್ರಮಾಣದ್ದಾಗಿದೆ. ಪರಿಣಾಮವಾಗಿ 1967–71ರ ನಡುವೆ ವಿಕಾಸಶೀಲ ದೇಶಗಳಲ್ಲಿ ತೊಡಗಿಸಲಾಗಿದ್ದ ಖಾಸಗಿ ವಿದೇಶೀ ಬಂಡವಾಳದ ಪ್ರಮಾಣವು 35 ಬಿಲಿಯನ್ ಡಾಲರ್‌ಗಳಿಂದ 47 ಬಿಲಿಯನ್ ಡಾಲರ್‌ಗಳಿಗೆ ಹೆಚ್ಚಿದೆ.

ಸರ್ವೇಸಾಧಾರಣವಾಗಿ ಬೃಹತ್ ಪ್ರಮಾಣದ ಕೈಗಾರಿಕಾ ಉದ್ದಿಮೆಗಳು ನೇರ ವಿದೇಶಿ ಹೂಟಿಯಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಪ್ರಪಂಚಾದ್ಯಂತ ಇರುವ ಬಹುರಾಷ್ಟ್ರೀಯ ನಿಗಮಗಳ ಬಂಡವಾಳದಲ್ಲಿ ಶೇ. 70ರಷ್ಟನ್ನು ಅಮೆರಿಕಾ ಸಂಯುಕ್ತ ಸಂಸ್ಥಾನದ ಸುಮಾರು 200–300 ಘಟಕಗಳೇ ಪೂರೈಸಿವೆ. ರೇಮಂಡ್ ವರ್ನನ್ ಎಂಬುವರು ಸುಮಾರು 187 ಬೃಹತ್ ಪ್ರಮಾಣದ ಬಹುರಾಷ್ಟ್ರೀಯ ನಿಗಮಗಳನ್ನು ಗುರ್ತಿಸಿದ್ದಾರೆ. ಇವರ ಅಧ್ಯಯನದ ಪ್ರಕಾರ ಅಮೆರಿಕಾ ದೇಶದ ಸುಮಾರು 500 ನಿಗಮಗಳು ಸುಮಾರು $4/5$ ಭಾಗದಷ್ಟು ಪ್ರಪಂಚದ ವಿವಿಧ ಸರಕುಗಳನ್ನು ಉತ್ಪಾದಿಸುವ ಘಟಕಗಳ ಮೇಲೆ ತಮ್ಮ ಹತೋಟಿ ಹೊಂದಿವೆ ಎಂಬುದು ಕಂಡುಬರುತ್ತದೆ. ಉದಾಹರಣೆಗೆ., ಅಮೆರಿಕಾದ ಈ ನಿಗಮಗಳ ಸರಾಸರಿ ಮಾರಾಟದ ಪ್ರಮಾಣವು ವರ್ಷಂಪ್ರತಿ ಸುಮಾರು 1000 ಮಿಲಿಯನ್ ಡಾಲರ್‌ಗಳಷ್ಟಿವೆ. ಎಲ್ಲಾ ಬಹುರಾಷ್ಟ್ರೀಯ ನಿಗಮಗಳು ಸಂಶೋಧನೆ ಮತ್ತು ಬೆಳವಣಿಗೆಗೆ ಹೆಚ್ಚು ಸಂಪನ್ಮೂಲ ತೊಡಗಿಸುತ್ತವೆ. ಆದ್ದರಿಂದ ಅವುಗಳು ತಾಂತ್ರಿಕಜ್ಞಾನದಲ್ಲಿ ನಾವೀನ್ಯ ಮತ್ತು ಇತರೇ ಹಲವು ಅನುಕೂಲತೆಗಳನ್ನು ಹೊಂದುವುವು. ಉನ್ನತ ನವೀನೀಕೃತ ತಾಂತ್ರಿಕಜ್ಞಾನ ಮತ್ತು ಅದರ ಹಲವು ಉಪಯುಕ್ತತೆಗಳು ನೇರ ವಿದೇಶೀ ಹೂಟಿಯೊಂದಿಗೆ ಸಂಬಂಧಿಸಲ್ಪಟ್ಟಿವೆ.

ಏಕೆಂದರೆ ನೇರ ವಿದೇಶೀ ಹೂಟೆಯು ತಾಂತ್ರಿಕಜ್ಞಾನದ ವರ್ಗಾವಣೆಯನ್ನೂ ಕೂಡ ಒಳಗೊಂಡಿರುತ್ತದೆ.

ಬಂಡವಾಳ, ವ್ಯವಸ್ಥಾ ಮತ್ತು ಸಂಘಟನಾ ಹಾಗೂ ತಾಂತ್ರಿಕಜ್ಞಾನಗಳ ವರ್ಗಾವಣೆ

ನೇರ ವಿದೇಶಿ ಹೂಟೆ ಹಲವಾರು ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸುವುದಾದ್ದರಿಂದ ಅದು ವಿಕಾಸಶೀಲ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಬಲ್ಲುದು. ವಿಕಾಸಶೀಲ ದೇಶಗಳ ಆರ್ಥಿಕಾಭಿವೃದ್ಧಿಗೆ ಅಗತ್ಯವಾದ ಬಂಡವಾಳ, ವ್ಯವಸ್ಥಾ, ಮತ್ತು ಸಂಘಟನಾ ಹಾಗೂ ತಾಂತ್ರಿಕ ಜ್ಞಾನ—ಮುಂತಾದವುಗಳನ್ನು ಬಹುರಾಷ್ಟ್ರೀಯ ನಿಗಮಗಳು ಪೂರೈಸುವುವು. ಅಲ್ಲದೆ ಈ ನಿಗಮಗಳು ಸ್ಥಳೀಯ ಮತ್ತು ವಿದೇಶೀಯ ಬಂಡವಾಳವನ್ನು ಸಂಚಯಿಸಿ ಆರ್ಥಿಕಾಭಿವೃದ್ಧಿಯಲ್ಲಿ ತೊಡಗಿಸುವುದಕ್ಕೆ ಪ್ರಯತ್ನಮಾಡುವುವು. ಹಾಗೂ ಬಹುತೇಕ ಇವು ವಿಶ್ವದ ಮುಕ್ತ ಮಾರುಕಟ್ಟೆಯಲ್ಲಿ ದೊರಕದ ಹೆಚ್ಚು ನಾವೀನ್ಯತೆಯಿಂದ ಕೂಡಿದ ತಾಂತ್ರಿಕಜ್ಞಾನದ ಮೇಲೆ ತಮ್ಮ ಸಂಪೂರ್ಣ ಹತೋಟಿ ಹೊಂದಿರುತ್ತವೆ. ಆದ್ದರಿಂದ ವಿಕಾಸಶೀಲ ರಾಷ್ಟ್ರಗಳು ಇಂತಹ ನವೀನ ತಂತ್ರಜ್ಞಾನ ಪಡೆಯುವ ಅವಕಾಶವೆಂದರೆ ಈ ನಿಗಮಗಳ ಸ್ಥಾಪನೆಗೆ ದಾರಿ ಮಾಡಿಕೊಡುವುದೇ ಆಗಿದೆ. ಬಹುರಾಷ್ಟ್ರೀಯ ನಿಗಮಗಳು ಸ್ಥಾಪಿಸಲ್ಪಟ್ಟ ದೇಶಗಳಲ್ಲಿನ ಸ್ಥಳೀಯ ಕಾರ್ಮಿಕಶಕ್ತಿ ಮತ್ತು ವ್ಯವಸ್ಥಾಪಕವರ್ಗಕ್ಕೆ ಅಗತ್ಯಜ್ಞಾನ, ತರಪೇತಿ, ಮತ್ತು ಮಾರ್ಗದರ್ಶನ ನೀಡಬಲ್ಲ ಸಮರ್ಥ ಮೂಲಗಳಾಗುತ್ತವೆ. ಹಾಗೂ ಈ ನಿಗಮಗಳು ವಿಶ್ವಾದ್ಯಂತ ಉತ್ಪಾದನಾ ಮತ್ತು ಮಾರುಕಟ್ಟೆ ಸೌಲಭ್ಯಗಳನ್ನು ಪಡೆದಿರುವುದರಿಂದಾಗಿ ವಿಕಾಸಶೀಲ ದೇಶಗಳ ರಫ್ತನ್ನು ಹೆಚ್ಚಿಸಲು ನೆರವಾಗುತ್ತವೆ. ಜೊತೆಗೆ ಇಂತಹ ನಿಗಮಗಳ ಸ್ಥಾಪನೆಯಿಂದ ವಿಕಾಸಶೀಲ ರಾಷ್ಟ್ರಗಳಲ್ಲಿನ ಸ್ಥಳೀಯ ಏಕಸ್ವಾಮ್ಯದ ನಿರಂತರ ಬೆಳವಣಿಗೆಗೆ ಧಕ್ಕೆಯೊದಗಿ ಸ್ಪರ್ಧೆ ತೀವ್ರಗೊಳ್ಳುವುದು. ಪರಿಣಾಮವಾಗಿ ಸರಕುಗಳ ಬೆಲೆ ಕಡಿಮೆಯಾಗುವುದಲ್ಲದೆ, ಅವುಗಳ ಗುಣಮಟ್ಟವೂ ಉತ್ತಮಗೊಳ್ಳುವುದು ಇದರಿಂದಾಗಿ ಅನುಭೋಗಿಗಳ ಹಿತಸಂರಕ್ಷಣೆ ಮಾಡಿದಂತಾಗುವುದು.

ಬಹುರಾಷ್ಟ್ರೀಯ ನಿಗಮಗಳ ಸ್ಥಾಪನೆಯು ಇಂದಿಗೂ ಕೂಡ ದೇಶಗಳು ಅಂತರ ರಾಷ್ಟ್ರೀಯ ವ್ಯಾಪಾರದ ಮೇಲೆ ವಿಧಿಸಿರುವ ಅನೇಕ ವಾಣಿಜ್ಯ ನಿರ್ಬಂಧಗಳನ್ನು ಅಲ್ಪ ಸ್ವಲ್ಪ ಮಟ್ಟಿಗೆ ನಿವಾರಿಸಲು ಸಹಕಾರಿಯಾಗಿವೆ. ಈ ಮಟ್ಟಿಗಾದರೂ ಅಂತರರಾಷ್ಟ್ರೀಯ ವ್ಯಾಪಾರ ಸ್ವಚ್ಛಂದ ಪ್ರವೃತ್ತಿಯಿಂದ ಸಾಪೇಕ್ಷ ವೆಚ್ಚದ (Comparative Costs) ಅನುಕೂಲತೆಗಳ ಆಧಾರದ ಮೇಲೆ ರೂಪುಗೊಳ್ಳಲು ಸಾಧ್ಯವಾಗುವುದು. ಇಂದು ಅಂತರರಾಷ್ಟ್ರೀಯ ವ್ಯಾಪಾರದ ಮೇಲಿರುವ ಅಡೆತಡೆಗಳನ್ನು ನಿವಾರಿಸಿದರೆ ಆಗ ಅಭಿವೃದ್ಧಿಹೊಂದಿದ ದೇಶಗಳಲ್ಲಿನ ಬಹುತೇಕ ಕೈಗಾರಿಕಾ ಘಟಕಗಳು ಸ್ವಯಂಪ್ರೇರಣೆಯಿಂದ ಬಹುರಾಷ್ಟ್ರೀಯ ನಿಗಮಗಳಾಗಿ ಪರಿವರ್ತನೆಯಾಗಬಲ್ಲವು. ಇಂತಹ ಅಂಶವು ವಿಶ್ವಾದ್ಯಂತ ಉದ್ಯೋಗ ಮತ್ತು ಕುಶಲತೆಯ ವಿತರಣೆ ಮತ್ತು ವಿಕಾಸಶೀಲ ದೇಶಗಳ ಕೈಗಾರಿಕೀಕರಣಕ್ಕೆ ಹಾಗೂ ವಿಶ್ವದ ಬಹುತೇಕ ದೇಶಗಳಲ್ಲಿನ ಸಾಮಾಜಿಕ ಪರಿಸ್ಥಿತಿಗಳ ಸಂಘಟನೆಗೆ ಅವಕಾಶ ಕಲ್ಪಿಸುತ್ತದೆ. ಹೀಗೆ ಒಟ್ಟಿನಲ್ಲಿ ಆರ್ಥಿಕ ಅಭದ್ರತೆ, ನಿರುದ್ಯೋಗ, ನವೀನ ತಂತ್ರಜ್ಞಾನ ಕೊರತೆ, ಬಂಡವಾಳ ಕೊರತೆ—ಮುಂತಾದ ಹಲವಾರು ಸಮಸ್ಯೆಗಳ ಜರ್ಝರಿತಕ್ಕೆ ತುತ್ತಾಗಿರುವ ವಿಕಾಸಶೀಲ ದೇಶಗಳ ಆರ್ಥಿಕ ಅಭಿವೃದ್ಧಿಗೆ ಬಹುರಾಷ್ಟ್ರೀಯ ನಿಗಮಗಳು ತಮ್ಮ ಅಗಾಧ ಬಂಡವಾಳ, ವ್ಯವಸ್ಥಾ ಮತ್ತು ಸಂಘಟನಾ ಸೌಲಭ್ಯ, ನವೀನ ತಂತ್ರಜ್ಞಾನಗಳ ಪೂರೈಕೆಯ ಮೂಲಕ ನೆರವಾಗುವುದಕ್ಕೆ ಸಹಕಾರಿಯಾಗಬಲ್ಲವು.

ಪ್ರಮುಖ ಟೀಕೆಗಳು

ವಿಕಾಸಶೀಲ ದೇಶಗಳ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದ ಮೇಲೆ ಬಹುರಾಷ್ಟ್ರೀಯ ನಿಗಮಗಳು ತೀರಾ ಹೆಚ್ಚಿನ ಹಿಡಿತವನ್ನೂ ಮತ್ತು ಪ್ರಭಾವವನ್ನೂ ಹೊಂದಿವೆ. ಈ ಅಂಶವು ಬಹುರಾಷ್ಟ್ರೀಯ ನಿಗಮಗಳು ಉಂಟುಮಾಡಬಹುದಾದ ಸಮಸ್ಯೆಗಳ ಸ್ವರೂಪ ಮತ್ತು ತೀವ್ರತೆಯನ್ನು ಗಮನಿಸಿದಾಗ ಮನವರಿಕೆಯಾಗುತ್ತದೆ. ಬಹುರಾಷ್ಟ್ರೀಯ ನಿಗಮಗಳು ಆತಿಥೇಯ ದೇಶಗಳ (host countries) ಉದ್ಯೋಗ ಆರ್ಥಿಕತೆಯಲ್ಲಿನ ಸ್ಪರ್ಧೆ ಕಡಿತ, ತೆರಿಗೆ ತಪ್ಪಿಸುವಿಕೆ, ಬಂಡವಾಳ ಚಲನೆಗೆ ಅಡ್ಡಿ ಆತಂಕಗಳನ್ನೊಡ್ಡುವಿಕೆ ಈ ಸಮಸ್ಯೆಗಳನ್ನು ನಿರ್ಮಿಸುವವು. ಹಾಗೂ ಪ್ರಮುಖವಾಗಿ ಆತಿಥೇಯ ದೇಶಗಳ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ವ್ಯವಸ್ಥೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಸ್ವರೂಪ ಮುಂತಾದವುಗಳಿಗೆ ತೀವ್ರವಾದ ಧಕ್ಕೆಯನ್ನೊಡ್ಡುವವು ಎಂಬುದಾಗಿ ವಿಶ್ವಾದ್ಯಂತ ಕಂಡು ಬಂದಿದೆ. ಅಲ್ಲದೆ ವಿಶ್ವದ ಬಹುತೇಕ ರಾಷ್ಟ್ರಗಳ ಕಾನೂನು, ರಾಜ್ಯಕೋಶ, ಆರ್ಥಿಕ ಮತ್ತು ವ್ಯಾಪಾರ ನೀತಿಗಳು ಬಹುರಾಷ್ಟ್ರೀಯ ನಿಗಮಗಳ ಕಾರ್ಯಾಚರಣೆಯಿಂದ ಉಂಟಾಗುವ ಸಮಸ್ಯೆಗಳ ಸ್ವರೂಪ ಮತ್ತು ವ್ಯಾಪ್ತಿಯನ್ನು ಗುರ್ತಿಸುವುದಕ್ಕೆ ಸಮರ್ಥವಾಗಿಲ್ಲ. ಒಟ್ಟಿನಲ್ಲಿ ಈಗ ನಾವು ಆತಿಥೇಯ ದೇಶಗಳಲ್ಲಿ ಕಾರ್ಯಾಚರಣೆಯಲ್ಲಿರುವ ಬಹುರಾಷ್ಟ್ರೀಯ ನಿಗಮಗಳ ಬಗೆಗಿನ ಟೀಕೆಗಳ ಸ್ವರೂಪ ಮತ್ತು ವ್ಯಾಪ್ತಿ ಹಾಗೂ ಅವರ ಸತ್ಯಾಸತ್ಯತೆಯನ್ನು ವಿವರಿಸೋಣ.

1. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಹೂಡುವ ಬಂಡವಾಳವು ನೇರ ಬಂಡವಾಳ ತೊಡಗಿಸುವಿಕೆ ನೀತಿಯ ಅವಿಭಾಜ್ಯ ಅಂಗವಾಗಿದೆ ಎಂದು ಈಗಾಗಲೇ ಹೇಳಲಾಗಿದೆ. ಆದರೆ ಈ ಸಂಸ್ಥೆಗಳ ನೇರಬಂಡವಾಳ ಹೂಡಿಕೆಯ ಅನುಕೂಲತೆಗಳು ವಿಕಾಸಶೀಲ ದೇಶಗಳಿಗೆ ಲಭಿಸದು ಎಂಬುದು ಟೀಕಾಕಾರರ ಅಭಿಮತವಾಗಿದೆ. ಹಾಗೂ ಅವರ ಪ್ರಕಾರ, ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಸ್ಥಾಪನೆಯ ಅನುಕೂಲತೆಗಳಿಗಿಂತಲೂ ಅವುಗಳುಂಟು ಮಾಡುವ ಅನಾನುಕೂಲತೆಗಳೇ ಹೆಚ್ಚು ಮತ್ತು ಪ್ರಮುಖವಾದವುಗಳು ಎಂಬುದಾಗಿ ಅವರುಗಳು ಅಭಿಪ್ರಾಯ ಪಡುವರು. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಆತಿಥೇಯ ದೇಶಗಳನ್ನು ಆರ್ಥಿಕ ಶೋಷಣೆಗೆ ಗುರಿಮಾಡುವವು. ಇಂದಿನ ಅಭಿವೃದ್ಧಿ ಹೊಂದಿದ ದೇಶಗಳ ಹಿಂದಿನ ರಾಜಕೀಯ ವಸಾಹತುಗಳಾಗಿದ್ದ ವಿಕಾಸಶೀಲ ದೇಶಗಳಲ್ಲಿ ರಾಜಕೀಯ ಸಾಮ್ರಾಜ್ಯಶಾಹಿ ನೀತಿಯು ಅವಸಾನವಾಗುತ್ತಿದ್ದಂತೆಯೇ ಈ ಸಂಸ್ಥೆಗಳ ಉದಯದಿಂದಾಗಿ ಆರ್ಥಿಕ ಸಾಮ್ರಾಜ್ಯಶಾಹಿ ನೀತಿ (Economic Imperialism) ಅಂಕುರಾರ್ಪಣಗೊಂಡು ಬಲಗೊಳ್ಳುತ್ತಿದೆ. ಆತಿಥೇಯ ದೇಶಗಳು ಪಿತೃರಾಷ್ಟ್ರಗಳಿಗೆ ನೀಡುವ ವರ್ಗಾವಣೆ ಬೆಲೆ ಸೌಲಭ್ಯ, ಗೌರವಧನ ಸಂದಾಯ ಮತ್ತು ಡಿವಿಡೆಂಡ್ ಪಾವತಿ ಒಪ್ಪಂದ ಮುಂತಾದವುಗಳ ಹೊರತಾಗಿ ಬಹುರಾಷ್ಟ್ರೀಯ ನಿಗಮಗಳು ತಮ್ಮ ಪಿತೃರಾಷ್ಟ್ರಗಳಿಗೆ ಅಗಾಧ ಪ್ರಮಾಣದ ಬಂಡವಾಳವನ್ನು ಆತಿಥೇಯ ದೇಶಗಳಿಂದ ಪೂರೈಸುತ್ತಿವೆ. ಬಹುಸಂಸ್ಥಾ ಸ್ವಾಮ್ಯ ಪಡೆದಿರುವ ಈ ನಿಗಮಗಳು ಆತಿಥೇಯ ದೇಶಗಳಲ್ಲಿ ಲಾಭ ಗರಿಷ್ಠಗೊಳಿಸುತ್ತಿರುವ ಹಾಗೂ ಅದನ್ನು ಪಿತೃದೇಶಗಳಿಗೆ ಹಿಂತಿರುಗಿಸುತ್ತಿರುವ ಪ್ರಮಾಣವನ್ನು ಗಮನಿಸಿದಾಗ ಅವುಗಳ ಶೋಷಣೆಯ ಸ್ವರೂಪ ತಿಳಿಯುವುದು. ಪಿತೃದೇಶಗಳಿಂದ ಆತಿಥೇಯ ದೇಶಗಳಿಗೆ ಬರುವ ಹಾಗೂ ಆತಿಥೇಯ ದೇಶಗಳಿಂದ ಪಿತೃದೇಶಗಳಿಗೆ ಹಿಂತಿರುಗಿಸಲ್ಪಡುವ ಬಂಡವಾಳ ಪ್ರಮಾಣವು 1965ರಲ್ಲಿ 1 : 2.4 ಇದ್ದುದು 1970ರ ಸಮಯಕ್ಕೆ 1 : 3. 3 ಪ್ರಮಾಣಕ್ಕೆ ಹೆಚ್ಚಿದೆ. ಅಂದರೆ ಬಹುದೇಶಿ ಉತ್ಪಾದನಾ ನಿಗಮಗಳು ಆತಿಥೇಯ ದೇಶಗಳಿಗೆ ಪೂರೈಸುವ ಪ್ರತಿಡಾಲರ್‌ಗೂ ಪ್ರತಿಯಾಗಿ ತಮ್ಮ ಪಿತೃರಾಷ್ಟ್ರಗಳಿಗೆ 1965 ರಲ್ಲಿ 2.4 ಡಾಲರ್‌ನ್ನೂ ಮತ್ತು 1970ರಲ್ಲಿ 3.3 ಡಾಲರ್‌ಗಳನ್ನು ಹಿಂತಿರುಗಿಸಿವೆ ಎಂದರ್ಥ. ಈ ಅಂಶವು ವಿಕಾಸಶೀಲವೂ ಆದ ಆತಿಥೇಯ ದೇಶಗಳು ಅಭಿವೃದ್ಧಿ ಹೊಂದಿದ ದೇಶಗಳ ಮೇಲೆ ಬಂಡವಾಳ ಪೂರೈಕೆಗಾಗಿ ಅವಲಂಬಿಸಬೇಕಾದ

ಪರಿಸ್ಥಿತಿಯ ವ್ಯಾಪ್ತಿಯನ್ನೂ ಹಾಗೂ ಅತಿಥೇಯ ದೇಶಗಳನ್ನು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಶೋಷಿಸುತ್ತಿರುವ ಪರಿಸ್ಥಿತಿಯನ್ನೂ ಸೂಚಿಸುತ್ತದೆ.

1971ರಲ್ಲಿ ಅಂತರರಾಷ್ಟ್ರೀಕೃತ ಉತ್ಪಾದನೆಯ ಒಟ್ಟು ಮೌಲ್ಯವು ಸುಮಾರು 330 ಬಿಲಿಯನ್ ಡಾಲರ್‌ಗಳಷ್ಟಿದ್ದಿತು. 1966–70ರಲ್ಲಿ ಅಮೆರಿಕದ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ತಮ್ಮ ತಮ್ಮ ಅತಿಥೇಯ ದೇಶಗಳಿಂದ ರಫ್ತು ಮಾಡಿದ ಸರಕುಗಳ ಪ್ರಮಾಣವು ಶೇ 26ರಿಂದ ಶೇ 30ಕ್ಕೆ ಹೆಚ್ಚಿತು.[4] ಆರ್ಥಿಕ ಅಭ್ಯುದಯವನ್ನು ಪ್ರಚೋದಿಸುವ ಅಂಶವೆಂದು ಬಹುರಾಷ್ಟ್ರೀಯ ನಿಗಮಗಳನ್ನು ಪರಿಗಣಿಸುವ ವಕ್ತಾರರು ವ್ಯವಸ್ಥಾ ಹಾಗೂ ಸ್ಟಾಕು ಮತ್ತು ಷೇರು ಪತ್ರಗಳ ; ಅಂತರರಾಷ್ಟ್ರೀಕರಣವಾಗುತ್ತಿರುವ ನೈಜತೆಯನ್ನು ಪರಿಗಣಿಸಬೇಕಾಗಿದೆ.

ಪ್ರಗತಿಪಥದಲ್ಲಿರುವ ದೇಶಗಳಲ್ಲಿನ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಮುಖ್ಯವಾಗಿ ಸ್ಥಳೀಯರಿಗೆ ತಮ್ಮ ನವೀನ ತಂತ್ರಜ್ಞಾನವನ್ನು ರೂಢಿಸಿಕೊಳ್ಳುವ ಕೌಶಲ್ಯವನ್ನು ಮತ್ತು ಅವಕಾಶವನ್ನು ನೀಡುವುದಿಲ್ಲ. ಏಕೆಂದರೆ ಬಹುತೇಕ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ವ್ಯವಸ್ಥಾ ಮತ್ತು ಸಂಘಟನಾ ಕೌಶಲ್ಯಕ್ಕೆ ಸಂಬಂಧಿಸಿದ ಹುದ್ದೆಗಳೆಲ್ಲಾ ಪಾಶ್ಚಿಮಾತ್ಯರಿಗೇ ಮೀಸಲಾಗಿರುತ್ತವೆ. ಇದರಿಂದಾಗಿ ಸ್ಥಳೀಯರಿಗೆ ವ್ಯವಸ್ಥಾ ಮತ್ತು ಸಂಘಟನಾ ಹಾಗೂ ಇತರ ಬಗೆಯ ವೃತ್ತಿಕೌಶಲ್ಯವನ್ನು ರೂಢಿಸಿಕೊಳ್ಳಲು ಅವಕಾಶವೇ ಲಭಿಸದು.

ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಸ್ಥಾಪನೆಯಿಂದ ಅತಿಥೇಯ ದೇಶಗಳ ಕೈಗಾರಿಕಾ ಘಟಕಗಳು ಹಲವಾರು ತೆರನಾದ ಕಚ್ಚಾ ಸರಕುಗಳ ಕೊರತೆಯನ್ನೂ ಎದುರಿಸಬೇಕಾಗುತ್ತದೆ. ಹೇಗೆಂದರೆ, ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಹೇರಳವಾದ ಹಣಕಾಸು ಸಂಪನ್ಮೂಲವನ್ನು ಪಡೆದಿರುತ್ತವೆ. ಹಾಗೂ ಈ ಸಂಸ್ಥೆಗಳು ವಿಕಾಸಶೀಲ ದೇಶಗಳಲ್ಲಿ ಕಡಿಮೆಬೆಲೆಯಲ್ಲಿ ಲಭ್ಯವಿರುವ ಶ್ರಮ ಮತ್ತು ನೈಸರ್ಗಿಕ ಸಂಪನ್ಮೂಲಗಳಿಂದ ಆಕರ್ಷಿತವಾಗಿರುತ್ತವೆ. ಅದೇ ಸಮಯದಲ್ಲಿ ಸರಕಿನ ಉತ್ಪಾದನೆ ಮೇಲೆ ಸಂಪೂರ್ಣ ಹತೋಟಿ ಸಾಧಿಸಿಕೊಳ್ಳಲು ಶ್ರಮ ಮತ್ತು ನೈಸರ್ಗಿಕ ಸಂಪನ್ಮೂಲಗಳಿಗೆ ಹೆಚ್ಚು ಬೆಲೆ ನೀಡಲೂ ಸಹ ಸಿದ್ಧವಿರುತ್ತವೆ. ಪರಿಣಾಮವಾಗಿ ಈ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳಷ್ಟು ಬೆಲೆ ಕೊಡಲು ತಯಾರಿಲ್ಲದ ದೇಶೀಯ ಉತ್ಪಾದಕ ಕೊರತೆಯ ಸಮಸ್ಯೆಯನ್ನೆದುರಿಸುತ್ತಾನೆ. ಅಂದರೆ ಈ ಸಂಸ್ಥೆಗಳು ವಿಕಾಸಶೀಲ ದೇಶಗಳ ಅಗಾಧ ಹಾಗೂ ಕಡಿಮೆ ಬೆಲೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಸಿದ್ಧಪಡಿಸಿದ ಹಲವಾರು ಬಗೆಯ ಸರಕುಗಳನ್ನು ಉತ್ಪಾದಿಸಿ ಅಭಿವೃದ್ಧಿ ಹೊಂದಿದ ದೇಶಗಳ ಗ್ರಾಹಕರಿಗೆ ಪೂರೈಸುವುವು. ಇದರಿಂದಾಗಿ ವಿಕಾಸಶೀಲದೇಶಗಳು ತಮ್ಮ ದೀರ್ಘಕಾಲೀನ ಆರ್ಥಿಕಾಭಿವೃದ್ಧಿ ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಸಕಾಲದಲ್ಲಿ ಸಂಪನ್ಮೂಲ ಪೂರೈಕೆ ಮತ್ತು ಬಳಕೆಯಲ್ಲಿ ಸೂಕ್ತ ಬದಲಾವಣೆಗಳನ್ನುಂಟುಮಾಡಿಕೊಂಡು ತಮ್ಮ ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದು ಅಗತ್ಯ. ಈ ಎಲ್ಲಾ ಅನಾನುಕೂಲತೆಗಳ ಜೊತೆಗೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ತಮ್ಮ ಅಗಾಧ ಪ್ರಮಾಣದ ಶಕ್ತಿಯನ್ನು ಬಳಸಿಕೊಂಡು ತಮಗೆ ಅನುಕೂಲಕರವಾಗಿರುವಂತೆ ಅತಿಥೇಯ ದೇಶಗಳ ಆರ್ಥಿಕ ನೀತಿಗಳಲ್ಲಿ ಮಾರ್ಪಾಡು ಮಾಡಲು ಪ್ರಯತ್ನ ಪಡುವುವು. ಪ್ರಪಂಚದ ಸುಮಾರು 50 ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಹೊಂದಿರುವ ಆಸ್ತಿ ಮತ್ತು ಸರಕು ಮಾರಾಟ ಪ್ರಮಾಣವನ್ನು ಗಮನಿಸಿದಾಗ (ಅಂಕಿ–ಸಂಖ್ಯೆ ಪಟ್ಟಿ–೧) ಅವುಗಳ ಶಕ್ತಿ ಸ್ವರೂಪದ ಪರಿಚಯವಾಗುತ್ತದೆ. ಈ ಅಂಕಿ–ಸಂಖ್ಯೆ ಪಟ್ಟಿ ೧ ಮತ್ತು ೨ ಈ ವಾದಕ್ಕೆ ಪೂರಕವಾಗಿವೆ.

ಅಂಕಿ–ಸಂಖ್ಯೆ ಪಟ್ಟಿ ೧

ವಿಶ್ವದ ಐವತ್ತು ಪ್ರಮುಖ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಸರಕುಮಾರಾಟ ಮತ್ತು ಆಸ್ತಿಪ್ರಮಾಣ. (1973)

(ಬಿಲಿಯನ್ ಡಾಲರ್‌ಗಳಲ್ಲಿ)

ದೇಶ	ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಸಂಖ್ಯೆ	ಸರಕು ಮಾರಾಟ	ಆಸ್ತಿ
ಅಮೇರಿಕಾ ಸಂಯುಕ್ತ ಸಂಸ್ಥಾನ	24	234.1	202.2
ಬ್ರಿಟನ್	5	47.0	48.9
ಪಶ್ಚಿಮ ಜರ್ಮನಿ	8	41.5	35.2
ಜಪಾನ್	6	33.7	37.1
ಇಟಲಿ	3	12.8	17.6
ಫ್ರಾನ್ಸ್	2	8.7	7.0
ನೆದರ್‌ಲೆಂಡ್ಸ್	1	8.1	8.6
ಸ್ವಿಟ್ಜರ್‌ಲೆಂಡ್	1	5.2	3.8

Source : *Fortune*, Quoted by Vikraman Nair and S. R. Kasbekar : Multinationals, *The Economic Times*, Annual, 1975, Bombay, P. 135.

ಅಂಕಿ–ಸಂಖ್ಯೆ ಪಟ್ಟಿ ೨

ಪ್ರಪಂಚದ ಅತಿ ದೊಡ್ಡ ಇಪ್ಪತ್ತು ಬಹುರಾಷ್ಟ್ರೀಯ ನಿಗಮಗಳ ಮಾರಾಟ ಮತ್ತು ಆಸ್ತಿ ಪ್ರಮಾಣ.

(ಸಾವಿರ ಡಾಲರ್‌ಗಳಲ್ಲಿ)

ಕ್ರಮಾವಳಿ	ಕಂಪೆನಿ	ಮುಖ್ಯ ಕಛೇರಿ ಸ್ಥಳ	ಮಾರಾಟ	ಆಸ್ತಿ
1	2	3	4	5
1.	ಜನರಲ್ ಮೋಟಾರ್ಸ್	ಡೆಟ್ರಾಯಿಟ್	35,798,289	20,296,861
2.	ಎಕ್ಸಾನ್	ನ್ಯೂಯಾರ್ಕ್	25,724,319	25,079.494
3.	ಫೋರ್ಡ್ ಮೋಟಾರ್	ಡಿಯರ್ ಬಾರ್ನ್, ಮಿಚ್	23,015,100	12,954,000
4.	ರಾಯಲ್ ಡಚ್/ಷೆಲ್ ಗ್ರೂಪ್	ಲಂಡನ್/ದಿ ಹೇಗ್,	18,672, 150	22,797,257
5.	ಕ್ರೈಸಲರ್	ಡೆಟ್ರಾಯಿಟ್	11,774,372	6.104,898

1	2	3	4	5
6.	ಜನರಲ್ ಇಲೆಕ್ಟ್ರಿಕ್	ನ್ಯೂಯಾರ್ಕ್	11,575,300	8,324,200
7.	ಟೆಕ್ಸಾಕೊ	"	11,406,876	13,595,413
8.	ಮೊಬಿಲ್ ಆಯಿಲ್	"	11,390,113	10,690,431
9.	ಯೂನಿಲೆವರ್	ಲಂಡನ್	11,009,559	5,675,732
10.	ಅಂತರರಾಷ್ಟ್ರೀಯ ವ್ಯಾಪಾರ ಮೆಷೀನ್ಸ್	ಆರ್ಮಾಂಕ್ ಎನ್. ವೈ	10,993,242	12,289,489
11.	ಅಂತರರಾಷ್ಟ್ರೀಯ ಟೆಲ್ ಮತ್ತು ಟೆಲ್.,	ನ್ಯೂಯಾರ್ಕ್	10,183,035	10,132,571
12.	ಗಲ್ಫ್ ಆಯಿಲ್	ಪಿಟ್ಸ್‌ಬರ್ಗ್	8,417,000	10,074,000
13.	ಫಿಲಿಪ್ಸ್ ಗ್ಲೊಯಿಲಾಂಪೆನ್ ಪೆಬ್ರೀಕೆನ್	ಐಂಡ್‌ಹೊವನ್ (ನೆದರ್‌ಲೆಂಡ್ಸ್)	8,108,065	8,557,383
14	ಸ್ಟ್ಯಾಂಡರ್ಡ್ ಆಯಿಲ್ ಆಫ್ ಕ್ಯಾಲಿಫೋರ್ನಿಯಾ	ಸ್ಯಾನ್‌ಫ್ರಾನ್ಸಿಸ್ಕೊ	7,761,835	9,082,248
15	ಬ್ರಿಟಿಷ್ ಪೆಟ್ರೋಲಿಯಂ	ಲಂಡನ್	7,725 980	10,413,638
16.	ನಿಪ್ಪನ್ ಸ್ಟೀಲ್	ಟೋಕಿಯೊ	7,628,385	9,082,185
17.	ವೆಸ್ಟರ್ನ್ ಇಲೆಕ್ಟ್ರಿಕ್	ನ್ಯೂಯಾರ್ಕ್	7,037,290	4,828,143
18.	ಯು. ಎಸ್. ಸ್ಟೀಲ್	ನ್ಯೂಯಾರ್ಕ್	6,951,905	6,918,535
19.	ವೊಲ್ಕ್ಸ್‌ಜೆನ್‌ವೆರ್ಕ್	ವೂಲ್ಫ್ಸ್‌ಬರ್ಗ್ (ಜರ್ಮನಿ)	6,412,056	4,792,851
20.	ಹಿಟಾಚಿ	ಟೋಕಿಯೋ	5.971,604	7,308,536

Source : Vikraman Nair & S. R. Kasbekar, Multinationals, *The Economic Times*, Annual 1975, Bombay . Pp. 131

ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಹೂಟಿ ಪ್ರಮಾಣ ಮತ್ತು ಆರ್ಥಿಕ ಶೋಷಣೆಯ ವ್ಯಾಪ್ತಿ

ಬಹುತೇಕ ಬೃಹತ್ ಪ್ರಮಾಣದ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿದವುಗಳಾಗಿದ್ದು ತಮ್ಮ ಮಿತ್ರರಾಷ್ಟ್ರದ ಬಂಡವಾಳ ಪ್ರಮಾಣವನ್ನು ನಿರಂತರವಾಗಿ ಹೆಚ್ಚಿಸುತ್ತಿವೆ. 1971ರಲ್ಲಿ ಅಮೆರಿಕದ ನೇರ ವಿದೇಶಿ ಹೂಟಿಯು ಸುಮಾರು 2 ಬಿಲಿಯನ್ ಡಾಲರ್‌ಗಳಾಗಿದ್ದು 1960–61 ಮತ್ತು 1970–71ರ ನಡುವೆ ಅದು ವರ್ಷಂಪ್ರತಿ ಸರಾಸರಿ ಶೇ 11.7ರ ದರದಲ್ಲಿ ವೃದ್ಧಿಗೊಂಡಿದೆ. ಜರ್ಮನಿ ಮತ್ತು ಬ್ರಿಟನ್ ದೇಶಗಳ ನೇರ ವಿದೇಶಿ ಹೂಟಿಯು 1960–61 ಹಾಗೂ 1970–71ರ ನಡುವೆ ವರ್ಷಂಪ್ರತಿ ಸರಾಸರಿ ಶೇಕಡ 14.3 ಮತ್ತು 3.3ರ ದರದಲ್ಲಿ ಹೆಚ್ಚಿದೆ. ಇತರೇ ದೇಶಗಳ ನೇರ ವಿದೇಶಿ ಹೂಟಿಯ ಹೆಚ್ಚಳವನ್ನು ಅಂಕಿ-ಸಂಖ್ಯೆ ಪಟ್ಟಿ 3ರಲ್ಲಿ ಗಮನಿಸಬಹುದು.

ಅಂಕಿ-ಸಂಖ್ಯೆ ಪಟ್ಟಿ ೩

ವಿಕಾಸಶೀಲ ದೇಶಗಳಿಗೆ ನೇರ ವಿದೇಶೀ ಹೂಡಿಕೆಯ ಒಳಹರಿತ (inflow)
(ಮಿಲಿಯನ್ ಡಾಲರ್‌ಗಳಲ್ಲಿ ಮತ್ತು ಶೇಕಡಾವಾರು ಪ್ರಮಾಣ)

ದೇಶ	1971ರಲ್ಲಿ ನೇರ ಹೂಡಿಕೆ (ಮಿಲಿಯನ್ ಡಾಲರ್‌ಗಳಲ್ಲಿ)	1960-61 ಮತ್ತು 1970-71ರ ನಡುವೆ ಸರಾಸರಿ ವಾರ್ಷಿಕ ಶೇಕಡ ಬೆಳವಣಿಗೆ ದರ	ಒಟ್ಟು ಬಂಡವಾಳ ಒಳಹರಿತಕ್ಕೆ ನೇರವಿದೇಶೀ ಹೂಡಿಕೆಯ ಶೇಕಡವಾರು ಪ್ರಮಾಣ		
			1960-61ರ (ಸರಾಸರಿ)	1965-66 (ಸರಾಸರಿ)	1970-71ರ (ಸರಾಸರಿ)
ಅಮೆರಿಕ ಸಂಯುಕ್ತ ಸಂಸ್ಥಾನ	2,210.0	1).7	18.2	22.6	32.2
ಬ್ರಿಟನ್	357.0	3.3	31.4	22.9	25.7
ನೆದರ್‌ಲೆಂಡ್ಸ್	282.7	8.4	47.2	41.1	47.5
ಫೆಡರಲ್ ರಿಪಬ್ಲಿಕ್ ಆಫ್ ಜರ್ಮನಿ	247.8	14.3	10.5	16.6	19.4
ಜಪಾನ್	235.5	11.0	36.5	19.0	12.7
ಇಟಲಿ	193.7	9.8	31.3	11.7	21.0
ಫ್ರಾನ್ಸ್	157.5	–5.1	23.5	26.6	11.8
ಕೆನಡ	76.0	13.8	17.4	15.9	11.4
ಸ್ವಿಟ್ಜರ್‌ಲೆಂಡ್	65.7	2.3	26.6	35.0	36.6
ಸ್ವೀಡನ್	4).1	1.8	70.2	27.8	18.1
ಆಸ್ಟ್ರೇಲಿಯಾ	40.0	48.0	1.7	10.8	15.9
ಬೆಲ್ಜಿಯಂ	26.2	0.4	19.1	32.3	11.5
ನಾರ್ವೆ	13.3	—	—	6.9	22.5
ಡೆನ್‌ಮಾರ್ಕ್	10.0	12.6	10 2	–1.3	8 4
ಪೋರ್ಚುಗಲ್	2.0	—	—	25.6	3.1
ಆಸ್ಟ್ರಿಯಾ	–0.1	—	—	5.0	2.2
ಒಟ್ಟು (ಡಿ. ಎ.ಸಿ. ದೇಶಗಳು)	3,957.5	7.9	21.6	22.4	23.6
ಇತರೇ	8.0	4.1	11.3	292.7	7.0
ಒಟ್ಟು : ಅಭಿವೃದ್ಧ ಮಾರುಕಟ್ಟೆ ಆರ್ಥಿಕತೆ ದೇಶಗಳು	3,965.5	7.9	21.6	22.5	23.5

Source: L. K. Jha: *Report of the Committee on Multinational Corporations in World Development*, United Nations, 1973.

ಅಭಿವೃದ್ಧ ಮಾರುಕಟ್ಟೆ ಆರ್ಥಿಕತೆ ದೇಶಗಳ ಒಟ್ಟು ವಿದೇಶಿ ಹೂಡಿಯ ಬಗೆಗಿನ ಅಂಕಿ-ಸಂಖ್ಯೆ ಪಟ್ಟಿಯನ್ನು ಗಮನಿಸಿದಾಗ ಅಮೆರಿಕ ಸಂಯುಕ್ತ ಸಂಸ್ಥಾನವು ಅತ್ಯಂತ ಹೆಚ್ಚು ಪ್ರಮಾಣದ ನೇರ ಹೂಡಿ ಹೊಂದಿರುವುದನ್ನು ಕಾಣುತ್ತೇವೆ. ಬಹುತೇಕ ಅಮೆರಿಕನ್ ಮೂಲದ ಬಹುರಾಷ್ಟ್ರೀಯ ನಿಗಮಗಳು ವಿಕಾಸಶೀಲ ದೇಶಗಳಲ್ಲಿ ಕಾರ್ಯೋನ್ಮುಖವಾಗಿವೆ ಹಾಗೂ ಬಹುತೇಕ ವಿಕಾಸಶೀಲ ದೇಶಗಳು ಪಶ್ಚಿಮ ಐರೋಪ್ಯ ಖಂಡದ ದೇಶಗಳ ರಾಜಕೀಯ ವಸಾಹತುಗಳಾಗಿದ್ದವು ಎಂಬುದನ್ನೂ ಇಲ್ಲಿ ಗಮನದಲ್ಲಿಟ್ಟುಕೊಳ್ಳುವುದು ಅವಶ್ಯಕ. ಅನೇಕ ದಶಕಗಳ ನಿರಂತರ ಪರಿಶ್ರಮ, ಸಂಘಟನೆ ಮತ್ತು ಹೋರಾಟದಿಂದಾಗಿ ಈ ವಿಕಾಸಶೀಲ ದೇಶಗಳು ರಾಜಕೀಯ ಸ್ವಾತಂತ್ರ್ಯ ಪಡೆದರೂ ಇಂದು ಅವುಗಳು ಬಹುರಾಷ್ಟ್ರೀಯ ನಿಗಮಗಳ ಸ್ಥಾಪನೆಯ ಪರಿಣಾಮವಾಗಿ ಆರ್ಥಿಕ ಸಾಮ್ರಾಜ್ಯಶಾಹಿ ನೀತಿ ವಿರುದ್ಧ ನಿರ್ಣಾಯಕ ಸಮರ ವನ್ನೇ ಘೋಷಿಸಬೇಕಾದ ಅನಿವಾರ್ಯ ಪರಿಸ್ಥಿತಿಗಳಿವೆ. ಏಕೆಂದರೆ ವಿಕಾಸಶೀಲ ದೇಶಗಳ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿ ಬಹುರಾಷ್ಟ್ರೀಯ ನಿಗಮಗಳ ಹಾವಳಿ ದುರ್ಭರವೆನಿಸುತ್ತಿದೆ.

"ಇಂತಹ ಪರಿಸ್ಥಿತಿಯಲ್ಲಿ (ಬಹುದೇಶಿ ಉತ್ಪಾದನಾ ನಿಗಮಗಳ) ಬಂಡವಾಳವು ಗುಣಾತ್ಮಕವಾಗಿ ಏಕರೂಪವಾಗಿರುತ್ತದೆ ಎಂದು ಹೇಳುವುದು ಕಷ್ಟಕರವಾದುದು. ಇಂತಹ ಬಂಡವಾಳದ ಲಾಭ ಮತ್ತು ಶಕ್ತಿಯು ಅದರ ಪ್ರಮಾಣವನ್ನು ಅವಲಂಬಿಸುವುದಲ್ಲದೆ, ಇತರೇ ಮೂಲಭೂತ ಅಂಶಗಳೊಂದಿಗೆ ಬಂಡವಾಳವನ್ನು ಸ್ವೀಕರಿಸುವ ದೇಶದ ರಾಷ್ಟ್ರೀಯತೆಯನ್ನೂ ಅವಲಂಬಿಸಿರುತ್ತದೆ."[5] ಅಂದರೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ವಿವಿಧ ಅತಿಥೇಯ ದೇಶಗಳಿಗೆ ಪೂರೈಸುವ ಬಂಡವಾಳವು ವೈಪರೀತ್ಯದಿಂದ ಕೂಡಿದೆ ಎಂದರ್ಥ. ಹಾಗೂ ಈ ಸಂಸ್ಥೆಗಳು ಅತಿಥೇಯ ದೇಶಗಳಿಗೆ ಪೂರೈಸುವ ಬಂಡವಾಳ ಪ್ರಮಾಣವೂ ಸಹ ಒಂದರಿಂದ ಮತ್ತೊಂದಕ್ಕೆ ಬಹುವಾಗಿ ವ್ಯತ್ಯಾಸಗೊಳ್ಳುವುದು ಎಂದರ್ಥ. ಹಾಗೂ ಬಹು ರಾಷ್ಟ್ರೀಯ ನಿಗಮಗಳು ತಮ್ಮ ಅತಿಥೇಯ ದೇಶಗಳ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯ ಸಂಪೂರ್ಣ ಲಾಭ ಪಡೆಯುತ್ತಿವೆ ಎಂದು ಅಭಿಪ್ರಾಯಪಡಬಹುದು. ಅಂಕಿ-ಸಂಖ್ಯೆ ಪಟ್ಟಿ 4 ಈ ವಾದವನ್ನು ಸಮರ್ಥಿಸುತ್ತದೆ.

ಅಂಕಿ-ಸಂಖ್ಯೆ ಪಟ್ಟಿ ೪

ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಬ್ರಿಟನ್ ದೇಶಗಳ ನೇರ ವಿದೇಶೀ ಹೂಡಿಯ (ಬುಕ್ ವ್ಯಾಲ್ಯೂ) ಸರಾಸರಿಗಳಿಗೆ (ಶೇಕಡಾವಾರು)

ಹೂಡಿ ಪ್ರದೇಶ	ಅಮೆರಿಕ ಸಂಯುಕ್ತ ಸಂಸ್ಥಾನ ಸರಾಸರಿ (1965–1968)		ಬ್ರಿಟನ್ ಸರಾಸರಿ (1965–1968)
	ಎಲ್ಲಾ ಕ್ಷೇತ್ರಗಳು	ಪೆಟ್ರೋಲಿಯಂ ಹೊರತಾಗಿ	ಪೆಟ್ರೋಲಿಯಂ ಹೊರತಾಗಿ
ಅಭಿವೃದ್ಧ ಮಾರುಕಟ್ಟೆ ಆರ್ಥಿಕತೆಗಳು	7.9	9.6	9.0
ಅಮೆರಿಕ ಸಂಯುಕ್ತ ಸಂಸ್ಥಾನ	—	—	8.6

1	2	3	4
ಕೆನಡ	8.0	8.6	11.3
ಯುರೋಪ್	7.1	10.0	7.9
ಜಪಾನ್	14.2	20.2	—
ದಕ್ಷಿಣಾರ್ಧಗೋಳ	9.7	12.0	9.5
ಅಭಿವೃದ್ಧಿಶೀಲ ದೇಶಗಳು	17.5	11.0	9.8
ಪಶ್ಚಿಮಾರ್ಧಗೋಳ	12.1	11.1	8.7
ಏಷ್ಯನ್	34.7	11.7	10.4
ಆಫ್ರಿಕಾ	22.3	7.7	10.4
ಐರೋಪ್ಯ ಅಭಿವೃದ್ಧಿಶೀಲ ದೇಶಗಳು	—	—	—
ವಿತರಣೆಯಾಗದ (unallocated)	8.5	11.6	—
ಒಟ್ಟು	10.7	10.0	9.5

Source: L. K. Jha: *Report of the Committee on Multinational Corporations in World Development*, United Nations, 1973.

ಅಮೆರಿಕನ್ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಐರೋಪ್ಯ ಖಂಡದಲ್ಲಿನ ತಮ್ಮ ಬಂಡವಾಳದ ಮೇಲೆ ಶೇಕಡ 7.1ರ ದರದ ಪ್ರತಿಫಲ ಪಡೆಯುತ್ತಿವೆ. ಈ ಎಲ್ಲಾ ದೇಶಗಳಲ್ಲೂ ಇರುವ ರಾಜಕೀಯ ಪರಿಸ್ಥಿತಿಯು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಬೆಳವಣಿಗೆಗೆ ಪೂರಕವಾಗಿದೆ. ಆದರೆ ಅದೇ ಬಹುರಾಷ್ಟ್ರೀಯ ನಿಗಮಗಳು ತಮ್ಮ ಬಂಡವಾಳದ ಮೇಲೆ ಏಷ್ಯ (34.7%) ಮತ್ತು ಆಫ್ರಿಕಾ (22.3%)ದಷ್ಟು ಪ್ರತಿಫಲ ಪಡೆಯುತ್ತಿವೆ ಎಂಬ ಅಂಶವು ಅಂಕಿ-ಸಂಖ್ಯೆಗಳ ಪಟ್ಟಿ 4ರಿಂದ ವ್ಯಕ್ತವಾಗುವುದು. ಬಹುತೇಕ ಏಷ್ಯ ಮತ್ತು ಆಫ್ರಿಕನ್ ರಾಷ್ಟ್ರಗಳು ರಾಜಕೀಯ ಮತ್ತು ಆರ್ಥಿಕ ಸಂಕ್ರಮಣದ (Economic and Political Transition) ಹಾದಿಯಲ್ಲಿವೆ. ಹಾಗೂ ಹಲವು ಏಷ್ಯ ಮತ್ತು ಆಫ್ರಿಕನ್ ರಾಷ್ಟ್ರಗಳು ರಾಜಕೀಯವಾಗಿ ಸಮತಾವಾದೀ ತತ್ವದೆಡೆಗೆ ಒಲಿಯುತ್ತಿರುವುದನ್ನು ಗಮನಿಸಿ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಈ ದೇಶಗಳನ್ನು ಅತಿಯಾಗಿ ಶೋಷಣೆ ಮಾಡುತ್ತಿವೆ.

ಬಹುರಾಷ್ಟ್ರೀಯ ನಿಗಮಗಳ ರಾಷ್ಟ್ರೀಕರಣ ಸಮಸ್ಯೆ ಮತ್ತು ಸಂಭವನೀಯ ಪರಿಣಾಮಗಳು

ಬಂಡವಾಳ ಸಂರಕ್ಷಣೆಯು ಪ್ರತಿಯೊಂದು ದೇಶದ ಪ್ರಮುಖ ಕರ್ತವ್ಯವಾಗುತ್ತದೆ. ಯಾವುದೇ ಆತಿಥೇಯ ದೇಶವು ಬಹುರಾಷ್ಟ್ರೀಯ ನಿಗಮಗಳ ಘಟಕಗಳನ್ನು ಸ್ವಾಧೀನಪಡಿಸಿಕೊಳ್ಳುವುದಾದರೆ ಆಗ ಈ ಸಂಸ್ಥೆಗಳ ಪಿತೃರಾಷ್ಟ್ರ ಮತ್ತು ಆತಿಥೇಯ ದೇಶಗಳ ನಡುವಿನ ಸಂಬಂಧ ಹದಗೆಡುವುದು. ಹಾಗೂ ಅಂತರರಾಷ್ಟ್ರೀಯವಾಗಿ ಈ ಎರಡೂ ದೇಶಗಳ ನಡುವಿನ ರಾಜಕೀಯ ಸಂಬಂಧವು ಹಾಳಾಗುವುದು. ಆತಿಥೇಯ ದೇಶವೊಂದು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಘಟಕಗಳನ್ನು ರಾಷ್ಟ್ರೀಕರಿಸಿ ಯಾವುದೇ ಬಗೆಯ ಪರಿಹಾರವನ್ನು ನೀಡದಿದ್ದಲ್ಲಿ ಈ ಸಂಸ್ಥೆಗಳು ತಮ್ಮ ಪಿತೃದೇಶಗಳ ಮೂಲಕ ಇಂತಹ ಆತಿಥೇಯ ದೇಶಗಳ ಮೇಲೆ ಎಲ್ಲಾ ಬಗೆಯ ಒತ್ತಡವನ್ನುಂಟುಮಾಡುವುವು. ಪ್ರತಿ ದೇಶವೂ ಸಹ ತನ್ನ ಬಂಡವಾಳವನ್ನು ಸಂರಕ್ಷಿಸಿ ಪ್ರೋತ್ಸಾಹಿಸುವುದು. ಪರಿಣಾಮವಾಗಿ ಬಂಡವಾಳವು ದೇಶವನ್ನು ಸಂರಕ್ಷಿಸಿ ಅದರ ಆರ್ಥಿಕ ಮತ್ತು ರಾಜಕೀಯ ಸುಭದ್ರತೆಗೆ ತನ್ನ ಕಾಣಿಕೆ ನೀಡುವುದು. ದೇಶವೊಂದರ ಪತನ

ಜೊತೆಗೆ ಬಂಡವಾಳ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವುದು ಅಥವ ಇತರೇ ದೇಶಗಳ ಆರ್ಥಿಕತೆಗಳೊಂದಿಗೆ ಮಿಳಿತಗೊಳ್ಳುವುದು.

ಏಕಸ್ವಾಮ್ಯ ಪ್ರವೃತ್ತಿಯ ಬಲಗೊಳ್ಳುವಿಕೆ

ಬಂಡವಾಳ ಸಂಚಯದ ಪ್ರಮಾಣ ಹೆಚ್ಚಿದಂತೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಶಕ್ತಿಸಾಮರ್ಥ್ಯ ಸಹ ಅಗಾಧವಾಗಿ ಬೆಳೆಯುತ್ತದೆ. ಆದ್ದರಿಂದ ಬೆಳವಣಿಗೆಯು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಮಹತ್ವಾಕಾಂಕ್ಷೆಯಾಗಿರುತ್ತದೆ. ಬಹುರಾಷ್ಟ್ರೀಯ ನಿಗಮಗಳ ಬೆಳವಣಿಗೆಯ ವಿಧಾನವನ್ನು "ಉತ್ಪಾದನಾ ಘಟಕವೊಂದು ಸ್ಪರ್ಧೆಯಿಂದ ಏಕಸ್ವಾಮ್ಯ ಪರಿಸ್ಥಿತಿಗೆ ತಾಂತ್ರಿಕ ಬದಲಾವಣೆ, ಸಂಶೋಧನೆ, ಕಡಿಮೆ ಉತ್ಪಾದನಾ ವೆಚ್ಚದ ಮೂಲಕ ಅಭಿವೃದ್ಧಿ, ದಕ್ಷವಲ್ಲದ ಉತ್ಪಾದನಾ ಘಟಕಗಳ ನಾಶ, ನಿರಂತರವಾಗಿ ಲಾಭವನ್ನು ಹೆಚ್ಚಿಸುವಿಕೆ, ಅಧಿಕಾಂಶ ಮೌಲ್ಯದಲ್ಲಿನ ಹೆಚ್ಚಳ, ಲಾಭವನ್ನು ಹೂಡಿಕೆಯಾಗಿ ಪರಿವರ್ತಿಸುವಿಕೆ—ಮುಂತಾದ ಕ್ರಮಗಳ ಮೂಲಕ ತಲುಪುವುದು. ಭೌಗೋಳಿಕವಾಗಿ ಹಾಗೂ ಕೈಗಾರಿಕಾ ದೃಷ್ಟಿಯಿಂದ ವೈವಿಧ್ಯವನ್ನು ಸಾಧಿಸುವುದೇ ಬಹುರಾಷ್ಟ್ರೀಯ ನಿಗಮಗಳ ಅತ್ಯಂತ ಮಹತ್ವದ ಲಕ್ಷಣವೆನಿಸಿದೆ."[6]

1. ಬೇಡಿಕೆ ಮತ್ತು ಉತ್ಪಾದನಾಂಗಗಳ ಲಭ್ಯ ಮತ್ತು ಗುಣಗಳಿಗನುಗುಣವಾಗಿ ಉತ್ಪಾದನಾ ಅಂತರರಾಷ್ಟ್ರೀಕರಣವು ಆತಿಥೇಯ ದೇಶಗಳ ಅದಕ್ಷವಾದ ಯಾವುದೇ ಘಟಕಗಳ ಖರೀದಿ ಮತ್ತು ಆಧುನೀಕರಣದ ಮೂಲಕ ಪ್ರಾರಂಭಗೊಳ್ಳುವುದು. ತಂತ್ರಜ್ಞಾನ ಮತ್ತು ಅಧಿಕ ಉತ್ಪಾದನಾ ವಿಧಾನಗಳು, ಅನುಕೂಲಕರ ರೀತಿಯಲ್ಲಿ ಹಣಕಾಸು ಸಂಪನ್ಮೂಲ ಪೂರೈಸಿಕೊಳ್ಳುವಿಕೆ, ನವೀನ ರೀತಿಯ ವ್ಯವಸ್ಥಾ ಮತ್ತು ಸಂಘಟನೆ ಸೌಲಭ್ಯಗಳ ಬಳಕೆ, ಅಗಾಧವಾದ ಹಾಗೂ ಪರಿಣಾಮಕಾರಿಯಾದ ಮಾರಾಟ ವ್ಯವಸ್ಥೆ, ಸಂಶೋಧನೆ ಮತ್ತು ಬೆಳವಣಿಗೆ—ಮುಂತಾದ ವ್ಯವಸ್ಥೆಗಳು ಯಾವುದೇ ದಕ್ಷತೆಯಿಲ್ಲದ ಉಪಕರಣವೊಂದನ್ನು ಅಧಿಕ ಲಾಭ ನೀಡಬಲ್ಲ ಉತ್ಪಾದನಾ ನಿಗಮವಾಗಿ ಪರಿವರ್ತಿಸಬಲ್ಲವು. 1972ರಲ್ಲಿ ಅಂತರರಾಷ್ಟ್ರೀಕೃತ ಉತ್ಪಾದನೆಯು ಪ್ರಪಂಚದ ಸ್ವತಂತ್ರ ಮಾರುಕಟ್ಟೆ ಆರ್ಥಿಕತೆಗಳ ಒಟ್ಟು ಉತ್ಪಾದನೆಯ ಶೇಕಡ 53ರಷ್ಟಿದ್ದಿತು ಎಂಬುದಾಗಿ ಜುಡ್ ಪೋಲ್ಕ್ ಎಂಬ ಅರ್ಥಶಾಸ್ತ್ರಜ್ಞರು ಅಂದಾಜುಮಾಡಿದ್ದಾರೆ.

ಬಹುರಾಷ್ಟ್ರೀಯ ಉತ್ಪಾದನಾ ನಿಗಮದ ಪಿತೃಸಂಸ್ಥೆಯನ್ನು ವ್ಯವಸ್ಥೆಗೊಳಿಸುವ ಹಾಗೂ ಹಿಡಿತದಲ್ಲಿಟ್ಟುಕೊಂಡಿರುವವರು ಯಾವಾಗಲೂ ಹಣಕಾಸು ಬಂಡವಾಳವನ್ನು ಕೈಗಾರಿಕೆಯೊಂದಿಗೆ ಮಿಳಿತಗೊಳಿಸುವುದಕ್ಕೆ ಪ್ರಯತ್ನ ನಡೆಸುವರು. ಈ ಉದ್ಯಮಿಗಳು ಆತಿಥೇಯ ದೇಶಗಳಲ್ಲಿನ ಈಕ್ವಿಟಿ ಬಂಡವಾಳವನ್ನು ನಾಶಗೊಳಿಸಲು ಅಥವ ಕ್ಷೀಣಿಸಲು ಇಚ್ಛಿಸುವುದಿಲ್ಲ. ಹಣಕಾಸು ಬಂಡವಾಳ (Finance Capital) ಮತ್ತು ಕೈಗಾರಿಕೆಯ ನಿಯಂತ್ರಣವು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯಾಚರಣೆಯ ಮಹತ್ವದ ಲಕ್ಷಣವಾಗುವುದು. ಹಣಕಾಸು ಬಂಡವಾಳದ ಬಗ್ಗೆ ಸಾಮ್ರಾಜ್ಯಶಾಹಿ ನೀತಿಯಲ್ಲಿ ರಷ್ಯಾದ ಕ್ರಾಂತಿ (1917) ನಾಯಕ ಲೆನಿನ್ ಹೀಗೆ ಅಭಿಪ್ರಾಯಪಡುತ್ತಾರೆ.

"ಉತ್ಪಾದನೆಯ ಕೇಂದ್ರೀಕರಣ, ತತ್ಸಂಬಂಧವಾಗಿ ಹುಟ್ಟಿಕೊಳ್ಳುವ ಏಕಸ್ವಾಮ್ಯ, ಬ್ಯಾಂಕಿಂಗ್ ಮತ್ತು ಕೈಗಾರಿಕೆಗಳ ಪರಸ್ಪರ ಮಿಳಿತ ಅಥವ ಅನೂಚಾನ ಬೆಳವಣಿಗೆ (ಮುಂತಾದುವೇ) ಹಣಕಾಸು ಬಂಡವಾಳದ ಉದಯದ ಇತಿಹಾಸವೂ ಹಾಗೂ ಸ್ವರೂಪವೂ ಆಗಿದೆ."[7] ಈ ಅಂಶವು 20ನೇ ಶತಮಾನದ ಹಣಕಾಸು ಬಂಡವಾಳಶಾಹಿ ವ್ಯವಸ್ಥೆಯ ಪ್ರಮುಖ ಅಂಶವಾಗಿದೆ. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಇದಕ್ಕೆ ಪೂರಕವಾಗಿ ಕಾರ್ಯೋನ್ಮುಖವಾಗಿವೆ.

2. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ತಮ್ಮ ಆರ್ಥಿಕ ಮತ್ತು ಸಾಂಸ್ಕೃತಿಕ ಕ್ರಿಯೆಗಳ ಮೇಲೆ ಉಂಟುಮಾಡಬಹುದಾದ ಪ್ರಭಾವದ ಬಗ್ಗೆ ಎಲ್ಲಾ ಆತಿಥೇಯ ದೇಶಗಳು ಭಯವಿಹ್ವಲಗೊಂಡು ಚಿಂತಾಕ್ರಾಂತವಾಗಿವೆ. ಕಚ್ಚಾ ಸರಕುಗಳು. ಸಿದ್ಧಪಡಿಸಿದ ಸರಕು, ಉತ್ಪಾದನಾ ಕೈಗಾರಿಕೆಗಳು, ಮಾರುಕಟ್ಟೆ ಮತ್ತು ಬೆಲೆನೀತಿಗಳನ್ನು ನಿಯಂತ್ರಿಸುವ ಬೃಹದಾಕಾರದ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವುದು ಆತಿಥೇಯ ದೇಶಗಳ ಸರ್ಕಾರಗಳಿಗೆ ಅಸಾಧ್ಯವಾಗಿ ಪರಿಣಮಿಸುತ್ತಿದೆ. ಆತಿಥೇಯ ದೇಶಗಳ ತೆರಿಗೆ ನೀತಿ ಮತ್ತು ದ್ರವ್ಯ ಮಾರುಕಟ್ಟೆಗಳಲ್ಲಿ ಹಲವಾರು ಬಗೆಯ ಸಮಸ್ಯೆಗಳನ್ನು ಈ ಸಂಸ್ಥೆಗಳು ಉಂಟುಮಾಡುವುವು.

3. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯಾಚರಣೆಯಲ್ಲಿ ತೀರಾ ಗೊಂದಲ ಹುಟ್ಟುಹಾಕುವ ಮತ್ತೊಂದು ಅಂಶವೆಂದರೆ ತೆರಿಗೆಗೆ ಸಂಬಂಧಿಸಿದ ಅವುಗಳ ನಡತೆಯ ಸ್ವರೂಪವಾಗಿದೆ. ಪ್ರತಿ ದೇಶದಲ್ಲಿಯೂ ಖಾಸಗಿ ಉದ್ಯಮಿಗಳು ಸರ್ವೇ ಸಾಧಾರಣವಾಗಿ ತೆರಿಗೆಗಳ್ಳತನಕ್ಕೆ (Tax evasion) ಅನುಸರಿಸುವ ಎಲ್ಲಾ ಬಗೆಯ ತಂತ್ರಗಳನ್ನೂ ಈ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಅನುಸರಿಸುತ್ತಿವೆ. ಈ ಸಂಸ್ಥೆಗಳು ವಿಶ್ವಾದ್ಯಂತ ತಮ್ಮ ಉಪಘಟಕಗಳ ಜಾಲ ಹಬ್ಬಿಸುವುದರಿಂದ ಅವುಗಳು ದೇಶಗಳ ನಡುವೆ ತೆರಿಗೆ ಪದ್ಧತಿಯಲ್ಲಿರುವ ವ್ಯತ್ಯಾಸ ಮತ್ತು ಕಡಿಮೆ ತೆರಿಗೆಗಳ ಲಾಭ ಪಡೆಯಲು ಪ್ರಯತ್ನಿಸುವುವು. ಅಲ್ಲದೆ ಈ ಸಂಸ್ಥೆಗಳು ತಮ್ಮ ವಿಸ್ತೃತ ಉಪಘಟಕಗಳ ಜಾಲದಿಂದಾಗಿ ಕೈಗಾರಿಕಾ ಆಸ್ತಿ ಅಥವ ಸ್ವತ್ತಿಗೆ ನಿಗದಿಯಾಗುವ ಮೌಲ್ಯಗಳ ಆಧಾರದ ಮೇಲೆ ತೆರಿಗೆ ಪಾವತಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುವುವು. ಒಟ್ಟಿನಲ್ಲಿ ಈ ಸಂಸ್ಥೆಗಳು ಆತಿಥೇಯ ದೇಶಗಳಲ್ಲಿ ತೆರಿಗೆಗಳ್ಳತನ ಮತ್ತು ತೆರಿಗೆ ತಪ್ಪಿಸುವಿಕೆ (Tax avoidance) ಕಾರ್ಯಗಳಲ್ಲಿ ತೊಡಗಿವೆ. ಈ ಸಂಸ್ಥೆಗಳು ಯಾವ ಪ್ರಮಾಣದಲ್ಲಿ ತೆರಿಗೆಗಳ್ಳತನ ಮತ್ತು ತೆರಿಗೆ ತಪ್ಪಿಸುವಿಕೆಯಲ್ಲಿ ನಿರತವಾಗಿವೆ ಎಂಬುದನ್ನು ನಿರ್ಧರಿಸಲು ಅಂಕಿ–ಅಂಶಗಳು ದೊರೆಯುವುದಿಲ್ಲ. ಆದರೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಈ ಅಪವಾದವನ್ನು ಅಲ್ಲಗಳೆಯುತ್ತವೆ

4. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ತೆರಿಗೆ ನಡವಳಿಕೆಯು ಹೇಗೆ ಹೆಚ್ಚು ಅನಿರ್ದಿಷ್ಟವಾಗಿ ಮತ್ತು ಆತಿಥೇಯ ದೇಶಗಳ ಆರ್ಥಿಕತೆಗೆ ಪ್ರತಿಕೂಲಕರವಾಗಿದೆಯೋ ಅದೇ ರೀತಿ ಅವುಗಳಿಂದ ಉಂಟಾಗಬಹುದಾದ ಹಣಕಾಸಿಗೆ ಸಂಬಂಧಿಸಿದ ಸಮಸ್ಯೆಗಳೂ ಅನಿರ್ದಿಷ್ಟವೂ ಮತ್ತು ಪ್ರತಿಕೂಲಕರವೂ ಆಗಿವೆ. ಆದರೆ ಈ ಸಂಸ್ಥೆಗಳು ಹಣಕಾಸಿಗೆ ಸಂಬಂಧಿಸಿದ ಪ್ರತಿಕೂಲಕರ ಪರಿಸ್ಥಿತಿಯ, ಸ್ವರೂಪ ಮತ್ತು ಪರಿಮಾಣದ ಬಗ್ಗೆ ಸ್ಪಷ್ಟವಾಗಿ ಏನನ್ನೂ ಹೇಳಲು ಬರುವುದಿಲ್ಲ. ಆದರೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯಾಚರಣೆಯಿಂದ ಆತಿಥೇಯ ರಾಷ್ಟ್ರಗಳಲ್ಲಿ 'ಹಣಕಾಸು ಉತ್ಕ್ರಾಂತಿ' (Monetary upheaval) ಉಂಟಾಗುವುದು ಮಾತ್ರ ಸ್ಪಷ್ಟ ಎಂಬುದಾಗಿ ಅರ್ಥವಿಜ್ಞಾನಿಗಳು ಅಭಿಪ್ರಾಯ ಪಡುವರು.

5. ಬಹುರಾಷ್ಟ್ರೀಯ ನಿಗಮಗಳು ಹೆಚ್ಚು ನವೀಕೃತವಾದ ಬಂಡವಾಳಪ್ರಧಾನ ತಂತ್ರಜ್ಞಾನವನ್ನು ಬಳಸುವುದರಿಂದ ಅವುಗಳ ಒಟ್ಟು ಉತ್ಪಾದನಾ ವೆಚ್ಚದಲ್ಲಿ ಮಾನವ ಸಂಪನ್ಮೂಲದ ವೆಚ್ಚವು ಅಲ್ಪಪ್ರಮಾಣದ್ದಾಗಿರುತ್ತದೆ. ಆದರೆ ಹೆಚ್ಚು ನವೀನವಲ್ಲದ ತಂತ್ರಜ್ಞಾನವನ್ನು ಬಳಸುವ ಕೈಗಾರಿಕೋದ್ಯಮಗಳಲ್ಲಿ ಒಟ್ಟು ಉತ್ಪಾದನಾ ವೆಚ್ಚಕ್ಕೆ ಹೋಲಿಸಿದಂತೆ ಮಾನವ ಸಂಪನ್ಮೂಲದ ವೆಚ್ಚವು ಹೆಚ್ಚಾಗಿರುತ್ತದೆ. ಅಂದರೆ ಈ ಉದ್ಯಮಗಳು ಶ್ರಮಪ್ರಧಾನ ತಂತ್ರಜ್ಞಾನವನ್ನು ಬಳಸುವುವು. ಇದರಿಂದ ವಿಕಾಸಶೀಲ ಆತಿಥೇಯ ದೇಶಗಳಲ್ಲಿ ಮಾನವ ಶಕ್ತಿಯ ವ್ಯವಸ್ಥೆ ಮತ್ತು ಕಾರ್ಮಿಕ ಸಂಘಗಳ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳು ಉದ್ಭವವಾಗುವುವು. ಹೆಚ್ಚು ನವೀನವಲ್ಲದ ತಂತ್ರಜ್ಞಾನವನ್ನು ಬಳಸುವ ದೇಶೀಯ

ಕೈಗಾರಿಕೋದ್ಯಮಗಳು ತಮ್ಮ ಕಾರ್ಮಿಕರಿಗೆ ನೀಡುವ ವೇತನ ಮತ್ತು ವೇತನೇತರ ರಿಯಾಯಿತಿ, ಸವಲತ್ತುಗಳು ಬಹುರಾಷ್ಟ್ರೀಯ ನಿಗಮಗಳು ನೀಡುವ ವೇತನ ಮತ್ತು ವೇತನೇತರ ಸವಲತ್ತುಗಳಿಗಿಂತ ಕಡಿಮೆಯಾಗಿರುತ್ತವೆ. ಆದ್ದರಿಂದ ಬಹುರಾಷ್ಟ್ರೀಯ ನಿಗಮಗಳ ಕಾರ್ಯಾಚರಣೆಯಿಂದ ಕಾರ್ಮಿಕರ ನಡುವೆ "ಪ್ರೀತಿಸು–ದ್ವೇಷಿಸು" ಭಾವನೆಯು ಉಂಟಾಗುತ್ತದೆ. "ಆತಿಥೇಯ ದೇಶಗಳ ಸಂಘಟಿತ ಕಾರ್ಮಿಕ ಕ್ಷೇತ್ರದ ಕಾರ್ಮಿಕರು ಹೆಚ್ಚು ಹೆಚ್ಚು ವೇತನ ಮತ್ತು ಇತರೇ ಸೌಲಭ್ಯಗಳಿಗಾಗಿ ಬಹುರಾಷ್ಟ್ರೀಯ ನಿಗಮಗಳತ್ತ ತಮ್ಮ ಒಲವನ್ನು ವ್ಯಕ್ತಪಡಿಸುತ್ತಿದ್ದಾರೆ. ಆದರೆ ಹೆಚ್ಚು ಉದ್ಯೋಗಾವಕಾಶವನ್ನು ಬಂಡವಾಳ ಪ್ರಧಾನ ತಂತ್ರಜ್ಞಾನವನ್ನು ಬಳಸುವ ಬಹುರಾಷ್ಟ್ರೀಯ ನಿಗಮಗಳು ಸೃಷ್ಟಿಸಲು ಶಕ್ತವಾಗಿಲ್ಲ."[8] ಅಲ್ಲದೆ ಈ ಸಂಸ್ಥೆಗಳು ಆತಿಥೇಯ ದೇಶಗಳ ಕಾರ್ಮಿಕಪೇಟೆಯಿಂದ ಬಳಸಿಕೊಳ್ಳುವ ಕಾರ್ಮಿಕಶಕ್ತಿಯು ಅತ್ಯಂತ ದಕ್ಷವೂ ಹಾಗೂ ಕುಶಲತೆಯುಳ್ಳದ್ದೂ ಆಗಿರುತ್ತದೆ. ಆದರೆ ಇಂತಹ ಕಾರ್ಮಿಕಶಕ್ತಿಯ ಪೂರೈಕೆಯು ಪ್ರಗತಿಪಥದಲ್ಲಿರುವ ಆತಿಥೇಯ ದೇಶದ ಅಭಿವೃದ್ಧಿ ಅಗತ್ಯವನ್ನು ಪೂರೈಸುವಷ್ಟಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ದೇಶೀಯ ಕೈಗಾರಿಕೆಗಳು ಈ ಬಗೆಯ ಕಾರ್ಮಿಕಶಕ್ತಿಯ ತೀವ್ರ ಕೊರತೆಯನ್ನು ಎದುರಿಸುವುವು; ಈ ಅಂಶವು ಆತಿಥೇಯ ದೇಶಕ್ಕೆ ತುಂಬಲಾಗದ ನಷ್ಟವಾಗಿ ಪರಿಣಮಿಸುವುದು.

ಬಹುರಾಷ್ಟ್ರೀಯ ನಿಗಮಗಳು ಕಾರ್ಮಿಕ ಸಂಘಗಳ ಬೆಳವಣಿಗೆಗೆ ಪೂರಕವಾತಾವರಣವನ್ನು ಕಲುಷಿತಗೊಳಿಸುವುದಲ್ಲದೆ, ಅವುಗಳ ಬೆಳವಣಿಗೆಯನ್ನೇ ಮೊಟಕುಗೊಳಿಸುವುವು. ಈ ಸಂಸ್ಥೆಗಳು ಕಾರ್ಮಿಕ ಸಂಘಗಳ ನಾಯಕರನ್ನು ಲಂಚಗುಳಿಗಳನ್ನಾಗಿ ಮಾಡುವುದಲ್ಲದೆ, ಕಾರ್ಮಿಕರಿಗೆ ಹೆಚ್ಚು ವೇತನ ಹಾಗೂ ಇತರೇ ವೇತನೇತರವಾದ (Non-pecuniary benefits) ನೀಡುವುದರ ಮೂಲಕ ಕಾರ್ಮಿಕ ಸಂಘಟನೆಗೆ ಮಾರಕವಾಗಿವೆ. ಹಾಗೂ ಆತಿಥೇಯ ದೇಶಗಳಲ್ಲಿ ಈ ಸಂಸ್ಥೆಗಳ ಕಾರ್ಯಾಚರಣೆಯಿಂದ ವೇತನ ವ್ಯತ್ಯಾಸಗಳು ಹುಟ್ಟಿಕೊಂಡಿವೆ. ಆತಿಥೇಯ ದೇಶದ ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರಗಳು ಯಾವುದೇ ಬಗೆಯ ಉದ್ಯೋಗಕ್ಕೆ ನೀಡುವ ವೇತನಕ್ಕಿಂತಲೂ ಹೆಚ್ಚಿನ ವೇತನವನ್ನು ಈ ಸಂಸ್ಥೆಗಳು ಅದೇ ಬಗೆಯ ಉದ್ಯೋಗಕ್ಕೆ ನೀಡುವುವು. ಇದರಿಂದ ಕಾರ್ಮಿಕರ ಗಳಿಕೆಯು ಹೆಚ್ಚಾಗಿ ಅಸಮತೋಲಗೊಳ್ಳುವುದು. ಆದರೆ ಬಹುತೇಕ ಬಹುರಾಷ್ಟ್ರೀಯ ನಿಗಮಗಳು ತಮ್ಮ ವೇತನ ಮಟ್ಟವನ್ನು ಉತ್ಪಾದನೆ ದರದೊಂದಿಗೆ ಹೊಂದಿಸಿರುವುದು ಕಂಡುಬರುತ್ತದೆ.

ಬಹುರಾಷ್ಟ್ರೀಯ ನಿಗಮಗಳು ನೀಡುವ ಹೆಚ್ಚು ವೇತನ ಮತ್ತು ಆಕರ್ಷಣೀಯ ವೇತನೇತರ ಸೌಲಭ್ಯಗಳು ಆತಿಥೇಯ ದೇಶದ ಸಂಘಟಿತ ಕಾರ್ಮಿಕ ಕ್ಷೇತ್ರದಲ್ಲಿ ವರ್ಗ–ಸಂಘರ್ಷಕ್ಕೆ ದಾರಿಮಾಡಿ ಕೊಡುವುವು. ಹೆಚ್ಚು ಆಧುನಿಕವಲ್ಲದ ತಂತ್ರಜ್ಞಾನ ಬಳಸುವ ಬಟ್ಟೆ ಉದ್ಯಮ, ರೈಲ್ವೇ ಮತ್ತು ರಸ್ತೆಸಾರಿಗೆ ಉದ್ಯಮ, ಇದ್ದಿಲು, ಕಬ್ಬಿಣ ಮತ್ತು ಉಕ್ಕು ಮುಂತಾದ ಕೈಗಾರಿಕೆಗಳ ಗಣನೀಯ ಸಂಖ್ಯೆಯ ಕಾರ್ಮಿಕರು, ಬಹುರಾಷ್ಟ್ರೀಯ ಸಂಸ್ಥೆಗಳಾದ ಪೆಟ್ರೋ–ಕೆಮಿಕಲ್ಸ್, ರಾಸಾಯನಿಕ ಪದಾರ್ಥಗಳು, ಔಷಧಿ ತಯಾರಿಕೆ ಮುಂತಾದ ಕೈಗಾರಿಕೆಗಳ ಹೆಚ್ಚು ವೇತನ ಮತ್ತು ವೈವಿಧ್ಯಮಯವಾದ ಸೌಲಭ್ಯ ಪಡೆಯುವ ಕಾರ್ಮಿಕರ ಜೊತೆ ಸಮಬಾಳ್ವೆ ನಡೆಸಬೇಕಾಗುತ್ತದೆ. ಇದರಿಂದ ಆತಿಥೇಯ ದೇಶಗಳ ಕೈಗಾರಿಕೋದ್ಯಮಗಳ ಅತೃಪ್ತ ಸಂಘಟಿತ ವರ್ಗವು ವ್ಯವಸ್ಥಾಪಕ ವರ್ಗ ಮತ್ತು ಕಾರ್ಮಿಕ ಸಂಘಗಳ ಮೇಲೆ ಹೆಚ್ಚು ವೇತನ ಮತ್ತು ಇತರೆ ಸೌಲಭ್ಯಗಳಿಗಾಗಿ ಅಧಿಕ ಒತ್ತಡ ಹೇರಲಾರಂಭಿಸುತ್ತದೆ. ಆದರೆ ಈ ದೇಶೀಯ ಕೈಗಾರಿಕೆಗಳು ಕಾರ್ಮಿಕರ ಈ ಬೇಡಿಕೆಯನ್ನು ಪೂರೈಸಲು ಸಮರ್ಥವಿರುವುದಿಲ್ಲ. ವಿಕಾಸಶೀಲ ದೇಶಗಳ ಗ್ರಾಮಾಂತರ ಕಾರ್ಮಿಕರ ಹಾಗೂ ನಗರ ಪ್ರದೇಶಗಳ ಕಾರ್ಮಿಕರ ನಡುವೆ ಉಂಟಾಗುವ ವೇತನ ವ್ಯತ್ಯಾಸ ಮತ್ತು ತಾರತಮ್ಯವಲ್ಲದೆ ಈ ದೇಶಗಳಲ್ಲಿ ಸಂಘಟಿತ ಕ್ಷೇತ್ರದಲ್ಲೇ ದೇಶೀಯ ಕೈಗಾರಿಕೆ ಮತ್ತು ಬಹುರಾಷ್ಟ್ರೀಯ ನಿಗಮಗಳ ಕಾರ್ಮಿಕರಲ್ಲಿ ಗಳಿಕೆಯ ಅಗಾಧ ವ್ಯತ್ಯಾಸವುಂಟಾಗುತ್ತದೆ. ಇದೊಂದು

ತೆರನಾದ ಅರ್ಬುಧ ವ್ಯಾಧಿಯಂತೆ ಆತಿಥೇಯ ದೇಶದ ಕಾರ್ಮಿಕ ಶಕ್ತಿ ಸಂಘಟಿತವಾದಂತೆಲಾ ಸರ್ವವ್ಯಾಪಿಯಾಗುವುದು.

ಅಂತರರಾಷ್ಟ್ರೀಯಮಟ್ಟದಲ್ಲಿ ಕಾರ್ಮಿಕ ಸಂಘಗಳು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯವಿಧಾನದ ಬಗ್ಗೆ ಇನ್ನೂ ಅಂತರರಾಷ್ಟ್ರೀಯ ಪ್ರತಿಕ್ರಿಯೆಯನ್ನು ರೂಢಿಸಿಕೊಳ್ಳಬೇಕಾಗಿದೆ. ವಿಶ್ವಸಂಸ್ಥೆ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯಲ್ಲಿ ಈ ಸಂಸ್ಥೆಗಳ ಬಗ್ಗೆ ವ್ಯಕ್ತಪಡಿಸಲಾದ ಅಭಿಪ್ರಾಯದಂತೆ ಬಹುತೇಕ ದೇಶಗಳ ಕಾರ್ಮಿಕ ಸಂಘ ಸಂಸ್ಥೆಗಳು ಅಂತರರಾಷ್ಟ್ರೀಯ ಸಂಬಂಧವನ್ನು ರೂಢಿಸಿಕೊಳ್ಳಲು ಸಹಕಾರ ಮತ್ತು ಪ್ರೋತ್ಸಾಹ ಲಭಿಸುವಂತಾಗಲಿದೆ.

6. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಆತಿಥೇಯ ದೇಶಗಳಲ್ಲಿ ಹೊಸಬಗೆಯ ಮತ್ತು ಹೆಚ್ಚು ಸಂಕೀರ್ಣವಾದ ಕಾರ್ಮಿಕ ಸಮಸ್ಯೆಗಳನ್ನುಂಟುಮಾಡುತ್ತಿವೆ. ಈ ಸಂಸ್ಥೆಗಳು ತಮ್ಮ ಅಗಾಧ ಬಂಡವಾಳದ ಜೊತೆಗೆ ತಮ್ಮದೇ ಆದಂತಹ ಕೈಗಾರಿಕಾ–ಸಂಬಂಧ ನೀತಿಗಳನ್ನು ಸಹ ಆತಿಥೇಯ ದೇಶಗಳಲ್ಲಿ ಹರಡುವುವು. ಈ ಕ್ರಮವು ಆತಿಥೇಯ ದೇಶದ ಕೈಗಾರಿಕಾ ಸಂಬಂಧ ನೀತಿಗೆ ಧಕ್ಕೆಯುಂಟುಮಾಡುವುದು,

ಈ ವಾದವನ್ನು ಸಮರ್ಥಿಸಲು ಅನೇಕ ಪುರಾವೆಗಳನ್ನು ನೀಡುವುದು ಹೆಚ್ಚು ಔಚಿತ್ಯಪೂರ್ಣವಾದುದು. 1971ರಲ್ಲಿ ಅಮೇರಿಕದ ಅಧ್ಯಕ್ಷ ನಿಕ್ಸನ್‌ರ ವೇತನ ಮುರಿಕೆ (Wage freeze) ನೀತಿಯನ್ನು ಅಮೇರಿಕನ್ ಬಹುರಾಷ್ಟ್ರೀಯ ನಿಗಮಗಳು ಕೆನಡಾದಲ್ಲಿ ಆಚರಣೆಗೆ ತರಲು ಯತ್ನಿಸಿದವು. ಬ್ರಿಟನ್ನಿನ ಸಂಪ್ರದಾಯದ ಚೌಕಟ್ಟಿಗೆ ಬಾಹಿರವೆನಿಸುವ ಕಾರ್ಮಿಕ–ವ್ಯವಸ್ಥಾಪಕವರ್ಗ ಪದ್ಧತಿಯನ್ನು ಜಾರಿಗೆ ತರಲು ಫೋರ್ಡ್ ಮೋಟಾರ್ ಕಂಪೆನಿಯು ಪ್ರಯತ್ನಿಸಿತು. ಹಾಗೂ ಈ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಒಂದು ದೇಶದ ಕಾರ್ಮಿಕರನ್ನು ಮತ್ತೊಂದು ದೇಶದ ಕಾರ್ಮಿಕರಿಗೆ ವಿರುದ್ಧವಾಗಿ ಪ್ರಚೋದಿಸುವುವು ಎಂಬ ವಿಚಾರವನ್ನು ಕಾರ್ಮಿಕವರ್ಗವು ಮನನ ಮಾಡಿಕೊಂಡಿತು. ಅಂತರರಾಷ್ಟ್ರೀಯ ಕಾರ್ಮಿಕ ಸಂಘವು ಕಾರ್ಮಿಕ ಸಂಘಟನೆ ಮತ್ತು ಬಹುರಾಷ್ಟ್ರೀಯ ನಿಗಮಗಳ ಬಗ್ಗೆ ನಡೆಸಿದ ಅಧ್ಯಯನವು ಕಾರ್ಮಿಕ ವರ್ಗದ ವಾಸ್ತವಿಕ ಅನುಭವವನ್ನು ಬಹುವಾಗಿ ಹೋಲುವುದು. ಯಾವುದೇ ಕಾರ್ಮಿಕ ಸಮಸ್ಯೆಯ ಬಗ್ಗೆ ಆ ಸಂಸ್ಥೆಗಳು, "ತಾವು ನೀಡುವ ಸೌಲಭ್ಯಗಳನ್ನು ಪಡೆಯಿರಿ ಅಥವ ಉತ್ಪಾದನಾ ಘಟಕವನ್ನೇ ಬೇರೆ ದೇಶಕ್ಕೆ ಸ್ಥಳಾಂತರಿಸುವ ಅಪಾಯ (risk)ದ ಪರಿಣಾಮವನ್ನೆದುರಿಸಿರಿ"[9] ಎಂಬುದಾಗಿ ನೇರವಾಗಿ ತಿಳಿಸುವುವು.

1975ರ ಕೊನೆಯಲ್ಲಿ ಅಮೇರಿಕದ ಸಾರಿಗೆವಾಹನ ತಯಾರಿಕಾ ಬಹುರಾಷ್ಟ್ರೀಯ ನಿಗಮವು ಬ್ರಿಟನ್ನಿನಲ್ಲಿನ ತನ್ನ ಉಪಘಟಕದ ಕಾರ್ಯಾಚರಣೆಯನ್ನು ವಾಣಿಜ್ಯ ಅನುಕೂಲವಲ್ಲ ಎಂಬ ಕಾರಣದಿಂದ ನಿಲ್ಲಿಸಲು ನಿರ್ಧರಿಸಿತು. ಆದರೆ ಅದೇ ಸಂಸ್ಥೆ ಇತರೇ ದೇಶಗಳಲ್ಲಿನ ತನ್ನ ಉಪಘಟಕಗಳಲ್ಲಿ (ಉದಾ: ಸ್ಪೈನ್) ಉತ್ಪಾದನೆಯನ್ನು ಹೆಚ್ಚಿಸಿತು. ಈ ನಿರ್ಣಯದಿಂದ ಬ್ರಿಟನ್ನಿನ ಸುಮಾರು 27.00 ಮಂದಿ ವಾಹನ ಉತ್ಪಾದನಾ ಕಾರ್ಮಿಕರು ನಿರುದ್ಯೋಗಿಗಳಾಗುವ ಸಂಭವನೀಯತೆ ಇತ್ತು ಹಾಗೂ ಈ ಕ್ರಮದಿಂದ ಇತರೇ ಬಗೆಯ ವಾಹನಸಾರಿಗೆ ಉದ್ಯಮದಲ್ಲಿ ತೊಡಗಿದ ಸುಮಾರು 77,000 ಕಾರ್ಮಿಕರು ನಿರುದ್ಯೋಗಿಗಳಾಗುವ ಪರಿಣಾಮವಿದ್ದಿತು. ಈ ಅಮೇರಿಕದ ಬಹುರಾಷ್ಟ್ರೀಯ ನಿಗಮವು ತನ್ನ ನಿರ್ಣಯವನ್ನು ಬದಲಿಸಿ ಕಾರ್ಯೋನ್ಮುಖವಾಗಲು ಬ್ರಿಟಿಷ್ ಸರ್ಕಾರದಿಂದ ಸುಮಾರು 100 ಮಿಲಿಯನ್ ಪೌಂಡುಗಳ ಪರಿಹಾರವನ್ನು ಕೇಳಿದ್ದಿತು ಎಂದು ವರದಿಯಾಗಿದ್ದಿತು.

ಪ್ರಗತಿಪಥದಲ್ಲಿರುವ ಆತಿಥೇಯ ದೇಶಗಳಲ್ಲಿ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಬೇರೆ ಬೇರೆ ಸ್ವರೂಪದ ಸಮಸ್ಯೆಗಳನ್ನು ಉಂಟುಮಾಡುವುವು. "ವಿಕಾಸಶೀಲ ದೇಶಗಳ ಆರ್ಥಿಕತೆಗಳು ಕಡಿಮೆ ವೇತನವುಳ್ಳ ಆರ್ಥಿಕತೆಗಳಾಗಿವೆ. ಆದರೆ ಬಹುರಾಷ್ಟ್ರೀಯ ನಿಗಮಗಳು ಈ ದೇಶ

ಗಳಿಗೆ ಪ್ರವೇಶಮಾಡಿದರೆ ಆಗ ಅವುಗಳು ತಮ್ಮದೇ ಆದ ಹೆಚ್ಚು ವೇತನದ ದ್ವೀಪ ಸಮೂಹಗಳನ್ನು ಅಲ್ಲಲ್ಲಿ ಸೃಷ್ಟಿಸುವುವು."[10] ಒಟ್ಟಿನಲ್ಲಿ ವಿಕಾಸಶೀಲದೇಶಗಳಲ್ಲಿ ಬಹುರಾಷ್ಟ್ರೀಯ ನಿಗಮಗಳು ವೇತನ, ಕಾರ್ಮಿಕ ಸಂಘ ಬೆಳವಣಿಗೆ ಮತ್ತು ಕಾರ್ಮಿಕ ವ್ಯವಸ್ಥಾಪಕ ವರ್ಗಸಂಬಂಧ ಮುಂತಾದವುಗಳ ಮೇಲೆ ತೀವ್ರ ದುಷ್ಪರಿಣಾಮಗಳನ್ನೆಸಗುವುದರಲ್ಲಿ ಸಂಶಯವಿಲ್ಲ.

7. ಬಂಡವಾಳ ಕೊರತೆ ಸಮಸ್ಯೆಯ ನಿವಾರಣೆ, ಅಗ್ಗವಾದ ಶ್ರಮದ ಬಳಕೆ, ರಫ್ತು ಅಧಿಕತೆಯ ವಿಸ್ತರಣೆ ಮೂಲಕ ಸರಕು ಸಂಗ್ರಹಿಸುವಿಕೆ, ಉಳಿತಾಯ ಮತ್ತು ಬೆಲೆಮಟ್ಟದ ಮೇಲೆ ಯಾವುದೇ ಆವರ್ತಯುತ ದುಷ್ಪರಿಣಾಮವನ್ನು ನಿವಾರಿಸಲು ವಿಕಾಸಶೀಲ ದೇಶಗಳು ಹಲವಾರು ಬಗೆಯ ಕಚ್ಚಾ ಸರಕುಗಳ ಜೊತೆಗೆ ಸಿದ್ಧಪಡಿಸಿದ ಸರಕುಗಳನ್ನೂ ಸಹ ರಫ್ತು ಮಾಡಬೇಕು ಎಂಬುದು ಇತ್ತೀಚಿನ ವಾದವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ವಿಕಾಸಶೀಲ ದೇಶಗಳ ರಫ್ತು ವ್ಯಾಪಾರಕ್ಕೆ ಸಂಬಂಧಿಸಿದಂತೆ ಬಹು ರಾಷ್ಟ್ರೀಯ ನಿಗಮಗಳು ಯಾವ ಬಗೆಯ ಪಾತ್ರವಹಿಸುವುವು ಎಂಬ ಪ್ರಶ್ನೆಗೆ ಈ ಸಂಸ್ಥೆಗಳು ವಿಕಾಸಶೀಲ ದೇಶಗಳ ರಫ್ತುಗಳಿಕೆಯನ್ನು ಅಪಮೌಲ್ಯಗೊಳಿಸುವುವು ಎಂಬುದಾಗಿ ಹೇಳಬಹುದಾಗಿದೆ.

ದೇಶವೊಂದರ ಆರ್ಥಿಕತೆಯ ಮೇಲೆ ವಿದೇಶಿ ಹೂಟಿಯುಂಟುಮಾಡುವ ಪರಿಣಾಮವನ್ನು ಸುತ್ತುವರಿದ ಅಥವ ದೇಶೀಯ ಮತ್ತು ವಿದೇಶೀಯ ಹೂಟಿಯ ಸಮಗ್ರ ಪರಿಣಾಮ (Enclave Effects of Foreign Investment) ಎಂಬುದಾಗಿ ರಾಲ್ ಪ್ರೆಬಿಷ್ ಮತ್ತು ಹ್ಯಾನ್ಸ್ ಸಿಂಗರ್ ಎಂಬ ಅರ್ಥವಿಜ್ಞಾನಿಗಳು ಅಭಿಪ್ರಾಯಪಡುವರು. ಆದರೆ ಇಂಥ ಅರ್ಥವ್ಯಾಪ್ತಿಗೆ ಬಹುರಾಷ್ಟ್ರೀಯ ನಿಗಮಗಳು ಸೇರಿಸಲ್ಪಡುವುದಿಲ್ಲ. ಏಕೆಂದರೆ ಅವುಗಳು ವಿಕಾಸಶೀಲದೇಶಗಳ ಆಂತರಿಕ ಆರ್ಥಿಕತೆಗೆ ಸಂಬಂಧಿಸಲ್ಪಟ್ಟಿರುವುದಿಲ್ಲ.

ಈ ಅಂಶವನ್ನು ಹೆಚ್ಚು ವಿಶದೀಕರಿಸಬೇಕಾಗುತ್ತದೆ. 1960–72ರ ನಡುವೆ ಲ್ಯಾಟಿನ್ ಅಮೆರಿಕಾದ ಸಿದ್ಧಪಡಿಸಿದ ಸರಕುಗಳ ರಫ್ತು 709 ಮಿಲಿಯನ್ ಡಾಲರ್‌ಗಳಿಂದ 1913 ಮಿಲಿಯನ್ ಡಾಲರ್‌ಗಳಿಗೆ ಹೆಚ್ಚಿತು. ಈ ರಫ್ತು ಹೆಚ್ಚಳದ ಶೇ. 65ರಷ್ಟು ಅಮೆರಿಕ ಸಂಯುಕ್ತ ಸಂಸ್ಥಾನದ ಬಹುರಾಷ್ಟ್ರೀಯ ನಿಗಮಗಳ ಪಾಲಿನದಾಗಿದೆ. ಅಲ್ಲದೆ ಶೇಕಡ 20ರಷ್ಟು ದಕ್ಷಿಣ ಕೊರಿಯದ ಸಿದ್ಧಪಡಿಸಿದ ಸರಕು ರಫ್ತು ಹಾಗೂ ಶೇಕಡ 50ಕ್ಕೂ ಹೆಚ್ಚಿನ ಟೈವಾನ್ ದೇಶದ ರಫ್ತು ಬಹುರಾಷ್ಟ್ರೀಯ ನಿಗಮಗಳದ್ದಾಗಿದ್ದು ಬಹುವಾಗಿ ಅಮೆರಿಕನ್ ಮೂಲದವುಗಳಾಗಿವೆ.

ಪರಿಸ್ಥಿತಿ ಹೀಗಿದ್ದೂ ಈ ಬೆಳವಣಿಗೆಗಳು ಈ ಸಂಸ್ಥೆಗಳ ಆಂತರಿಕ ವಿಷಯವಾಗಿವೆ. ಏಕೆಂದರೆ ಇವುಗಳು ವಿಸ್ತೃತ ಮುಕ್ತ ಮಾರು ಕಟ್ಟೆಯಲ್ಲಿ ನಮ್ಮ ರಫ್ತಿಗೆ ಸ್ಪರ್ಧಾತ್ಮಕ ಬೆಲೆ ಪಡೆಯದೆ ತಮ್ಮ ಮಿತ್ರದೇಶಗಳಿಗೆ ತಮ್ಮ ಉತ್ಪಾದನೆಯನ್ನು ರವಾನಿಸುವುವು. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಈ ಕಾರ್ಯ ವಿಧಾನದ ಪ್ರಮುಖ ಅಂಶವೆಂದರೆ ವರ್ಗಾವಣೆ ಬೆಲೆ. ಸರಕುಗಳ ವರ್ಗಾವಣೆ ಬೆಲೆಯು ವಿಕಾಸಶೀಲದೇಶಗಳ ರಫ್ತು ಮೌಲ್ಯವನ್ನು ಕಡಿಮೆ ಮಾಡುತ್ತದೆ. ಈ ಸಂದರ್ಭದಲ್ಲಿ ಮತ್ತೆರಡು ಪ್ರಮುಖ ಅಂಶಗಳನ್ನು ವಿವರಿಸುವುದು ಹೆಚ್ಚು ಸಮರ್ಪಕ.

ಮೊದಲನೆಯದಾಗಿ, ವರ್ನನ್–ಲಿಂಡರ್‌ರವರ ಪ್ರಕಾರ, ಯಾವುದೇ ದೇಶದ ರಫ್ತು ಅದರ ಸರಕು ಬೆಳವಣಿಗೆಯ "ಸರಕು ಆವರ್ತ" (product cycle) ವಾಗಿರುತ್ತದೆ. ದೇಶವೊಂದರಲ್ಲಿ ಸರಕು ಏಕರೂಪತೆ ಮತ್ತು ವೈವಿಧ್ಯ ಹೆಚ್ಚಿದಂತೆ ಅದರ ಸ್ಥಳೀಯ ಮಾರುಕಟ್ಟೆ ಸಹ ವೃದ್ಧಿಗೊಂಡು ನಂತರ ಉತ್ಪಾದನೆಯು ರಫ್ತಾಗಿ ವಿಭಾಗಿಸಲ್ಪಡುವುದು. ಆದರೆ ಬಹುರಾಷ್ಟ್ರೀಯ ನಿಗಮಗಳು ತಮ್ಮ ಮಿತ್ರರಾಷ್ಟ್ರದ ರಫ್ತು-ಆಮದು ಸುಂಕದಿಂದ ಮತ್ತು ಇತರೇ ಬಗೆಯ ವಿನಿಮಯ ನಿಯಂತ್ರಣದಿಂದ ಮುಕ್ತವಾಗಲು ಇತರೇ ದೇಶಗಳಲ್ಲಿ ತಮ್ಮ ಉಪ

ಘಟಕಗಳನ್ನು ಕಟ್ಟಿವೆ. ಆದರೆ ವಾಸ್ತವಿಕವಾಗಿ ಇವುಗಳು ಹೆಚ್ಚು ಪ್ರವೇಶ ಅಪೇಕ್ಷೆಗಳಿರುವ, ಉತ್ತಮ ಮಾರುಕಟ್ಟೆ ಅಂತರರಾಷ್ಟ್ರೀಯ ಉತ್ಪಾದನೆ–ಮುಂತಾದವುಗಳಿರುವ ಕ್ಷೇತ್ರಕ್ಕೆ ಪ್ರವೇಶಿಸಿವೆ. ಈ ಕಾರಣದಿಂದಾಗಿ ಬಹುರಾಷ್ಟ್ರೀಯ ನಿಗಮಗಳ ರಫ್ತನ್ನು ಸ್ವೀಕರಿಸುವವರು ಕಟ್ಟಿ ಆಧಾರದ ಮೇಲೆ ರೂಪುಗೊಂಡ ಸರಕು ವೈವಿಧ್ಯ ಮತ್ತು ಬೆಳವಣಿಗೆ ವಿಭಜಿಸಲ್ಪಟ್ಟ ಭಾಗ ಎಂದು ಕರೆಯುವುದು ಕಷ್ಟಕರವಾಗುತ್ತದೆ.

ಉದಾಹರಣೆಯಾಗಿ, ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಅನೇಕ ಆಮದು–ರಫ್ತು ಸುಂಕ ರಿಯಾಯಿತಿಗಳಿದ್ದರೂ ಮೌಲ್ಯ–ಸೇರ್ಪಡಿಸಿದ (value-added) ಮೇಲಿನ ಸಂರಕ್ಷಣೆಯು ಪರಿಣಾಮಕಾರಿಯಾದುದಾಗಿದೆ.[11]

ಬಹುರಾಷ್ಟ್ರೀಯ ನಿಗಮಗಳು ಆತಿಥೇಯ ದೇಶಗಳಲ್ಲಿ ನಿರಂತರ ಆರ್ಥಿಕ ಶೋಷಣೆಯಲ್ಲಿ ತೊಡಗಿರುವುದೇ ಅಲ್ಲದೆ ತಮ್ಮ ಮಿತ್ರರಾಷ್ಟ್ರಗಳಿಗೆ ಕಡಿಮೆ ಉತ್ಪಾದನಾ ವೆಚ್ಚದ ಮೂಲಕ ಸರಕುಗಳನ್ನು ಉತ್ಪಾದಿಸಿ ಪೂರೈಸುತ್ತವೆ. ಅಂದರೆ ಈ ಸಂಸ್ಥೆಗಳು ತಮ್ಮ ಮಿತ್ರದೇಶಗಳ ಆರ್ಥಿಕ ಸಂಕಷ್ಟವನ್ನು ಪರಿಹರಿಸಲ್ಲ ಪರಿಣಾಮಕಾರಿ ಸಾಧನಗಳೇ ಹೊರತು ವಿಕಾಸಶೀಲ ದೇಶಗಳ ಆರ್ಥಿಕಾಭಿವೃದ್ಧಿಗೆ ಯಾವುದೇ ಕೊಡುಗೆ ನೀಡಲು ಶಕ್ತವಾಗಿಲ್ಲ.

"ದೇಶೀಯ ಉದ್ಯೋಗ, ತೆರಿಗೆ–ದೇಣಿಪಟ್ಟಿ ಮತ್ತು ಸ್ಪರ್ಧಾತ್ಮಕ ಸ್ಥಿತಿಗತಿಯ ಮೇಲೆ ಈ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ನೇರ ವಿದೇಶೀ ಹೂಟಿ ಮೂಲಕ ಉಂಟುಮಾಡುವ ದುಷ್ಪರಿಣಾಮಗಳ ಬಗ್ಗೆ ಆತಿಥೇಯ ವಿಕಾಸಶೀಲದೇಶಗಳು ತಮ್ಮ ಗಮನವನ್ನು ಹರಿಸಿವೆ" ಎಂಬುದಾಗಿ ವಿಶ್ವಸಂಸ್ಥೆಯು ನೇಮಿಸಿದ ಎಲ್. ಕೆ. ಝಾ ರವರ ನೇತೃತ್ವದ ವಿಶ್ವದ ಅಭಿವೃದ್ಧಿಯಲ್ಲಿ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಸಮಿತಿಯು ತನ್ನ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

8. ಆರ್ಥಿಕ ಶೋಷಣೆಯ ಜೊತೆಗೆ ಸಾಂಸ್ಕೃತಿಕ ಕ್ಷೇತ್ರದ ಮೇಲೆ ಬಹುರಾಷ್ಟ್ರೀಯ ನಿಗಮಗಳು ಆತಿಥೇಯ ದೇಶಗಳಲ್ಲಿ ಉಂಟುಮಾಡುವ ಪರಿಣಾಮಗಳು ಮಹತ್ವವಾದ್ದಾಗಿವೆ. ವಿಕಾಸಶೀಲದೇಶಗಳಲ್ಲಿ ಕಾರ್ಯನಿರತವಾಗಿರುವ ಬಹುರಾಷ್ಟ್ರೀಯ ನಿಗಮಗಳು ಹಿಂದಿನ ಸಾಮ್ರಾಜ್ಯಶಾಹಿ ರೀತಿಯಲ್ಲಿ ನೆಲೆನಿಂತಿರುವುದಲ್ಲದೆ ಈ ಸಮಾಜಗಳ ಮೇಲೆ ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವಬೀರಲು ತೀವ್ರ ಯತ್ನಿಸುತ್ತಿವೆ. ಈ ಸಂಸ್ಥೆಗಳು ಆತಿಥೇಯ ದೇಶದ ಕಾರ್ಮಿಕವರ್ಗಕ್ಕೆ ಹೆಚ್ಚು ವೇತನ ಮತ್ತು ಇತರೇ ಭತ್ಯೆಗಳನ್ನು ನೀಡುವುದರ ಮೂಲಕ ತಮ್ಮ ಸಂಸ್ಕೃತಿಯನ್ನು ಅನುಸರಿಸುವಂತೆ ಪ್ರೇರೇಪಿಸುವುವು. ಈ ಉಪಘಟಕಗಳ ವ್ಯವಸ್ಥಾಪಕ ವರ್ಗದ ಉನ್ನತ ಅಧಿಕಾರಿಗಳು ಅಧಿಕಾರ ಆಕಾಂಕ್ಷೆಯ ಶ್ರೀಮಂತ ವರ್ಗಕ್ಕೆ ಸೇರಿದವರಾಗಿರುತ್ತಾರೆ.

"ಒಂದು ವೇಳೆ ಬಹು ರಾಷ್ಟ್ರೀಯ ನಿಗಮಗಳು ಆತಿಥೇಯ ದೇಶಗಳಲ್ಲಿ ತಮ್ಮ ಸಾಮಾಜಿಕ ಜೀವನಶೈಲಿಯ ಮಾದರಿಯನ್ನು ಹರಡಲು ಪ್ರಯತ್ನಿಸಿದರೆ ಅಂತಹ ದೇಶಗಳ ಸಮಗ್ರ ಸಾಂಸ್ಕೃತಿಕ ಮತ್ತು ಸಾಮಾಜಿಕ ಪದ್ಧತಿಗಳ ಅವಸಾನವು ಆರಂಭಗೊಳ್ಳುವುದು"– ಎಂಬುದಾಗಿ ಎಲ್. ಕೆ. ಝಾ ಸಮಿತಿಯು ಅಭಿಪ್ರಾಯಪಡುತ್ತದೆ.

9. ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಉಪಘಟಕಗಳು ಯಾವುದಾದರೊಂದು ದೇಶದ ರಾಜಕೀಯವನ್ನು ಅಗಾಧ ಹಣಕಾಸು ನೀಡುವುದರ ಮೂಲಕ ಲಂಚಗುಳಿಯನ್ನಾಗಿ ಮಾಡುತ್ತವೆ. ಇವುಗಳು ಆತಿಥೇಯ ದೇಶಗಳ ಕಾರ್ಮಿಕ ಸಂಘಗಳ ಕಾರ್ಯಚಟುವಟಿಕೆಗಳಲ್ಲೂ ಭಾಗವಹಿಸುವುವು. ಯಾವುದೇ ರೀತಿಯ ರಾಜಕೀಯ ಮತ್ತು ಕಾನೂನು ವ್ಯವಹಾರಗಳಲ್ಲಿ ಬಹುರಾಷ್ಟ್ರೀಯ ನಿಗಮಗಳು ಸ್ವತಂತ್ರ ಸಂಸ್ಥೆಗಳು ಎಂದು ಕಂಡುಬಂದರೂ

ಅವುಗಳ ಕಾರ್ಯಚಟುವಟಿಕೆಯ ಮೇಲೆ ತೀಕ್ಷ್ಣ ಕ್ರಮಕೈಗೊಳ್ಳುವುದು ವಿಕಾಸಶೀಲ ಆತಿಥೇಯ ದೇಶಗಳಿಗೆ ತೀವ್ರತಮ ಸಮಸ್ಯೆಗಳನ್ನೊಡ್ಡುವುದು.

10. ಬಹುರಾಷ್ಟ್ರೀಯ ನಿಗಮಗಳ ಉಪಘಟಕಗಳನ್ನು ರಾಷ್ಟ್ರೀಕರಣ ಮಾಡಿದರೆ ಅಂತರ–ಸರ್ಕಾರ ಘರ್ಷಣೆಗಳು ಪ್ರಾರಂಭಗೊಳ್ಳುವುವು. ಇಂತಹ ಸಂದರ್ಭಗಳಲ್ಲಿ ಬಹುರಾಷ್ಟ್ರೀಯ ನಿಗಮಗಳು ತಮ್ಮ ಪಿತೃರಾಷ್ಟ್ರವನ್ನು ಹಸ್ತಕ್ಷೇಪ ನಡೆಸುವಂತೆ ಒತ್ತಾಯ ಉಂಟುಮಾಡುವುವು. ಈ ಪರಿಸ್ಥಿತಿಗಳಲ್ಲಿ ರಾಷ್ಟ್ರೀಯ ಸರ್ಕಾರಗಳ ನಡುವಿನ ರಾಜಕೀಯ ಸಂಬಂಧವನ್ನು ಕಾಯ್ದುಕೊಳ್ಳಲು ಮತ್ತು ಹಿತಾಸಕ್ತಿಗಳ ಘರ್ಷಣೆಯನ್ನು ತಪ್ಪಿಸಲು ಪಿತೃರಾಷ್ಟ್ರ ಮತ್ತು ಆತಿಥೇಯ ದೇಶಗಳ ಸರ್ಕಾರಗಳು ಒಮ್ಮತದ ಅಭಿಪ್ರಾಯಕ್ಕೆ ಬರಬೇಕು. ಅಥವ ಆತಿಥೇಯ ದೇಶಗಳ ರಾಷ್ಟ್ರೀಯ ಕಾನೂನು ಪರಿಹಾರ ನೀಡುವ ಸಮಸ್ಯೆಯನ್ನು ಬಗೆಹರಿಸಬೇಕು. ಈ ಸಂಸ್ಥೆಗಳನ್ನು ರಾಷ್ಟ್ರೀಕರಿಸುವುದಾದರೆ ಸೂಕ್ತ ಪರಿಹಾರನೀಡಲು ಅವಕಾಶವಿರುವ ವ್ಯವಸ್ಥೆಯೊಂದರ ನಿರೂಪಣೆ ಅಗತ್ಯ. ಇಲ್ಲದಿದ್ದಲ್ಲಿ ಪಿತೃರಾಷ್ಟ್ರ ಮತ್ತು ಆತಿಥೇಯ ದೇಶಗಳ ನಡುವಿನ ಘರ್ಷಣೆ ಅನಿವಾರ್ಯವೆನಿಸಬಹುದು.

ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯಚಟುವಟಿಕೆ ಸ್ವರೂಪದ ಪರಿವರ್ತನೆಯ ಸಾಧ್ಯಾಸಾಧ್ಯತೆ

ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಕಾರ್ಯಾಚರಣೆಯಲ್ಲಿರುವ ವಿಧಾನವನ್ನು ಕುರಿತ ಇದುವರೆಗಿನ ವಿಶ್ಲೇಷಣೆಯು ಮಾರ್ಕ್ಸಿಸ್ಟ್‌ವಾದಕ್ಕೆ ಪುರಾವೆ ನೀಡುವುದು ಎಂಬ ವಿಚಾರದಲ್ಲಿ ಸಂಶಯವಿಲ್ಲ. ಈ ಕಾರಣದಿಂದ ವಿಕಾಸಶೀಲವಾದ ಮಿಶ್ರ ಮತ್ತು ಬಂಡವಾಹಿ ಆರ್ಥಿಕತೆಗಳು ಬಹುರಾಷ್ಟ್ರೀಯ ನಿಗಮಗಳನ್ನು ತಮ್ಮ ದೇಶಗಳಿಂದ ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವೆ? ಹಾಗೂ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯಾಚರಣೆಯ ಸ್ವರೂಪವನ್ನು ಗಣನೀಯವಾಗಿ ಪರಿವರ್ತಿಸುವುದರ ಮೂಲಕ ಈ ಸಂಸ್ಥೆಗಳು ಬದಲಾಗುತ್ತಿರುವ ವಿಶ್ವದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪರಿಸರಗಳಲ್ಲಿ ಆತಿಥೇಯ ಮತ್ತು ಪಿತೃರಾಷ್ಟ್ರಗಳೆರಡರ ಅಭ್ಯುದಯವನ್ನು ಸಾಧಿಸಬಲ್ಲ ಸಮರ್ಥನೀಯ ಸಾಧನಗಳಾಗಲು ಶಕ್ಯವಿಲ್ಲವೆ? ಎಂಬ ಪ್ರಶ್ನೆಗಳಿಗೆ ಉತ್ತರನೀಡುವುದು ಕಷ್ಟಕರವಾದರೂ ಸಾಧ್ಯ.

ಎರಡನೆಯ ಪ್ರಶ್ನೆಯು ಬಹುರಾಷ್ಟ್ರೀಯ ನಿಗಮಗಳ ಬಗ್ಗೆ ಆಸೆಯ ಕಿರಣವೊಂದನ್ನು ಹುಟ್ಟಿಸುತ್ತದೆ. ಈಗಾಗಲೇ ಆತಿಥೇಯ ದೇಶಗಳ ಆರ್ಥಿಕತೆಯಲ್ಲಿ ಆಳವಾಗಿ ಬೇರೂರಿರುವ ಬಹುರಾಷ್ಟ್ರೀಯ ನಿಗಮಗಳನ್ನು ಅನೇಕ ರಾಜಕೀಯ ಮತ್ತು ಆರ್ಥಿಕ ಹಾಗೂ ಹಿತಾಸಕ್ತಿಗಳ ಘರ್ಷಣಾತ್ಮಕ ಕಾರಣಗಳಿಗಾಗಿ ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಿಲ್ಲ. ಆದುದರಿಂದ ಆತಿಥೇಯ ವಿಕಾಸಶೀಲದೇಶಗಳು ಪ್ರಸ್ತುತ ಪರಿಸರದ ಬಗ್ಗೆ ಗಮನವಹಿಸಿ ಈ ಸಂಸ್ಥೆಗಳು ತಮ್ಮ ಆರ್ಥಿಕ ಅಭ್ಯುದಯದಲ್ಲಿ ಪಾಲ್ಗೊಳ್ಳುವಂತೆ ಮಾಡಲು ಸಮರ್ಪಕವಾದ ಆರ್ಥಿಕ ನೀತಿಯೊಂದನ್ನು ರೂಪಿಸುವುದು ಅಗತ್ಯ ಹಾಗೂ ಈ ದಿಸೆಯಲ್ಲಿ ಪಿತೃರಾಷ್ಟ್ರಗಳು ಮತ್ತು ಬಹುರಾಷ್ಟ್ರೀಯ ನಿಗಮಗಳ ಮಾಲೀಕವರ್ಗವು ಉದಾರವಾದ ಮನೋಭಾವ ತಳೆಯುವುದು ಅವಶ್ಯ. ಅಂದರೆ ಬಹುರಾಷ್ಟ್ರೀಯ ನಿಗಮಗಳು ತಮ್ಮ ಶೋಷಣೆ ಮನೋಭಾವವನ್ನು ತ್ಯಜಿಸಿ, ಆತಿಥೇಯ ದೇಶಗಳ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಬೆಳವಣಿಗೆ ಮತ್ತು ಸ್ಥಿರತೆಗೆ ಕಾಣಿಕೆ ನೀಡುವಂತೆ ತಮ್ಮ ಕಾರ್ಯ ವಿಧಾನವನ್ನು ಪರಿವರ್ತಿಸಿಕೊಳ್ಳುವುದು ತೀರಾ ಅನಿವಾರ್ಯ.

ವಿಕಾಸಶೀಲ ದೇಶಗಳಲ್ಲಿ ನೈಜಸ್ಪರ್ಧಾತ್ಮಕ ಮಾರುಕಟ್ಟೆ ಬೆಳವಣಿಗೆ, ಸ್ಥಳೀಯರಿಗೆ ಉನ್ನತ ವ್ಯವಸ್ಥಾಪಕವರ್ಗದ ಜವಾಬ್ದಾರಿ ವಹಿಸುವಿಕೆ, ಈ ದೇಶಗಳಿಗೆ ಸೂಕ್ತವೆನಿಸುವ ತಂತ್ರ

ಜ್ಞಾನ ಪೂರೈಕೆ, ತಮ್ಮ ಸರಕುಗಳಿಗೆ ವಿಶ್ವ ಮಾರುಕಟ್ಟೆಯಲ್ಲಿ ನ್ಯಾಯ ಸಮ್ಮತ ಬೆಲೆ ಪಡೆಯುವಿಕೆ ಮುಂತಾದ ಅಂಶಗಳಿಗೆ ಸಂಬಂಧಿಸಿದಂತೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ತಮ್ಮ ನೀತಿಯನ್ನು ಪುನರ್ವಿಮರ್ಶಿಸುವುದು ಅವಶ್ಯ.

ಈ ಬಹುರಾಷ್ಟ್ರೀಯ ನಿಗಮಗಳು ಕೈಗಾರಿಕಾ ಮತ್ತು ಸಾಮಾಜಿಕ ಬದಲಾವಣೆ ತರಬಲ್ಲ ನವೀನ ಸಂಸ್ಥೆಗಳಾಗಿವೆ. ಆದರೆ ಇವುಗಳು ಇಂದಿನ ವಿಶ್ವದ ಆರ್ಥಿಕತೆಯ "ಸಹಜತೆ ಮತ್ತು ಅಗತ್ಯಗಳನ್ನು" ಅರಿತುಕೊಂಡು ಅದಕ್ಕೆ ಹೊಂದಿಕೊಳ್ಳಬೇಕಾದರೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಅಲ್ಲದೆ ಇಂದಿನ ವಿಶ್ವದ ಪ್ರತಿಯೊಂದು ರಾಷ್ಟ್ರವೂ ತನ್ನದೇ ಆದ ರಾಜಕೀಯ ವ್ಯವಸ್ಥೆ ರೂಪಿಸಿಕೊಂಡಿದೆ.

ಆದರೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಮುಂದಗತಿಯಲ್ಲಿ ಜಾಗತಿಕ ಸ್ವರೂಪ ಪಡೆಯುತ್ತಿವೆ. ಆದರೆ ಇಂದು ಈ ಸಂಸ್ಥೆಗಳು ಪಡೆದಿರುವ ಜಾಗತಿಕ ಸ್ವರೂಪ ವಿಕಾಸಶೀಲ ದೇಶಗಳಿಗೆ ಅನುಕೂಲಕರವಲ್ಲ ಎಂಬುದು ಸರ್ವವೇದ್ಯವಾದುದಾಗಿದೆ. ಇಂದು ಈ ಸಂಸ್ಥೆಗಳು ಅಭಿವೃದ್ಧಿಹೊಂದಿದ ದೇಶಗಳ ಬಂಡವಾಳಶಾಹಿ ವರ್ಗದ ಕೇವಲ 'ಸ್ವಹಿತ' ಸಾಧನಗಳಾಗಿವೆ. ಈ ಸಂಸ್ಥೆಗಳ ಕಾರ್ಯಪ್ರವೃತ್ತಿಯು ಹೀಗೆಯೇ ಮುಂದುವರೆದರೆ ಅವುಗಳ ಭವಿಷ್ಯವು ಮಾರಕವಾಗುವುದಲ್ಲದೆ, ದೀರ್ಘಕಾಲೀನ ವ್ಯವಸ್ಥೆಯಾಗಿ ಉಳಿಯುವುದು ಕಷ್ಟಸಾಧ್ಯ. ಏಕೆಂದರೆ ಈ ಸಂಸ್ಥೆಗಳು ಅಭಿವೃದ್ಧಿಹೊಂದಿದ ಆರ್ಥಿಕತೆಯಲ್ಲಿನ ಅತ್ಯಧಿಕ ಉತ್ಪಾದನಾವೆಚ್ಚ, ಕಾರ್ಮಿಕ ಬವಣೆ, ಇಳಿಮುಖವಾಗಿರುವ ಬಂಡವಾಳದ ಮೇಲಿನ ನಿವ್ವಳ ಪ್ರತಿಫಲ, ಅನಾಯಾಸವಾಗಿ ಸಂಚಯಗೊಂಡ ಅಗಾಧ ಬಂಡವಾಳ ಮತ್ತು ಸಂಪನ್ಮೂಲ ಉದ್ಯೋಗ ಮಟ್ಟ ಕಾಪಾಡುವಿಕೆ–ಮುಂತಾದ ಕಾರಣಗಳಿಂದ ಈಗ ವಿಕಾಸಶೀಲ ದೇಶಗಳಲ್ಲಿ ಆಶ್ರಯ ಪಡೆಯಲು ಯತ್ನಿಸುತ್ತಿವೆ. ಆದ್ದರಿಂದ ಈ ಶತಮಾನದ ಕೊನೆಯ ಭಾಗಕ್ಕೆ ಅಭಿವೃದ್ಧಿಹೊಂದಿದ ರಾಷ್ಟ್ರಗಳು ತಮ್ಮ ಕೈಗಾರಿಕಾ ಸಾಧನಗಳನ್ನು ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಗಾಗಿ ವಿಕಾಸಶೀಲ ದೇಶಗಳಿಗೆ ವರ್ಗಾಯಿಸಬೇಕಾಗುವುದು ಎಂಬುದಾಗಿ ಡ್ರೈಬೋಲ್ಡ್ ಎಂಬ ಅರ್ಥವಿಜ್ಞಾನಿಯು ಅಭಿಪ್ರಾಯಪಟ್ಟಿರುವುದು ಸಮಂಜಸವಾಗಿದೆ.

ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಕಾರ್ಯಚಟುವಟಿಕೆಗಳನ್ನು ಪರಾಮರ್ಶಿಸಿ ಸೂಕ್ತ ನಿರ್ಣಯ ಕೈಗೊಂಡು, ಅವನ್ನು ಆಚರಣೆಗೆ ತರಬಲ್ಲ ಸಾಮರ್ಥ್ಯವಿರುವ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯೊಂದರ ರಚನೆ ತೀರಾ ಅನಿವಾರ್ಯವಾಗಿದೆ ಎಂದು ಎಲ್. ಕೆ. ಝಾ ಸಮಿತಿ ತನ್ನ ವರದಿಯಲ್ಲಿ ಹೇಳಿರುವುದು ಹೆಚ್ಚು ಔಚಿತ್ಯಪೂರ್ಣವಾದುದಾಗಿದೆ. ಈ ಸಂಸ್ಥೆಯು ಬಹುರಾಷ್ಟ್ರೀಯ ನಿಗಮಗಳ ಕಾರ್ಯಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪಿತೃರಾಷ್ಟ್ರ ಮತ್ತು ವಿಕಾಸಶೀಲ ದೇಶಗಳೆರಡರ ಹಿತಾಸಕ್ತಿಗಳನ್ನೂ ಸಮತೋಲಗೊಳಿಸುವ ಕೆಲಸ ನಿರ್ವಹಿಸಬೇಕು. ಎಲ್. ಕೆ. ಝಾ ಸಮಿತಿಯು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಅಧೀನಕ್ಕೊಳಪಟ್ಟಂತೆ ಪೂರ್ಣಾವಧಿಯ ಸಂಸ್ಥೆಯೊಂದರ ರಚನೆಗೆ ಸಲಹೆಮಾಡಿದೆ. ಇಂತಹ ಸಂಸ್ಥೆಯು ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳ ಚಟುವಟಿಕೆಗಳ ನಿಯಂತ್ರಣ ಮತ್ತು ಸೂಕ್ತ ಮಾರ್ಗದರ್ಶನ ಹಾಗೂ ನಿರ್ದೇಶನದ ಮೂಲಕ ಅವುಗಳು ವಿಶ್ವ ಆರ್ಥಿಕಾಭಿವೃದ್ಧಿಯಲ್ಲಿ ಸಕ್ರಿಯ ಪಾತ್ರವಹಿಸುವಂತೆ ಮಾಡಬೇಕು ಎಂದು ಝಾ ಸಮಿತಿ ಹೇಳಿದೆ.

ಒಟ್ಟಿನಲ್ಲಿ ವಿಕಾಸಶೀಲ ದೇಶಗಳ ಆರ್ಥಿಕ ವಿಕಸನಕ್ಕೆ ಪೂರಕವಾಗಿ, ಆ ದೇಶಗಳ ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಾಟಸ್ಥ್ಯವಹಿಸಿದರೆ ಬಹುರಾಷ್ಟ್ರೀಯ ನಿಗಮಗಳಿಗೆ ಭವಿಷ್ಯವಿದೆ. ಹಾಗೂ ವಿಶ್ವದ–ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಕ್ರಮಣ ಕ್ರಿಯೆಯಲ್ಲಿ ಸಕ್ರಿಯ ಪಾತ್ರವಹಿಸಿದರೆ ಬಹುರಾಷ್ಟ್ರೀಯ ಉತ್ಪಾದನಾ ನಿಗಮಗಳು ಅಂತರರಾಷ್ಟ್ರೀಯ ಆರ್ಥಿಕತೆಯಲ್ಲೊಂದು ವಿಶಿಷ್ಟ ಸ್ಥಾನ ಪಡೆದು ದೀರ್ಘಕಾಲೀನ ಅಂಶವಾಗಿ ಉಳಿದುಕೊಳ್ಳುವುವು.

ಅಡಿ ಟಿಪ್ಪಣಿಗಳು

* ಈ ಲೇಖನದ ರಚನೆಗೆ ಅನೇಕ ಉಪಯುಕ್ತ ಸಲಹೆಗಳನ್ನಿತ್ತು ಪ್ರೋತ್ಸಾಹಿಸಿದ ನನ್ನ ವಿದ್ಯಾಗುರುಗಳಾದ ಪ್ರೊಫೆಸರ್ ಎಂ ಮಾದಯ್ಯ ಎಂ. ಎ. ಪಿ. ಹೆಚ್. ಡಿ., (ಸಿ. ಇಲಿನಾಯ್ಸ್), ಮುಖ್ಯಸ್ಥರು, ಅರ್ಥಶಾಸ್ತ್ರವಿಭಾಗ, ಮಾನಸಗಂಗೋತ್ರಿ, ಮೈಸೂರು, ಹಾಗೂ ಡಾ॥ ಬಿ. ಎಸ್. ಶ್ರೀಕಂಠಾರಾಧ್ಯ ಎಂ ಎ., ಪಿ.ಹೆಚ್.ಡಿ., ಉಪನ್ಯಾಸಕರು, ಅರ್ಥ ಶಾಸ್ತ್ರವಿಭಾಗ, ಮಾನಸಗಂಗೋತ್ರಿ, ಮೈಸೂರು—ಇವರಿಗೆ ಈ ಲೇಖಕನು ಚಿರಋಣಿಯಾಗಿದ್ದಾನೆ.

1. Dale R. Weigel : Multinational Approach to Multinational Corporations ; Finance & Developement, Vol. 11 No. 3 : Washington D. C., September 1974.

2. Quoted by S. S. Kanoria : Role of Multi-Nationals in Asian Development, *Eastern Economist*, Vol. 63, No. 16, New Delhi, October 18, 1974

3. L. K. Jha : *Report of the Committee on Multi-National Corporations in World Development*, United Nations, 1973.

4. Prof. G. C. Hufbauer: Multinational Corporations and Future National Adjustment Process: *American Economic Review*, May 1974

5. Prof. Harry Magdoff and Paul Sweezy : K. T. Tanns Donald C. Hodges (Ed.) ; *Readings in U. S. Imperialism*, Note on the Multinational Corporations.

6. Vikraman Nair and S. R. Kasbekar ; Multinationals, *The Economic Times ; Annual 1975;* Bombay. pp. 130.

7. " Surveys of Foreign Financial and Technical Collaboration in Indian Industry 1964-70—Main Findings ", *R. B. I. Bulletin*, June 1974.

8. S. R. Mohandas: Trade Unions Let Down! *Industrial Times*, Vol. XVIII, No. 18. Bombay, August 30, 1976, pp. 16.

9. G. D. Sane: Imposing Alien Industrial Relations Practices; The Relevance of Multi-Nationals, *Industrial Times*, Vol. XVIII No. 18; Bombay; August 30, 1976, pp. 15.

10. Ibid.

11. S. Venu: Developing Countries Exports Earnings Devalued-The Relevance of Multi-Nationals, *Industrial Times*, Vol. XVIII. No. 18, Bombay, August 30, 1976, pp. 11-12.

ಎಸ್. ವೇಣುಗೋಪಾಲಾಚಾರ್ಯ

ಅಮೆರಿಕದ ಪ್ರಾಚೀನ ಹಿಂದೂ ಸಾಮ್ರಾಜ್ಯಗಳಲ್ಲಿನ ವೈಷ್ಣವ ಭಕ್ತಿ

ಮಧ್ಯ ಹಾಗೂ ದಕ್ಷಿಣ ಅಮೆರಿಕದಲ್ಲಿ ನೂರಾರು ಪಾಳು ಬಿದ್ದಿರುವ ಗುಡಿ ಗೋಪುರಗಳಲ್ಲಿ ಅಮರಾವತಿಯ ಶಿಲ್ಪದ ಪ್ರತಿಕೃತಿಗಳೂ ಹಿಂದೂ ವಿಗ್ರಹಗಳೂ ಕಲಾಕೃತಿಗಳೂ ಸಿಕ್ಕುತ್ತಿದ್ದು ಅವುಗಳಲ್ಲಿನ ಅನೇಕ ಅವಶೇಷಗಳು ಅಮೆರಿಕದ ವಸ್ತು ಸಂಗ್ರಹಾಲಯಗಳಲ್ಲಿ ಸಂರಕ್ಷಿತವಾಗಿವೆ. ಮೆಕ್ಸಿಕೋವಿನ ಬೃಹತ್ ಶಿವಾಲಯ, ಸರ್ಪ ಮಂದಿರ, ತಾಜಿನ್ ಗೋಪುರ ಮತ್ತು ಬೊಲೀವಿಯಾದ ಸೂರ್ಯಮಂದಿರದ ಮಹಾದ್ವಾರವೂ ಈಗ ಚರ್ಚ್ ಆಗಿ ಬಳಸಲ್ಪಡುತ್ತಿರುವ ಕುಜ್ಕೊ ನಗರದ ಸೂರ್ಯ ಮಂದಿರವೂ ಪ್ರಾಚೀನ ಅಮೆರಿಕದ ಹಿಂದುಗಳ ಶಿಲ್ಪಶಾಸ್ತ್ರ ನೈಪುಣ್ಯವನ್ನು ಮೆರೆಯುವಾಗಿವೆ. ಗ್ವಾತೆಮಾಲಯ (Guatemala)ದ ಕೂರ್ಮಾವತಾರದ ವಿಗ್ರಹ, ಕೋಪಾನ (Copan) ನಗರದ ನರಸಿಂಹಮೂರ್ತಿ, ಪಲಂಕೆಯ (Palanque) ಹಿಂದೂ ಕಲ್ಪವೃಕ್ಷ, ಇತರ ಗುಡಿಗಳಿಂದ ಸಂಗ್ರಹಿತವಾದ ಪವಡಿಸಿರುವ ನಾರಾಯಣನ ನಾಭಿ ಕಮಲದಿಂದ ಉದ್ಭವಿಸಿದ ಬ್ರಹ್ಮ, ಸೂರ್ಯ, ಪೆರುವಿನ ಗಣಪತಿಯು ತನ್ನ ವಾಹನವಾದ ಮೂಷಕದೊಡನೆ ನಿಂತು ಜಟಾಧಾರಿಯಾದ ಸರ್ಪಮಂಡಿತ ಶಿವನಿಂದ ವರಪಡೆಯುತ್ತಿರುವ ಕಲಾಕೃತಿ, ವಿವಿಧ ಭಂಗಿಗಳಲ್ಲಿ ತಾಂಡವವಾಡುವ ಶಿವನ ವಿಗ್ರಹಗಳು, ಗಂಗೆ, ಜಟೆ ಮತ್ತು ರುದ್ರಾಕ್ಷಿ ಧರಿಸಿ ತಪಸ್ಸನ್ನು ಆಚರಿಸುತ್ತಿರುವ ಶಿವನ ಲೇಪ ಚಿತ್ರ, ಶಂಖ ಕೊಳಲು ವಾದ್ಯಗಳೊಡನೆ ದೀಪಾರಾಧನೆ ನಡೆಯುತ್ತಿರುವ ಸೂರ್ಯಮಂಗಲ ಇತ್ಯಾದಿ ಕಲಾಕೃತಿಗಳು ಪ್ರಾಚೀನ ಅಮೆರಿಕದ ಹಿಂದೂ ಸಂಸ್ಕೃತಿಯ ವೈಭವವನ್ನು ಎತ್ತಿ ತೋರಿಸುತ್ತಿವೆ. ಮೆಕ್ಸಿಕನ್ ನ್ಯಾಷನಲ್ ಮ್ಯೂಸಿಯಂನಲ್ಲಿರುವ "ವಾಮನ ಇನ್ ಮೆಕ್ಸಿಕೊ" ಎಂಬ ಶಿಲಾಕೃತಿಯ ಕೆಳಗೆ ಕನ್ನಡ (ತೆಲುಗು) ಲಿಪಿಯಲ್ಲಿ ಸ್ಪಷ್ಟವಾಗಿ ದೊಡ್ಡ ಅಕ್ಷರಗಳಲ್ಲಿ ಕೆತ್ತಿರುವ "ಬಲೀಂದ್ರ" ಮತ್ತು ಪೆರುವಿನ ಮೊದಲನೆಯ ಚಕ್ರವರ್ತಿ ಆರ್ಯ ಮಾನವ ತಪನ ರಾಜಸಭೆಯ ವಿಗ್ರಹದ ಕೆಳಗಿರುವ ಕನ್ನಡದ ಅಕ್ಷರಗಳಿಂದ ಮೇಲ್ಕಂಡ ಗುಡಿಗೋಪುರಗಳೂ ವಿಗ್ರಹಗಳೂ, ಪ್ರಾಚೀನ ಅಮೆರಿಕದ ಹಿಂದೂ ಸಾಮ್ರಾಟರಿಂದ ನಿರ್ಮಿಸಲ್ಪಟ್ಟ ಕೃತಿಗಳೇ ಎಂಬುದು ಈಗ ನಿರ್ವಿವಾದವಾಗಿದೆ.[1]

ಕೊಲಂಬಸ್ 1492ರಲ್ಲಿ ಇಸವಿಯಲ್ಲಿ ಅಮೆರಿಕ ಖಂಡವನ್ನು ಮೊಟ್ಟ ಮೊದಲು ಕಂಡು ಹಿಡಿದನೆಂದು ನಮ್ಮ ಚರಿತ್ರೆಗಳೆಲ್ಲಾ ಸಾರುತ್ತಿವೆ. ಅದಕ್ಕೆ ನೂರಾರು ವರ್ಷಗಳ ಹಿಂದಿನಿಂದ ಹಿಂದೂ ಸಾಮ್ರಾಟರೂ ಅಮೆರಿಕದಲ್ಲಿ ಸಂಪದ್ಭರಿತವೂ ವೈಭವಪೂರ್ಣವೂ ಆದ ಸಾಮ್ರಾಜ್ಯಗಳನ್ನು ಆಳುತ್ತಿದ್ದರೆಂದರೆ ಸೋಜಿಗವಾಗಿ ಕಾಣಿಸಬಹುದು. ಸ್ಪೈನಿನ ಕಡಲುಗಳ್ಳರು ಹದಿನಾರನೆಯ ಶತಮಾನದಲ್ಲಿ ಅಮೆರಿಕಕ್ಕೆ ಕಾಲಿಟ್ಟಾಗ ಆಸ್ಟೆಕ (Astec) ರಾಜ ಚಕ್ರವರ್ತಿಗಳು ಮೆಕ್ಸಿಕೋವಿನಲ್ಲೂ, ಸೂರ್ಯವಂಶದ ಇಂಗಕ ಚಕ್ರವರ್ತಿಗಳು (Inca / Inga) ಪೆರು (ಸೂರ್ಯದೇಶ), ಬಿಲ್ಲಾ ಮಧ್ಯ ಮತ್ತು ದಕ್ಷಿಣ ಅಮೆರಿಕದ ಬಹುಭಾಗದಲ್ಲಿ

ರಾಮರಾಜ್ಯಗಳನ್ನೇ ನಿರ್ಮಿಸಿದ್ದರು. ಪೆರು ಸಾಮ್ರಾಜ್ಯವು ಈಕ್ವೆಡಾರ್‌ನಿಂದ ದಕ್ಷಿಣ ಚಿಲಿಯ ವರೆಗೆ ಮೂರು ಸಾವಿರ ಮೈಲಿ ಉದ್ದ ಮತ್ತು ಪೆಸಿಫಿಕ್‌ನಿಂದ ಅಟ್ಲಾಂಟಿಕ್ ಸಾಗರದವರೆಗೆ ಹನ್ನೆರಡು ಲಕ್ಷ ಚದರ ಮೈಲಿ ವಿಸ್ತೃತವಾಗಿ ಎರಡು ಕೋಟಿ ಪ್ರಜೆಗಳನ್ನು ಸಂರಕ್ಷಿಸುತ್ತಿತ್ತು. ಸ್ಪೇನಿನ ಪಿಜರ್ರೋ (Pizarro) ಮತ್ತು ಆತನ ಅನುಯಾಯಿಗಳಾದ ನಾಲ್ಕು ನೂರು ಕಡಲ್ಗಳ್ಳರನ್ನು ಪೆರುವಿನ ಸಾಮ್ರಾಟನಾದ ಅತ್ಯಾಲ್ಪ (Atahuallpa) ಸ್ವಾಗತಿಸಿ ಆಶ್ರಯ ಕೊಟ್ಟಿದ್ದನು. ಸಾಮ್ರಾಟನನ್ನು ಆತನ ರಾಣಿಯನ್ನು ಔತಣಕ್ಕೆಂದು ಕರೆದು ಆ ಕಡಲ್ಗಳ್ಳರು ಸ್ಪೇನಿನ ಸಾರ್ವಭೌಮತ್ವ ಮತ್ತು ಕ್ರೈಸ್ತ ಧರ್ಮವನ್ನು ಸ್ವೀಕರಿಸದ ಆರೋಪಕ್ಕಾಗಿ ಅವರನ್ನು ಕಗ್ಗೊಲೆ ಮಾಡಿ ಅರಾಜಕವಾದ ಪೆರುಸಾಮ್ರಾಜ್ಯವನ್ನು ದರೋಡೆ, ಲೂಟಿ ಮತ್ತು ಅತ್ಯಾಚಾರಗಳಿಂದ ನಿರ್ನಾಮ ಮಾಡಿದರು. ಅನಂತರ ಸ್ಪೇನಿನ ವಲಸೆಗಾರರ ಮೋಸ ಮತ್ತು ಕಪಟ ಚಟುವಟಿಕೆಗಳಿಂದ ಮೆಕ್ಸಿಕೋ ಸಾಮ್ರಾಜ್ಯವು ಹೆಸರಿಲ್ಲದಂತಾಯಿತು. ಅಲ್ಲಿಯ ನಿವಾಸಿಗಳನ್ನು ತಮ್ಮ ಗುಲಾಮರನ್ನಾಗಿ ಮಾಡಿ ಅವರ ಐಶ್ವರ್ಯವನ್ನೆಲ್ಲಾ ಸುಲಿಗೆ ಮಾಡಿ ಅವರನ್ನು ತಮ್ಮ ಪ್ರಾಚೀನ ಸಂಸ್ಕೃತಿಗಳನ್ನು ತೊರೆದು ಕ್ರೈಸ್ತಧರ್ಮಕ್ಕೆ ಪರಿವರ್ತಿತಗೊಳಿಸುವುದೇ ಮುಂದಿನ ನೂರಾರು ವರುಷದ ಅಮೆರಿಕದ ಇತಿಹಾಸವಾಯಿತು. ದೇಶೀಯರ ಸಾಹಿತ್ಯ ಗ್ರಂಥಗಳನ್ನು ಹುಡುಕಿ ಹುಡುಕಿ ಸುಡುವುದು, ವಿಗ್ರಹಗಳನ್ನು ಒಡೆದು ದೇವಾಲಯಗಳು, ಸಮಾಧಿಗಳು ಮತ್ತು ಮನೆ ಮಠಗಳಲ್ಲಿ ತುಂಬಿದ ಬಂಗಾರ ಬೆಳ್ಳಿ ಕಲಾಕೃತಿಗಳು ಮತ್ತಿತರ ಬೆಲೆಬಾಳುವ ಸಾಮಾನುಗಳನ್ನು ಹೆಕ್ಕಿ ಹೆಕ್ಕಿ ತಮ್ಮ ದೇಶಗಳಿಗೆ ಸಾಗಿಸುವುದೇ ಯೂರೋಪಿಯನ್ ಉಪನಿವೇಶಕರ ಭವ್ಯ ಉದ್ಯಮವಾಗಿತ್ತು. 1576ರಲ್ಲಿ ತ್ರಸಿಲ್ಲೋ (Tras lla) ಎಂಬ ರಾಜ ಸಮಾಧಿಯೊಂದರಿಂದಲೇ ಹತ್ತು ಲಕ್ಷ ಡಾಲರ್‌ನಷ್ಟು ಬೆಲೆಯುಳ್ಳ ಚಿನ್ನವನ್ನು ಹೊರತೆಗೆದನಂತೆ. ಕುಜ್ಕೋ ನಗರದ ಸೂರ್ಯಮಂದಿರದ ಗೋಡೆಗಳಿಗೆ ಚಿನ್ನದ ತಗಡು ಹೊದಿಸಲ್ಪಟ್ಟು ಅದರ ಸುತ್ತಲೂ ಚಿನ್ನ ಬೆಳ್ಳಿಗಳ ಗಿಡ ಬಳ್ಳಿಗಳಲ್ಲಿ ರತ್ನ ವೈಢೂರ್ಯ ಖಚಿತ ಪಕ್ಷಿಗಳು, ಜಲದ ಬುಗ್ಗೆಗಳು ಶೃಂಗರಿಸಲಾಗಿತ್ತಂತೆ. ಸೂರ್ಯ ದೇವಾಲಯದೊಳಗೆ ಈಗ ಕ್ರೈಸ್ತ ವೇದಿಕೆ ಇರುವ ಸ್ಥಳದಲ್ಲಿ ಕಣ್ಣುಗಳನ್ನು ಕುಕ್ಕುವಂತೆ ಜಾಜ್ವಲ್ಯಮಾನವಾದ ಚಿನ್ನದ ವಿವಿಧ ಮಣಿ ಮುದ್ರಿತವಾದ ವಿಶಾಲವಾದ ಸೂರ್ಯಮಂಡಲ ಮತ್ತು ಬೆಳ್ಳಿಯ ಚಂದ್ರ ಮಂಡಲ, ಅವುಗಳ ಸುತ್ತಲೂ ರತ್ನ ವೈಢೂರ್ಯಗಳ ನಕ್ಷತ್ರ ಮಾಲೆ. ಕೆಳಗೆ ಪೆರು ಸಾಮ್ರಾಜ್ಯದ ಹನ್ನೆರಡು ಸಾಮ್ರಾಟರ ಹಾಗೂ ಅವರ ರಾಣಿಯರ ಚಿನ್ನದ ಮೂರು ನಾಲ್ಕಡಿ ವಿಗ್ರಹಗಳು ತಮ್ಮ ಸ್ವಾಭಾವಿಕವಾದ ವಸ್ತ್ರಾಭರಣ, ಶಸ್ತ್ರಾಸ್ತ್ರ ಸಜ್ಜಿತವಾಗಿರುವಂತೆ ರಚಿತವಾಗಿ ಸ್ವಪ್ನಲೋಕದಂತಿತ್ತೆಂದೂ ನೂರಾರು ದೇವಾಲಯಗಳಲ್ಲಿ ಗೋಪುರಗಳ ಮೇಲೆ ಜನವೂ ಪ್ರತಿ ದಿನವೂ ಹಗಲು ನಾಲ್ಕು ಮತ್ತು ರಾತ್ರಿ ಮೂರು ಸಲ ಪುಷ್ಪಧೂಪ ದೀಪಾರತಿ ನೈವೇದ್ಯಗಳೊಡನೆ ಪೂಜೆಗಳು ನಡೆಯುತ್ತಿದ್ದವೆಂದು ಹ್ಯಾಟ್ ವೆರಿಲ್ಲನ ಓಲ್ಡ್ ಸಿವಿಲಿಸೇಷನ್ಸ್ ಆಫ್ ದಿ ನ್ಯೂ ವರ್ಲ್ಡ್‌ನಲ್ಲೂ ಇತರ ಪಾಶ್ಚಾತ್ಯ ಗ್ರಂಥಗಳಲ್ಲಿಯೂ ವಿವರಿಸಿರುವಂತೆ ಪ್ರಾಚೀನ ಹಿಂದೂ ಸಾಮ್ರಾಜ್ಯಗಳ ವೈಭವವೂ ಅವುಗಳ ವಿನಾಶವಾದ ರೀತಿಯೂ ಸುಸ್ಪಷ್ಟವಾಗುವುದು. ಪ್ಯಾರಿಸ್, ಮೆಡ್ರಿಡ್ ಮತ್ತು ಡ್ರೆಸ್ಡೆನ್ ಪುಸ್ತಕಾಲಯಗಳಲ್ಲಿ ಇರುವ ಕೇವಲ ಮೂರು ಪುಸ್ತಕಗಳು, ಮೆಕ್ಸಿಕೋವಿನ ವಾಮನಾವತಾರ ಶಿಲ್ಪದಲ್ಲೂ ಗೌತಮಾಲಯದ ರಾಜಸಭೆಯ ಶಿಲ್ಪ ಚಿತ್ರದಲ್ಲಿಯೂ ಕೆತ್ತಿರುವ ಕನ್ನಡ ಒಕ್ಕಣೆಗಳನ್ನು ಬಿಟ್ಟರೆ ಪ್ರಾಚೀನ ಹಿಂದೂ ಸಾಹಿತ್ಯ ಯಾವುದೂ ಉಳಿದಿಲ್ಲ. ಪೆರುವಿನ ಅಂಗರಾಜರು ತಾವು ಸೂರ್ಯವಂಶದ ಕೌಸಲ್ಯಾ ಪುತ್ರ ರಾಮನ ವಂಶದವರೆಂದು ಹೆಮ್ಮೆಗೊಳ್ಳುತ್ತಿದ್ದರೆಂದು ಎಲ್ಲಕ್ಕಿಂತ ಮುಖ್ಯವಾಗಿ ರಾಮೋತ್ಸವವನ್ನು (Ramotsava) ವಿಜೃಂಭಣೆಯಿಂದ ಆಚರಿಸುತ್ತಿದ್ದರೆಂದೂ ಸೂರ್ಯದೇವ, ರಾಜ ಮನೆತನ ಮತ್ತು ಅರ್ಚಕರ ಆಕ್ಷೇಪಣೆ ಮಾಡಿದವರಿಗೆ ಮರಣದಂಡನೆ ವಿಧಿಸುತ್ತಿದ್ದರೆಂದೂ ಈಗಲೂ ದಕ್ಷಿಣ ಅಮೆರಿಕದಲ್ಲಿ ಕೆಲವು ಜನ ಸಮುದಾಯಗಳು ಆಚರಿಸುತ್ತಿರುವರೆಂದೂ ತಿಳಿದು ಬರುತ್ತದೆ. ವೈವಿಧ್ಯದಲ್ಲಿ ಏಕತೆಯನ್ನು ಸಾರುವ ಭಾರತೀಯ ಸಂಸ್ಕೃತಿಗೆ

ಆಧಾರವಾದ ವೈಷ್ಣವ ಭಕ್ತಿಯ ಪ್ರಭಾವದಿಂದಲೇ ಪ್ರಾಚೀನ ಅಮೆರಿಕದಲ್ಲೂ, ಶೈವ, ಶಾಕ್ತ, ಬೌದ್ಧ ಮತ್ತು ವೈಷ್ಣವ ಪಂಥೀಯರು ಸಹಕಾರ ಸಹಿಷ್ಣುತೆಯ ಜೀವನ ನಡೆಸುತ್ತಿದ್ದರು. ಯಾರಾದರೂ ಹೊಸದಾಗಿ ಭೇಟಿಯಾದಾಗ ನಮಸ್ಕರಿಸುವಾಗ ಸುಳ್ಳು ಹೇಳಬೇಡ, ಕಳಬೇಡ, ಸೋಮಾರಿಯಾಗಿರಬೇಡ ಎನ್ನುವುದು ಅವರು ಪರಸ್ಪರ ವಿನಿಮಯ ಮಾಡಿಕೊಳ್ಳುವ ಶಬ್ದ ಸಮೂಹಗಳಾಗಿದ್ದವು. ಡಾ. ರಾಬರ್ಟ್ ಹೈನ್ ಗಿಲ್ಡರ್‌ರವರು ಅಂಗಕರಾಜರ ಮೂಲ ಪುರುಷರು ಪೆಸಿಫಿಕ್ ಸಾಗರದಲ್ಲಿರುವ ದ್ವೀಪಗಳನ್ನು ಹಾದು ಅಮೆರಿಕಕ್ಕೆ ಕ್ರಿ. ಶ. ಎರಡು ಅಥವಾ ಮೂರನೆ ಶತಕದಲ್ಲಿ ಬಂದರೆಂದು ಅಭಿಪ್ರಾಯ ಪಡುತ್ತಾರೆ. ಅವರ ಭಾಷೆ ಕೇಶವ (Quichua) ಸಂಸ್ಕೃತಮಯವಾಗಿತ್ತು, ದೇವತೆಗಳಿಗೆ ತೇವತಲ್ (Teotl) ದೇವಾಲಯಗಳಿಗೆ ತೇವಶಾಲೈ (Teocalli), ಚಿಕ್ಕ ಪಾಠಶಾಲೆಗಳಿಗೆ ಶಾಲಪಲ್ಲಿ (Calpalli) ದೊಡ್ಡ ಶಾಲೆಗಳಿಗೆ ಶಾಲಾಮಠ (Calmacac), ವಿಷ್ಣು ಮತ್ತು ಇಂದ್ರನಿಗೆ ತ್ರಿಲೋಕನಾಥ ಮತ್ತು ತ್ರಿಲೋಕ (Tlaloc-Nauch-Tlaloc), ಲಕ್ಷ್ಮಿಗೆ ಚಿನ್ ತೇವತಲ್ (Cinteotl) ಇತ್ಯಾದಿ ಪ್ರಾಚೀನ ಅಮೆರಿಕನ್ನರು ಬಳಸುತ್ತಿದ್ದ ಪದಗಳು.

ಪೆರುವಿನ ಸಾಮ್ರಾಜ್ಯದ ನಾಲ್ಕು ಮುಖ್ಯ ಮೂಲ ಪುರುಷರ ಹೆಸರು ಆರ್ಯಮಾನಸತಪ (Ayarmancotopa), ಆರ್ಯಚಕಿತಪ (Ayarchakitopa), ಆರ್ಯಉಚ್ಚತಪ (Ayarayuccatopa) ಮತ್ತು ಆರ್ಯ ಅಯುಷ್ಯತಪ (Ayar-uyssutopa) ಅವರು ಷೋಡಶ ಸಂಸ್ಕಾರಗಳನ್ನು ವರ್ಣಾಶ್ರಮದ ಧರ್ಮವನ್ನೂ ನಿಷ್ಠೆಯಿಂದ ಪಾಲಿಸುತ್ತಿದ್ದರೆಂದೂ ಇತರ ಪ್ರಾಚೀನ ಸಂಸ್ಕೃತಿಗಳನ್ನುಳಿಸಿಕೊಂಡಿದ ದೇಶಗಳಂತೆಯೇ ಶಾಸ್ತ್ರ, ಕಲೆಯ ಕೌಶಲ್ಯಗಳು ಅತ್ಯುನ್ನತ ಮಟ್ಟಕ್ಕೇರಿ ಸ್ವಯಂ ಪೂರ್ಣತೆ ಮತ್ತು ಸೌಜನ್ಯ ಹಾಗೂ ಪರಸ್ಪರ ಸಹಕಾರದಿಂದ ಸುಖಮಯ ಜೀವನ ಶಾಶ್ವತವಾಗಿತ್ತೆಂದೂ, ಇಂದಿನಂತೆ ನಿರುದ್ಯೋಗ, ಸಂಘರ್ಷ, ಅಸಹಿಷ್ಣುತೆ, ಸ್ಪರ್ಧೆಗಳಿಲ್ಲದೆ, ಶಾಂತಿ ಮತ್ತು ಐಶ್ವರ್ಯ ತುಂಬಿರುತ್ತಿತ್ತು ಎಂದೂ ತಿಳಿದು ಬರುತ್ತದೆ.

ಮೆಡ್ರಿಡ್‌ನ ನ್ಯಾಷನಲ್ ಲೈಬ್ರರಿಯಲ್ಲಿರುವ ಪುಸ್ತಕದಿಂದ ಸರ್ ಕ್ಲಿಮೆಂಟ್ ಮಾರ್ಕನು ಭಾಷಾಂತರಿಸಿರುವ ಮುಂದಿನ ಹವನ ಯಜ್ಞದ ಸಮಯದಲ್ಲಿ ಪೆರುವಿನಲ್ಲಿ ಬಳಸುತ್ತಿದ್ದ ಸ್ತುತಿಗಳನ್ನು ಆಲಿಸಿ; ಅವು ವೈದಿಕಸ್ತುತಿಗಳಂತೆಯೇ ಇರುವುದನ್ನು ಗಮನಿಸಿ.

ಹೇ ಅಜೇಯನಾದ, ಶಾಶ್ವತನಾದ ಅಸಮಾನನಾದ
ಸೃಷ್ಟಿಕರ್ತನೇ. ವರಸುಖನೇ, ನೀನು ಮಾನವಕೋಟಿಗೆ
ನಿರ್ಭಯವಾಗಿ, ಆರೋಗ್ಯವಾಗಿ, ಶಾಂತಿಯಿಂದ
ಜೀವಿಸಿರಲೆಂದು ಪ್ರಾಣ ಮತ್ತು ಶಕ್ತಿಯನ್ನು ಅನುಗ್ರಹಿಸಿರುವಿ
ನನ್ನ ಈ ನಿವೇದನೆಯನ್ನು ಸ್ವೀಕರಿಸಿ ಸಂರಕ್ಷಿಸು ।।

ವಿಶ್ವ ಪ್ರಭುವಾದ ಹೇ ವರಸುಖನೇ (Viracocha)
ಸೃಷ್ಟಿಗೊಡೆಯನಾದ ನೀನು ಭವಿಷ್ಯ ವಿಧಿಸುವ ನೀನು
ಹೆಣ್ಣಾದರೂ ಸರಿ, ಗಂಡಾದರೂ ಸರಿ, ಎಲ್ಲಿರಬಹುದು ?
ನೀನು ನಿನ್ನ ಭವ್ಯ ಪ್ರಭುತ್ವದ ಸಿಂಹಾಸನದ ಮೇಲೆ,
ಕೆಳಗೆ, ಸುತ್ತಲೂ ಆಕಾಶ, ಸಾಗರ, ಪ್ರಪಂಚ, ಮಾನವ
ಎಲ್ಲರನ್ನೂ ಸೃಷ್ಟಿಸಿರುವ ಒಡೆಯರಿಗೆ ಒಡೆಯ,
ನನ್ನಾತ್ಮನು ಅಗೋಚರನಾದ ನಿನ್ನನ್ನರಿಯಲು
ದರ್ಶನ ಪಡೆಯಲು ಹಾತೊರೆಯುತ್ತಿದೆ ।।

ಹೇ ಸೃಷ್ಟಿಕರ್ತನೇ, ಸಂಪೂರ್ಣ ಪೃಥ್ವಿಯ ಪ್ರಭುವೇ
ಹೇ ಪರಮದಯಾಮಯಿ, ಎಲ್ಲಕ್ಕೂ ಜೀವದಾತನಾದ ನೀನು
ಎಲ್ಲರೂ ತಿಂದು ಬದುಕಿ ಬೆಳೆಯಲು, ಹಸಿವು ದುಃಖಗಳಿಂದ
ಸಂಕಟ ಪಡದಂತೆಯೂ ಆಹಾರ ಫಲಗಳನ್ನು
ಸಮೃದ್ಧಿಗೊಳಿಸಿ ಅವನ್ನು ಶೈತ್ಯದಿಂದ ಕೆಡದಂತೆ ರಕ್ಷಿಸಿ
ನಮ್ಮೆಲ್ಲರಿಗೂ ಶಾಂತಿ ಸುಖಗಳನ್ನು ದಯಪಾಲಿಸು ||

ಐತಿಹ್ಯದ ಪ್ರಕಾರ ಮೆಕ್ಸಿಕೋವಿನ ಅಸ್ಟೆಕ ಸಾಮ್ರಾಟರ ಮೂಲ ಪುರುಷರೂ ಅವರ ಅನುಯಾಯಿಗಳೂ ಶಾಂತಸಾಗರದ ಕಡೆಯಿಂದ ಹಡಗುಗಳಲ್ಲಿ ಬಂದು ರಾಜ್ಯ ಸ್ಥಾಪಿಸಿ ಹಿಂತಿರುಗಿದ ರಾಜನೊಬ್ಬನ ಸಾಮಂತರಂತೆ, ಅವರು ದಕ್ಷಿಣ ಅಮೆರಿಕದ ಪಶ್ಚಿಮ ತೀರದಲ್ಲಿಳಿದು ತೀರ ಪ್ರದೇಶದಲ್ಲೇ ಆಂಡೀಸ (Andes) ಪರ್ವತದ ಪಶ್ಚಿಮದ ಕಡೆ ಉತ್ತರಾಭಿಮುಖವಾಗಿ ಪಯಣ ಬೆಳೆಸಿ ಮುಂದೆ ಪೋಪೊಕಟಿಪಾತಾಳ (Popocotopotl) ವೆಂಬ ಅಗ್ನಿ ಪರ್ವತ ದಾಟಿ ಗೌತಮಾಲಾದ (Guatemala) ತಪ್ಪಲಿನಲ್ಲಿ ಬಂದು ಉಪನಿವೇಶನ ಮತ್ತು ಸಾಮ್ರಾಜ್ಯ ಬೆಳೆಸಿದರಂತೆ.

ಕಡೇ ಪಕ್ಷ ಸಾವಿರ ವರ್ಷಗಳಿಂದ ವಾಸವಾಗಿದ್ದ ಮೆಕ್ಸಿಕೋವಿನ ಪ್ರಾಚೀನ ನಿವಾಸಿಗಳು ಮಂಗೋಲಿಯನ್ ಛಾಯೆಯನ್ನು ಹೊಂದಿದ್ದ ಬಿಳಿ, ಹಳದಿ, ಕಂದು, ಮತ್ತು ಕೃಷ್ಣ ವರ್ಣದ ವಿವಿಧ ಜನಾಂಗಗಳಿಗೆ ಸೇರಿದವರು. ಅವರಲ್ಲಿ ಯುಕಟಾನ್‌ನ ಮಾಯಾ ಮತ್ತು ನಹುಅ ಪಂಗಡಗಳು ಕಲೆ ಮತ್ತು ವಿಜ್ಞಾನಗಳಿಗೆ ಸೇರಿದ್ದ ವಿಲಕ್ಷಣರಾಗಿದ್ದರೆಂದೂ ಸಮುದ್ರಯಾನಗಳಲ್ಲಿ ನಿಪುಣರಾಗಿದ್ದ ಮಾಯಾ ಜನಗಳು ಅಮೆರಿಕದಲ್ಲಿ ಕಟ್ಟಿದ ಮಹಾ ಸಾಮ್ರಾಜ್ಯವು ಕಾರಣಾಂತರದಿಂದ ಕ್ರಿ. ಶ. ಆರು ಅಥವಾ ಏಳನೆಯ ಶತಮಾನದಲ್ಲಿ ಕೊನೆಗೊಂಡಿತೆಂದೂ ತಿಳಿದುಬರುತ್ತದೆ. ಅಲ್ಲಿಯ ಹಾಗೆ ಪುರಾತನವಾದ ಪಲಂಕೆಯ (Palanque) ಜನರ ಮೂಲನಿವಾಸಿಗಳು ಅನೇಕ ಸಮುದ್ರ ದ್ವೀಪಗಳನ್ನು ದಾಟಿಕೊಂಡು ಪೂರ್ವದಿಕ್ಕಿನ ಮಹಾಸಮುದ್ರದಲ್ಲಿ ಬಂದು ಮೆಕ್ಸಿಕೋವಿನಲ್ಲೂ ನೆಲೆಸಿದರೆಂದು ಮೆಕೆಂಜಿಯ ಮಿಥ್ಸ್ ಆಫ್ ಪ್ರೀಕೊಲಂಬಿಯನ್ ಅಮೇರಿಕದಲ್ಲಿ ಹೇಳಿದೆ. ಮಾಯನ್ನರು ಶಿಲ್ಪ ವಾಸ್ತುಶಿಲ್ಪಗಳನ್ನು ನಿರ್ಮಿಸುವುದರಲ್ಲೂ ಜ್ಯೋತಿಷದಲ್ಲೂ ಅತಿ ಕುಶಲಿಗಳಾಗಿದ್ದರು. ಮೆಕ್ಸಿಕೋವಿನ ಪರ್ವತಗಳ ಮೇಲೆ ಪಂಚಾಕ್ಷ ಅನುನಾಕ (Panchacta-unancac) ವೆಂಬ ಮಹಾ ಶಂಕುಸ್ತಂಭದ ಶಿಖರ ಮತ್ತು ಎಂಟು ಕಲ್ಲು ಕಂಬಗಳ ಮೂಲಕ ಸೂರ್ಯನ ಗತಿ ಹಾಗೂ ವಿವಿಧ ನಕ್ಷತ್ರಗಳನ್ನು ಚಲಿಸುವ ದಿನಗಳನ್ನು ನಿರ್ಣಯಿಸುತ್ತಿದ್ದರು. ಇವುಗಳನ್ನೆಲ್ಲಾ ವಿಜ್ಞಾನಿಗಳು ವೈಜ್ಞಾನಿಕ ಯಂತ್ರಗಳಿಂದ ನಿರ್ಧಾರಗೊಳಿಸಿದರು. ಐವತ್ತು ಟನ್ ತೂಗುವ ಹನ್ನೆರಡು ಅಡಿ ವ್ಯಾಸವುಳ್ಳ ಒಂದು ಚತುರ್ಯುಗದ ಪಂಚಾಂಗ ಚಕ್ರವನ್ನು ಮೆಕ್ಸಿಕನ್ ನ್ಯಾಷನಲ್ ಮ್ಯೂಸಿಯಂನಲ್ಲಿ ಇರಿಸಿದೆ. ಚಿನ್ನ ಮತ್ತು ಬೆಳ್ಳಿಯ ಅಂತಹ ಫಲಕ ಚಿತ್ರಗಳಲ್ಲಿ ತಿಂಗಳಿಗೆ 20 ದಿನದಂತೆ 18 ತಿಂಗಳ ವರ್ಷ. ಹನ್ನೆರಡು ರಾಶಿಗಳು ಮತ್ತು ಹಬ್ಬ ಹುಣ್ಣಿಮೆಗಳನ್ನು ಚಿನ್ನ ಬೆಳ್ಳಿಯ ಫಲಕಗಳಲ್ಲಿ ಗುರುತಿಸಿ ಅರಮನೆ ಮತ್ತು ಸಭಾಂಗಣಗಳಲ್ಲಿ ಇಡುತ್ತಿದ್ದರಂತೆ. ಅವರು ಚತುರ್ಯುಗ, ಜಲಪ್ರಳಯ, [illegible], ಷೋಡಶ ಸಂಸ್ಕಾರಗಳು, ಪರ್ವತಾಗ್ರ, ಭೂದೇವಿ, ಸೂರ್ಯ, ಧ್ರುವನಕ್ಷತ್ರ ಹಾಗೂ [illegible] ಶ್ರದ್ಧೆ ಹೊಂದಿದ್ದರು. ದೇವಾಲಯಗಳಲ್ಲಿ ಪವಿತ್ರಾಗ್ನಿಯನ್ನು ಆರದಂತೆ ರಕ್ಷಿಸಿಕೊಂಡು ಬರುವುದೂ ವೇಳೆ ವೇಳೆಗೆ ಪೂಜೆ ನೆರವೇರಿಸುವುದೂ ಮಠಗಳ ಅಧಿಪತಿ ಮತ್ತು ಪುರೋಹಿತರ ಕರ್ತವ್ಯಗಳಾಗಿದ್ದವು.

ಮೆಕ್ಸಿಕೋವಿನ ರಾಜಸಂತತಿಗೆ ಅಸ್ಟೆಕರೆಂದು (Astec) ಹೆಸರಿತ್ತು. ಮೆಕ್ಸಿಕೋವಿನ ಪರ್ವತಾಕೃತಿಯ ಗೋಪುರಗಳುಳ್ಳ ದೇವಾಲಯವನ್ನು ಅಲ್ಲಿಯ ಅಸ್ಟೆಕ ಸಾರ್ವಭೌಮನಾದ

ಅವಿಚಲನು (Ahuitzol) ಸಹಸ್ರಾರು ಶಿಲ್ಪಿಗಳಿಂದ ಕ್ರಿ. ಶ. 1483ರಲ್ಲಿ ಕಟ್ಟಿಸಲಾರಂಭಿಸಿ 1490ರಲ್ಲಿ ಮುಗಿಸಿದನೆಂದೂ ಅದರ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ತಕ್ಷಕ (Tezuco) ಮತ್ತು ತ್ರಿಲೋಪಾನದ (Tlacopan) ಮಹಾರಾಜರೂ ಅರವತ್ತು ಲಕ್ಷ ಯಾತ್ರಿಕರೂ ಭಾಗವಹಿಸಿದ್ದರೆಂದೂ ತಿಳಿದುಬರುತ್ತದೆ. ಕ್ರಿ. ಶ. 1502ರಲ್ಲಿ ಗೌತಮ (Cuatemac) ಸಿಂಹಾಸನಾರೂಢನಾದನು. ಆತನು 1500 ಮೂಲಿಕೆಗಳ ಔಷಧಗಳಲ್ಲೂ, ಜ್ಯೋತಿಷ್ಯ, ನ್ಯಾಯಶಾಸ್ತ್ರ, ಯುದ್ಧಕಲೆ, ಹಾಗೂ ರಾಜ್ಯಾಡಳಿತದಲ್ಲಿ ಪರಿಣತನಾಗಿದ್ದನು. ಆತನ ಅರಮನೆಯಲ್ಲಿ 100 ಸ್ನಾನಗೃಹಗಳೂ ಸುತ್ತಲೂ ಸಭಾಂಗಣಗಳೂ ವಿಶಾಲವಾದ ಈಜುವ ಕೊಳಗಳುಳ್ಳ ಉಪವನಗಳೂ ಹತ್ತು ಸಾವಿರ ಸೈನಿಕರ ಶಿಬಿರಗಳೂ ಐದು ಸಹಸ್ರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಾ ವಾಸಮಾಡಲು ಅನುಕೂಲವಾದ ಮಠಗಳೂ ಇದ್ದವಂತೆ. ಮುನ್ನೂರು ಜನಸೇವಕರು ಮತ್ತು ವೈದ್ಯರಿಂದ ರಕ್ಷಿತವಾದ ಬಗೆ ಬಗೆಯ ಸಹಸ್ರಾರು ಪಕ್ಷಿಗಳ ಪ್ರದರ್ಶನಾಲಯವು ರಾಜಧಾನಿಯ ಅತ್ಯಾಕರ್ಷಕ ಕೇಂದ್ರಗಳಲ್ಲೊಂದಾಗಿತ್ತು. ಅಲ್ಲಿಯ ಶಿವಾಲಯಕ್ಕೆ 114 ಮೆಟ್ಟಲುಗಳಿದ್ದವು. ಯುದ್ಧದ ಅಧಿಷ್ಠಾತೃವಾದ ಚಿನ್ನದ ವರಸುಖನ ಭಯಂಕರ ಮೂರ್ತಿಗೆ ನೀಲಮಣಿ ಮಂಡಿತವಾದ ಚಿನ್ನ ಬೆಳ್ಳಿಯ ರುಂಡ ಮತ್ತು ಹೃದಯಗಳು ಹಾಗೂ ಭಯಂಕರವಾದ ಸರ್ಪಗಳ ಮಾಲೆಹಾಕಿ ಕೈಗಳಲ್ಲಿ ಬಿಲ್ಲುಬಾಣಗಳನ್ನು ಧರಿಸುವಂತೆ ಮಾಡಿದ್ದರೆಂದೂ ಎದುರಿಗೆ ಧೂಪಾರತಿಯ ತಟ್ಟೆಯಲ್ಲಿ ನರಬಲಿ ಮಾಡಿ ಅವರ ಹೃದಯಗಳನ್ನು ಉರಿಸುತ್ತಿದ್ದರೆಂದೂ ಸ್ಪೇನಿನ ಆಕ್ರಾಮಕ ಕಾರ್ಟೆಜ್ ವಿವರಿಸಿದ್ದಾನೆ.

ಮೆಕ್ಸಿಕೋದಲ್ಲಿ ಶಿವಾಲಯವಲ್ಲದೆ, ಗಣಪತಿ, ಇಂದ್ರ, ಯಮ, ಹಾಗೂ ವಾಸುಕಿಯ ದೇವಾಲಯಗಳು ಹೆಚ್ಚಾಗಿದ್ದವು. ಗೌತಮನ ನಂತರ ಮಂತಿಸುಮ (Montezuma)ನು ಅತಿ ದಕ್ಷಸಾಮ್ರಾಟನೂ ನ್ಯಾಯಮೂರ್ತಿಯೂ ಆಗಿದ್ದನು. ಆತನ ನ್ಯಾಯಾಲಯದಲ್ಲಿ ಮೂವತ್ತು ನ್ಯಾಯಾಧೀಶರಿದ್ದು ರಾಜದ್ರೋಹ, ಯುದ್ಧಭೂಮಿಯಿಂದ ಓಡುವುದು, ಕುಡಿತ, ವ್ಯಭಿಚಾರ, ವೇಷ ಬದಲಾಯಿಸುವುದು, ಸುಳ್ಳುದಾಖಲೆ ಇಡುವುದು, ದುಂದುಖರ್ಚು, ಆಸ್ತಿಯ ಕಸಿತಗಳಿಗೆ ಮರಣದಂಡನೆ ವಿಧಿಸಲ್ಪಡುತ್ತಿತ್ತು. ಮೆಕ್ಸಿಕೋ ಮತ್ತು ದಕ್ಷಿಣ ಅಮೆರಿಕದ ಪ್ರಾಚೀನ ಹಿಂದುಗಳ ನಡೆ-ನುಡಿ, ಉಡಿಗೆ-ತೊಡಿಗೆ, ಆಚಾರ-ವ್ಯವಹಾರ, ನೀತಿ, ನಿಯಮಗಳು ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳೂ ಪೂರ್ಣವಾಗಿ ಪ್ರಾಚೀನ ಹಿಂದೂ ಸಂಸ್ಥೆಗಳ ಪ್ರತಿಕೃತಿಗಳಾಗಿದ್ದವು. ಗುರುಕುಲ ವಿದ್ಯಾಭ್ಯಾಸವು, ರಾಜಮನೆತನ, ಯೋಧರು, ರಾಜ್ಯಾಡಳಿತ ನಡೆಸುವವರು ಮತ್ತು ಪುರೋಹಿತ ವರ್ಗದ ಮಕ್ಕಳಿಗೆ ಕಡ್ಡಾಯವಾಗಿತ್ತು. ವರ್ತಕರಲ್ಲಿ ಶ್ರೇಣಿ ಪದ್ಧತಿ ಇತ್ತು. ರೈತರು, ಪಶುಪಾಲಕರು, ಬೇಡರು, ಕುಶಲಕರ್ಮಿಗಳು ತಮ್ಮ ತಮ್ಮ ಕುಲಕಸಬುಗಳನ್ನು ಪರಂಪರೆಯಿಂದ ಕಲಿತು ಪರಿಣತಿ ಪಡೆಯುತ್ತಿದ್ದರು. ಸತ್ಯಸಂಧತೆ, ಶಿಸ್ತು, ಪರಿಶ್ರಮಿಕಜೀವನ, ಸರಳತೆ, ಇವು ಅವರ ಜನ್ಮಜಾತ ಪ್ರಕೃತಿಯಾಗಿದ್ದು ಪರಸ್ಪರ ಸಹಕರಿಸಿಕೊಂಡು ಸುಖಮಯ ಜೀವನ ನಡೆಸುತ್ತಿದ್ದರು. ವಿವಿಧ ದೇವತೆಗಳು ಸೃಷ್ಟಿ ಸ್ಥಿತಿ ಲಯಕಾರಣವಾದ ಒಬ್ಬನೇ ಪರಮಾತ್ಮನ ವಿವಿಧ ರೂಪಗಳೆಂಬ ಭಾವನೆ. ವಿವಾಹ ಮತ್ತು ಮರಣೋತ್ತರ ಕ್ರಿಯೆಗಳಲ್ಲಿ ಪವಿತ್ರತೆಯ ಮನೋಭಾವ, ಯುದ್ಧಕಾಲದಲ್ಲಿ ಹೆಂಗಸು, ಮಕ್ಕಳು ಹಾಗೂ ಶರಣಾಗತ ಶತ್ರುಗಳ ಮೇಲೆ ಕೈಯೆತ್ತದಿರುವುದು, ಪ್ರಾಚೀನ ಅಮೆರಿಕನ್ನರ ವಿಶಿಷ್ಟ ಸ್ವತ್ತಾಗಿದ್ದವು.

ಪಾಶ್ಚಾತ್ಯ ಮತಾಂಧರ ನೂರಾರು ವರ್ಷಗಳ ಅತ್ಯಾಚಾರ ಅಸಹಿಷ್ಣುತೆಗಳಿಂದ ಅಧಿಕಾಂಶ ಅಮೆರಿಕದ ಮೂಲನಿವಾಸಿಗಳು ವೇಷಭೂಷಣಗಳಲ್ಲೂ ಹೊರಗಿನ ವ್ಯವಹಾರಗಳಲ್ಲೂ ಪರಿವರ್ತಿತರಾಗಿದ್ದರೂ ಅವರು ತಮ್ಮ ಪ್ರಾಚೀನ ಸಂಸ್ಕೃತಿಯ ಹಿರಿಮೆಯನ್ನು ಮರೆತಿಲ್ಲ. ಅಲ್ಲಿನ ಗುಡ್ಡಗಾಡುಗಳ ಜನಗಳು ಈಗಲೂ ಹಿಂದಿನಂತೆಯೇ ಸಸ್ಯಾಹಾರ ಮತ್ತು ಕುಲಕಸಬುಗಳನ್ನೇ ಮಾಡುವರು, ಅತಿಥಿಗಳಿಗೆ ಊಟಕ್ಕೆ ಮುಂಚೆ ಕೈಕಾಲು ತೊಳೆದು ಬಾಯಿ ಮುಕ್ಕಳಿ

ಸಲು ನೀರು ಕೊಡುವುದು, ಸೂರ್ಯ ವಂದನೆಮಾಡಿ ಅಗ್ನಿಯಲ್ಲಿ ಒಂದು ತುತ್ತು ಆಹಾರ ಸಮರ್ಪಿಸಿ ಊಟ ಮಾಡುವುದು, ಪಗಡೆಯಾಡುವುದು, ಸುಣ್ಣದೊಂದಿಗೆ ಹೊಗೆಸೊಪ್ಪು ಮತ್ತು ಕೋಕೋ ಎಲೆ ಅಗಿಯುವುದು, ವರ್ಷಕ್ಕೊಮ್ಮೆ ಕೊಂಡದ ಬೆಂಕಿಯ ಮೇಲೆ ನಡೆಯುವುದು, ಧೂಪಾರತಿ, ಹವನ, ಶ್ರಾದ್ಧಾದಿಕರ್ಮಗಳನ್ನು ರಾಮೋತ್ಸವ ಮುಂತಾದ ಉತ್ಸವಗಳಲ್ಲಿ ಸಹಕರಿಸುವುದನ್ನು ಬಿಟ್ಟಿಲ್ಲ. ಅಮೆರಿಕದಲ್ಲೆಲ್ಲಾ ಹಿಂದೂ ಸಂಸ್ಕೃತಿಯ ಕಡೆಗೆ ದಿನೇ ದಿನೇ ಆಕರ್ಷಣೆ ಹೆಚ್ಚುತ್ತಿರುವುದಲ್ಲಿ ಆಶ್ಚರ್ಯವೇನೂ ಇಲ್ಲ.

ಅಡಿಟಿಪ್ಪಣಿ

1. ಈ ವಿಷಯ, 'ಬಲೀಂದ್ರ' ಎಂಬ ಶಾಸನಪಾಠ ಇವುಗಳು ಇನ್ನೂ ಸಂದೇಹಾಸ್ಪದಗಳೇ ಆಗಿವೆ. ಶೀರ್ಷಿಕವೂ ಒಂದು ಊಹೆ ಎನ್ನಬಹುದು. (ಬಾ.ರಾ.ಗೋ.)

ಕೆ. ಮೊಹಮ್ಮದ್ ಶರೀಫ್

ಕವಲೇದುರ್ಗದ ಶಾಸನಗಳ ಸಮೀಕ್ಷೆ

ನಿಸರ್ಗಸೌಂದರ್ಯಕ್ಕೆ ಹೆಸರಾದ ಮಲೆನಾಡಿನ ಮಡಿಲಿನಲ್ಲಿರುವ ಕವಲೇದುರ್ಗ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದೆ. ಈ ಸ್ಥಳಕ್ಕೆ ಕವಲೇದುರ್ಗ, ಕವಿಲೇದುರ್ಗ, ಕವುಲೇದುರ್ಗ, ಕೌಲೇದುರ್ಗ ಎಂಬೆಲ್ಲ ಹೆಸರುಗಳು ಇವೆ. ಕೆಳದಿ ಅರಸರ ಶಾಸನಗಳಲ್ಲಿ ಇವನ್ನು 'ದುರ್ಗ' 'ಭುವನಗಿರಿದುರ್ಗ' ಎಂದು ಕರೆದಿದ್ದಾರೆ. ಇದು ಕೆಳದಿ ಅರಸರ ನಾಲ್ಕನೆಯ ರಾಜಧಾನಿ.[1] ಇಲ್ಲಿ ಕೆಳದಿ ಅರಸರ ಕಾಲದಲ್ಲಿ ದುರ್ಗದ ತಿಂಮಣ (ತಿಮ್ಮಣ್ಣ) ನೆಂಬುವನು ಕಟ್ಟಿಸಿ ಕೊಟ್ಟ ಮಹಾಮಹತ್ತಿನಮಠವೆಂದು ಕರೆಯುವ ಒಂದು ವೀರಶೈವ ಮಠವಿದೆ. ಕವಲೇದುರ್ಗದಲ್ಲಿ ಕೆಳದಿ ಅರಸರಿಗೆ ಸೇರಿದ ಸುಮಾರು 70–80 ತಾಮ್ರಶಾಸನಗಳು,[2] ಓಲೆಗರಿಗಳು ಇವೆ. ಈ ಸ್ಥಳಕ್ಕೆ ಸೇರಿರುವ ತಾಮ್ರಶಾಸನಗಳ ಪೈಕಿ ಸುಮಾರು 60 ಶಾಸನಗಳು ಈ ಮಠದಲ್ಲಿ ಇವೆ. ಇನ್ನೆರಡು ತಾಮ್ರಶಾಸನಗಳು ಸ್ಥಳದ ಖಾಜಿಯಿಂದ ಬಂದಿವೆ. ಇವುಗಳಲ್ಲದೆ ಎರಡು ಶಿಲಾಶಾಸನಗಳೂ ಇಲ್ಲಿವೆ. ಇವುಗಳ ಪೈಕಿ ಏಳು ಶಾಸನಗಳು ಕೆಳದಿಯ ಅರಸ ವೆಂಕಟಪ್ಪನಾಯಕನಿಗೂ (೧೫೮೬–೧೬೨೯), ಒಂದು ವೀರಪ್ಪನಾಯಕನಿಗೂ (೧೬೩೦), ಹದಿನಾರು ವೀರಭದ್ರನಾಯಕನಿಗೂ (೧೬೨೯–೧೬೪೫), ಒಂದು ಶಿವಪ್ಪನಾಯಕನಿಗೂ (೧೬೪೫–೧೬೬೦), ಮೂರು ಭದ್ರಪ್ಪನಾಯಕನಿಗೂ (೧೬೬೧–೧೬೬೪), ಹದಿನಾರು ಸೋಮಶೇಖರನಾಯಕನಿಗೂ (೧೬೬೪–೧೬೭೧), ಹದಿನಾಲ್ಕು ಇದೇ ಸೋಮಶೇಖರನಾಯಕನ ಪತ್ನಿ ಚೆನ್ನಮ್ಮಾಜಿಗೂ (೧೬೭೧–೧೬೯೬), ಹತ್ತು ಹಿರಿಯ ಬಸವಪ್ಪನಾಯಕನಿಗೂ (೧೬೯೬–೧೭೧೪), ಎರಡು ಸೋಮಶೇಖರನಾಯಕನಿಗೂ (೧೭೧೪–೧೭೩೯) ಸೇರಿವೆ. ಇವಲ್ಲದೆ ಬೀಳಗಿ ಘಂಟೆವಡೆಯರ ಪೌತ್ರನಾದ ಶಿವಪ್ಪನಾಯಕನ ಪುತ್ರ ಇಮ್ಮಡಿ ಶಿವಪ್ಪನಾಯಕನಿಗೆ ಸೇರಿದ ಒಂದು ಶಾಸನವೂ (೧೭೭೪) ಇದೆ.

ಈ ಸ್ಥಳದಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನ[3] ಕ್ರಿ. ಶ. ಸುಮಾರು ೧೩೬೨ರದು. ಇದು 'ಮಹಾಮಂಡಳೇಶ್ವರ' 'ಅರಿರಾಯವಿಭಾಡ' 'ಭಾಷೆಗೆ ತಪ್ಪುವರಾಯರ ಗಂಡ' 'ಪೂರ್ವಪಶ್ಚಿಮದಕ್ಷಿಣಸಮುದ್ರಾಧಿಪತಿ' ಎನ್ನಿಸಿಕೊಂಡ ವಿಜಯನಗರದ ಅರಸ ವೀರ ಬುಕ್ಕಣ್ಣ ವೊಡೆಯರ ಕುಮಾರ ನಂದಗಿರಿಯ ವಿರುಪಣ್ಣ ವೊಡೆಯರನು. ಈ ದೊರೆ ಆರಗ ರಾಜ್ಯದಿಂದ[4] ರಾಜ್ಯವಾಳುತ್ತಿರುವಾಗ 'ನಗರಿಯ ಕೋಟೆಯ ಮುಂಬಾಗಿಲ ದೇವರ' ಅಮೃತ ಪಡಿಭೋಗಕ್ಕೆ ಭೂಮಿಯನ್ನು ದತ್ತಿಯಾಗಿ ಬಿಟ್ಟನೆಂದು ಇದರಲ್ಲಿ ಹೇಳಿದೆ.

ಕೆಳದಿ ಅರಸ ವೆಂಕಟಪ್ಪನಾಯಕನಿಗೆ ಸೇರಿದ ೭ ಶಾಸನಗಳು ಇಲ್ಲಿವೆ. ಅವುಗಳ ಪೈಕಿ ಕ್ರಿ. ಶ. ಸುಮಾರು ೧೬೧೫ ಕ್ಕೆ ಸೇರಿದ ಒಂದು ಶಾಸನವು[5] ವೆಂಕಟಪ್ಪನಾಯಕನ ಪತ್ನಿ ಅಭಿನವ ವೀರವನಾಂಬ ಅಥವಾ ವೀರಮ್ಮ ಎಂಬುವಳು. ಇಕ್ಕೇರಿಯ ಛತ್ರದಕೇರಿಯಲ್ಲಿ ಕಟ್ಟಿಸಿದ ಮಠದ ಧರ್ಮಕ್ಕೆ ವಿಶ್ವೇಶ್ವರಾರ್ಪಿತವಾಗಿ ಮಂತ್ರಸಾಲೆಯಸೀಮೆಯೊಳಗಣ ಕಲ್ಲಿಕೊಪ್ಪದ ಗ್ರಾಮವನ್ನು ದತ್ತಿಯಾಗಿ ಬಿಟ್ಟದ್ದನ್ನು ತಿಳಿಸುತ್ತದೆ. ದಾನ ಕೊಟ್ಟ ವೀರಮ್ಮ ವಿರುಪಣ್ಣನಾಯಕನ ಮಗಳೆಂದು ಶಾಸನದಲ್ಲಿ ಹೇಳಿದೆ.

ಈ ದೊರೆಯ ಎರಡನೆಯ ಶಾಸನ ಕ್ರಿ.ಶ. ೧೬೧೬ ರದು.[6] ಇದು 'ಶ್ರೀಮತ್ಸಜ್ಜನ ಶುದ್ಧ ಶಿವಾಚಾರಸಂಪನ್ನ ಗುರುಲಿಂಗಜಂಗಮಸ್ವಾಮಿಗಳಾದ ವ್ಯಾನಾಪ್ರಸ್ಥಿಮದಾಮುಹತ್ತಿನೊಳಗಾದ ಶ್ರೀರಂಗಪಟ್ಟಣದ ಹೊಳೆಯ ಬಿರಿಯ ಮಂಟಪ ಸಹಿತ ಸದಾಶಿವಸಾಗರದಲು ಕಟ್ಟಿಸಿದ ಮಹತ್ತಿನಮಠದ ಧರ್ಮಕ್ಕೆ' ಕೆಳದಿ ವೆಂಕಟಪ್ಪನಾಯಕನು 'ಉದುಗಣಿಯ ಸೀಮೆ ವಳಗಣ ಕಡೆನಂದಿಹಳ್ಳಿ' ಗ್ರಾಮವನ್ನು ದತ್ತಿಯಾಗಿ ಕೊಟ್ಟನೆಂದು ಹೇಳಿದೆ.

ಕ್ರಿ. ಶ. ೧೬೨೩ ರ ಈ ದೊರೆಯ ಇನ್ನೊಂದು ಶಾಸನದಲ್ಲಿ[7] ಈತನು ಬಾರಕೂರ ಮಹತ್ತಿನಮಠದ ಧರ್ಮಕ್ಕೆ ಬಾರಕೂರಸೀಮೆಯ ವಳಗಣ ಮಾಸಿಗೆಯ ಗ್ರಾಮವನ್ನು ದತ್ತಿಯಾಗಿ ಕೊಟ್ಟನೆಂದು ಹೇಳಿದೆ ಅಲ್ಲದೆ ಮಠದ ಗುರುಗಳು (ಕರ್ತೃ) 'ಯಿಹ ಮಠದ ಕರ್ಮಕರ್ತೃಕ ನಮಗೂ ಮಹತ್ತಿಗೂ ಸಂಪ್ರೀತರಾಗಿ ರಾಜದ್ರೋಹಿಕರಹಿತರಾಗಿ ಅಧೀನರಾಗಿ ಮುಖ್ಯರಾಗಿ ಶಿಷ್ಯವರ್ಗ ಕೂಡಿರಾಗಿ' ನಡೆಯಬೇಕೆಂದು ಈ ಶಾಸನದಲ್ಲಿ ಹೇಳಿದೆ[8]

ಇದೇ ವರ್ಷ ಈ ದೊರೆಯ ನಾಲ್ಕನೆಯ ಶಾಸನವು[9] ಪಟ್ಟಣಗೇರಿಯ ಗುರು ಸಂಗಮೇಶ್ವರ ಶಿಷ್ಯರಾದ ಗುರು ಮಲ್ಲಿಕಾರ್ಜುನದೇವರಿಗೆ ವೆಂಕಟಪ್ಪನಾಯಕನ ಮೊಮ್ಮಗ ಸದಾಶಿವನಾಯಕನು ಕಟ್ಟಿಸಿಕೊಟ್ಟ ಮಠದ ಧರ್ಮಕ್ಕೆ 'ಚಂದಾವರಸೀಮೆ ಕುಂದ್ರನಾಡ ವಳಗಣ ಮಾಣಿಕೂರ ಗ್ರಾಮವನ್ನು' ಅರಸನು ದತ್ತಿಯಾಗಿ ಬಿಟ್ಟನೆಂದು ಹೇಳಿದೆ. ಕ್ರಿ. ಶ. ಸು ೧೬೨೫ರ ಐದನೆಯ ಶಾಸನವು[10] ಕೆಳದಿ ವೆಂಕಟಪ್ಪನಾಯಕನು ಲಿಂಗಣ್ಣ ಕೆಂಚಣ್ಣನು ಸಂಗಮೇಶ್ವರದ ಕೆರೆಯ ಹತ್ತಿರ ಕಟ್ಟಿಸಿದ ಮಹತ್ತಿನಮಠದ ಧರ್ಮಕ್ಕೆ ಈ ಲಿಂಗಣ್ಣನಿಂದ ಅರಮನೆಗೆ ಗ ೧೦೦೦ (ಒಂದು ಸಾವಿರ ವರಹವು) ಪಡೆದುಕೊಂಡು 'ಕೊರಟವಸೀಮೆ ವೊಳಗಣ ಪ್ರಮುಖ' ಎಂಬ ಊರನ್ನು ದತ್ತಿಯಾಗಿ ಬಿಟ್ಟನೆಂದು ತಿಳಿಸುತ್ತದೆ.

ಕವಲೇದುರ್ಗದ ಖಾಜಿ ಸೈಯದ್ ಹಸನ್ ಸಾಹೇಬ್ ಎಂಬುವರಲ್ಲಿದ್ದ ತಾಮ್ರಶಾಸನ ದಿಂದ[11] 'ಶ್ರೀಮದ್ವೇದಮಾರ್ಗ ಕೋಟೆಕೋಲಾಹಳ ಶಿವಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ ಶಿವಗುರುಭಕ್ತ ಪರಾಯಣರಾದ' ಕೆಳದಿ ಅರಸ ವೆಂಕಟಪ್ಪನಾಯಕನು ಕವಲೇದುರ್ಗದಲ್ಲಿ ಶಕವರುಷ ೧೫೫೦ನೆಯ ಪ್ರಭವಸಂವತ್ಸರದ ವೈಶಾಖ ಶುದ್ಧ ೧೫ ರ ಸೀಮೆಯನ್ನು ಕಟ್ಟಿಸಿ ಮುದುವಂಕನಾಡಸೀಮೆಯೊಳಗಣ ಹಲಸಿನಹಳ್ಳಿ ಮತ್ತು ಚಂದವಳ್ಳಿ ಗ್ರಾಮಗಳಲ್ಲಿನ ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ತಿಳಿದು ಬರುತ್ತದೆ.

ಕೆಳದಿ ದೊರೆ ವೀರಪ್ಪನಾಯಕನ ಕಾಲಕ್ಕೆ ಸೇರಿದ ಕ್ರಿ. ಶ. ೧೬೪೦ ರ ಒಂದೇ ಒಂದು ಶಾಸನ ಈ ಸ್ಥಳದಲ್ಲಿದೆ[12]. ದೊರೆ 'ಬಂಗಾರದ ಮಗ ಶಿವಣ್ಣನ ಕೈಯಿಂದ ಅರಮನೆಗೆ ಗ ೩೫೦ ವರಹನ ಕ್ರಯದ ತೆಗೆದುಕೊಂಡು ಇದೇ ಶಿವಣ್ಣನು ಛತ್ರಪುರದಲ್ಲಿ ಕಟ್ಟಿಸಿದ ಮಹತ್ತಿನ ಮಠವಾದ ವಿರಕ್ತಮಠದ ಧರ್ಮಕ್ಕೆ' ಭೂಮಿಯನ್ನು ದತ್ತಿಯಾಗಿ ಬಿಟ್ಟನೆಂದು ಹೇಳಿದೆ

ಕೆಳದಿ ದೊರೆ ಭದ್ರಪ್ಪನಾಯಕನ ಕುಮಾರ ವೀರಭದ್ರನಾಯಕನಿಗೆ ಸೇರಿದ ೬ ಶಾಸನ ಗಳು ಇಲ್ಲಿವೆ. ಅವುಗಳ ಪೈಕಿ ಕ್ರಿ. ಶ. ೧೬೪೦, ೧೬೪೩ ಮತ್ತು ೧೬೪೫ನೆಯ ವರ್ಷಗಳ ಶಾಸನಗಳಲ್ಲಿ[13] ದೊರೆ ವೀರಭದ್ರನಾಯಕನು 'ಶಿವಗಂಗೆಯ ಮೇಲಣ ಗವಿಯ ಬಗೆಯ ಶಿವ ವೀರಣ್ಣ ವೊಡೆಯರ ಶಿಷ್ಯರು ಭಕ್ತಪಟ್ಟಿಯ ಬಸವಲಿಂಗದೇವರಿಗೆ ಮಂಕಸಾಲೆಯ ಸೀಮೆವಳಗಣ ಬ್ರಾಹ್ಮಣವಾಡದ ಮಂಟ್ಲಕಟ್ಟಿನ ಗ್ರಾಮವನ್ನು' ಬಿಡದು ಹಂಗದ ಶಿವಲಿಂಗದೇವರ ಶಿಷ್ಯರು ಯಿಕ್ಕೇರಿಯ ಹೊಸಕೇರಿಮಠದ ಮಹಂತದೇವರಿಗೆ' ಮಠದ ಧರ್ಮವನ್ನು ನಡೆಸಿಕೊಂಡು ಬರಲು 'ಹೊಸಗುಂದದ ತೀರ್ಥಸೀಮೆಯ ಕೂಡ್ಲನಾಡದ ವಳಗಣ ಮಳಲಿಯ ಗ್ರಾಮವನ್ನು' 'ಕೆಸನೂರ ಸೀಮೆಯ ಕೆರೆಕೊಪ್ಪದಲ್ಲಿ ಸಂಗಮವಾಗಿ ಬಸವಣ್ಣದೇವರು ಕಟ್ಟಿಸಿದ ಮಹತ್ತಿನಮಠಕ್ಕೆ ಕೆಸ ನೂರಸೀಮೆ ವೊಳಗಣ ಮಾಗದಿ ದೋತೇರಿ ಗ್ರಾಮ' ಮತ್ತು 'ರಾಮಗೊಂಡನಕೊಪ್ಪದ ಗ್ರಾಮ' ಎಂಬ ಎರಡು ಸ್ಥಳಗಳನ್ನು ದತ್ತಿ ಬಿಟ್ಟನೆಂದು ಹೇಳಿದೆ. ಕ್ರಿ. ಶ. ೧೬೫೫ರ ಇನ್ನೊಂದು

ಶಾಸನದಲ್ಲಿ ಅರಸನ ಮಗ ರೇವಣ್ಣಶೆಟ್ಟಿಯು ಅಂಗಡಿ ಎಂಬಲ್ಲಿ ಕಟ್ಟಿಸಿದ ಮುಪತ್ತಿನಮಠಕ್ಕೆ ೬೦೦ ವರಹವನ್ನು ತೆಗೆದುಕೊಂಡು ಅಂಬಿನಸೀಮೆ ಹಿರೇ ಆವಲಿ ಗ್ರಾಮದ ಕಾಲುವಳಿಯಾದ ದೇವರಕೊಪ್ಪವನ್ನು ಕ್ರಯದ ಮಾಡಿದ ವಿಷಯದ ಪ್ರಸ್ತಾಪವಿದೆ.[14]

ಈ ದೊರೆಯ ಕ್ರಿ.ಶ. ೧೬೬೧ಕ್ಕೆ ಸೇರಿದ ಏಳು ಶಾಸನಗಳಿವೆ. ಇವರಲ್ಲಿ ಮೊದಲನೆಯ ಶಾಸನದಲ್ಲಿ[15] ವೀರಭದ್ರನಾಯಕನು ಚಿಕ್ಕೋಡಲ್ಲೂರ ಕಪ್ಪುಗಳ್ಳರ ಬಸವಣ್ಣನು ಕಟ್ಟಿಸಿದ ಮುಪತ್ತಿನಮಠದ ಧರ್ಮಕ್ಕೆ ಕಾಶಿಯಲ್ಲಿ ಶಿವಮಾನವನು ನಡೆಸುವ 'ಪರ್ವಕ್ಕೆ ಸಮ' ಕೆಳದಿ ಸೀಮೆಗೆ ಸೇರಿದ ಚಕೋಡು ಗ್ರಾಮವನ್ನು, ಎರಡನೆಯ ಶಾಸನದಲ್ಲಿ[16] ಮುರುಟ ಎಂಬಲ್ಲಿ ಹಾರೊ ವೆಂಕಟಯ್ಯನು ಕಟ್ಟಿಸಿದ ಮುಪತ್ತಿನಮಠಕ್ಕೆ ವರತಾಳಸೀಮೆ ಕಾರಿಗೆ ಎಂಬ ಗ್ರಾಮವನ್ನು, ಮೂರನೆಯ ಶಾಸನದಲ್ಲಿ[17] 'ಮಳಿಯಕುದಿಹೇರಮಠದ ಶಿವಲಿಂಗದೇವರ ಶಿಷ್ಯರು ಶಿವಲಿಂಗದೇವರಿಗೆ ಹೆಬ್ಬಯಲುಸೀಮೆ ಹಳಗಾ ಬಡಿನಕೊಪ್ಪ ಗ್ರಾಮವನ್ನು' ಕೊಟ್ಟಿರೆಂದು ಹೇಳಿದೆ. ದೊರೆಯು ಈ ಸಂದರ್ಭದಲ್ಲಿ ಗ್ರಾಮದ ಬೆಲೆ ೫೦೦ ವರಹಗಳಲ್ಲಿ ೩೦೦ ವರಹಗಳನ್ನು ಬಿಟ್ಟು ೨೦೦ ವರಹಗಳನ್ನು ತೆಗೆದುಕೊಂಡನೆಂದು ಹೇಳಿದೆ. ನಾಲ್ಕನೆಯ ಶಾಸನದಲ್ಲಿ[18] 'ಭುವನಗಿರಿ ದುರ್ಗದ ಭದ್ರಾಪುರದಲು ದುರ್ಗದ ತಿಂದುಂಣನು' ಕಟ್ಟಿಸಿದ ಮುಪತ್ತಿನಮಠದ ಧರ್ಮಕ್ಕೆ ಬಿಟ್ಟ 'ಯೆತ್ತಿನ ಮಾಂನ್ಯ'ವನ್ನು ಹೇಳಿದೆ.

ಇದೇ ಕಾಲದ ಐದನೆಯ ಶಾಸನದಲ್ಲಿ[19] ಸೋಮೇಶ್ವರ ಎಂಬಲ್ಲಿ ಸಿದ್ದಮಾಜಿಯ ಹೆಸರಲ್ಲಿ ಕಟ್ಟಿಸಿದ ಮುಪತ್ತಿನಮಠಕ್ಕೆ ದೊರೆಯು ಸಿರಂಗೂರು ಎಂಬ ಗ್ರಾಮವನ್ನು ಮತ್ತು ಆರನೆಯ ಶಾಸನದಲ್ಲಿ[20], ಕಪ್ಪುಗಳ್ಳರ ಬಸವಣ್ಣನು ಕಟ್ಟಿಸಿದ ಬಸುರೂರ ಮುಪತ್ತಿನಮಠಕ್ಕೆ ಅಡಿಮರಸೀಮೆ'ಗೆ ಸೇರಿದ ಬೀಜಹಳ್ಳಿ ಎಂಬ ಊರನ್ನು ದತ್ತಿಯಾಗಿ ಬಿಟ್ಟರೆಂದು ಹೇಳಿದೆ.

ಕ್ರಿ.ಶ. ೧೬೬೧ರ ಶಾಸನವು[21] 'ಬಸರೂರ ಮೂಡಕೇರಿಯ ಅದಿನಾಥದೇವರ ಸುತ್ತಮುತ್ತ ಮೂರು ಮಂದಿ ಮುಂತಾದ ಹಲವು ಸೆಟ್ಟಿಗಾರಸಮಸ್ತರು' ಪಾರ್ಶ್ವದೇವರಿಗೆ ಉಂಬಳಿಯಾಗಿ ಕೊಟ್ಟಿದ್ದ ಸ್ಥಳದವೊಳಗೆ ವಿಂಗಡಿಸಿ ಮೂರು ತಾವಿನ ಸ್ಥಳವನ್ನು ಮಳಲಗದ್ದೆ ಕಲ್ಲಪ್ಪನವರ ಮಗ ಕಪ್ಪುಗಳ್ಳರ ಬಸವಪ್ಪ ಎಂಬುವರಿಗೆ ಕ್ರಯಕ್ಕೆ ಕೊಟ್ಟಿದ್ದನ್ನು ತಿಳಿಸುತ್ತದೆ.

ಈ ದೊರೆಯ ಕ್ರಿ.ಶ. ೧೬೬೩ಕ್ಕೆ ಸೇರಿದ ನಾಲ್ಕು ಶಾಸನಗಳಿವೆ. ಅವುಗಳಲ್ಲಿ ಮೊದಲನೆಯ ಶಾಸನದಲ್ಲಿ[22] ಮುಂಡಲಿ ಮುಪತ್ತಿನಮಠಕ್ಕೆ ಬಿಟ್ಟ ೧೨ ಎತ್ತಿನ ಮಾನ್ಯವನ್ನು, ಎರಡನೆಯ ಶಾಸನದಲ್ಲಿ[23] ಸುಣ್ಣ ಆಲೂರ ಪುರಾಣಸೆಟ್ಟಿಯ ಶಾಂತಪ್ಪನ ಕೈಯಲ್ಲಿ $931\frac{1}{2}$ ವರಹವನ್ನು ತೆಗೆದುಕೊಂಡು, ಇದೇ ಪುರಾಣಸೆಟ್ಟಿಯ ಶಾಂತಪ್ಪನು ಕಟ್ಟಿಸಿದ ಮಠಕ್ಕೆ ಗಾಜನೂರ ಸೀಮೆಗೆ ಸೇರಿದ ಪುರದಹಾಳ ಎಂಬ ಗ್ರಾಮವನ್ನು ದತ್ತಿ ಬಿಟ್ಟದ್ದನ್ನು, ಮೂರನೆಯ ಶಾಸನದಲ್ಲಿ[24] 'ಭುವನಗಿರಿದುರ್ಗದ (ಕವಲೇದುರ್ಗದ) ಅರಗದ ಪೇಟೆ ಸಮೀಪದಲ್ಲಿ ದುರ್ಗದ' ತಿಮ್ಮಣ್ಣನು ಕಟ್ಟಿಸಿದ ಮುಪತ್ತಿನಮಠಕ್ಕೆ ಬಿಟ್ಟ ಎತ್ತಿನ ಮಾನ್ಯವನ್ನು ಮತ್ತು ನಾಲ್ಕನೆಯ ಶಾಸನದಲ್ಲಿ[25] ಸಿದ್ದಲಿಂಗಣ್ಣನ ಮಗ ಶಾಂತೈಯ್ಯನಿಂದ ೩೦೦ ವರಹಗಳನ್ನು ಕಾಣಿಕೆಗೆ ತೆಗೆದುಕೊಂಡು ಸಂಗಮೇಶ್ವರದ ಕೆರೆಯ ಬಳಿ ಸಿದ್ದಲಿಂಗಣ್ಣನು ಕಟ್ಟಿಸಿದ ಮುಪತ್ತಿನಮಠಕ್ಕೆ ಮೊಸರೂರಸೀಮೆಗೆ ಸೇರಿದ ಕಲೂರು ಎಂಬ ಗ್ರಾಮದಲ್ಲಿ ಭೂಮಿಯನ್ನು ದತ್ತಿಯಾಗಿ ಬಿಟ್ಟರೆಂದು ಹೇಳಿದೆ.

ಈ ದೊರೆಯ ಕೊನೆಯ ಶಾಸನ ಕ್ರಿ.ಶ. ೧೬೬೫ರದು.[26] ಇದರಲ್ಲಿ ದೊರೆಯು ಸಿಂದಿಕೆ ಚೆನ್ನಮಲ್ಲಿಸೆಟ್ಟಿಯಿಂದ ಕಾಣಿಕೆಗೆ ೭೫೦ ವರಹಗಳನ್ನು ತೆಗೆದುಕೊಂಡು ಮುರಿಕಲ್ಲಿನಲ್ಲಿ ಅತ್ತಿಮೂರ ಸಂಗಪ್ಪಸೆಟ್ಟಿ ಮಗ ಚೆನ್ನಮಲ್ಲಸೆಟ್ಟಿ ಕಟ್ಟಿಸಿದ ಮುಪತ್ತಿನಮಠದ ಧರ್ಮಕ್ಕೆ ಮೊಸರೂರ ಸೀಮೆಗೆ ಸೇರಿದ ಕೊಟ್ಟಿಗೆ ಎಂಬ ಗ್ರಾಮದಲ್ಲಿ ಭೂಮಿಯನ್ನು ದತ್ತಿ ಬಿಟ್ಟೆನೆಂದು ಹೇಳಿದೆ.

ಕೆಳದಿ ದೊರೆ ಶಿವಪ್ಪನಾಯಕನಿಗೆ ಸೇರಿದ ಒಂದೇ ಒಂದು ದಾನಶಾಸನದಲ್ಲಿ[27] ಅವನು ಹೊಸಂಗಡಿಯಲ್ಲಿ ಹಸರದ ಚೆನ್ನಣ್ಣನು ಕಟ್ಟಿಸಿದ ಮುಪತ್ತಿನ ಮಠಕ್ಕೆ ಆವಿನಹಳ್ಳಿಸೀಮೆಗೆ ಸೇರಿದ ಬಾಗಿನವಾಡಿ ಎಂಬಲ್ಲಿ ಭೂಮಿಯನ್ನು ದತ್ತಿಯಾಗಿ ಕೊಟ್ಟಿನೆಂದಿದೆ.

ಭದ್ರಪ್ಪನಾಯಕನ ಕಾಲಕ್ಕೆ ಸೇರಿದವು ಮೂರು ಶಾಸನಗಳು. ಕ್ರಿ.ಶ. ೧೬೬೨ರ ಶಾಸನದಲ್ಲಿ[28] ದೊರೆಯು ಜಿಡ್ಡಿಸೀಮೆಗೆ ಸೇರಿದ ಕಕ್ಕಿನಕಾಲ ಗ್ರಾಮದಲ್ಲಿ ಭೂಮಿಯನ್ನು ಹೆರೂರ ಗವಿ ಕರಿಬಸವರಾಜದೇವರಿಗೆ ಅದೇ ಗ್ರಾಮದ ಮಾರ್ಗಸ್ಥಳದ ಮಠಕ್ಕೆ ವೃತ್ತಿಯಾಗಿ ಬಿಟ್ಟನೆಂದಿದೆ. ಎರಡನೆಯ ಶಾಸನವು[29] ಅರುನಾಡಸೀಮೆಯ ಕಂದಡಿಗನಹಾಳಿ ಮಠತ್ತಿನಮಠಕ್ಕೆ ಮೇಳದ ಶಿವಲಿಂಗಯ್ಯ ಕೈಯಲ್ಲಿ ಅರಮನೆಗೆ ಕ್ರಯಗ ೩೨೦ ವರಹವನ್ನು ಪಡೆದು ಅರುನಾಡಹೋಬಳಿ ಕುದು[?]ನಸೀಮೆಯ ಕುರುಗೋಡಿಗ್ರಾಮದಲ್ಲಿ ಭೂಮಿಯನ್ನು ವೃತ್ತಿಯಾಗಿ ಬಿಟ್ಟನೆಂದು ಹೇಳುತ್ತದೆ. ಶಿವಲಿಂಗಿ ಎಂಬುವರು ಕೆಳದಿ ರಾಜ್ಯದಲ್ಲಿದ್ದ ಸ್ವಕ್ಷದ ಮನುಗಿ.

ಈ ಅರಸನ ಇನ್ನೊಂದು ತಾಮ್ರಶಾಸನವು[30] ಒಂದೇ ಹಲಗೆ ಇದು ಅಪೂರ್ಣವಾಗಿದೆ. ಆದರೂ ಇದು ಐತಿಹಾಸಿಕವಾಗಿ ಮುಖ್ಯವಾದ ತಾಮ್ರಶಾಸನ. ಕೆಳದಿನೃಪ ವಿಜಯದಲ್ಲಿ ಹೇಳಿರುವ ಕೆಳದಿ ಅರಸರ ಮತ್ತು ಬೀಳಗಿ ಅರಸರ ಬಾಂಧವ್ಯವನ್ನು ಇದು ದೃಢೀಕರಿಸುತ್ತದೆ. ಘಂಟಿಕ್ಕೊರೆಯರ ಪುತ್ರಿಯಾದ ಘಂಟೆ ಅವ್ವಾಜಿಯಿಂದ ಮಹಾಮತ್ತಿನಮಠಕ್ಕೆ ಭೂಮಿಯನ್ನು ದತ್ತಿಯಾಗಿ ಕೊಟ್ಟಿದ್ದನ್ನು ಹೇಳುತ್ತದೆ. ಈ ಮಹಾಮತ್ತಿನಮಠ ಬಹುಶಃ ಕವಲೇ ದುರ್ಗದ ಮಹಾಮತ್ತಿನಮಠವೇ ಆಗಿರಬೇಕು.[31] ದತ್ತಿಕೊಟ್ಟ ಈ ಭೂಮಿಯು ಬೀಳಗಿಸೀಮೆ ಯೊಳಗಿದ್ದು ಅದನ್ನು ಘಂಟಿಕ್ಕೊರೆಯರು ಘಂಟೆ ಅವ್ವಾಜಿಯನ್ನು ಕೆಳದಿ ದೊರೆ ಭದ್ರಪ್ಪನಾಯಕನಿಗೆ ಮದುವೆಮಾಡಿಕೊಡುವ ಸಂದರ್ಭದಲ್ಲಿ ಧಾರಾದತ್ತವಾಗಿ ಕೊಟ್ಟಿದ್ದು. ಬಹುಶಃ ಈ ಭೂಮಿಯನ್ನು ರಾಣಿಯು ತನ್ನ ಪತಿ ಭದ್ರಪ್ಪನಾಯಕನ ಮರಣಾನಂತರ ಮಠಕ್ಕೆ ದತ್ತಿಕೊಟ್ಟಿರಬೇಕು. ಇದರಲ್ಲಿ ಘಂಟೆ ಅವ್ವಾಜಿಯವರೆಗಿನ ಬೀಳಗಿ ಅರಸರ ವಂಶಾವಳಿಯನ್ನು ಹೇಳಿದೆ

ಕೆಳದಿ ಅರಸ ಸೋಮಶೇಖರನಾಯಕನಿಗೆ ಸೇರಿದ ಐದು ತಾಮ್ರಶಾಸನಗಳಲ್ಲಿ ಎರಡು ಶಾಸನಗಳು ಕ್ರಿ.ಶ. ೧೬೬೪ಕ್ಕೆ ಸೇರಿವೆ. ಸೋಮಶೇಖರನಾಯಕನು ಬಿದಿರೂರ (ಬಿದನೂರ) ಸೋಮೇಶ್ವರನ ಮಠಕ್ಕೆ ಹೊಸದುರ್ಗಸೀಮೆಗೆ ಸೇರಿದ ಗದ್ದವಳ್ಳಿ ಎಂಬ ಗ್ರಾಮವನ್ನು ಮತ್ತು ಭೂಮಿಯನ್ನು ದತ್ತಿಬಿಟ್ಟನೆಂದು ಎರಡು ಶಾಸನಗಳಲ್ಲಿದೆ.[32] ಶಿವಪ್ಪನಾಯಕನ ಹೆಸರಲ್ಲಿ ಕೊಡದ ಎಂಬಲ್ಲಿ ಕಟ್ಟಿಸಿದ ಮಠತ್ತಿನಮಠಕ್ಕೆ ವಸುಧಾರೇ ಹೋಬಳಿ ವಳೀ ಜೇಡಗಸೀಮೆಗೆ ಸೇರಿದ ಕಬ್ಬಿನಹಳ್ಳಿ ಗ್ರಾಮವನ್ನು ನಾಗಮ್ಮಾಜಿಯು ದತ್ತಿ ಬಿಟ್ಟ ಮತ್ತು ಮಹಾಮಂಡಲನಾದ ಜಂಟಿ ಪಟ್ಟಿಯ ಮರೆಗಳಲಿ ಗ್ರಾಮದಲ್ಲಿ ಭೂಮಿಯನ್ನು ಅದರ ಮಠತ್ತಿನಮಠಕ್ಕೆ ಆ ಮೊದಲು ಭದ್ರಪ್ಪನಾಯಕನು ಬಿಟ್ಟ ದತ್ತಿಯನ್ನು ಸೋಮಶೇಖರನಾಯಕ ಮುಂದುವರಿಸಿದ ವಿಷಯ ಗಳು ಎರಡು ಶಾಸನಗಳಲ್ಲಿ ಉಕ್ತವಾಗಿದೆ.[33] ಮತ್ತೊಂದು ಶಾಸನದಲ್ಲಿ[34] ಇದೇ ನಾಯಕನಿಂದ ಕೋಟೀಶ್ವರದಲ್ಲಿ ಪರಮೇಶ್ವರ ಅವ್ವಾಜಿಯು ಕಟ್ಟಿಸಿದ ಮಠತ್ತಿನಮಠಕ್ಕೆ ಬಾರಕೂರ ಹೋಬಳಿ ನಾಲ್ವತ್ತನಾಡಸೀಮೆ ಒಳಗಣ ಅಸೋಡ ಎಂಬೂರಲ್ಲಿ ಭೂಮಿಯನ್ನು ಬಿಟ್ಟನೆಂದು ಹೇಳಿದೆ.

ಇದೇ ನಾಯಕನ ಕ್ರಿ.ಶ. ೧೬೬೫ರ ಮೂರು ತಾಮ್ರಶಾಸನಗಳಲ್ಲಿ[35] ಕ್ರಮವಾಗಿ ಕಲಿಸೆಯಿಂದ ಅಂಬಲಿಗೊಳಕ್ಕೆ ಹೋಗುವ ಮಾರ್ಗದಲ್ಲಿ ಚಿಕ್ಕ ಅರಮನೆಯ ಶಾಂಕ್ರಯ್ಯನೆಂಬುವನು ಕಟ್ಟಿಸಿದ ಮಠತ್ತಿನಮಠಕ್ಕೆ 'ಕಲುಸೆಸೀಮೆಯ ಕೂಪ್ರನಾಡದ ಒಳಗಣ ಶಿರುಗುಪೆ' ಎಂಬ ಊರನ್ನು ಸದಾಶಿವಸಾಗರದಲ್ಲಿ ಹೊಸೂರ ಜೋಯಿಸರು ಕಟ್ಟಿಸಿದ 'ಶ್ರೀಕೃಷ್ಣಮಠಕ್ಕೆ' ಕೆಳದಿಯ ಸೀಮೆಯ ಕೂಪ್ರನಾಡದ ಅಣಲೆಕೊಪ್ಪ ಎಂಬೂರಲ್ಲಿ ಭೂಮಿಯನ್ನು, ಕಬ್ಬುನಾಡಸೀಮೆಯ ಮಗವಡಿಗ್ರಾಮದ ಕಾಲುವಳಿ ಕಡೆಕೊಪ್ಪದಲ್ಲಿ ವಡಮುಖದ ಸಂಗನ ಬಸವರಾಜದೇವರ ಶಿಷ್ಯ ಶಿವಲಿಂಗದೇವರು ಕಟ್ಟಿಸಿದ ಮಠತ್ತಿನಮಠಕ್ಕೆ ಅವರಿಂದ ಕ್ರಯವಾಗಿ ೩೭೮ ಗದ್ಯಾಣಗಳನ್ನು ತೆಗೆದುಕೊಂಡು ಅದೇ ಗ್ರಾಮದಲ್ಲಿ ಭೂಮಿಯನ್ನು ದತ್ತಿಗಳಾಗಿ ಕೊಟ್ಟ ವಿಷಯಗಳ ಉಲ್ಲೇಖಗಳಿವೆ. ಕಬ್ಬುನಾಡು ಈಗಿನ ನಗರ ತಾಲ್ಲೂಕು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗ

ವನ್ನೊಳಗೊಂಡ ಭಾಗ. ಈ ಭಾಗದಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಿದ್ದರಿಂದ ಹೀಗೆ ಕರೆದಿರಬಹುದು. ಇಂದಿಗೂ ಈ ಭಾಗದಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಕೆಸನೂರಸೀಮೆಯ ಉಳುವೆ ಎಂಬಲ್ಲಿ ಸೋಮಶೇಖರನಾಯಕನ ತಾಯಿ ಲಿಂಗಮ್ಮಾಜಿ ಹೆಸರಿನಲ್ಲಿ ಕಟ್ಟಿಸಿದ ಸಿದ್ಧಲಿಂಗೇಶ್ವರದೇವಾಲಯದ ಕಟ್ಟಳೆ ಕಂದಾಚಾರ ಸತ್ರ ಮುಂತಾದ ಧರ್ಮವನ್ನು ನಡೆಸಿಬರಲೋಸುಗ ಕ್ರಿ.ಶ. ೧೬೬೭ರಲ್ಲಿ ಈ ನಾಯಕ ಕೈಸೂದಿ, ಕಿರುಬುಣುಸೆ, ಜಂಬಿನಳ್ಳಿ ಮತ್ತು ಹಂದಿಗೋಡು ಎಂಬ ಗ್ರಾಮಗಳಲ್ಲಿ ಭೂಮಿಯನ್ನು ದತ್ತಿಕೊಟ್ಟನು.[36] ಅದೇ ವರ್ಷ ಮೊಸರೂರಸೀಮೆಯ ಕಲ್ಲೂರಹೋಬಳಿ ಕಳಲೆಗ್ರಾಮದಲ್ಲಿನ ಭೂಮಿಯನ್ನು ಮಹಾಮಹತ್ತಿನ ಒಳಗಾದ ದುರ್ಗ(ಕವಲೇದುರ್ಗ)ದಲ್ಲಿ ತಿಮ್ಮಣ್ಣನಾಯಕನು ಕಟ್ಟಿಸಿದ ಮಠಕ್ಕೆ ಗ ೨೧೦ಹಕ್ಕೆ ಕ್ರಯವಾಗಿ ನೀಡಿದನು.[37] ಇದೇ ವರ್ಷಕ್ಕೆ ಸೇರಿದ ಮೂರನೆಯ ಶಾಸನದಲ್ಲಿ[38] ಕೆಸನೂರಸೀಮೆಯಲ್ಲಿನ ಉಳುವೆ ಎಂಬಲ್ಲಿ ಲಿಂಗಮ್ಮಾಜಿಯ ಹೆಸರಲ್ಲಿ ಕಟ್ಟಿಸಲಾದ ಮಹತ್ತಿನಮಠಕ್ಕೆ ಇದೇ ದೊರೆ ಉಳುವೆ, ಕಿರುಬುಣಸೆ, ತುಂಬರಿ ಮತ್ತು ಭದ್ರಾಪುರ ಮುಂತಾದ ಸ್ಥಳಗಳಲ್ಲಿ ಭೂಮಿಯನ್ನು ದತ್ತಿ ಕೊಟ್ಟನೆಂದು ಹೇಳಿದೆ.

ಕ್ರಿ.ಶ. ೧೬೬೮ ಮತ್ತು ೧೬೬೯ರ ಎರಡು ಶಾಸನಗಳಲ್ಲಿ[39] ದೊರೆಯು ಪಟ್ಟಗುಪ್ಪೆ ಹೆದ್ದಾರಿಯಲ್ಲಿ ಹೊಳೆಯಮ್ಮ ಎಂಬುವಳು ಕಟ್ಟಿಸಿದ ಮಹತ್ತಿನಮಠಕ್ಕೆ ಪಟ್ಟಗುಪ್ಪೆಸೀಮೆಗೆ ಸೇರಿದ ಜಂಬವಳ್ಳಿ ಮತ್ತು ಗುಂಡಿಕೆಯಿ ಎಂಬ ಗ್ರಾಮಗಳನ್ನು ಮತ್ತು ಜೆನಿ ಎಂಬ ಗ್ರಾಮದಲ್ಲಿ ಭೂಮಿಯನ್ನು ದತ್ತಿಯಾಗಿ ಕೊಟ್ಟನೆಂದು ಹೇಳಿದೆ. ಬಿಜಾಪುರದ ಎರಡನೆಯ ಆದಿಲ್‌ಷಾಹನು ಸೋಮಶೇಖರನಾಯಕನ ರಾಜ್ಯಕ್ಕೆ ದಂಡೆತ್ತಿಬಂದ ಸಮಯದಲ್ಲಿ ಆತನ ಸೇನಾಪತಿಗಳು ನಾಯಕನ ಮೂರು ಕೋಟೆಗಳನ್ನು ವಶಪಡಿಸಿಕೊಂಡರೆಂದು ಹೇಳಿದೆ. ಬಹುಶಃ ಆಗ ಘಟ್ಟದ ಕೆಳಗಿನ ಐದು ಗ್ರಾಮಗಳು ತುರುಷ್ಕರಿಗೆ ಸುಂಕವನ್ನು ಕೊಡಬೇಕಾಯಿತು. ಈ ಗ್ರಾಮಗಳಿಂದ ಬರಬೇಕಾದ ಎತ್ತಿನ ಮಾನ್ಯವನ್ನು ನಾಯಕನು ಬಿಟ್ಟುಕೊಟ್ಟನು[40]. ದಾನಿವಾಸದಸೀಮೆಗೆ ಸೇರಿದ ಎಡೆಹಳ್ಳಿ ಎಂಬೂರಲ್ಲಿ ಚೆನ್ನಣ್ಣನ ಮಗ ವೆಂಕಟಯ್ಯನೆಂಬುವನು ಮತ್ತು ಪಟ್ಟಗುಪ್ಪೆ ಹೆದ್ದಾರಿಯಲ್ಲಿ ಅಸಗನಕೊಪ್ಪದ ಹೊಳೆಯ ಬಳಿಯಲ್ಲಿ ಮರೆಬೋವನು ಎರಡು ಮಹತ್ತಿನಮಠಗಳನ್ನು ಕಟ್ಟಿಸಿದ್ದು ಅವುಗಳಿಗೆ ಕ್ರಮವಾಗಿ ದಾನಿವಾಸದಸೀಮೆಯ ಎಡೆಹಳ್ಳಿ ಮತ್ತು ಹಂದಿಗುಣಿ ಗ್ರಾಮಗಳನ್ನು ಆರುನಾಡಹೋಬಳಿ ಕುಮ್ಮಟದಸೀಮೆವೊಳಗಣ ಅಸಗನಕೊಪ್ಪ ಮತ್ತು ಕುಮ್ಮರಿಕನ ಗ್ರಾಮಗಳನ್ನು ನಾಯಕನು ದತ್ತಿ ಬಿಟ್ಟನು [41]

ಈ ಸ್ಥಳದಲ್ಲಿ ದೊರೆತ ಈ ನಾಯಕನ ಕೊನೆಯ ಶಾಸನವು ಕ್ರಿ.ಶ. ೧೬೭೧ನೆಯದು.[42] ಇದರಲ್ಲಿ ಜೆನಿ ಎಂಬಲ್ಲಿ ಹುಜೂರಮೇಳದ 'ಪುಟ್ಟತಾಯಿ ಜಂಬುಖಂಡಿ ಚೆಂನಿ' ಎಂಬುವವಳು ಕಟ್ಟಿಸಿದ ಮಠಕ್ಕೆ ದೊರೆಯು ಇವಳಿಂದ ಅರಮನೆಗೆ ೩೦೦ ವರಹಗಳನ್ನು ತೆಗೆದುಕೊಂಡು ಚಿಕ್ಕಜೆನಿ ಎಂಬ ಗ್ರಾಮವನ್ನು ದತ್ತಿಬಿಟ್ಟನೆಂದು ಹೇಳಿದೆ. ಈಕೆ ಹುಜೂರುಮೇಳದವಳು ಎಂದರೆ ಅರಮನೆಗೆ ಸೇರಿದ ನರ್ತಕಿ. ಈಕೆ ಕಟ್ಟಿಸಿದ ಇದೇ ಮಠಕ್ಕೆ ಸೋಮಶೇಖರನಾಯಕನ ಅರಸಿಯಾದ ಚೆನ್ನಮ್ಮಾಜಿ ಕ್ರಿ.ಶ. ೧೬೭೩ರಲ್ಲಿ ಐದು ಎತ್ತಿನ ಮಾನ್ಯವನ್ನು ಬಿಟ್ಟಳು.[43] ಇಂತಹ ಇನ್ನೊಬ್ಬ ಮೇಳದವಳು ಶಿವಲಿಂಗಿ. ಈಕೆ ಆರುನಾಡಸೀಮೆಯ ಕಂಪಡಿಗನವ... ಎಂಬಲ್ಲಿ ಕಟ್ಟಿಸಿದ ಮಹತ್ತಿನಮಠಕ್ಕೆ ಚೆನ್ನಮ್ಮಾಜಿಯು ಕ್ರಿ.ಶ. ೧೬೭೨ರಲ್ಲಿ ಐದು ಎತ್ತಿನ ಮಾನ್ಯವನ್ನು ಬಿಟ್ಟಳು[44].

ರಾಣಿ ಚೆನ್ನಮ್ಮಾಜಿ ನೀಡಿದ ದಾನಶಾಸನಗಳಲ್ಲಿ ಕೆಲವು ಮಹತ್ತಿನಮಠಗಳಿಗೆ ನೀಡಲಾದವುಗಳು. ಕೆಸನೂರುಸೀಮೆಯ ಉಳುವೆಗ್ರಾಮದಲ್ಲಿ 'ಕರ್ತರಯ' (ಸೋಮಶೇಖರ ನಾಯಕ) ತನ್ನ ತಾಯಿ ಲಿಂಗಮ್ಮಾಜಿಯ ಹೆಸರಲ್ಲಿ ಕಟ್ಟಿಸಿದ ಮಠ. (೧೬೭೩), ಕುಂಬಸಿಯಲ್ಲಿ ತಾನೇ ಕಟ್ಟಿಸಿದ ಚೆನ್ನಾಪುರದ ಮಠ (೧೬೭೪), ಗಾಜನೂರಸೀಮೆಯ ಎಡೆಹಳ್ಳಿಯಲ್ಲಿ ಶಿವ

ಮೊಗ್ಗೆಯ ಪುಟ್ಟಣ್ಣ ಕಟ್ಟಿಸಿದ ಮಠ (೧೬೭೭), ವಾನಿವಾಸದಸೀಮೆ ಹೊಸಹಳ್ಳಿಯ ಮಠ (೧೬೭೯), ಆಗುಂಬೆಯಲ್ಲಿ 'ಪಾರ್ವತಿ ಅಮ್ಮ' ಕಟ್ಟಿಸಿದ ಮಠ (೧೬೮೧), ಭುವನಗಿರಿದುರ್ಗದಲ್ಲಿ ದುರ್ಗದ ತಿಮ್ಮಣ್ಣ ಕಟ್ಟಿಸಿದ ಮಠ (೧೬೯೪)–ಇವು ಆಕೆಯಿಂದ ದಾನಗಳನ್ನು ಪಡೆದ ಮಠಗಳು[45] ಕೆಲವು ಸಂದರ್ಭಗಳಲ್ಲಿ ಗ್ರಾಮಗಳನ್ನು, ಒಮ್ಮೊಮ್ಮೆ ಭೂಮಿಯನ್ನು, ದಾನವಾಗಿ ನೀಡಿರುವಳಲ್ಲದೆ. ಇನ್ನು ಕೆಲವು ಸಂದರ್ಭಗಳಲ್ಲಿ ಆ ಭೂಮಿಗಳನ್ನು ಕ್ರಯಕ್ಕೆ ಕೊಟ್ಟದ್ದೂ ಉಂಟು ರೇವಣಸಿದ್ಧೇಶ್ವರ ಸಂಪ್ರದಾಯದ ಅರಸಿನಗೇರಿ ಮಹಾಂತಾರಾಧ್ಯನ ಪೌತ್ರ ರಾಜಪ್ಪ ಆರಾಧ್ಯನ ಪುತ್ರ ಸಿದ್ಧಬಸವಾರಾಧ್ಯ ಎಂಬುವನಿಗೆ ನೀಡಿದ ಹಂದಿಗನಗ್ರಾಮಕ್ಕೆ ೩೦೦ ವರಹಗಳನ್ನೂ ಪುಟ್ಟಣ್ಣನ ಮಠಕ್ಕೆ ನೀಡಿದ ಗ್ರಾಮಗಳಿಗೆ ೧೫೦೦ ವರಹಗಳನ್ನೂ ದಾಸನಗದ್ದೆ ವಶೀಕೃತ ಮಠಕ್ಕಾಗಿ ನೀಡಿದ ಭೂಮಿಗೆ ೮೧ ವರಹಗಳನ್ನೂ ಕ್ರಯವೆಂದು ಈಕೆ ಪಡೆದುದಾಗಿ ತಿಳಿದಿದೆ.[46] ಇನ್ನೆರಡು ಶಾಸನಗಳಲ್ಲಿ ಪುನರ್ದತ್ತಿಗಳ ಪ್ರಸ್ತಾಪವಿದೆ ಕೆಳದಿಯ ವೆಂಕಟಪ್ಪನಾಯಕನು ಇಕ್ಕೇರಿಯ ರುದ್ರಮುನಿದೇವನಿಗೆ ತಾಳೇಗರಿಯಲ್ಲಿ ಬರೆಸಿಕೊಟ್ಟ ದತ್ತಿ ಶಾಸನವನ್ನು ಆ ತಾಳೇಗರಿ ಶಿಥಿಲವಾದುದರಿಂದ ಈಕೆ ತಾಮ್ರಶಾಸನದಲ್ಲಿ ಬರೆಸಿಕೊಟ್ಟಳು.[47] ಇದೇ ವೆಂಕಟಪ್ಪನಾಯಕನು ದುರ್ಗದ ತಿಮ್ಮಣ್ಣ ಕಟ್ಟಿಸಿದ ಮಠಕ್ಕೆ ಕೊಟ್ಟ ದತ್ತಿಯ ಪಟ್ಟಿ ಶಿಥಿಲವಾದ್ದರಿಂದ ಅದೇ ದತ್ತಿಯನ್ನು ಚೆನ್ನಮ್ಮಾಜಿ ಮುಂದುವರಿಸಿ ತಾಮ್ರಶಾಸನದಲ್ಲಿ ಬರೆಸಿ ಕೊಟ್ಟಳು.[48]

ಈ ಸ್ಥಳದಲ್ಲಿ ದೊರೆತ ಚೆನ್ನಮ್ಮಾಜಿಯ ಕೊನೆಯ ಶಾಸನದಲ್ಲಿ (೧೬೯೫) ಅರಗದ ಕಂಬಾಳ ಸಿದ್ಧರಾಮದೇವನ ಶಿಷ್ಯ ವಿರುಪಾಕ್ಷದೇವನಿಂದ ೨೦೦ ವರಹಗಳನ್ನು ಅರಮನೆಗೆ ತೆಗೆದುಕೊಂಡು ಮಘುವಂಕನಾಡಸೀಮೆ ಬಾಳಗೋಡುಗ್ರಾಮದಲ್ಲಿ ಭೂಮಿಯನ್ನು ದತ್ತಿಬಿಟ್ಟಳೆಂದು ಹೇಳಿದೆ.[49]

ಈ ಸ್ಥಳದಲ್ಲಿ ಬಂದನೆಯ ಬಸವಪ್ಪನಾಯಕನ ಕಾಲಕ್ಕೆ ಸೇರಿದ ೧೧ ತಾಮ್ರಶಾಸನಗಳಿವೆ. ಅವುಗಳಲ್ಲಿ–೧೭೦೩ರಲ್ಲಿ ದುರ್ಗದ ತಿಮ್ಮಣ್ಣನು ಕಟ್ಟಿಸಿದ ಮಠಕ್ಕೂ ಕಳಿರೆಯ ಗುರುಮಲ್ಲಿಕಾರ್ಜುನದೇವನಿಂದ ಆರು ವರಹಗಳನ್ನು ಅರಮನೆಗೆ ತೆಗೆದುಕೊಂಡು ಆತನಿಗೆ ದಪ್ಪದವಾಗಿಗ್ರಾಮದಲ್ಲಿ ಭೂಮಿಯನ್ನು ಬಿಟ್ಟುದೂ (೧೭೦೬) ತೀರ್ಥರಾಜಪುರ ಎಂಬಲ್ಲಿ ಲಿಂಗಮ್ಮಾಜಿಯು ಕಟ್ಟಿಸಿದ ಮಹತ್ತಿನ ಮಠಕ್ಕೂ (೧೭೦೮) ಮಂಡಲಿಯ ಮುಳ್ಳಸೂಜಿಸ್ವಾಮಿ ಮಠಕ್ಕೂ (೧೭೦೯), ಮುನ್ನಿನಾಡಸೀಮೆ ಮೂಡಗೊಪ್ಪಗ್ರಾಮದಲ್ಲಿ ಶಾಂತವೀರಪ್ಪ ಕಟ್ಟಿಸಿದ ಮಠಕ್ಕೂ (೧೭೧೧) ಮತ್ತು ಅರಗದಲ್ಲಿ ಕವಳಿ ವೀರಶೆಟ್ಟಿ ಕಟ್ಟಿಸಿದ ಮಠಕ್ಕೂ (೧೭೧೩)– ನೀಡಲಾದ ದಾನಗಳ ಉಲ್ಲೇಖಗಳಿವೆ.[50]

ಇವುಗಳಲ್ಲದೆ ಚೊಕ್ಕಸದ ಸಿದ್ಧಬಸವಯ್ಯನೆಂಬುವನು ಹಂಪೆ ಜಾತ್ರೆಯಲ್ಲಿ ನಡೆಸುವ ಧರ್ಮಕ್ಕೆ ಯಡತೊರೆಸೀಮೆಯ ಕಂಬದಹಾಳ ಗ್ರಾಮದಲ್ಲಿ ಭೂಮಿಯನ್ನೂ (೧೭೦೮). ಬಿದನೂರಿಂದ ಅರಗ ಎಂಬಲ್ಲಿಗೆ ಹೋಗುವ ಮಾರ್ಗದಲ್ಲಿ ಭದ್ರಯ್ಯನ ಹೆಸರಲ್ಲಿ ಕಟ್ಟಿಸಿದ ಮಠಕ್ಕೆ (೧೭೦೯) ಕುಸುಬೂರಗ್ರಾಮದಲ್ಲಿ ಭೂಮಿಯನ್ನೂ ತೀರ್ಥರಾಜಪುರದಲ್ಲಿ ವೀರಮ್ಮಾಜಿ ಕಟ್ಟಿಸಿದ ಮಠಕ್ಕೆ (೧೭೦೯) ಹಿರಣದಗ್ರಾಮದಲ್ಲಿ ಭೂಮಿಯನ್ನೂ ಮೂಡಗೊಪ್ಪಗ್ರಾಮದಲ್ಲಿ ಶಾಂತವೀರಪ್ಪನು ಕಟ್ಟಿಸಿದ ಮಠಕ್ಕೆ (೧೭೧೧) ಭೂಮಿಯನ್ನೂ ದತ್ತಿಯಾಗಿ ಕೊಟ್ಟ ಉಲ್ಲೇಖಗಳಿವೆ.[51]

ಈ ಸ್ಥಳದಲ್ಲಿ ದೊರೆತ ಕೊನೆಯ ಎರಡು ತಾಮ್ರಶಾಸನಗಳು ಕೆಳದಿ ಅರಸ ಎರಡನೆಯ ಸೋಮಶೇಖರನಾಯಕನ ಕಾಲಕ್ಕೆ ಸೇರಿದವು. ಕ್ರಿ.ಶ. ಸುಮಾರು ೧೭೩೩ನೆಯ ವರ್ಷದ ಆ ಶಾಸನಗಳಲ್ಲಿ[52] ಕೊನೂರಲ್ಲಿ ಚೊಕ್ಕಸದ ಸಿದ್ಧಬಸವಯ್ಯನ ಹೆಂಡತಿ ವೀರಮ್ಮ ಎಂಬುವಳು ತನ್ನ ಮಗ ಭದ್ರಯ್ಯನ ಹೆಸರಲ್ಲಿ ಕಟ್ಟಿಸಿದ ಮಹತ್ತಿನಮಠಕ್ಕೂ ಮತ್ತು ಬಸವಲಿಂಗದೇವನು ಹೊಂಬುಜದ ಸೀಮೆ ಕಾರಗಲ್ಲಲ್ಲಿ ಕಟ್ಟಿಸಿದ ಮಹತ್ತಿನಮಠಕ್ಕೂ ನೀಡಿದ ದಾನಗಳನ್ನು ನಮೂದಿಸಲಾಗಿದೆ.

ಮೊದಲನೆಯ ಶಾಸನದಲ್ಲಿ ಅರಸನು ದಾನವನ್ನು 'ನಿರ್ವಾಣಯ್ಯ ಮಾವನವರು' ಹೇಳಿದುದರಿಂದ ನೀಡಿದನೆಂದಿದೆ. ಈತ ಅರಸನ ಮಾವ. ಇವನು 'ಕ್ರಿಯಾಸಾರ' ಎಂಬ ಕೃತಿಗೆ ಸಂಸ್ಕೃತದಲ್ಲಿ ವ್ಯಾಖ್ಯಾನ ಬರೆದಿದ್ದಾನೆ. ಇದಲ್ಲದೆ 'ಶಿವಪೂಜಾ ವಿಧಾನ' ಎಂಬ ಕೃತಿಯನ್ನು ಬರೆದಿದ್ದಾನೆ. ಎರಡನೆಯ ಸೋಮಶೇಖರನಾಯಕನ ಕಾಲದಲ್ಲಿ ಈತ ತುಂಬಾ ಪ್ರಭಾವಶಾಲಿಯಾಗಿದ್ದನೆಂದು ಕಾಣುತ್ತದೆ. 'ಕೆಳದಿನೃಪವಿಜಯ' ಗ್ರಂಥದಲ್ಲಿ ದೊರೆಯು ಸಂಪೂರ್ಣ ಅಧಿಕಾರವನ್ನು ತನ್ನ ಮಾವ ನಿರ್ವಾಣಯ್ಯನಿಗೆ ವಹಿಸಿದಂತೆ ಹೇಳಿದೆ.[53]

ಈ ಶಾಸನಗಳ ಅಧ್ಯಯನದಿಂದ ಅಂದಿನ ಪ್ರಭುಗಳು ಮತ್ತು ಇತರರು ಸದಾಶಿವಸಾಗರ (ಸಾಗರ). ಬಾರಕೂರು, ಭದ್ರಾಪುರ. ಅಂದಿಗೆ, ಕೆರೆಕೊಪ್ಪ, ಚಕೋಡು, ಮುಗುಂಬ, ಬಸರೂರು, ಆರಗ. ಹುಲಿಕಲ್ಲು, ಹೊಸಂಗಡಿ, ಬಿದನೂರು (ನಗರ). ಕೋಟೇಶ್ವರ, ಕಡೆಕೊಪ್ಪ, ಉಳುವೆ, ಯಡೆಹಳ್ಳಿ, ಆಗುಂಬೆ, ಮಂಡಲಿ. ತೀರ್ಥರಾಜಪುರ. ಕೋದೂರು (ಕೊಡೂರು), ಕಾರಗಲ್ಲು, ಭುವನಗಿರಿದುರ್ಗ (ಕವಲೇದುರ್ಗ) ಮುಂತಾದ ಕಡೆಗಳಲ್ಲಿ ಮಠಗಳನ್ನು ನಿರ್ಮಾಣಮಾಡಿಸಿ ಹೇರಳವಾಗಿ ದತ್ತಿಯನ್ನು ಕೊಟ್ಟರೆಂದು ತಿಳಿದು ಬರುತ್ತದೆ.

ರಾಜರುಗಳಲ್ಲದೆ ಅವರ ಪತ್ನಿಯರು, ತಾಯಂದಿರು ಮತ್ತು ರಾಜಮನೆತನದ ಇತರ ಪರಿವಾರದವರೂ ಮಠಗಳನ್ನು ಕಟ್ಟಿಸುತ್ತಿದ್ದರು. ಅನೇಕ ಸಂದರ್ಭಗಳಲ್ಲಿ ಸರಕಾರದ ಅಧಿಕಾರಿಗಳು ಮತ್ತು ಅವರ ಪತ್ನಿಯರು ಮಠಗಳನ್ನು ಕಟ್ಟಿಸುವ ಕಾರ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು. ಇವರಲ್ಲದೆ ಖಾಸಗಿ ವ್ಯಕ್ತಿಗಳಾದ ಬನದಮ್ಮ ಎಂಬ ದಾದಿಯು. ಶಿವಲಿಂಗಿ ಮತ್ತು ಪುಟ್ಟತಾಯಿ ಜಂಬುಖಂಡಿ ಚೆನ್ನಿ ಎಂಬ ನೃತ್ಯದ ಹುಡುಗಿಯರು ಅಲ್ಲದೆ ಶಾಂತಯ್ಯನೆಂಬುವನು ಸ್ವಇಚ್ಛೆಯಿಂದ ಮುಂದೆ ಬಂದು ಮಠಗಳನ್ನು ಕಟ್ಟಿಸಿ ಸರ್ಕಾರದಿಂದ ಭೂಮಿಯನ್ನು ಕೊಂಡು ಅದನ್ನು ದಾನಮಾಡಿದರೆಂದು ಕಂಡುಬರುತ್ತದೆ. ಕೆಲವು ಸಂದರ್ಭಗಳಲ್ಲಿ ಮಠಗಳು ಸರ್ಕಾರದಿಂದಲೇ ಭೂಮಿಯನ್ನು ಕೊಂಡುಕೊಂಡ ನಿದರ್ಶನಗಳನ್ನು ಕಾಣಬಹುದು. ವಿದ್ಯಾಪೀಠಗಳಾಗಿ, ಪೂಜಾಕ್ಷೇತ್ರಗಳಾಗಿ, ಸಾಮಾಜಿಕ ಜೀವನದ ಕೇಂದ್ರಗಳಾಗಿ ಮತ್ತು ಇವೆಲ್ಲಕ್ಕೂ ಮಿಗಿಲಾಗಿ ವೀರಶೈವ ತತ್ವದ ಮುಖ್ಯ ಕೇಂದ್ರಗಳಾಗಿ ವಿವಿಧ ಹಂತದ ಅಧಿಕಾರಿಗಳ ಮೂಲಕ ಬಹುಮುಖ ಕಾರ್ಯನಡೆಸುತ್ತಿದ್ದ ಪವಿತ್ರ ಸಂಸ್ಥೆಗಳೇ ಈ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಮಠಗಳು.

ಈ ಅರಸರ ಕಾಲದ ವೀರಶೈವ ಮಠಗಳು ವಾಸ್ತವವಾಗಿ ಅಲ್ಲಿ ಪ್ರಭುತ್ವ ನಡೆಸುತ್ತಿದ್ದವರ ಮತ್ತು ಅಲ್ಲಿನ ಜನತೆಯ ಧಾರ್ಮಿಕ ಶ್ರದ್ಧೆಯ ಪ್ರತಿಫಲವೆನ್ನಬಹುದು. ಸಮಾಜದ ವಿವಿಧ ಶ್ರೇಣಿಯಿಂದ ಬರುವ ವಿವಿಧ ವೃತ್ತಿಯ ಜನರು ವೀರಶೈವ ಸಿದ್ಧಾಂತದ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಹೋಗುವಲ್ಲಿ ವಿಶೇಷ ಆಸಕ್ತಿ ವಹಿಸಿದ್ದರೆಂಬುದು ಈ ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಸ್ವತಃ ಕೆಳದಿ ಅರಸರೇ ಈ ತತ್ವಾವಲಂಬಿಗಳೆಂದು ಈ ಶಾಸನಗಳಲ್ಲಿ ಸ್ಪಷ್ಟವಾಗುತ್ತದೆ. ಹೇರಳವಾಗಿ ಅನೇಕ ಮಹತ್ತಿನಮಠಗಳಿಗೆ ಕೊಟ್ಟಿರುವ ದತ್ತಿಗಳೇ ಇದಕ್ಕೆ ನಿದರ್ಶನ. ತಮ್ಮ ಶಾಸನಗಳಲ್ಲಿ ತಮ್ಮನ್ನು 'ವಿಶುದ್ಧವೈದಿಕಾದ್ವೈತಸಿದ್ಧಾಂತ' ಮತ್ತು 'ಶಿವಗುರುಭಕ್ತಿಪರಾಯಣ' ಎಂದು ಹೇಳಿಕೊಂಡಿರುವುದು ಗಮನಾರ್ಹ.

ಈ ಶಾಸನಗಳಲ್ಲಿ ದತ್ತಿಕೊಟ್ಟಿರುವ ಮಠಗಳಲ್ಲಿ ಮಹತ್ತಿನಮಠಗಳೇ ಹೆಚ್ಚು ಸಂಖ್ಯೆಯಲ್ಲಿವೆ. ಒಂದೆರಡು ವಶೀಕೃತಮಠಕ್ಕೂ ಮತ್ತು ಒಂದು ವಿರಕ್ತಮಠಕ್ಕೂ ದತ್ತಿಕೊಟ್ಟಿರುವುದನ್ನು ಇಲ್ಲಿ ಕಾಣಬಹುದು. ಈ ಸ್ಥಳದಲ್ಲಿ ದೊರೆತ ತಾಮ್ರಶಾಸನಗಳ ಪೈಕಿ ಎರಡು ಶಾಸನಗಳಲ್ಲಿ ಮುಸ್ಲಿಮರ ಮಸೀದಿಗೂ ದತ್ತಿಯನ್ನು ಕೊಟ್ಟಿರುವುದನ್ನು ಕಾಣಬಹುದು. ಇದು ಕೆಳದಿ ಅರಸರ ಧರ್ಮಸಹಿಷ್ಣುತೆ ಹಾಗೂ ಸಮದರ್ಶಿತ್ವವನ್ನು ತೋರಿಸುವ ಕುರುಹಾಗಿದೆ. ಕ್ರಿಶ್ಚಿಯನ್ನರ ಧರ್ಮಸಂಸ್ಥೆಗೆ ಕೊಟ್ಟಿರುವ ಉಲ್ಲೇಖಗಳಿಲ್ಲವಾದರೂ ಶಿವಪ್ಪನಾಯಕನ ಆಸ್ಥಾನದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚಿಗೆ ಕ್ರಿಶ್ಚಿಯನ್ನರಿದ್ದರೆಂದು ತಿಳಿದುಬಂದಿದೆ.[54]

ಮಠಗಳನ್ನು ಬಹುತೇಕ ಮಂದಿ ಸೇರಬಹುದಾದ ಆಯಕಟ್ಟಿನ ಸ್ಥಳದಲ್ಲಿ ಸ್ಥಾಪಿಸುತ್ತಿದ್ದರೆಂಬುದು ಈ ಶಾಸನಗಳಿಂದ ಸ್ಪಷ್ಟವಾಗುತ್ತದೆ. ನೀರಿನ ಸೌಲಭ್ಯ ಮತ್ತು ನಿತ್ಯಜೀವನಕ್ಕೆ ಬೇಕಾದ ಅಗತ್ಯ ವಸ್ತುಗಳು ಸಿಗುವಂತಹ ಸ್ಥಳಗಳಲ್ಲಿ ಮಠಗಳನ್ನು ಕಟ್ಟುತ್ತಿದ್ದರು. ನದಿಗಳ ದಂಡೆಯ ಮೇಲೆ, ಕೆರೆಗಳ ಹತ್ತಿರ, ಮಾರುಕಟ್ಟೆಯ ಹತ್ತಿರ ಮತ್ತು ದೇವಾಲಯಗಳ ಪಕ್ಕದಲ್ಲಿ ಸಾಮಾನ್ಯವಾಗಿ ಮಠಗಳನ್ನು ಕಟ್ಟಿದುದನ್ನು ಇಲ್ಲಿ ಕಾಣಬಹುದು. ಚಿಕ್ಕಲಿಂಗಣ್ಣ ಸಂಗಮೇಶ್ವರ ಕೆರೆಯ ಬಳಿಯಲ್ಲಿ, ಶಾಂತಯ್ಯ ಕಲಸೆಯಿಂದ ಅಂಜಳಿಗೊಳದ ಮಾರ್ಗದಲ್ಲಿ, ಹೊಳಿಯಮ್ಮ ಪಟ್ಟಗುಪ್ಪೆ ದೇವಾಲಯದಲ್ಲಿನ ಕೆರೆ ಹತ್ತಿರದಲ್ಲಿ ಮಠಗಳನ್ನು ಕಟ್ಟಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಇದಲ್ಲದೆ ನಗರ, ಇಕ್ಕೇರಿಗಳಂತಹ ರಾಜಧಾನಿಗಳಲ್ಲಿ, ಸದಾಶಿವಸಾಗರ, ಬಸರೂರುಗಳಂತಹ ಪಟ್ಟಣಗಳಲ್ಲಿ, ಭುವನಗಿರಿದುರ್ಗದಂತಹ ಪ್ರಮುಖ ಕೋಟೆಯ ಸ್ಥಳಗಳಲ್ಲಿ, ಉಳವಿಯಂತಹ ಪವಿತ್ರ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿದ್ದನ್ನು ಈ ಶಾಸನಗಳಲ್ಲಿ ಕಾಣಬಹುದು.

ಎಲ್ಲಾ ವೀರಶೈವಮಠಗಳು ಒಂದು ವ್ಯವಸ್ಥಿತ ರೂಪದಲ್ಲಿ ಒಟ್ಟಿಗೆ ಸೇರಿಕೊಂಡಿದ್ದವೆಂದು ಕಂಡುಬರುತ್ತದೆ. ಅಲ್ಲದೆ ಅವುಗಳ ಕಾರ್ಯಚಟುವಟಿಕೆಗಳು ಮಹಾಮಹತ್ತುಗಳೆಂಬ ಉನ್ನತಮಟ್ಟದ ಧಾರ್ಮಿಕ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿರಬಹುದೆಂದು ತೋರುತ್ತದೆ.

ಈ ಸ್ಥಳದ ಕೆಲವು ಶಾಸನಗಳಲ್ಲಿ ಮಠಾಧಿಪತಿಗಳ ಅರ್ಹತೆಗಳಾವುವು ಎಂಬುದನ್ನು ಹೇಳಿದೆ. ಮಠಾಧಿಪತಿಯಾಗುವ ಅಭ್ಯರ್ಥಿಯು ಜಗಳದ ಪ್ರವೃತ್ತಿಯವನಾಗಿರಕೂಡದು. ಅತಿಥಿಸತ್ಕಾರದ ಭಾವನೆಯುಳ್ಳವನಾಗಿರಬೇಕು. ನಂಬಿಕೆಗೆ ಅರ್ಹನಾಗಿರಬೇಕು. ಅವನು ಶಿಷ್ಯ ಪರಿವಾರವನ್ನು ಹೊಂದಿದವನಾಗಿರಬೇಕೆಂಬುದೇ ಈ ಶಾಸನಗಳಲ್ಲಿ ಹೇಳಿರುವ ಅರ್ಹತೆಗಳು. ಮಠಗಳಲ್ಲಿ ಆಗಾಗ್ಗೆ ಜನರು ಸೇರುತ್ತಿದ್ದುದರಿಂದಲೂ ಬಹಳ ಜಂಗಮರಿಗೆ ಆಶ್ರಯ ನೀಡುವ ಸ್ಥಳವಾದ್ದರಿಂದ ಅವು ಜನರಿಗೆ ಸತ್ರದಂತೆ ಇದ್ದುದರಿಂದ ಶೀಲವಂತಹ ಮಠದ ಮುಖ್ಯಾಧಿಕಾರಿಯು ಸಹಜವಾಗಿಯೇ ಎಲ್ಲರಿಗೂ ಪ್ರಿಯವಾದವನಾಗಿರಬೇಕಾಗಿತ್ತು.

ಮಠಗಳು ವಿವಿಧ ರೀತಿಯ ಕಾರ್ಯಗಳನ್ನು ನಡೆಸುತ್ತಿದ್ದವು ಎಂದು ಈ ಶಾಸನಗಳ ಅಧ್ಯಯನದಿಂದ ಇನ್ನೊಂದು ಅಂಶ ಸ್ಪಷ್ಟವಾಗುತ್ತದೆ. ತಮ್ಮಲ್ಲಿದ್ದ ವಿದ್ಯಾರ್ಥಿಗಳಿಗೆ ಬೆಂಬಲ ಕೊಡುವುದರ ಮೂಲಕ ಭಾರತೀಯ ತತ್ವಶಾಸ್ತ್ರದ ಷಡ್ದರ್ಶನಗಳನ್ನು ಕುರಿತು ಅಧ್ಯಯನಕ್ಕೆ ಪ್ರೋತ್ಸಾಹಿಸುತ್ತಿದ್ದವು. ಜಾತ್ರೆ, ಮೇಳಗಳಂತಹ ಪ್ರಮುಖ ಸಂದರ್ಭಗಳಲ್ಲಿ, ಪುಣ್ಯಕ್ಷೇತ್ರಗಳಲ್ಲಿ, ಧಾರ್ಮಿಕ ಸಮಾರಂಭಗಳನ್ನು ನೆರವೇರಿಸುತ್ತಿದ್ದವು. ಮಠಗಳು ಜನರಿಂದ ಧಾರ್ಮಿಕವಾದಂತಹ ಕಾಣಿಕೆಯನ್ನು ವಸೂಲು ಮಾಡುತ್ತಿದ್ದವು. ಜಂಗಮರಿಗೂ ಮತ್ತು ಇತರ ಜನರಿಗೂ ಉಪಕಾರವಾಗುವ ಸಲುವಾಗಿ ಅನ್ನಸತ್ರವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದವು. ವೀರಭದ್ರನಾಯಕನು ಹದಿನೆಂಟುಮಠಗಳ ಜನರಿಗಾಗಿ ಭಿಕ್ಷೆನೀಡುವ ಸಲುವಾಗಿ ಕೆರೆಕೊಪ್ಪದ ಮಹತ್ತಿನಮಠಕ್ಕೆ ಮಾಗಡಿದೊಡ್ಡೇರಿ ಮತ್ತು ರಾಮಗೊಂಡನಕೊಪ್ಪ ಎಂಬ ಎರಡು ಸ್ಥಳಗಳನ್ನು ದತ್ತಿಯಾಗಿ ಕೊಟ್ಟದ್ದನ್ನು ಇಲ್ಲಿ ಸ್ಮರಿಸಬಹುದು.

ಕೆಳದಿ ಅರಸರ ಕಾಲದಲ್ಲಿ ಈ ಮಠಗಳು ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದವು ಎಂಬುದು ಈ ಶಾಸನಗಳಿಂದ ತಿಳಿದುಬರುವ ಮತ್ತೊಂದು ಅಂಶ. ಇದಕ್ಕೆ ಶಾಸನಗಳಲ್ಲಿ ಹೇಳಿದ ಮೇಲಿನ ದತ್ತಿಗಳೇ ನಿದರ್ಶನ. ಮಠಗಳು ತಮ್ಮ ನಾನಾಮೂಲ ಕಾರ್ಯಗಳನ್ನು ನಡೆಸಿಕೊಂಡುಹೋಗಲೆಂದು ರಾಜರುಗಳು, ಜನಸಾಮಾನ್ಯರು ವಿಶೇಷ ಆಸಕ್ತಿ ವಹಿಸುತ್ತಿದ್ದುದೇ ಇದಕ್ಕೆ ಕಾರಣವೆನ್ನಬಹುದು. ರಾಜರುಗಳಿಂದ ಅವರ ಅಧಿಕಾರಿಗಳಿಂದ ಖಾಸಗಿ ವ್ಯಕ್ತಿಗಳಿಂದ ನೀಡಿದ ಭೂಮಿ, ವಾಣಿಜ್ಯ ಸಂಸ್ಥೆ ಮತ್ತು ರಾಜರುಗಳು ದಾನಮಾಡಿದ ಮೂಲವೀಸ(ತೆರಿಗೆ)ದ ಸಹಾಯ, ಮಠವೇ ಕೊಂಡುಕೊಂಡ ಭೂಮಿ–ಇವೇ ಅಂದು ಮಠಕ್ಕಿದ್ದ ಆದಾಯ. ಅನೇಕ ಶಾಸನಗಳಲ್ಲಿ[55] ನಾಯಕರು ಮಠಕ್ಕಾಗಿ ಎತ್ತುಗಳ ಮೇಲೆ ಸಾಗಿಸಿಕೊಂಡು ಬರುತ್ತಿದ್ದ ವಸ್ತುಗಳ ಮೇಲೆ ಹಾಕುವ ತೆರಿಗೆಯನ್ನು (ಎತ್ತಿನಮಾನ್ಯ) ಮನ್ನಮಾಡಿದರು.

ಒಟ್ಟಿನಲ್ಲಿ ಈ ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುವ ಅಂಶವೆಂದರೆ ಕೆಳದಿ ನಾಯಕರ ಕಾಲದಲ್ಲಿ ಸಂಘಸಂಸ್ಥೆಗಳು ಮತ್ತು ರಾಜರ ನಡುವೆ ಸೌಹಾರ್ದವಿತ್ತು ಮತ್ತು ಮಠಗಳಿಗೂ ನಾಯಕರಿಗೂ ಹೊಂದಾಣಿಕೆ ಇತ್ತು. ವೀರಶೈವ ಮಠಗಳಿಗೆ ಸಂಬಂಧಿಸಿದಂತೆ ರಾಜರುಗಳ ನೀತಿ ಸಿದ್ಧಾಂತಗಳು ನಿರ್ದಿಷ್ಟವಾದ ಮತ್ತು ಪ್ರಶಂಸಾರ್ಹವಾದ ಸಿದ್ಧಾಂತಗಳಿಂದ ನಿಯಂತ್ರಿತವಾಗಿದ್ದುವು ಎಂಬುದು ಸ್ಪಷ್ಟವಾಗುತ್ತದೆ. ಆಗಿನ ಜನರೂ ಸಹ ಮಠಗಳಿಗೆ ಬಹುತೇಕ ಸೇವೆ ಸಲ್ಲಿಸುವುದು ತಮಗೆ ದೊರೆತ ಸದವಕಾಶವೆಂದು ಭಾವಿಸುತ್ತಿದ್ದರು. ಧಾರ್ಮಿಕ ವಿಷಯಗಳಲ್ಲಿ ಜನರಿಗೂ ಮತ್ತು ರಾಜರಿಗೂ ಸಾಮರಸ್ಯವಿದ್ದಿತೆಂಬುದು ಸ್ಪಷ್ಟವಾಗುತ್ತದೆ.

ಮಠಗಳಲ್ಲೆಲ್ಲಾ ಕವಲೇದುರ್ಗದ 'ಮಹಾಮಹತ್ತಿನಮಠವು' ಪ್ರಧಾನ ಮಠ ಆಗಿದ್ದುದರಿಂದ ವಿವಿಧ ಸ್ಥಳಗಳಿಗೆ ಕೊಟ್ಟ ದತ್ತಿಗಳನ್ನು ಉಲ್ಲೇಖಿಸುವ ಶಾಸನಗಳು ಈ ಮಠದಲ್ಲಿ ಉಳಿದುಕೊಂಡು ಬಂದಿರಬಹುದು.[56]

ಅಡಿ ಟಿಪ್ಪಣಿಗಳು

1. ಈ ಅರಸರ ಮೊದಲ ರಾಜಧಾನಿ ಕೆಳದಿ, ಅನಂತರ ಇಕ್ಕೇರಿ ಹಾಗೂ ಬಿದನೂರು (ನಗರ). ಆದರೆ ಇವರು ತಮ್ಮ ಶಾಸನಗಳಲ್ಲಿ ತಾವು 'ಕೆಳದಿ' ಅರಸರೆಂದೇ ಹೇಳಿಕೊಂಡಿದ್ದಾರೆ.
2. E. C. VIII, Tl. 40-99 ಮತ್ತು M.A.R. 1943 Ins. 37-45
3. E. C. VIII, Tl. 37
4. ಆರಗ ಎಂಬ ಸ್ಥಳ ಕವಲೇದುರ್ಗಕ್ಕೆ ೬ ಮೈಲಿಗಳ ದೂರದಲ್ಲಿದೆ.
5. E. C. VIII, Tl. 97
6. Ibid Tl. 56
7. Ibid Tl. 83
8. Ibid Tl. 62,81,84 ರಲ್ಲೂ ಇದೇ ರೀತಿ ಇದೆ.
9. Ibid Tl. 82
10. Ibid Tl. 66
11. Ibid Tl. 38 ಮತ್ತು 39
12. Ibid Tl. 51
13. Ibid Tl. 58, 94 ಮತ್ತು 84
14. Ibid Tl. 62
15. Ibid Tl. 43
16. Ibid Tl. 44
17. Ibid Tl. 45
18. Ibid Tl. 49
19. Ibid Tl. 63
20. Ibid Tl. 88
21. Ibid Tl. 52
22. M. A. R. 1943-37

23. E. C. VIII, Tl. 41
24. Ibid Tl. 42
25. Ibid Tl. 54
26. Ibid Tl. 40
27. Ibid Tl. 81
28. Ibid Tl 76
29. Ibid Tl. 85
30. M.A.R. 1943-39
31. Ibid p. 123
32. E. C. VIII, Tl. 53 ಮತ್ತು 96
33. Ibid Tl. 80 ಮತ್ತು 86
34. Ibid Tl. 92
35. Ibid Tl. 48, 55; M. A. R 1943-38
36. E. C. VIII, Tl. 65
37. Ibid Tl. 78
38. Ibid Tl. 99
39. Ibid Tl. 98 ಮತ್ತು 74
40. K. D. Swaminathan. *The Nayakas of Ikkeri* p. 110
41. E C VIII. Tl. 50 ಮತ್ತು 75
42. Ibid Tl. 71
43. Ibid Tl. 68
44. Ibid Tl. 69
45. M. A. R. 1943 40; E.C. VIII, Tl 73, 77, 64, 89 ಮತ್ತು 46
46. E. C. VIII, Tl. 67, 77 ಮತ್ತು 61
47. M. A. R. 1943-41
48. E. C. VIII. Tl. 46
49. M. A. R. 1943-42
50. E. C. VIII. Tl. 79 ಮತ್ತು 93; M.A.R. 1943-43, E. C. VIII, Tl. 95, 72, ಮತ್ತು 59
51. E. C. VIII. Tl. 60, 47 ಮತ್ತು 91, M.A.R. 1943-44
52. M.A.R. 1943-45; E. C. VIII, Tl. 87
53. ಲಿಂಗಣ್ಣ ಕವಿಯ 'ಕೆಳದಿನೃಪವಿಜಯ' ಪು. ೧೭೮
54. B. L. Rice. *Mysore and Coorg from Inscriptions*, p 139
55. E.C VIII, Tl. 62, 81, 83, 84 ಇತ್ಯಾದಿ
56. ಡಾ॥ ಎಂ. ಹೆಚ್. ಕೃಷ್ಣ ಅವರು ಎಲ್ಲಾ ಮತಗಳು ಹಾಳು ಬಿದ್ದುದರಿಂದ ಅಲ್ಲಿಯ ತಾಮ್ರಶಾಸನಗಳನ್ನು ಈ ಮತಕ್ಕೆ ತಂದಿರಬಹುದೆಂದು ಅಭಿಪ್ರಾಯ ಪಡುತ್ತಾರೆ (M. A. R. 1943. p. 118).

ಈ ಲೇಖನ ಬರೆಯುವಲ್ಲಿ ಡಾ॥ ಬಾ ರಾ. ಗೋಪಾಲ್–ಇವರಿಗೆ ಋಣಿಯಾಗಿರುವೆ.

ಡಿ. ಎನ್. ಸೀತಾರಾಮಯ್ಯ

ಸಾಮಾಜಿಕ ಪರಿವರ್ತನೆ ಮತ್ತು ಶಿಕ್ಷಣ*

ಒಂದು ನಾಡು ಅನೇಕ ತ್ಯಾಗ ಮತ್ತು ಪರಿಶ್ರಮಗಳ ಫಲವಾಗಿ ತನ್ನ ಶೈಕ್ಷಣಿಕ ವ್ಯವಸ್ಥೆಯನ್ನು ರೂಪುಗೊಳಿಸುತ್ತದೆ. ಆ ಶೈಕ್ಷಣಿಕ ವ್ಯವಸ್ಥೆಯಿಂದ ಫಲಗಳನ್ನು ನಿರೀಕ್ಷಿಸುವುದು ಸಹಜವೇ. ಇಂತಹ ನಿರೀಕ್ಷೆಗಳಲ್ಲಿ "ರಾಷ್ಟ್ರ, ಪ್ರಗತಿ ಪಥವಲ್ಲಿ ಸಾಗಲು, ಶಿಕ್ಷಣ ದಾರಿದೀಪವಾಗಬೇಕು" "ಸಾಮಾಜಿಕ ಪರಿವರ್ತನೆಗೆ ಸಾಧನಮಾರ್ಗವಾಗಬೇಕು" ಎಂಬುದೂ ಒಂದು. ಇಂತಹ ಬಯಕೆ ಭಾರತವಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪ್ರಬಲವಾಗಿ ಕಾಣಬರುತ್ತದೆ.

ಈಗ ಈ ನಿರೀಕ್ಷೆ ಎಷ್ಟರಮಟ್ಟಿಗೆ ಸಾಧು ಮತ್ತು ಸಾಧ್ಯ ಎಂದು ವಿವೇಚಿಸಿ, ಯಾವ ಬಗೆಯ ಶಿಕ್ಷಣ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗೆ ಪೂರಕವಾಗಬಲ್ಲುದು ಎಂದು ವಿಶ್ಲೇಷಿಸೋಣ. ಈ ಪ್ರಯತ್ನದಲ್ಲಿ, ಸಾಮಾಜಿಕ ಪರಿವರ್ತನಾಪ್ರಕ್ರಿಯೆಯ ಸ್ಥೂಲ ಪರಿಚಯ ಅಗತ್ಯ.

1. "ಸಾಮಾಜಿಕ ಪರಿವರ್ತನೆ" ಎಂದರೇನು ?

'ಸಾಮಾಜಿಕ ಪರಿವರ್ತನೆ' ಎಂದರೆ "ಸಮಾಜದ ಬದುಕಿನ ಮಾರ್ಗದಲ್ಲಿ ಬದಲಾವಣೆ" ಎಂದರ್ಥ. ಸಮಾಜ ತನ್ನ ಜನ ಬದುಕಿನ ವ್ಯಾಪಾರವನ್ನು ಸಾಗಿಸಲು ವಿಶಿಷ್ಟ ಅಂಗರಚನೆಯನ್ನು ಮಾಡಿಕೊಂಡಿರುತ್ತದೆ; ತನ್ನದೇ ಆದ ಗುರಿ ಧ್ಯೇಯಗಳನ್ನೂ, ನಂಬಿಕೆ, ಮೌಲ್ಯ, ಸಂಪ್ರದಾಯ, ಭಾವನೆ, ಕಲ್ಪನೆಗಳನ್ನು ಹೊಂದಿರುತ್ತದೆ; ಉತ್ಪನ್ನ, ಹಂಚಿಕೆ, ಬಳಕೆ ಇತ್ಯಾದಿ ಕಾರ್ಯಗಳನ್ನು ನಡೆಸಲು ಏರ್ಪಾಡುಗಳನ್ನು ಮಾಡಿಕೊಂಡಿರುತ್ತದೆ. ಒಂದು ಗೊತ್ತಾದ ಕಾಲಕ್ಕೆ ಯಾವುದೊಂದು ಕ್ಷೇತ್ರದಲ್ಲಿಯಾಗಲೀ ಯಾವದಾದರೂ ರೀತಿಯಲ್ಲಿ ಮಾರ್ಪಾಡು ಆದರೆ ಅದನ್ನು "ಸಾಮಾಜಿಕ ಪರಿವರ್ತನೆ" ಎಂದು ಕರೆಯಬಹುದು.

"ಸಮಾಜ ಚಲನಾತ್ಮಕ", "ಪ್ರತಿಯೊಂದೂ ಬದಲಾಗುತ್ತದೆ; ಯಾವುದೂ ಸ್ಥಿರವಲ್ಲ"– ಎಂಬ ಮಾತುಗಳಿಂದ ಸಾಮಾಜಿಕ ಪರಿವರ್ತನೆ ಅನಿವಾರ್ಯ; ಅದು ಕಾಲನಿಯಾಮಕವಾಗಿ ಗಾಳಿಯಂತೆ ಬದಲಾಗುತ್ತದೆ ಎಂಬ ಅಭಿಪ್ರಾಯ ಮೂಡುವುದುಂಟು; ಆದರೆ ಅದು ಸಾಮಾಜಿಕ ಪರಿವರ್ತನಾಪ್ರಕ್ರಿಯೆಯ ವಾಸ್ತವಿಕ ಲಕ್ಷಣವಲ್ಲ.

ಸಾಮಾಜಿಕಪರಿವರ್ತನೆಗೆ ಕೆಲವು ನಿರ್ದಿಷ್ಟ ಕಾರಣಗಳು ಬೇಕು. ಮೊಟ್ಟಮೊದಲನೆಯದಾಗಿ, ಇರುವ ವಸ್ತುಸ್ಥಿತಿಗಳಿಂದ ಒಂದು ಬಗೆಯ ಅತೃಪ್ತಿ, ಅಸಮಾಧಾನ ತಲೆದೋರಬೇಕು.

---

* ಮೈಸೂರು ಆಕಾಶವಾಣಿಯ ಕೃಪೆಯಿಂದ. ಈ ಲೇಖನದ ಬಹುಭಾಗ 6-2-78 ರಂದು ಮೈಸೂರು ಆಕಾಶವಾಣಿ ಕೇಂದ್ರದಿಂದ ಬಿತ್ತರಿಸಲ್ಪಟ್ಟಿತು.

ಈ ಅತೃಪ್ತಿ ಅಸಮಾಧಾನಗಳೇ ಬದಲಾವಣೆಯೆಂಬ ಸಸ್ಯಕ್ಕೆ ಕಾರಣ ಭೂತವಾದ ಬೀಜವಾದರೂ, ಇದರೊಂದಿಗೆ, ಹೆಚ್ಚು ಅಪೇಕ್ಷಣೀಯವಾದ ಅಥವಾ ಹೆಚ್ಚು ಪರಿಣಾಮಕಾರಿಯಾಗಬಹುದಾದ ಅಥವಾ ಹೆಚ್ಚು ಗುಣವುಳ್ಳ ಭಾವನೆ, ಗುರಿ, ಸಾಧನ ಅಥವಾ ಉಪಕರಣವೊಂದರ ಅರಿವಿನ ದರ್ಶನ ಸಂಯೋಜಿತವಾಗಿರಬೇಕು. ಈ ಬಗೆಯ ಹೊಸ ಭಾವನೆ ಅಥವಾ ಮಾರ್ಗ ಅದೇ ಸಮಾಜದ ಒಂದು ವ್ಯಕ್ತಿಯ ಅಥವಾ ಗುಂಪಿನ ಸೃಜನಾತ್ಮಕ ಶಕ್ತಿಯಿಂದ ಬರಬಹುದು. ಅಥವಾ ಭಿನ್ನ ಸಂಸ್ಕೃತಿಯೊಂದರ ಸಂಪರ್ಕದ ಪ್ರಭಾವದಿಂದ ಒದಗಬಹುದು.

ಆದರೆ ಒಂದು ಸಮಾಜದಲ್ಲಿ ಒಂದು ಕಾಲದಲ್ಲಿ ಮೂಡಬಹುದಾದ ಎಲ್ಲ ಹೊಸ ಭಾವನೆಗಳೂ, ಶೋಧನೆಗಳೂ ಸಾಮಾಜಿಕ ಪರಿವರ್ತನೆಯಲ್ಲಿ ಪರ್ಯವಸಾನವಾಗುತ್ತವೆ ಎಂದು ಹೇಳಲು ಸಾಧ್ಯವಿಲ್ಲ. ಈ ಹೊಸ ಭಾವನೆ ಸಾಮಾಜಿಕ ಅಗ್ನಿಪರೀಕ್ಷೆಗೆ ಒಳಗಾಗಬೇಕು. ನಾಲ್ಕು ಜನರಲ್ಲಿ ಪ್ರಚಲಿತವಾಗಿ ಅವರಿಗೆ ಅದರ ಉಪಯುಕ್ತತೆ, ಸೌಕರ್ಯ, ಮನವರಿಕೆಯಾಗಬೇಕು. ಕಾಲಕ್ರಮೇಣ ಪ್ರಭಾವಶಾಲಿಸಂಖ್ಯೆಯ ಜನರಿಗೆ ಅದರ ಅರಿವು ಮತ್ತು ಅದರ ಯೋಗ್ಯತೆ ಸ್ಪಷ್ಟವಾಗಬೇಕು. ಆಗ ಅದು ಒಂದು ಸಮಾಜಶಕ್ತಿಯಾಗಿ ರೂಪುಗೊಳ್ಳುತ್ತದೆ. ಕಡೆಗೆ ಈ ಸಾಮಾಜಿಕ ಶಕ್ತಿ ಪ್ರಕ್ರಿಯೆಯಾದರೆ ಸಾಮಾಜಿಕ ಕ್ರಿಯೆಯಲ್ಲಿ ಅಭಿವ್ಯಕ್ತವಾಗಿ, ಸಮಾಜದ ಅಂಗ ರಚನೆಯಲ್ಲಿಯೋ, ಸಾಮಾಜಿಕ ಕಾರ್ಯಪದ್ಧತಿಯೋ, ಮೌಲ್ಯಗಳಲ್ಲಿಯೋ ವಿಕಸಿತವಾಗುತ್ತದೆ. ಹಾಗಾದರೆ, ಸಾಮಾಜಿಕ ಪರಿವರ್ತನಾ ಪ್ರಕ್ರಿಯೆ ಪೂರ್ಣಗೊಂಡಿದೆ ಎಂದು ಹೇಳಬಹುದು.

ಸಾಮಾಜಿಕ ಪರಿವರ್ತನೆಯ ಫಲವಾಗಿ ಹಳೆಯ ಭಾವನೆ ಅಥವಾ ಸಾಧನೆ ಸಂಪೂರ್ಣವಾಗಿ ಸ್ಥಾನಪಲ್ಲಟಗೊಳ್ಳಬಹುದು ಅಥವಾ ಮಾರ್ಪಾಟಾಗಬಹುದು. ಸಾಮಾನ್ಯವಾಗಿ ಸಾಮಾಜಿಕ ಪರಿವರ್ತನೆ ಕಾಲಕ್ರಮೇಣ ಹೆಜ್ಜೆ ಹೆಜ್ಜೆಯಾಗಿ ಆಗುತ್ತದೆ. ಇದನ್ನು ವಿಕಸನ ಪರಿವರ್ತನೆಯೆನ್ನುತ್ತಾರೆ. ಸಾಂಪ್ರದಾಯಿಕ ಸಮಾಜಗಳಲ್ಲಿ ಈ ಬಗೆಯ ಪರಿವರ್ತನೆ ಬಹಳ ನಿಧಾನವಾಗಿ, ಮಂದಗತಿಯಲ್ಲಿ ಸಾಗುತ್ತದೆ. ಆದರೆ ವಿಜ್ಞಾನಾಧರಿತ ಸಮಾಜಗಳಲ್ಲಿ ತಾಂತ್ರಿಕಜ್ಞಾನದ ಪ್ರಭಾವದಿಂದ ತೀವ್ರಗತಿಯಲ್ಲಿ ಸಾಗಬಹುದು. ಇನ್ನು ಕೆಲವು ವಿಶೇಷ ಘಟನೆಗಳಿಂದಾಗಿ-ಉದಾಹರಣೆಗೆ ಯುದ್ಧ, ಕ್ಷಾಮ, ಕ್ರಾಂತಿ. ಇತ್ಯಾದಿಗಳು—ಸಮಾಜದ ವ್ಯವಸ್ಥೆಯೆಲ್ಲಾ ಬುಡಮೇಲಾಗಿ ಮಹತ್ತರ ಪರಿವರ್ತನೆಯಾಗುವುದೂ ಉಂಟು. ಇದನ್ನು ಕ್ರಾಂತಿಕಾರಕ ಬದಲಾವಣೆಯೆನ್ನುತ್ತಾರೆ.

ಸಮಾಜದ ಅಂಗರಚನೆ, ಸಂಘಸಂಸ್ಥೆಗಳು ಮೌಲ್ಯಗಳು ಆಚಾರ ವ್ಯವಹಾರಗಳು ಇತ್ಯಾದಿಗಳಲ್ಲಾಗುವ ಬದಲಾವಣೆಗಳನ್ನು ಸಾಮಾಜಿಕ ಪರಿವರ್ತನೆಯೆಂದೂ, ವ್ಯವಸಾಯ. ಕೈಗಾರಿಕೆ. ವ್ಯಾಪಾರ ಇತ್ಯಾದಿ ಕ್ಷೇತ್ರಗಳಲ್ಲಾಗುವ ಮಾರ್ಪಾಡುಗಳಿಗೆ ಆರ್ಥಿಕ ಬದಲಾವಣೆಯೆಂದೂ ಹೇಳಬಹುದು ಆದರೆ ಈ ಎರಡು ಕ್ಷೇತ್ರಗಳೂ ಪರಸ್ಪರ ಪೂರಕವಾದವುಗಳು. ಒಂದು ಕ್ಷೇತ್ರದಲ್ಲಿ ಬದಲಾವಣೆಯಾದರೆ ಮತ್ತೊಂದು ಕ್ಷೇತ್ರದ ಮೇಲೆ ಅದರ ಪ್ರಭಾವ ಅನಿವಾರ್ಯ.

ಸಮಾಜ ವಿಜ್ಞಾನಿಗಳಲ್ಲಿ ಒಂದು ಜಿಜ್ಞಾಸೆಯಿದೆ. ಸಾಮಾಜಿಕ ಪರಿವರ್ತನೆಗೆ ಮೌಲ್ಯಗಳ ಭಾವನೆಗಳ ಪರಿವರ್ತನೆ ಮೂಲವೇ ಅಥವಾ ಸಾಧನ ಸಲಕರಣೆಗಳ ಪರಿವರ್ತನೆ ಮೂಲವೆ? ಈ ವಿವಾದದ ವಿಮರ್ಶೆ ಇಲ್ಲಿ ಅಪ್ರಕೃತ. ಆದರೆ ಸಾಮಾಜಿಕ ಪರಿವರ್ತನೆಗೆ ಎರಡೂ ಮೂಲಗಳು, ಒಂದಕ್ಕೊಂದು ಪೂರಕವಾಗಿ, ಪುಷ್ಟಿಯಿತ್ತರೆ ಮಾತ್ರ ಪರಿವರ್ತನೆ ಸಾಧ್ಯ ಎಂದು ತಿಳಿದರೆ ಸಾಕು.

ಸಾಮಾಜಿಕ ಪರಿವರ್ತನೆ ಒಂದು ತೊಡಕಾದ ಸಂಕೀರ್ಣ ಪ್ರಕ್ರಿಯೆ. ಪ್ರತಿಯೊಂದು ಸಮಾಜದಲ್ಲಿಯೂ ಪರಿವರ್ತನೆಗೆ ಪ್ರತಿಕೂಲವಾದ, ಪರಿವರ್ತನೆಗೆ ಪ್ರಚೋದಕವಾದ ಅಂಶಗಳು ಇದ್ದೇ ಇರುತ್ತವೆ. ಈ ನಿರೋಧಕ–ಸಹಾಯಕ ಅಂಶಗಳು ಸಾಂಸ್ಕೃತಿಕ, ಸಾಮಾಜಿಕ ಅಥವಾ

ಮಾನಸಿಕ ಕ್ಷೇತ್ರಗಳಾಗಿದ್ದಿರಬಹುದು. ಆದರೆ ಇವೆಲ್ಲವೂ ಕೆಲಸಮಾಡುವುದು ಆರ್ಥಿಕ ಚೌಕಟ್ಟಿನಲ್ಲಿ. ಈ ಎಲ್ಲ ಅಂಶಗಳ ಅನ್ಯೋನ್ಯಕ್ರಿಯೆಯಿಂದ ಸಾಮಾಜಿಕ ಪರಿವರ್ತನೆಯ ಕಾರ್ಯಕ್ಕೆ ಅಡಚಣೆಯಾಗಲೀ ಅನುಕೂಲವಾಗಲೀ ಸಂಭವಿಸುತ್ತವೆ.

ಪರಿವರ್ತನೆಗೆ ಅಡ್ಡಿತರುವ ಅಂಶಗಳಲ್ಲಿ ಮುಖ್ಯವೆಂದರೆ, ಸಂಪ್ರದಾಯ ಶರಣತೆ, ಮೂಢನಂಬಿಕೆ, ವಿಧಿವಾದದಲ್ಲಿ ನಂಬಿಕೆ, ತಮ್ಮ ಗುಂಪೇ ಸಂಸ್ಕೃತಿಯೇ ಹೆಚ್ಚೆಂಬ ಅಹಂಭಾವ, ಶ್ರೇಣಿವರ್ಗಸಹಿತ ಸಮಾಜ ರಚನೆ, ಉಪಜಾತಿಗಳ ಪ್ರಾಬಲ್ಯ, ಪಟ್ಟಭದ್ರಹಿತಾಸಕ್ತಿಗಳು, ಸರ್ವಾಧಿಕಾರೀಮನೋವೃತ್ತಿ, ವಿದ್ಯಾಭ್ಯಾಸದಲ್ಲಿ ನಿರಾಸಕ್ತಿ, ಇತ್ಯಾದಿಗಳು. ಪರಿವರ್ತನೆಗೆ ಪೂರಕವಾದ ಅಂಶಗಳೆಂದರೆ ಹೊಸಭಾವನೆಗಳ, ಉದ್ಯಮಗಳ ಬಗ್ಗೆ ಆದರ ಉದಾರ ಮನೋಭಾವ, ಪೈಪೋಟಿಗೆ ಅವಕಾಶ, ಆರ್ಥಿಕಾಭಿವೃದ್ಧಿಯಲ್ಲಿ ಆಸಕ್ತಿ, ಸಾಮಾಜಿಕ ಗತಿಶೀಲತೆ, ಸ್ನೇಹಪರತೆ, ಪ್ರಬಲ ಮಧ್ಯಮವರ್ಗ ಇತ್ಯಾದಿಗಳನ್ನು ಹೆಸರಿಸಬಹುದು. ಈಚೀಚೆಗೆ ಸಮಾಜ ಶಾಸ್ತ್ರಜ್ಞರು ಸಮಾಜಗಳನ್ನು ಮೂರು ವಿಧವಾಗಿ ವಿಂಗಡಿಸಿದ್ದಾರೆ—ಕೈಗಾರಿಕಾಪೂರ್ವ ಸಮಾಜ, ಕೈಗಾರಿಕಾ ಸಮಾಜ ಮತ್ತು ಕೈಗಾರಿಕೋತ್ತರಸಮಾಜ. ಕೈಗಾರಿಕಾಪೂರ್ವ ಸಮಾಜದಲ್ಲಿ ನಿರೋಧಕ ಅಂಶಗಳ ಪ್ರಾಬಲ್ಯ ಹೆಚ್ಚು. ಮಿಕ್ಕೆರಡು ಸಮಾಜಗಳಲ್ಲಿ ಪರಿವರ್ತನೆಯ ಪ್ರಚೋದಕಾಂಶಗಳ ಕೈವಾಡದ ಮೇಲುಗೈ.

2. ಸಾಮಾಜಿಕ ಪರಿವರ್ತನೆ ಮತ್ತು ಶಿಕ್ಷಣದ ಇತಿಮಿತಿ.

ಭಾರತದಂತಹ ಕೈಗಾರಿಕಾಪೂರ್ವ ಸಮಾಜಗಳು ಆಧುನಿಕ ರಾಷ್ಟ್ರಗಳಾಗಿ ಮಾರ್ಪಾಡಾಗಲು ಹವಣಿಸುತ್ತಿವೆ. ಈ ನವೀಕರಣಪ್ರಕ್ರಿಯೆಯಲ್ಲಿ ಶಿಕ್ಷಣದ ಪಾತ್ರವೇನು ಎಂದು ಹಲವಾರು ಸಮಾಜ ಶಾಸ್ತ್ರಧುರೀಣರು ವಿಶ್ಲೇಷಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಒಂದು ದೇಶದ ನವೀಕರಣ ಕಾರ್ಯದಲ್ಲಿ ಆ ದೇಶದ ವಿದ್ಯಾಭ್ಯಾಸಕ್ರಮವು ಅದು ಎಷ್ಟೇ ಉತ್ತಮವಾಗಿದ್ದರೂ ತನ್ನ ಸಹಜಸಿದ್ಧ ಗುಣಲಕ್ಷಣಗಳ ಕಾರಣದಿಂದಾಗಿ, ನೇರವಾದ, ಪ್ರಬಲವಾದ ಪಾತ್ರವಹಿಸಲು ಸಾಧ್ಯವಿಲ್ಲ. ಇದೇ ಅಭಿಪ್ರಾಯವನ್ನು ಕಾರ್ನೆಲ್ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಪರ್ಕಿನ್ಸ್‌ರವರು "ಸಾಮಾಜಿಕ ಸುಧಾರಣೆಗೆ ಶಿಕ್ಷಣ ಕ್ರಿಯಾತ್ಮಕ ಸಾಧನೆ ಎಂಬ ಭಾವನೆ ಅಪಾಯಕಾರಿಯಷ್ಟದ ಉತ್ಪ್ರೇಕ್ಷೆ" ಎಂಬ ಮಾತುಗಳಿಂದ ವರ್ಣಿಸಿದ್ದಾರೆ. ಅಟ್ವಾವೆ ಎಂಬ ಬ್ರಿಟಿಷ್ ಸಮಾಜ ಶಾಸ್ತ್ರಜ್ಞ "ಸಾಮಾಜಿಕ ಪರಿವರ್ತನೆಯಲ್ಲಿ ಶಿಕ್ಷಣ ಪ್ರಧಾನ ಕಾರಣವಾಗಲಾರದು, ಅದು ಆನುಷಂಗಿಕ ಅಥವಾ ಗೌಣಕಾರಣ ಮಾತ್ರವಾದೀತು" ಎಂದು ಹೇಳುತ್ತಾರೆ.

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗೆ ಶಿಕ್ಷಣಪದ್ಧತಿಯು ಪ್ರತ್ಯಕ್ಷ ಕಾರಣವಾಗುವ ಶಕ್ತಿ ಹೊಂದಿಲ್ಲ ಎಂಬ ಸಿದ್ಧಾಂತವನ್ನು ಯಾವ ಕಾರಣಗಳಿಗಾಗಿ ಒಪ್ಪಬೇಕಾಗುತ್ತದೆ ನೋಡೋಣ.

ಐತಿಹಾಸಿಕವಾಗಿ ಅವಲೋಕಿಸಿದರೆ ಸಮಾಜದಲ್ಲಿ "ಶಾಲೆ" ಎಂಬ ಸಂಸ್ಥೆ ಸ್ಥಾಪಿತವಾದದ್ದು ಸಮಾಜವು ತನ್ನ ಸಂಸ್ಕೃತಿಯ ಮೌಲ್ಯಗಳನ್ನೂ ಆಚಾರರೂಢಿಗಳನ್ನೂ ಸಂರಕ್ಷಿಸಿಕೊಳ್ಳುವುದಕ್ಕಾಗಿ. ಒಂದು ಜನತೆಯ ನಾಗರಿಕ ಮೌಲ್ಯಗಳನ್ನು ಕಾಪಾಡಿ, ಅವು ನಿರಂತರವಾಗಿ, ಅವಿಚ್ಛಿನ್ನವಾಗಿ ಉಳಿಯುವಂತೆ ಮುಂದಿನ ಪೀಳಿಗೆಗಳಲ್ಲಿ ಅಚ್ಚೊತ್ತುವುದು ಶಿಕ್ಷಣದ ಮೂಲೋದ್ದೇಶವಾಗಿತ್ತು. ಇಂದಿಗೂ ಶಾಲೆಯು ಈ ಗುರಿಯನ್ನೇ ಪಾಲಿಸುತ್ತಿದೆ. ಈ ಸಂರಕ್ಷಣಾ ಕರ್ತವ್ಯದಿಂದ ಯಾವ ಕಾಲದಲ್ಲಿಯೂ ಯಾವ ಶಿಕ್ಷಣಪದ್ಧತಿಯೂ ವಿಮುಖವಾಗುವುದು ಅಸಾಧ್ಯ.

ಸಂಸ್ಕೃತಿಯ ಪಾಲನಾಕಾರ್ಯ ಫಲಪ್ರದವಾಗಬೇಕಾದರೆ ಎಳೆಯ ಜನಾಂಗದಲ್ಲಿ "ಹಿರಿ

ಯರು ಅನುಸರಿಸುವ ಕಲಿಸುವ ಮೌಲ್ಯಗಳೇ, ರೀತಿಗಳೇ ಪರಮಶ್ರೇಷ್ಠ. ಅವುಗಳನ್ನು ನಿರ್ಮಲ ಮನಸ್ಸಿನಿಂದ ನಂಬಬೇಕು, ಆಚರಿಸಬೇಕು" ಎಂಬ ಶ್ರದ್ಧೆ ಅತ್ಯಗತ್ಯ. ಶಿಕ್ಷಣ ಸಂಸ್ಥೆ ಮಕ್ಕಳಿಗೆ ಪ್ರಚಲಿತ ಜ್ಞಾನ, ಆಚರಣಾವಿಧಾನ, ಇತ್ಯಾದಿಗಳನ್ನು ಕಲಿಸಿ ಅವುಗಳಲ್ಲಿ ವಿಶ್ವಾಸ ಮೂಡಿಸಬೇಕು. ಈ ಬಗೆಯ ಕಲಿಕೆಯಲ್ಲಿ ವಿಧೇಯತೆ, ನಮ್ರತೆ, ಭಕ್ತಿ, ಅನುಕರಣ, ತೃಪ್ತಿ ಇತ್ಯಾದಿ ಗುಣಗಳಿಗೇ ಪ್ರಾಧಾನ್ಯತೆ ಮತ್ತು ಮನ್ನಣೆ. ಸಾಮಾಜಿಕ ನಿಯಂತ್ರಣದ ಮೂಲಕ, ಮಕ್ಕಳಲ್ಲಿ ಸಂಪ್ರದಾಯಪಾಲಕ ಮನೋಭಾವನೆಯನ್ನು ಮೂಡಿಸಬೇಕಾಗುತ್ತದೆ. ಯುವಪೀಳಿಗೆಗಳಿಗೆ ಪ್ರಸ್ತುತ ಸಮಾಜದ ಜೀವನವ್ಯಾಪಾರಕ್ಕೆ ತಕ್ಕ ತರಬೇತಿ ಕೊಡದೇ ಹೋದಲ್ಲಿ ಸಮಾಜದ ವ್ಯವಸ್ಥೆ ಕುಸಿದುಬಿದ್ದು ಅಸ್ತವ್ಯಸ್ತ ಉಂಟಾಗಬಹುದಾದ ಅಪಾಯಕ್ಕೆ ಈಡಾಗಬೇಕಾಗುತ್ತದೆ.

ಎರಡನೆಯದಾಗಿ, ಶಾಲೆ ಸಮಾಜದ ಸೇವಕ. ಸಮಾಜದ ಅಣತಿಯಂತೆ, ಅದು ಒಪ್ಪಿದ ಮೌಲ್ಯಗಳನ್ನು ಬೋಧಿಸುವುದು ಅದರ ಕರ್ತವ್ಯ. ಸಮಾಜಕ್ಕಿಂತ ಶಾಲೆ ಎಂದೂ ಒಂದು ಹೆಜ್ಜೆ ಹಿಂದು. ಸಮಾಜ ಬದಲಾದರೆ ಶಾಲೆ ಬದಲಾಗುತ್ತದೆ. ಸಮಾಜದ ಬದಲಾವಣೆ ಅದರ ಇತರ ಪ್ರಮುಖ ಅಂಗಗಳಾದ ರಾಜಕೀಯ ಸಂಸ್ಥೆಗಳು, ಧಾರ್ಮಿಕ ಆರ್ಥಿಕ ಗುಂಪುಗಳು, ನಾಯಕರು, ಅಧಿಕಾರಿಗಳು ಇವರ ಕಾರ್ಯಾಚರಣೆಯಿಂದ ಪ್ರತಿಭಾವಿತವಾಗುತ್ತದೆ. ಪ್ರಜಾಸತ್ತಾತ್ಮಕ ಸಮಾಜದಲ್ಲಂತೂ ಶಾಲೆ ಅತಿ ಕನಿಷ್ಠ ಬಲವುಳ್ಳ ಸಂಸ್ಥೆ.

ಮೂರನೆಯದಾಗಿ, ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಪ್ರತ್ಯಕ್ಷ ಸಾಧನವಾಗಬೇಕಾದರೆ ಶಿಕ್ಷಣ ಸಂಸ್ಥೆಗಳು, ಬೋಧಕರು, ಹೊಸಭಾವನೆಗಳನ್ನೂ ಮೌಲ್ಯಗಳನ್ನೂ ಉಪಕರಣಗಳ ಬಳಕೆಯನ್ನೂ ವಿದ್ಯಾರ್ಥಿಗಳಲ್ಲಿ ಬಲಪಡಿಸಿ, ಅವರು ಈ ಹೊಸ ಭಾವನೆಗೆ ತಕ್ಕಂತೆ ನಡೆದುಕೊಳ್ಳುವ ರೀತಿಯಲ್ಲಿ ಶಕ್ತಿಯುತಪ್ರಚೋದನೆ ಉಂಟುಮಾಡಬೇಕಾಗುತ್ತದೆ. ಹೀಗಾದರೆ ಮಾತ್ರ ಹೊಸ ಭಾವನೆಗಳು ಸಮಾಜಶಕ್ತಿಯನ್ನು ಪಡೆದು ಸಮಾಜಕ್ರಿಯೆ ಸಾಧ್ಯವಾಗಿ, ಸಾಮಾಜಿಕ ಪರಿವರ್ತನೆಯಲ್ಲಿ ಮುಕ್ತಾಯವಾಗುತ್ತವೆ. ಆದರೆ ಬೀಜಸ್ವರೂಪದಲ್ಲಿರುವ, ಪ್ರಯೋಗಕ್ಕೆ ಒಳಪಡದ ಹೊಸಭಾವನೆಗಳನ್ನು ಮಕ್ಕಳು ಅನುಸರಿಸುವ ಹಾಗೆ ಮಾಡಬೇಕಾದರೆ ಅನುಬಂಧನ (Conditioning) ಮತ್ತು ಸ್ವಮತಾಂತರಣ (Indoctrination) ಗಳಿಂದ ಮಾತ್ರ ಸಾಧ್ಯ. ಆದರೆ ಈ ಮಾರ್ಗಗಳನ್ನು ನಾವು ಇಂದು ಅಷ್ಟಾಗಿ ಪುರಸ್ಕರಿಸುತ್ತಿಲ್ಲ. ಅದರಲ್ಲಿಯೂ ಪ್ರಜಾಸತ್ತಾತ್ಮಕ ವಿಧಾನಗಳಿಗೆ ಅವು ವಿರೋಧಿಗಳು. ಆದುದರಿಂದ ಶಾಲೆಗಳಲ್ಲಿ, ಸಮಾಜದ ಅಗ್ನಿ ಕುಂಡದಲ್ಲಿ ಪರೀಕ್ಷಿತವಲ್ಲದ, ಅಂಗೀಕೃತವಾಗದ ಮೌಲ್ಯಗಳ ಒತ್ತಾಯದ ಹೇರಿಕೆ ಅಸಾಧ್ಯ. ಎಷ್ಟೋವೇಳೆ ನಿಜಜೀವನದಲ್ಲಿ ಆಚರಿಸಲಾಗದ ಭಾವನೆಗಳು ಕೃತಕಶಾಖದ ಮನೆಯಲ್ಲಿ ಬೆಳೆದ ಸಸಿಗಳಂತೆ ನಿರುಪಯುಕ್ತವಾಗುತ್ತವೆ.

ಕಡೆಯದಾಗಿ, ಶಾಲಾಕಾಲೇಜುಗಳು ಮಕ್ಕಳಲ್ಲಿ ಹೊಸಭಾವನೆಗಳನ್ನು ಕಲಿಸುವ ಯೋಗ್ಯತೆಯಾಗಲೀ ಶಕ್ತಿಯಾಗಲೀ ಪಡೆದಿಲ್ಲ. ಶಿಕ್ಷಣ ಸಂಸ್ಥೆಗಳು ನ್ಯಾಯದ ಆಗರಗಳಲ್ಲ, ಧರ್ಮನೀತಿಗಳ ಚಿಲುಮೆಗಳಲ್ಲ. ಸಮಾಜದ ಇತರ ಕ್ಷೇತ್ರಗಳಲ್ಲಿ ತಾಂಡವವಾಡುವ ಈರ್ಷೆ, ಅಸೂಯೆ, ನ್ಯಾಯಬಾಹಿರತೆ, ಅಪರಿಪೂರ್ಣತೆ ಇತ್ಯಾದಿಗಳು ವಿದ್ಯಾಸಂಸ್ಥೆಗಳನ್ನು ಬಿಟ್ಟಿಲ್ಲ. ಶಾಲೆಗಳಿಗೆ ಬೋಧನಾಸ್ವಾತಂತ್ರ್ಯವಿದ್ದರೂ, ಎಲ್ಲ ಶಿಕ್ಷಕರೂ ಉನ್ನತ ನವೀನ ಭಾವನೆಗಳನ್ನೂ ಪ್ರಯೋಗಗಳನ್ನೂ ಸಮಾಜದ ಹಿತದೃಷ್ಟಿಯಿಂದ, ಬೋಧಿಸಬಲ್ಲರು ಎಂದು ನಿರೀಕ್ಷಿಸುವುದು ಅಷ್ಟಾಗಿ ಸರಿಯಲ್ಲ. ಕೇವಲ ಪಾಂಡಿತ್ಯದಿಂದ ವಿವೇಕಯುತ ಭಾವನೆಗಳು ಉದ್ಭವಿಸುತ್ತವೆ ಎಂದು ನಂಬುವುದು ಕಷ್ಟ.

ಈ ಎಲ್ಲ ಕಾರಣಗಳಿಂದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯಲ್ಲಿ ಶಿಕ್ಷಣದ ಪಾತ್ರವೇನೂ ಇಲ್ಲವೆಂದು ವಾದಿಸಲಾಗುತ್ತಿದೆ ಎಂಬ ಅಭಿಪ್ರಾಯ ಬರಬಹುದು. ಈ ಭಾವನೆ

ಭಾಗಶಃ ಸರಿ. ಪ್ರತ್ಯಕ್ಷ ಮತ್ತು ಪ್ರಧಾನ ಕಾರಣ ಎಂಬ ದೃಷ್ಟಿಯಿಂದ ಶಾಲೆಯು ಸಾಮಾಜಿಕ ಪರಿವರ್ತನೆಗೆ ಕಾರಣವಾಗಲಾರದು ನಿಜ. ಆದರೆ ಶಾಲೆಯ ಪ್ರಭಾವ ಪರೋಕ್ಷ ಸ್ವರೂಪದ್ದು. ಶಿಕ್ಷಣಕ್ಕೆ ಸಂರಕ್ಷಣಾಕಾರ್ಯದ ಕರ್ತವ್ಯವೊಂದು ಹೇಗೆ ಇದೆಯೋ ಹಾಗೆಯೇ ರಚನಾತ್ಮಕ ಕಾರ್ಯದ ಮತ್ತೊಂದು ಜವಾಬ್ದಾರಿಯೂ ಇದೆ. ಆದರೆ ಈ ರಚನಾತ್ಮಕ ಕರ್ತವ್ಯ ಸಾಧನೆ ಅಪ್ರತ್ಯಕ್ಷ ಸಾಧನೆಗಳ ಮೂಲಕ ಆಗತಕ್ಕದ್ದು ಎಂಬ ಅರಿವು ಮುಖ್ಯ.

3. ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗಾಗಿ ಶಿಕ್ಷಣ.

ಶಿಕ್ಷಣದ ಪಾತ್ರ ಸಾಮಾಜಿಕ ಸುಧಾರಣೆಯಲ್ಲಿ ಗೌಣವಾದರೂ ಬಹಳ ಅಗತ್ಯ ಮತ್ತು ವಿಶೇಷ. ಈ ಅವಶ್ಯಕಾರ್ಯವನ್ನು ಶಿಕ್ಷಣ ಎರಡು ರೀತಿಯಲ್ಲಿ ಕಾರ್ಯಗತಗೊಳಿಸಬೇಕು. ಮೊಟ್ಟಮೊದಲನೆಯದು ಶಾಲೆಗಳು ತಮ್ಮ ಮೂಲಭೂತ ಗುರಿಯಾದ ಸುಶಿಕ್ಷಿತನ ತಯಾರಿ ಕೆಲಸವನ್ನು ಉತ್ತಮ ರೀತಿಯಲ್ಲಿ ಮಾಡುವುದು. ಪರಿಣಾಮಕಾರೀ ಸಾಮಾನ್ಯ ಶಿಕ್ಷಣದ ಮೂಲಕ ಸಮಾಜದ ಎಲ್ಲವರ್ಗದ ಜನರಿಗೆ ಬದುಕಿನ ವ್ಯಾಪಾರವನ್ನು ಹಸನಗೊಳಿಸಲು ಬೇಕಾದ ಜ್ಞಾನಾಭಿವೃದ್ಧಿ, ಕಲಾಭಿಜ್ಞತೆ ಮತ್ತು ತಾಂತ್ರಿಕ ತಿಳಿವಳಿಕೆಗಳನ್ನು ಒದಗಿಸಬೇಕು. ಇವುಗಳೆಲ್ಲವನ್ನೂ ವಿದ್ಯಾರ್ಥಿಯು ತನ್ನ ವಿವೇಚನಾತ್ಮಕ ಚಿಂತನೆಯ ಒರೆಗಲ್ಲಿಗೆ ಒಳಪಡಿಸಿ, ಅವುಗಳ ಅನುಭವವನ್ನು ಕ್ರಿಯಾತ್ಮಕವಾಗಿ ತನ್ನದನ್ನಾಗಿ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡಬೇಕು. ಇವುಗಳೊಂದಿಗೆ ಹೃದಯ ವೈಶಾಲ್ಯತೆಯನ್ನೂ ಜೀವನದಲ್ಲಿ ನಂಬಿಕೆ ಉತ್ಸಾಹಗಳನ್ನೂ ನಂಬಿದಂತೆ ನಡೆಯುವ ಬುದ್ಧಿಯನ್ನೂ ವಿಜ್ಞಾನದಲ್ಲಿ ವಿಚಾರದಲ್ಲಿ ಆಸಕ್ತಿಯನ್ನೂ ಸಂಪಾದಿಸಲು ಶಾಲೆಗಳು ವಿದ್ಯಾರ್ಥಿಗೆ ಎಲ್ಲ ಸೌಲಭ್ಯಗಳನ್ನೂ ಒದಗಿಸಬೇಕು.

ಎರಡನೆಯದಾಗಿ ಸಾಮಾಜಿಕ ಪರಿವರ್ತನೆಗೆ ಪೂರಕವಾಗುವ ವಿಶೇಷ ತಿಳಿವಳಿಕೆ ಮತ್ತು ಕಾರ್ಯಾನುಭವವನ್ನು ಕೊಡಿಸುವಲ್ಲಿ ನಿರ್ದಿಷ್ಟ ರೀತಿಯಲ್ಲಿ ಶಿಕ್ಷಣ ಮಾರ್ಗದರ್ಶಿಯಾಗಬೇಕು ಈ ದೃಷ್ಟಿಯಿಂದ ಕೆಲವು ಬಗೆಯ ಜ್ಞಾನಪ್ರಚಾರ ಅಗತ್ಯ. ಸಮಾಜದ ಸ್ವರೂಪ, ಅದರ ಅಂಗರಚನೆ, ಸಾಮಾಜಿಕ ಪ್ರಕ್ರಿಯೆಗಳ ರೀತಿ ನೀತಿ, ಸಮಾಜೀಕರಣ, ಸಾಮಾಜಿಕ ಬದಲಾವಣೆಯ ಸ್ವರೂಪ, ಇತ್ಯಾದಿಗಳ ವ್ಯಾಸಂಗ ನಮ್ಮ ಶಾಲಾ ಪಠ್ಯವಸ್ತುವಿನಲ್ಲಿ ಸೇರಬೇಕು. ನವೀನೀಕರಣ, ಅದರ ಅರ್ಥ, ವ್ಯಾಪ್ತಿ, ಮಿತಿ, ಇವುಗಳನ್ನು ನಮ್ಮ ಮಕ್ಕಳಿಗೆ ವಿಶೇಷವಾಗಿ ತಿಳಿಸಬೇಕು "ನವೀನೀಕರಣವೆಂದರೆ ಪಾಶ್ಚಿಮಾತ್ಯೀಕರಣವೆಂದಲ್ಲ; ಕೇವಲ ಪಾಶ್ಚಿಮಾತ್ಯ ಮೌಲ್ಯಾಚರಣೆಗಳ ಅನುಕರಣ ಆಧುನಿಕತೆಯ ಕುರುಹಲ್ಲ" ಎಂಬ ಜಾಗೃತಿ ಮಕ್ಕಳಲ್ಲಿ ತರಬೇಕು. ಆಧುನಿಕತೆಗೂ ರಾಷ್ಟ್ರೀಯತೆಗೂ ಪರಸ್ಪರ ವೈಷಮ್ಯವಿಲ್ಲವೆಂಬುದೂ ಭಾರತೀಯ ಸಂಸ್ಕೃತಿಯ ಉತ್ತಮ ಮೌಲ್ಯಗಳ ಅಡಿಪಾಯದ ಮೇಲೆ ಕಟ್ಟಿದ ಆಧುನಿಕ ಸಮಾಜ ಹೆಚ್ಚು ಅಪೇಕ್ಷಣೀಯವಾದದ್ದು, ಸುಭದ್ರವಾದದ್ದು ಎಂಬ ಅರಿವು ಬರಬೇಕು.

ಈ ದೃಷ್ಟಿಯಿಂದ ಭಾರತೀಯ ಸಂಸ್ಕೃತಿಯ ಗುಣಾವಗುಣಗಳ, ಪಾಶ್ಚಿಮಾತ್ಯ ಸಾಮಾಜಿಕ ಮತ್ತು ಆರ್ಥಿಕ ಮೌಲ್ಯಗಳ ಶಾಸ್ತ್ರೀಯ ಅಧ್ಯಯನ ನಡೆಯಬೇಕು. ಜಪಾನ್ ಮೊದಲಾದ ರಾಷ್ಟ್ರಗಳ ಪ್ರಗತಿಯ ಬಗ್ಗೆ ಕೂಲಂಕಷ ವ್ಯಾಸಂಗಕ್ಕೆ, ಈಚೀಚೆಗೆ ಯೂರೋಪ್ ಮತ್ತು ಅಮೆರಿಕಾಗಳಲ್ಲಿ ತಲೆದೋರುತ್ತಿರುವ ಸಾಮಾಜಿಕ ಆಂದೋಲನ ಬಗ್ಗೆ ಅಧ್ಯಯನಕ್ಕೆ ಅವಕಾಶ ಸಿಗಬೇಕು. ಪ್ರಸ್ತುತ ಭಾರತದಲ್ಲಿ ಕಾಣಬರುತ್ತಿರುವ ಗಾಂಧೀವಾದ, ಮಾರ್ಕ್ಸ್‌ವಾದ ಸ್ವತಂತ್ರೀವ್ಯಮವಾದ ಮುಂತಾದ ಆರ್ಥಿಕ ಪ್ರಶ್ನೆಗಳನ್ನು ನಮ್ಮ ಶಾಲಾ ಮಕ್ಕಳು ನಮ್ಮ ದೇಶದ ಇಂದಿನ ಮತ್ತು ನಾಳಿನ ಅಗತ್ಯಗಳ ಪೂರೈಕೆಯ ಹಿನ್ನೆಲೆಯಲ್ಲಿ ಶಾಸ್ತ್ರೀಯವಾಗಿ ಪರೀಕ್ಷಿಸುವುದಕ್ಕೆ ಪ್ರೋತ್ಸಾಹ ಸಹಾಯ ದೊರಕಬೇಕು.

ನಮ್ಮ ಶಾಲಾ ಕಾಲೇಜುಗಳಲ್ಲಿ ಹಳ್ಳಿಗಳ ದೀನದಲಿತ ವರ್ಗಗಳ ಬಗ್ಗೆ ವಿಶೇಷ ಅಧ್ಯಯನ

ನಡೆಯಲು ಏರ್ಪಾಡಾಗಬೇಕು. ಆ ಸಮಸ್ಯೆಗಳ ಪರಿಹಾರೋಪಾಯಗಳನ್ನು ಚಿಂತಿಸಲು ಮಕ್ಕಳಿಗೆ ಸರ್ವ ಸ್ವಾತಂತ್ರ್ಯ ದೊರಕಬೇಕು.

ನಮ್ಮ ದೇಶದ ಇಂದಿನ ಇತರ ಸಾಮಾಜಿಕ, ರಾಜಕೀಯ, ಆರ್ಥಿಕ ಪ್ರಶ್ನೆಗಳೂ ಪಠ್ಯವಸ್ತುವಿನಲ್ಲಿ ಸೇರಬೇಕು. ದಿನದಿನಕ್ಕೆ ಕ್ಲಿಷ್ಟತಮವಾಗುತ್ತಿರುವ ಬಡತನ, ಅನಕ್ಷರತೆ, ದಲಿತವರ್ಗ ಶೋಷಣೆ ಇವುಗಳ ಬಗ್ಗೆ ಅಧ್ಯಯನ ಮಾತ್ರವಲ್ಲದೆ ನಮ್ಮ ಪ್ರಜಾಪ್ರಭುತ್ವ ಸಾಧಿಸಿರುವ ಕೆಲಸ, ಮೆಟ್ಟಿರುವ ಹಾದಿ, ಅನುಸರಿಸುತ್ತಿರುವ ಮಾರ್ಗ, ಇವುಗಳ ಚರ್ಚೆಯೂ ಬಹು ಮುಖ್ಯ.

ತಾಂತ್ರಿಕ ಅನುಭವ ಕ್ಷೇತ್ರದಲ್ಲಿ ನಮ್ಮ ಶಾಲೆಗಳಲ್ಲಿ ಮೂಲಭೂತ ಮಾರ್ಪಾಡುಗಳೇ ಆಗಬೇಕು.

ಪ್ರತಿಯೊಬ್ಬ ವಿದ್ಯಾರ್ಥಿಗೂ ಕಾರ್ಯಾನುಭವ ದೊರಕಿಸಿದರೆ ಸಾಲದು. ಅವನಿಗೆ ಆಧುನಿಕ ಯಂತ್ರಚಾಲಿತ ಸಲಕರಣೆಗಳ ಉಪಕರಣಗಳ ನಿಕಟಪರಿಚಯವಾಗಬೇಕು. ಇಂತಹ ಕೆಲವು ವಸ್ತುಗಳ ಬಳಕೆಯ ಸ್ವಂತ ಅನುಭವ ಸಿಗಬೇಕು. ಈ ಬಗೆಯ ಯಂತ್ರಪರಿಚಯ ರಾಷ್ಟ್ರದ ಔದ್ಯೋಗಿಕ ಪ್ರಗತಿಗೆ ಅತ್ಯವಶ್ಯಕ; ಹಳ್ಳಿ ಮಕ್ಕಳೂ ಸೇರಿದಂತೆ ಎಲ್ಲರಿಗೂ ದೊರಕಲೇಬೇಕಾದ ಈ ಅನುಭವಕ್ಕಾಗಿ ಅತ್ಯಾಧುನಿಕ ಕಾರ್ಯಾಗಾರಗಳ ನಿರ್ಮಾಣ ಶಾಲೆಗಳಲ್ಲಿ ಆಗಬೇಕು. ಚಲನಚಿತ್ರ ಮುಂತಾದ ಸೌಲಭ್ಯಗಳ ಮೂಲಕ ಯಂತ್ರಗಳ, ಕೈಗಾರಿಕೆಗಳ ಪ್ರತಿನಿಧಿರೂಪದ ಅನುಭವವೂ ಈ ಬಗ್ಗೆ ಬಹಳ ಸಹಾಯಕಾರಿ. ರೇಡಿಯೋ, ಟೆಲಿವಿಷನ್, ಟೇಪ್ ರಿಕಾರ್ಡರ್, ಮೊದಲಾದ ಯಾಂತ್ರಿಕ ಬೋಧನಾ ಸಲಕರಣೆಗಳು ಯಂತ್ರಗಳ ಬಗ್ಗೆ ವಿದ್ಯಾರ್ಥಿಗಳು ಬೆಳೆಸಬಹುದಾದ ಸದ್ಭಾವನೆಗೆ ಪುಷ್ಟಿಕೊಡುತ್ತವೆ. ಶಿಕ್ಷಣ ಪ್ರವಾಸಗಳು ಈ ದಿಸೆಯಲ್ಲಿ ಬಹಳ ಫಲಕಾರಿ ಮಾರ್ಗ.

ಸಾಮಾಜಿಕ ಪರಿವರ್ತನೆಯಲ್ಲಿ ಪಾಲ್ಗೊಳ್ಳಬೇಕಾದರೆ ಮಕ್ಕಳಲ್ಲಿ ಸುಧಾರಣೆಗೆ ಪೂರಕವಾದ ಮನೋವೃತ್ತಿಗಳ ಬೆಳವಣಿಗೆಯೂ ಮುಖ್ಯ. ತಾನೂ ಮತ್ತು ತನ್ನವರು ಆರ್ಥಿಕವಾಗಿ ಸಾಮಾಜಿಕವಾಗಿ ಮುಂದುವರೆಯಬೇಕೆಂಬ ಆಸೆ, ಏನಾದರೂ ಉತ್ತಮ ಸಾಧನೆಯನ್ನು ಮಾಡಬೇಕೆಂಬ ತೀವ್ರಾಭಿಲಾಷೆ, ಲೌಕಿಕ ವಸ್ತು ವಿಷಯಗಳಲ್ಲಿ ಆಸಕ್ತಿ, ಹೊಸಭಾವನೆಗಳ ಬಗ್ಗೆ ತೆರೆದ ಮನಸ್ಸು, ಯಂತ್ರಗಳ ಸದ್ವಿನಿಯೋಗದಲ್ಲಿ ನಂಬಿಕೆ ಮೊದಲಾದುವು ಉತ್ತಮ ವಿದ್ಯಾಭ್ಯಾಸದಿಂದ ಬರಲು ಸಾಧ್ಯ.

ನಮ್ಮ ಶಾಲಾ ಸಂಸ್ಥೆಗಳು. ತಮ್ಮ ಈಗಿನ ಪರಿಸ್ಥಿತಿಯಲ್ಲಿ ಪರೋಕ್ಷವಾಗಿ ಕೂಡ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯಲ್ಲಿ ಪಾಲುಗೊಳ್ಳಲು ಶಕ್ತವಾಗಿಲ್ಲ. ವಿಜ್ಞಾನ. ಸಮಾಜಶಾಸ್ತ್ರ. ಇತಿಹಾಸ, ಪ್ರಚಲಿತ ಸಮಸ್ಯೆಗಳ ಅಧ್ಯಯನ, ಕಾರ್ಯಾನುಭವ, ಇವುಗಳ ಬೋಧನೆ ಮತ್ತು ಕಲಿಕೆ ಬಲಯುತವಾಗಬೇಕಲ್ಲದೆ ಯಂತ್ರಗಳ ತಾಂತ್ರಿಕ ಜ್ಞಾನದ ಅರಿವು ಅನುಭವ ಪ್ರತಿಯೊಬ್ಬ ವಿದ್ಯಾರ್ಥಿಗೂ ಉತ್ತಮ ರೀತಿಯಲ್ಲಿ, ಅವನ ಸಾಮಾನ್ಯ ಶಿಕ್ಷಣದ ಅಂಗವಾಗಿ ದೊರೆಯುವಂತೆ ಆಗಬೇಕು. ಇದರೊಂದಿಗೆ ಸೂಕ್ತ ಶಾಸ್ತ್ರೀಯ ಔದ್ಯೋಗಿಕ ಮಾರ್ಗದರ್ಶನ ಸೌಕರ್ಯ ಶಾಲೆಗಳಲ್ಲಿ ಸಿಗುವಂತಾಗಬೇಕು.

ಶಿಕ್ಷಣ ಪ್ರತ್ಯಕ್ಷ ಪ್ರಮಾಣದಲ್ಲಿ ಸಾಮಾಜಿಕ ಪರಿವರ್ತನೆಯಲ್ಲಿ ಭಾಗವಹಿಸಲು ಅಶಕ್ತವಾದರೂ, ಪರಿಣಾಮಕಾರಿ ರೀತಿಯಲ್ಲಿ ಪರೋಕ್ಷವಾಗಿ ಸಾಮಾಜಿಕ ಸುಧಾರಣೆಗೆ ನೆರವಾಗಬಲ್ಲದು. ಆದರೆ ಈ ಕಾರ್ಯವೂಕೂಡ ಶಿಕ್ಷಣ ಕ್ರಮ ಹೆಚ್ಚು ಪ್ರಭಾವಶಾಲಿಯಾದರೆ, ಹೆಚ್ಚು ಆಧುನಿಕ ಮಟ್ಟದ್ದಾದರೆ, ಹೆಚ್ಚು ವಿವೇಚನಾತ್ಮಕವಾದರೆ ಮಾತ್ರ ಸಾಧ್ಯ.

ನಾಡಿಗ ಕೃಷ್ಣಮೂರ್ತಿ

ಗ್ರಾಮಾಂತರ ಸಂಪರ್ಕದಲ್ಲಿ ಮುದ್ರಣ ಮಾಧ್ಯಮಗಳ ಪರಿಣಾಮಕಾರಿ ಬಳಕೆ

ಗ್ರಾಮಾಂತರ ಸಂಪರ್ಕ ಸಮಸ್ಯೆ :

ಗ್ರಾಮಾಂತರ ಸಂಪರ್ಕ ವ್ಯವಸ್ಥೆ ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ವಹಿಸುವ ಪಾತ್ರ ಪ್ರಮುಖ. ಅದರಲ್ಲೂ ಬಡತನ ಮತ್ತು ಅನಕ್ಷರತೆಗಳಂತಹ ಇಬ್ಬಗೆಯ ಸಮಸ್ಯೆಗಳನ್ನೆದುರಿಸುತ್ತಿರುವ, ಶೇಕಡ 75ಕ್ಕೂ ಹೆಚ್ಚು ಜನ ಸುಮಾರು ಏಳುಲಕ್ಷಕ್ಕೂ ಹೆಚ್ಚು ಗ್ರಾಮಗಳಲ್ಲಿ ವಾಸಿಸುತ್ತಿರುವ ಭಾರತದಂತಹ ದೇಶದಲ್ಲಿ ಸಂಪರ್ಕದ ಪಾತ್ರವಂತೂ ಅತಿ ಮಹತ್ವದ್ದು. ಸ್ವಾತಂತ್ರ್ಯದ ಉದಯದೊಂದಿಗೆ ಭಾರತದಲ್ಲಿ ಅನಕ್ಷರತೆ ನಿರ್ಮೂಲನಗೊಳಿಸುವ ಮತ್ತು ಬಡತನ ನಿವಾರಿಸಿ ಜನಜೀವನದ ಮಟ್ಟವನ್ನು ಉತ್ತಮಗೊಳಿಸುವ ಪ್ರಯತ್ನ ನಡೆದಿದೆ. ಪ್ರಗತಿ ಮತ್ತು ಅಭಿವೃದ್ಧಿಯ 30 ವರ್ಷದ ಯೋಜನೆಗಳ ಅನಂತರವೂ ಭಾರತದಲ್ಲಿ ಸಾಕ್ಷರತಾ ಪ್ರಮಾಣ ಶೇಕಡ 30-40ರ ನಡುವಿನಲ್ಲೇ ಇದೆ ಮತ್ತು ಸರಾಸರಿ ತಲಾ ಆದಾಯ ಕೇವಲ ರೂ 851.08 ಮಾತ್ರ. ಆದಕಾರಣ, ಈ ದೈತ್ಯಕಾರದ ಸಮಸ್ಯೆಗಳನ್ನು ಬಗೆಹರಿಸಲು ರಾಷ್ಟ್ರಾಭಿವೃದ್ಧಿಯ ತೊಡಕುಗಳ ವಿರುದ್ಧ ಯುದ್ಧ ಸಾರಬೇಕಾಗಿದೆ.

ಭಾರತದಂತಹ ದೇಶದಲ್ಲಿ ಜನಸಂಖ್ಯೆಯ ಬಹುಪಾಲು ಜನ ಗ್ರಾಮಗಳಲ್ಲಿ ವಾಸಿಸುತ್ತಿರುವಾಗ ‘ರಾಷ್ಟ್ರಾಭಿವೃದ್ಧಿ’ ಎನ್ನುವ ಶಬ್ದ ‘ಗ್ರಾಮಾಭಿವೃದ್ಧಿ’ ಎಂದು ಅರ್ಥೈಸುವುದು ತೀರಾ ಸ್ವಾಭಾವಿಕ. ಪ್ರಗತಿಯ ಗುರಿಯಲ್ಲೇ ಸಂಪರ್ಕದ ಅವಶ್ಯಕತೆಯೂ ಸೇರಿರುತ್ತದೆ. ಗ್ರಾಮಾಂತರ ಸಂಪರ್ಕದ ಪರಿಣಾಮವನ್ನು ನಿರ್ಧರಿಸಲು ಅನೇಕ ರಾಷ್ಟ್ರೀಯ ಸಮೀಕ್ಷೆಗಳನ್ನು ಮಾಡಲಾಗಿದೆ, ಅನೇಕ ಪ್ರಯೋಗಗಳನ್ನು ನಡೆಸಲಾಗಿದೆ ಹಾಗೂ ಅಂಕಿಅಂಶಗಳನ್ನು ಮುಂದಿಡಲಾಗಿದೆ. ಸಂಪರ್ಕದ ಕನಿಷ್ಠತಮ ಸೌಲಭ್ಯಗಳನ್ನು ಹೇಗೆ ಗ್ರಾಮಾಂತರ ಪ್ರದೇಶಗಳಿಗೆ ವಂಚಿಸಲಾಗುತ್ತಿದೆ ಎನ್ನುವುದು ಮೇಲಿನ ಅಂಶಗಳ ಅಭಿಪ್ರಾಯದಿಂದ ವ್ಯಕ್ತಗೊಂಡಿದೆ. ಆಧುನಿಕ ವಿಜ್ಞಾನ ಹಾಗೂ ತಾಂತ್ರಿಕ ಅಭಿವೃದ್ಧಿಯಿಂದಾಗಿ ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಮಾಧ್ಯಮಗಳೆರಡೂ ಯಾವ ಪರಿಣಾಮವನ್ನುಂಟುಮಾಡಬೇಕಿತ್ತೋ ಅದನ್ನು ಮಾಡಿಲ್ಲ ಎನ್ನುವುದು ಸತ್ಯ. ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವ ಸಾಂಪ್ರದಾಯಿಕ ಮಾಧ್ಯಮಗಳು ನಶಿಸುತ್ತಿವೆ, ಇಲ್ಲವೇ ಅವು ಸಾಕಷ್ಟು ಪರಿಣಾಮಕಾರಿಯಾಗಿ ಉಳಿದಿಲ್ಲ.

ಭಾರತದಂತಹ ಬೃಹತ್ ರಾಷ್ಟ್ರವೊಂದರ ಗ್ರಾಮಾಂತರ ಸಂಪರ್ಕ ವ್ಯವಸ್ಥೆಯಲ್ಲಿ ಮುದ್ರಣ ಮಾಧ್ಯಮದ ಪಾತ್ರ ಹಾಗೂ ಅದರ ಪರಿಣಾಮಕಾರಿ ಬಳಕೆಯನ್ನು ಕುರಿತು ವಿಶ್ಲೇಷಣೆ

ಮಾಡಲು ಇಲ್ಲಿ ಪ್ರಯತ್ನಿಸಲಾಗಿದೆ. ಆದರೆ ಇದಕ್ಕಾಗಿ ನಮ್ಮ ವೈಫಲ್ಯತೆಗಳ ಕಾರಣವನ್ನಾಗಲಿ, ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳ ಬಗ್ಗೆ ದೂಷಿಸುವುದನ್ನಾಗಲೀ ಮಾಡ ಹೊರಟಿಲ್ಲ. ಬೃಹತ್ ಭವನಗಳ ಹವಾನಿಯಂತ್ರಿತ ಕೊಠಡಿಗಳಲ್ಲಿ ಕುಳಿತು ಸೂಕ್ಷ್ಮಯಂತ್ರಗಳನ್ನು ಉಪಯೋಗಿಸಿ ಯೋಜನೆಗಳನ್ನು ರೂಪಿಸುವುದರಿಂದಾಗಲೀ ಅಥವಾ ಕೇವಲ ಬುದ್ಧಿಬಲದಿಂದ ಮಾತ್ರವಾಗಲೀ ನಮ್ಮ ಗ್ರಾಮಾಂತರ ಸಂಪರ್ಕ ವ್ಯವಸ್ಥೆಯನ್ನು ಉತ್ತಮಪಡಿಸಲು ಸಹಕಾರಿಯಾಗದು. ಗ್ರಾಮಾಂತರ ಪ್ರದೇಶಗಳಿಂದಲೇ ಸ್ವದೇಶೀ ತಂತ್ರಜ್ಞಾನರೂಪಿತ ಯೋಜಿತ ಕಾರ್ಯಕ್ರಮಗಳು ಮೂಡಿಬರಬೇಕು. ಸಮೂಹ ಸಂಪರ್ಕಕ್ಷೇತ್ರವೂ ಸೇರಿದಂತೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ನಮ್ಮ ರಾಷ್ಟ್ರ ಸಾಧಿಸಿರುವ ಪ್ರಗತಿಯನ್ನು ಪೂರ್ಣವಾಗಿ ತಳ್ಳಿಹಾಕುವುದು ಇಲ್ಲಿನ ಉದ್ದೇಶವಲ್ಲ. ಆದರೆ, ಕೆಲವು ವಿಮರ್ಶಕರು ಬೊಟ್ಟುಮಾಡಿ ತೋರಿಸುವಂತೆ, ಇತರ ಕೆಲವು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೋಲಿಸಿದಾಗ ನಮ್ಮ ದೇಶದಲ್ಲಿನ ವೃತ್ತಪತ್ರಿಕೆ, ಆಕಾಶವಾಣಿ, ದೂರದರ್ಶನ ಮತ್ತು ಇತರ ಸಂಪರ್ಕಪ್ರಕಾರಗಳಲ್ಲಾದ ಅಭಿವೃದ್ಧಿಯ ಪ್ರಮಾಣ ಕಡಿಮೆ ಎನ್ನುವ ಸತ್ಯವನ್ನು ನಾವು ಗಮನಿಸಬೇಕು.

ಬಡರಾಷ್ಟ್ರಗಳಲ್ಲಿ ಅಪಾರವಾಗಿ ತಾಂಡವವಾಡುತ್ತಿರುವ ಬಾಧಕಾಂಶಗಳನ್ನು ಗಮನದಲ್ಲಿರಿಸಿಕೊಂಡಾಗ, ಬೃಹತ್ ಪಾಶ್ಚಾತ್ಯ ರಾಷ್ಟ್ರಗಳ ಪ್ರಗತಿಯೊಡನೆ ಅವುಗಳನ್ನು ಹೋಲಿಸಿ ನೋಡುವುದು ಸಮಂಜಸವಲ್ಲ. ಆದರೆ, ಈ ದೇಶಗಳು ಪ್ರಜ್ಞಾಪೂರ್ವಕವಾಗಿ ತಮ್ಮ ಆತ್ಮಶೋಧನೆ ಮಾಡಿಕೊಂಡಲ್ಲಿ ನಿಧಾನವಾಗಿಯೂ ಅದರಿಂದ ಸ್ಥೈರ್ಯ ಮೂಡುತ್ತದೆ.

ಸಮೂಹಮಾಧ್ಯಮ ಸಾಧನಗಳು :

1947ರಲ್ಲಿ ಬಹಳಷ್ಟು ವೃತ್ತಪತ್ರಿಕೆಗಳು, ಬಾನುಲಿ ಗ್ರಾಹಕಗಳು ಮತ್ತು ಬಾನುಲಿ ನಿಲಯಗಳು ಭಾರತದಲ್ಲಿರಲಿಲ್ಲ. ಅವುಗಳ ಸಂಖ್ಯೆ ಇಂದು ಗಮನಾರ್ಹವಾಗಿ ಹೆಚ್ಚಿದೆ. ಅಂದು ಭಾರತದ ನಕ್ಷೆಯಲ್ಲಿ ಕಾಣದಿದ್ದ 'ದೂರದರ್ಶನ' ಇಂದು ನವದೆಹಲಿ, ಅಮೃತಸರ, ಮುಂಬಯಿ, ಕಲ್ಕತ್ತಾ, ಮದರಾಸು ಹಾಗೂ ಹೈದರಾಬಾದ್‌ಗಳಂತಹ ಪ್ರಮುಖ ನಗರಗಳಲ್ಲಿ ಭದ್ರವಾಗಿ ನೆಲೆಯೂರಿವೆ. ಎಲ್ಲರಿಗೂ ಗೊತ್ತಿರುವಂತೆ ಸಮುದಾಯ ಮಾಧ್ಯಮಗಳಲ್ಲಿ ಸಾಮಾನ್ಯವಾಗಿ ಬಳಸುವ ಸಾಧನೆಗಳು ವೃತ್ತಪತ್ರಿಕೆಗಳು, ಬಾನುಲಿ, ದೂರದರ್ಶನ, ಜನಪದಗೀತೆ, ಜನಪದನೃತ್ಯ ಬುರ್ರಕಥಾ ಅಥವಾ ಹರಿಕಥೆ, ಮುಷೈರಾ. ದಾಸರಪದ, ಯಕ್ಷಗಾನ ಇತ್ಯಾದಿ ಸಾಂಪ್ರದಾಯಿಕ ಮಾಧ್ಯಮಗಳು ಹಾಗೂ ಅತ್ಯಂತ ಪ್ರಭಾವಶಾಲಿಯಾದ ವ್ಯಕ್ತಿ–ವ್ಯಕ್ತಿಗಳ ನಡುವಿನ ಸಂಪರ್ಕ.

ನಮ್ಮ ಗ್ರಾಮಾಂತರ ಪ್ರದೇಶಗಳ ಏಳಿಗೆ ಕ್ಷಿಪ್ರಗತಿಯಲ್ಲಾಗಬೇಕಾದರೆ ಮುದ್ರಣ. ಎಲೆಕ್ಟ್ರಾನಿಕ್ ಮಾಧ್ಯಮಗಳಾಗಲೀ ಅಥವಾ ಸಂಪ್ರದಾಯಿಕ ಸಂಪರ್ಕ ಮಾಧ್ಯಮಗಳಾಗಲೀ ಬಹು ಅವಶ್ಯಕ. ಗ್ರಾಮೀಣ ಅಭಿವೃದ್ಧಿ ಈ ಮೊದಲೇ ತಿಳಿಸಿದಂತೆ ರಾಷ್ಟ್ರಾಭಿವೃದ್ಧಿ. ಭಾರತದಂತಹ ಒಂದು ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ಗ್ರಾಮಾಂತರ ಸಂಪರ್ಕ ವ್ಯವಸ್ಥೆಯ ಪ್ರಾಮುಖ್ಯತೆ ವಿಶೇಷವಾಗಿ ಕಂಡುಬರುತ್ತದೆ ರಾಷ್ಟ್ರ ಅಥವಾ ಗ್ರಾಮಾಭಿವೃದ್ಧಿ ಎನ್ನುವ ಶಬ್ದ ಬಹುವ್ಯಾಪಕವಾದದ್ದು. ಅದು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಳೆರಡಕ್ಕೂ ಅನ್ವಯಿಸುವುದು. ರಾಷ್ಟ್ರದ ಪ್ರಗತಿಯನ್ನು ಸಂಪರ್ಕ ಕ್ಷೇತ್ರದಲ್ಲಿನ ಪ್ರಗತಿಗೆ ಜೊತೆ ಸಂಬಂಧಿಸಲಾಗಿದೆ. ಮುದ್ರಣ ಮಾಧ್ಯಮ, ಈ ಸಂಪರ್ಕದ ಸಾಧನಗಳಲ್ಲಿ ಒಂದು.

ಮುದ್ರಣ ಮಾಧ್ಯಮದ ಕಾರ್ಯಗಳು :

ಮುದ್ರಣ ಮಾಧ್ಯಮಗಳು ಅಭಿವೃದ್ಧಿ ವೇಗವರ್ಧಕ ಮೂಲ ಉದ್ದೇಶ ಹೊಂದಿದ್ದು

ಅವು ಅನೇಕ ಬಗೆಯ ಕಾರ್ಯಗಳನ್ನು ನಿರ್ವಹಿಸುತ್ತವೆ. ರಾಷ್ಟ್ರಪಿತ ಮಹಾತ್ಮಗಾಂಧಿ ಅವರು ಪತ್ರಿಕೋದ್ಯಮದ ಕರ್ತವ್ಯಗಳನ್ನು ಬಹು ಗಂಭೀರವಾಗಿ ಈ ರೀತಿ ವಿವರಿಸಿದ್ದಾರೆ:

"ಪತ್ರಿಕೆಯ ಧ್ಯೇಯಗಳಲ್ಲಿ ಮೊದಲನೆಯದೆಂದರೆ ಪ್ರಜಾಭಿಪ್ರಾಯವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಅಭಿವ್ಯಕ್ತಗೊಳಿಸುವುದು; ಎರಡನೆಯದಾಗಿ ಅದು ಜನತೆಯಲ್ಲಿ ಕೆಲವೊಂದು ಉನ್ನತ ಆದರ್ಶಗಳನ್ನು ಮೂಡಿಸುವುದು; ಹಾಗೂ ಮೂರನೆಯದಾಗಿ ಅದು ಸಮಾಜದ ಅಂಕು–ಡೊಂಕುಗಳನ್ನು ನಿರ್ಭಯವಾಗಿ ಬಹಿರಂಗಗೊಳಿಸುವುದು".

ವಿಶ್ವವಿಖ್ಯಾತ ಸಮೂಹಸಂಪರ್ಕತಜ್ಞ ವಿಲ್ಬರ್‌ಶ್ರಾಮ್ ಅವರು, ಪತ್ರಿಕೆಗಳು, ನಿಯತಕಾಲಿಕೆಗಳು ಹಾಗೂ ಪುಸ್ತಕಗಳು ಸೇರಿದಂತೆ ಸಮೂಹ ಮಾಧ್ಯಮಗಳ ಕರ್ತವ್ಯವನ್ನು ಈ ರೀತಿ ಬಣ್ಣಿಸಿದ್ದಾರೆ:

ಅವರ ಪ್ರಕಾರ ಸಮೂಹ ಮಾಧ್ಯಮಗಳು ದೂರ ಹಾಗೂ ಕಾಲದ ಬಂಧನವನ್ನು ನಿವಾರಿಸಬಲ್ಲವು ಮತ್ತು ಅಪರಿಚಿತ ಸಂಗತಿಗಳನ್ನು ಗ್ರಾಹಕರ ಬಳಿ ಕೊಂಡೊಯ್ಯಬಲ್ಲವು. ಜನತೆಯ ಸಮಸ್ಯೆಗಳತ್ತ ಗಮನಹರಿಸಿ ಆಧುನಿಕ ವಿಚಾರಧಾರೆಗಳನ್ನು ಅವರಿಗೆ ಒದಗಿಸುವುದು ಹಾಗೂ ಅವರ ಅಭಿಪ್ರಾಯಗಳನ್ನು ತಿಳಿಸುವುದು ಎರಡನೆಯ ಕಾರ್ಯ. ಅವರ ಅಭಿಪ್ರಾಯದಂತೆ ಅವುಗಳ ಮೂರನೆಯ ಕರ್ತವ್ಯವೆಂದರೆ ಜನತೆಯ ಬಯಕೆಗಳನ್ನು ಉದ್ದೀಪಿಸಿ ಅವರುಗಳು ಇನ್ನೂ ಹೆಚ್ಚು ಶ್ರಮಿಸುವಂತೆ ಸ್ಫೂರ್ತಿನೀಡಿ ಸಂತೃಪ್ತಿ ದೊರಕಿಸುವುದು. ಅಭಿವೃದ್ಧಿಗಾಗಿ ಹೊಸತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಪ್ರಗತಿಯ ಪ್ರಕ್ರಿಯೆಯನ್ನು ಪ್ರಚೋದಿಸುವುದರಲ್ಲಿ ಶ್ರಾಮ್ ಅವರಿಗೆ ನಂಬಿಕೆ.

ಮಹಾತ್ಮಗಾಂಧೀ ಅವರಾಗಲೀ ಅಥವಾ ವಿಲ್ಬರ್ ಶ್ರಾಮ್ ಅವರಾಗಲೀ ಅವರ ಅಭಿಪ್ರಾಯಗಳಿಂದ ಒಂದು ಅಂಶ ಮಾತ್ರ ದೃಢವಾಗುತ್ತದೆ: ಅಭಿವೃದ್ಧಿ ಸಾಧನೆಗಾಗಿ ಕ್ಷೇತ್ರಕಾರ್ಯದ ಮೂಲಕ ಹೊಸ ವಿಚಾರಧಾರೆಗಳನ್ನು ಗ್ರಾಮಗಳಿಗೆ ಮತ್ತು ಗ್ರಾಮಸ್ಥರಿಗೆ ಒದಗಿಸಬೇಕು. ಗ್ರಾಮದ ಜನತೆಯ ಅನುಕೂಲಕ್ಕಾಗಿ ಸಂಪರ್ಕಕ್ಷೇತ್ರದಲ್ಲಿ ಹೊಸ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು.

ಮೆನ್‌ಫೀ ಪ್ರಯೋಗ:

ಇದನ್ನು ತಮ್ಮ ಆದರ್ಶ ಪೂರ್ಣ ಮಾದರಿ ಪ್ರಯೋಗಗಳಿಂದ ಮಹಾತ್ಮಗಾಂಧಿ ಅವರು ಹೇಗೆ ಸಾಧಿಸಿದರೆಂಬುದು ಇಂದು ಇತಿಹಾಸದ ಒಂದು ಭಾಗವಾಗಿದೆ.

ಗ್ರಾಮಾಂತರ ಜನತೆಯಲ್ಲಿ ಹೊಸಬದಲಾವಣೆ ಉಂಟುಮಾಡಲು ಮುದ್ರಣ ಮಾಧ್ಯಮದ ಸಾಮರ್ಥ್ಯವೇನೆಂಬುದನ್ನು ಇಬ್ಬರು ಪ್ರಸಿದ್ಧ ಅಮೆರಿಕನ್ ಸಮಾಜ ವಿಜ್ಞಾನಿಗಳಾದ ಶ್ರೀ ಸೆಲ್ಡನ್ ಸಿ ಮೆನ್‌ಫೀ ಮತ್ತು ಶ್ರೀಮತಿ ಆಡ್ರೀ ಜಿ. ಮೆನ್‌ಫೀ ಅವರು ತಮ್ಮ ಪ್ರಯೋಗಗಳಿಂದ ತೋರಿಸಿಕೊಟ್ಟಿದ್ದಾರೆ. ಕರ್ನಾಟಕದ ತುಮಕೂರು ಜಿಲ್ಲೆಯ ನಾಲ್ಕು ದೊಡ್ಡ ಗ್ರಾಮಗಳಲ್ಲಿ, ಒಂದು ಕುತೂಹಲಕಾರಿ ಸಾಮಾಜಿಕ ಪ್ರಯೋಗವನ್ನು ಅವರು 1963–64ರಲ್ಲಿ ನಡೆಸಿದರು. 'ಗ್ರಾಮವಾರ್ತೆ' (Village News) ಎಂಬ ಕಲ್ಲಚ್ಚಿನಲ್ಲಿ ಮುದ್ರಿತವಾಗುತ್ತಿದ್ದ ಕನ್ನಡ ಸಾಪ್ತಾಹಿಕ ಪತ್ರಿಕೆಯನ್ನು ಹದಿಮೂರು ವಾರಗಳ ಕಾಲ ಈ ಮೂರು ಗ್ರಾಮಗಳಲ್ಲಿ ವಿತರಣೆ ಮಾಡಿದರು. ನಾಲ್ಕನೆಯ ಗ್ರಾಮವನ್ನು ನಿಯಂತ್ರಿತ ಗ್ರಾಮವನ್ನಾಗಿ ಬಳಸಿದರು. ಆದರೆ ಈ ನಾಲ್ಕು ಗ್ರಾಮಗಳ ಮೇಲೆ ಸಮೂಹಮಾಧ್ಯಮಗಳ ಪ್ರಭಾವ ಪೂರ್ಣಇಲ್ಲದೇ ಇರಲಿಲ್ಲ. ರಾಷ್ಟ್ರೀಯ ಮತ್ತು ಜಿಲ್ಲಾ ವೃತ್ತಪತ್ರಿಕೆಗಳ ಕೆಲ ಪ್ರತಿಗಳು ಈ ಗ್ರಾಮಗಳಿಗೆ ಬರುತ್ತಿದ್ದವು. ಜೊತೆಗೆ ಇಲ್ಲಿ ಕೆಲವು ಬಾನುಲಿಗ್ರಾಹಕಗಳೂ ಇದ್ದವು ಗ್ರಾಮ ಪಂಚಾಯ್ತಿ ಬಾನುಲಿಗ್ರಾಹಕ

ಹಾಗೂ ಸಾರ್ವಜನಿಕ ಶಿಕ್ಷಣಸಮಿತಿ ಕೂಡ ಒಂದು ಗ್ರಾಮದಲ್ಲಿ ಕಾರ್ಯನಿರತವಾಗಿದ್ದಿತು. ಈ ಮೂರು ಗ್ರಾಮಗಳಿಗೆ ಸಂಬಂಧಿಸಿದಂತೆ ಅನೇಕ ಆಸಕ್ತಿದಾಯಕ ಸುದ್ದಿಗಳು 'ಗ್ರಾಮವಾರ್ತೆ' ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಒಂದೇ ವಾಕ್ಯದ ಸುಮಾರು ನಾಲ್ಕರಿಂದ ಹತ್ತು ಸುದ್ದಿ ತುಣುಕುಗಳು ಪ್ರಪಂಚ, ರಾಷ್ಟ್ರ, ರಾಜ್ಯ ಹಾಗೂ ಸ್ಥಳೀಯ ಘಟನೆಗಳಿಗೆ ಸಂಬಂಧಿಸಿದಂತೆ ಈ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತಿತ್ತು. ಇವುಗಳಲ್ಲಿ ಪ್ರಮುಖ ವ್ಯಕ್ತಿ ಮತ್ತು ಘಟನೆಗಳ ಪರಿಚಯವನ್ನು ಮಾಡಲಾಗುತ್ತಿತ್ತು. ಈ ಹಳ್ಳಿಗಳಲ್ಲಿದ್ದ ಸಾಕ್ಷರತಾ ಪ್ರಮಾಣ ಕೂಡ ಕಡಿಮೆಯೇ. ಗ್ರಾಮವಾರ್ತೆ ಪತ್ರಿಕೆಯ ವಿತರಣೆಗೆ ಅನೇಕ ತೊಡಕುಗಳಿದ್ದವು. ಹೀಗಿದ್ದರೂ, ಪ್ರಯೋಗದ ಅಂತ್ಯದಲ್ಲಿ ಆ ಪತ್ರಿಕೆ ಸುದ್ದಿ ಪೂರೈಕೆಯ ಅತ್ಯಂತ ಪರಿಣಾಮಕಾರಿ ಸಾಧನವಾಗಿತ್ತು ಎಂಬುದು ಖಚಿತಗೊಂಡಿತು. ಆ ಮೂರು ಗ್ರಾಮಗಳ ಜನರ ಸಾಮಾನ್ಯ ತಿಳುವಳಿಕೆಯ ಮಟ್ಟವೂ ಸಹ ಗಮನಾರ್ಹವಾಗಿ ಉತ್ತಮಗೊಂಡಿದ್ದುದು ಪ್ರಯೋಗದ ಫಲಿತಾಂಶದಿಂದ ವ್ಯಕ್ತಗೊಂಡಿತು. ನಿಯಂತ್ರಿತ ಗ್ರಾಮದ ಜನರ ತಿಳುವಳಿಕೆಯ ಮಟ್ಟದಲ್ಲಿ ಯಾವುದೇ ಬದಲಾವಣೆಯೂ ಕಂಡುಬರಲಿಲ್ಲ. ಸುದ್ದಿ ಪೂರೈಕೆಯ ಪ್ರಮಾಣವನ್ನು ಹೆಚ್ಚಿಸಲು ಮುದ್ರಿತ ಅಥವಾ ಹಳೆಯ ಕಲ್ಲಚ್ಚು ಪತ್ರಿಕೆಯನ್ನೇ ಮುಂದುವರೆಸಿಕೊಂಡುಹೋಗುವ ಕಾರ್ಯಕ್ರಮವನ್ನು ಮೆನ್‌ಫೀ ದಂಪತಿಗಳು ಸಲಹೆ ಮಾಡಿದರು.

ದಿನತಂತಿ ಉದಾಹರಣೆ:

ಮುದ್ರಣ ಮಾಧ್ಯಮ ಯಾವ ರೀತಿ ವಿಶೇಷ ಪರಿಣಾಮವನ್ನು ಗ್ರಾಮಗಳ ಮತ್ತು ಸಣ್ಣ ಪಟ್ಟಣಗಳ ಜನರ ಮೇಲೆ ಬೀರಬಲ್ಲದು ಎಂಬ ಮತ್ತೊಂದು ಉದಾಹರಣೆ ಮದರಾಸಿನ ತಮಿಳು ದೈನಿಕ 'ದಿನತಂತಿ' ಪತ್ರಿಕೆ ನಡೆಸಿದ ಪ್ರಯೋಗದಿಂದ ಸ್ಪಷ್ಟವಾಗುತ್ತದೆ.

ಮಾಮೂಲೀ ಪತ್ರಿಕಾ ಪ್ರಸಾರವೃದ್ಧಿ ವಿಧಾನ ಮೂಲಕ ನವ ಅಕ್ಷರಸ್ಥರು ಹಾಗೂ ಗ್ರಾಮಾಂತರ ಜನತೆಯನ್ನು ತಲುಪಲು ವಿಫಲರಾದ ಸಂಪಾದಕರು ತಮ್ಮ ಪತ್ರಿಕೆ ಏಕೆ ಅವರನ್ನು ತಲುಪುತ್ತಿಲ್ಲವೆಂಬ ಸಮಸ್ಯೆಯ ಸತ್ಯವನ್ನು ಅರಿತುಕೊಂಡರು. ಸಾಮಾನ್ಯ ಜನರು ಅರ್ಥಮಾಡಿಕೊಳ್ಳುವಂತೆ ಪತ್ರಿಕೆಯ ಭಾಷೆಯನ್ನು ಸರಳೀಕರಿಸುವುದೇ ಅವರು ಕಂಡುಕೊಂಡ ಉತ್ತರ. ಪತ್ರಿಕೆಯಲ್ಲಿ ಬಳಸಲು ಅನುಕೂಲವಾಗುವಂತೆ ಅವರು ಸುಮಾರು 900 ರಿಂದ 1000 ಹೊಸ ಸರಳ ಪದಗಳನ್ನು ತಮಿಳಿನಲ್ಲಿ ರಚಿಸಿದರು. ಸರಳ ವಾಕ್ಯಗಳ ಸುದ್ದಿಗಳಲ್ಲಿ ಈ ಪದಗಳನ್ನೇ ಬಳಸುವಂತೆ ವರದಿಗಾರರು ಮತ್ತು ಉಪಸಂಪಾದಕರಿಗೆ ತರಬೇತು ನೀಡಲಾಯಿತು. ಸಾಮಾನ್ಯ ಜನರಿಗೆ ತಿಳಿಯುವ ಒಂದು ಅಥವಾ ಎರಡು ಪದಗಳನ್ನು ಶೀರ್ಷಿಕೆಗಳಲ್ಲಿ ಉಪಯೋಗಿಸಲಾಗುತ್ತಿತ್ತು. ಇದರಲ್ಲಿ ದೊಡ್ಡಗಾತ್ರದ ಅಕ್ಷರದ ಮೊಳೆಗಳನ್ನು ಮತ್ತು ಚಿತ್ರಗಳನ್ನು ಹೆಚ್ಚಾಗಿ ಬಳಸಲಾಗುತ್ತಿತ್ತು. ಈ ನವೀಕೃತ ಪತ್ರಿಕೆಯನ್ನು ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಮಾತ್ರ ಪ್ರಕಟಿಸಿ ವಿತರಿಸಲಾಯಿತು. ಇದರಿಂದಾಗಿ ಪತ್ರಿಕೆಯ ಪ್ರಸಾರ ಇಮ್ಮಡಿಗೊಂಡಿತಲ್ಲದೇ ತಮಿಳುನಾಡು ಸರ್ಕಾರ ಕೈಗೊಂಡ ಅಭಿವೃದ್ಧಿ ಕಾರ್ಯಕ್ರಮಗಳು ಆ ಪ್ರದೇಶದ ಜನರಿಗೆ ತಿಳಿಯುತ್ತಿತ್ತು ಎಂಬುದು ಮೂರು ತಿಂಗಳನಂತರ ಮನದಟ್ಟಾಯಿತು. ಈ ವಿಧಾನದಿಂದ, ಯಶಸ್ಸಿನಿಂದ ಸ್ಫೂರ್ತಿಗೊಂಡ ಪತ್ರಿಕೆ ತನ್ನ ನೀತಿಯನ್ನು ವಿಸ್ತೃತವಾಗಿ ಮುಂದುವರಿಸಿತು. ಗ್ರಾಮೋದ್ದೇಶಿತ ಪತ್ರಿಕೆಗಳ ಸತತ ಮತ್ತು ಪುನರಾವರ್ತಿತ ಪ್ರದರ್ಶನದಿಂದ ಗ್ರಾಮದ ಜನರು ಹಾಗೂ ಸಾಮಾನ್ಯ ಜನತೆಯ ಬೌದ್ಧಿಕ ಕ್ಷಿತಿಜ ವಿಸ್ತಾರಗೊಳ್ಳುತ್ತದೆ ಎಂಬುವನ್ನು ಪತ್ರಿಕೆ ಅರಿತುಕೊಂಡಿತು.

ಪತ್ರಿಕಾ ಹೋರಾಟ:

ಪಂಜಾಬಿನಲ್ಲಿ ಹೆಚ್ಚುವರಿ ನೀರಿನ ಬಳಕೆಯ ಬಗ್ಗೆ ಅಲ್ಲಿನ ಪತ್ರಿಕೆಗಳು ಸುದ್ದಿ, ಸುದಿ

ಚಿತ್ರ, ಲೇಖನ ಮತ್ತು ಸಂಪಾದಕೀಯಗಳನ್ನು ಸತತವಾಗಿ ಪ್ರಕಟಿಸಿ ಗ್ರಾಮಸ್ಥರು ಇದರಲ್ಲಿ ಆಸಕ್ತಿ ತೋರುವಂತೆ ಹೇಗೆ ಮಾಡಿದವು ಎನ್ನುವ ಮತ್ತೊಂದು ಉದಾಹರಣೆ ಇಲ್ಲಿದೆ.

ಕೆಲವು ವರ್ಷಗಳ ಹಿಂದೆ ಭಾಕ್ರಾನಂಗಲ್ ಕಾಲುವೆ ವ್ಯವಸ್ಥೆ ನಿರ್ಮಾಣದಿಂದಾಗಿ ಪಂಜಾಬ್ ರಾಜ್ಯದಲ್ಲಿ ಕೃಷಿ ನೀರಾವರಿ ಅಧಿಕವಾಗಿತ್ತು. ರಾಜ್ಯಸರ್ಕಾರ ವಿವಿಧ ಮಾಧ್ಯಮಗಳ ಮೂಲಕ ತೀವ್ರ ಪ್ರಚಾರ ಕಾರ್ಯಕ್ರಮ ಕೈಗೊಂಡಿತು. ಇಂಗ್ಲಿಷ್ ಮತ್ತು ಭಾಷಾವೃತ್ತ ಪತ್ರಿಕೆಗಳು ಇದಕ್ಕೆ ಹೆಚ್ಚಿನ ಪ್ರಚಾರ ನೀಡಿದವು.

ಈ ಚಳುವಳಿಯಿಂದಾಗಿ ಒಂದೇ ವರ್ಷದಲ್ಲಿ ಹೆಚ್ಚುವರಿ ಇದ್ದ ನೀರನ್ನು ಹೆಚ್ಚು ಕೃಷಿ ಉತ್ಪಾದನೆಗಾಗಿ ಉಪಯೋಗಿಸಿಕೊಳ್ಳಲಾಯಿತು. ಇದು ಖಂಡಿತವಾಗಿಯೂ ಅರ್ಥ ವ್ಯವಸ್ಥೆಯ ಮೇಲೆ ಪರಿಣಾಮ ಬೀರಿತು. ಗ್ರಾಮ ಸೇವಕರು ಮತ್ತು ಶಾಲಾ ಉಪಾಧ್ಯಾಯರ ಮೂಲಕ ಅನಕ್ಷರಸ್ಥ ಗ್ರಾಮಸ್ಥರಿಗೆ ಪತ್ರಿಕೆಗಳ ಸುದ್ದಿ ತಲಪುತ್ತಿತ್ತು. ಈ ರೀತಿ ಅಭಿವೃದ್ಧಿಗೆ ಪೋಷಕವಾದ ಸುದ್ದಿಗಳನ್ನು ಪ್ರಚಾರಿಸುವುದರಲ್ಲಿ ಪತ್ರಿಕೆಗಳು ನೆರವಾದವು.

ಗ್ರಾಮಾಂತರ ಪತ್ರಿಕೆಗಳು ಅಥವಾ ಮುದ್ರಣ ಮಾಧ್ಯಮ ಜನಜೀವನದ ಮೇಲೆ ಯಾವ ರೀತಿಯ ಪ್ರಭಾವ ಬೀರಬಲ್ಲವೆಂಬುದು ಈ ಉದಾಹರಣೆಗಳಿಂದ ತಿಳಿದು ಬರುತ್ತದೆ. ನಗರಗಳಿಂದ ಪ್ರಕಟವಾಗುವ ಪತ್ರಿಕೆಗಳು, ಬಾನುಲಿ, ದೂರದರ್ಶನ ಮತ್ತು ಸಾಕ್ಷ್ಯಚಿತ್ರಗಳು ಇದೇ ಕಾರ್ಯವನ್ನು ಮಾಡಿದಾಗ್ಯೂ ಅವುಗಳ ಸಂಪರ್ಕತಜ್ಞರ ನಿರೀಕ್ಷೆಗಿಂತ ಬಹು ಹಿಂದಿವೆ.

ಗ್ರಾಮಾಂತರ ಪತ್ರಿಕೆಗಳ ಆವಶ್ಯಕತೆ :

ಜಿಲ್ಲಾ ಮಟ್ಟದಲ್ಲಿ ಸಣ್ಣ ಪತ್ರಿಕೆಗಳನ್ನು ಸ್ಥಾಪಿಸಲು. ಭಾರತೀಯ ಪತ್ರಿಕಾ ಆಯೋಗ 1954 ರಲ್ಲಿ ಸಲಹೆ ಮಾಡಿದಾಗ ಅದು ಗ್ರಾಮಾಂತರ ಪತ್ರಿಕೆಗಳನ್ನು ಗಮನದಲ್ಲಿರಿಸಿತ್ತು. ಭಾರತದಲ್ಲಿ ಸಾಕ್ಷರತೆಯ ಅಭಿವೃದ್ಧಿಯೊಂದಿಗೆ ಜಿಲ್ಲೆ ಮತ್ತು ತಾಲೋಕು ಕೇಂದ್ರಗಳಲ್ಲಿ ಸಣ್ಣ ಪತ್ರಿಕೆಗಳ ಸ್ಥಾಪನೆಯ ಅವಶ್ಯಕತೆ ಏರಿಕೆಯಾಗಿದೆ.

ಒಂದು ಹಾಳೆಯ ಟ್ಯಾಬ್ಲಾಯ್ಡ್ ಆಕಾರದ ಅನೇಕ ಸಣ್ಣ ಪತ್ರಿಕೆಗಳನ್ನು ಇಂದು ಪ್ರಾರಂಭಿಸಲಾಗಿದೆ. ಮೈಸೂರು ನಗರ ಒಂದರಲ್ಲೇ ಅಂತಹ ಸುಮಾರು ಹದಿಮೂರು ಪತ್ರಿಕೆಗಳಿವೆ. ಸಣ್ಣ ಪತ್ರಿಕೆಗಳು ತಮ್ಮ ಬಹುಪಾಲು ಸ್ಥಳವನ್ನು ಈ ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ಘಟನೆಗಳಿಗೆ ಮೀಸಲಾಗಿಟ್ಟಿವೆ. ಸಣ್ಣ ಗ್ರಾಮಗಳಲ್ಲಿ ವಾಸಿಸುವ ಜನರಿಗೆ ಬಹು ಮಹತ್ವವೆನಿಸುವ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಘಟನೆಗಳ ಸುದ್ದಿಗಳು ಇವುಗಳಲ್ಲಿರುತ್ತವೆ. ಪತ್ರಿಕೆಗಳಲ್ಲಿ ತಮ್ಮ ಬಗ್ಗೆ ಏನಾದರೂ ಸುದ್ದಿ ಪ್ರಕಟವಾಗುವುದನ್ನು ಈ ಗ್ರಾಮಸ್ಥರು ವಿಶೇಷವಾಗಿ ಇಚ್ಛಿಸುತ್ತಾರೆ.

ನಗರಗಳಲ್ಲಿ ಪ್ರಕಟವಾಗುವ ಅಲ್ಪಪ್ರಸಾರದ ಸಣ್ಣ ಪತ್ರಿಕೆಗಳಿಂದ ಗ್ರಾಮಾಂತರ ಪತ್ರಿಕೆಯನ್ನು ಪ್ರತ್ಯೇಕಿಸಬೇಕು. ಈ ಗ್ರಾಮಾಂತರ ಪತ್ರಿಕೆಗಳಿಗೆ ತಮ್ಮದೇ ಆದ ಒಂದು ಲಕ್ಷಣವಿರಬೇಕು. ಆದರೆ ಅದು ಗ್ರಾಮಾಂತರ ಜನತೆಯ ಬಹುಪಾಲು ಅವಶ್ಯಕತೆಗಳನ್ನು ಪೂರೈಸುವಂತೆ ಇರಬೇಕು.

ವಾಸ್ತವವಾಗಿ, ಗ್ರಾಮಾಂತರಪತ್ರಿಕೆ ಆ ಸಾಂಪ್ರದಾಯಿಕ ಶಿಕ್ಷಣದ ಪರಿಣಾಮಕಾರಿ ಸಾಧನ ಎಂಬುದೂ ಅನುಮಾನಾತೀತ. ಹೀಗಿದ್ದಾಗ್ಯೂ ಗ್ರಾಮಾಂತರ ಸಂಪರ್ಕದ ಉತ್ತಮ ಸಾಧನಗಳಾಗಿ ಹಾಗೂ ಪರಿವರ್ತನೆಯ ಸಾಧನವಾಗಿ ಅವುಗಳನ್ನು ಬಳಸುವುದಾದರೂ ಹೇಗೆ ಎಂಬುದೇ ಇಂದಿನ ಒಂದು ದೊಡ್ಡ ಸವಾಲು.

ಮುದ್ರಣ ಮಾಧ್ಯಮದ ತೊಡಕುಗಳು :

ಮುದ್ರಣ ಮಾಧ್ಯಮ ಗ್ರಾಮಾಂತರ ಸಂಪರ್ಕ ಕಾರ್ಯದಲ್ಲಿ ಪರಿಣಾಮಕಾರಿ ಹಾಗೂ ಮಹತ್ವದ ಪಾತ್ರ ವಹಿಸಿದರೂ ಅದಕ್ಕೆ ಅನೇಕ ತೊಡಕುಗಳಿವೆ.

ಇವುಗಳಲ್ಲಿ ಮೊದಲ ಹಾಗೂ ಅತ್ಯಂತ ಪ್ರಮುಖ ಸಮಸ್ಯೆ ಎಂದರೆ ಅನಕ್ಷರತೆ. ಆರು ನೂರು ಮಿಲಿಯನ್ ಜನಸಂಖ್ಯೆಯ ಈ ದೇಶದಲ್ಲಿ ಅಕ್ಷರ ಬಲ್ಲವರ ಸಂಖ್ಯೆ ಕೇವಲ ಶೇಕಡ 30 ಮಾತ್ರ ಅಥವಾ ಅದಕ್ಕೂ ಕಮ್ಮಿ.

ಮುದ್ರಣ ಮಾಧ್ಯಮದ ಕುಂಠಿತ ಬೆಳವಣಿಗೆಗೆ ಕಾರಣವಾಗಿರುವ ಮತ್ತೊಂದು ಪ್ರಬಲವಾದ ಅಂಶ ಕಡು ಬಡತನ. ಇದರಿಂದಾಗಿ ಬಹಳ ಜನ ವೃತ್ತಪತ್ರಿಕೆ ಮತ್ತು ಸಂಕೀರ್ಣ ಪತ್ರಿಕೆಗಳನ್ನು ಕೊಳ್ಳಲು ಶಕ್ತರಾಗಿಲ್ಲ. ಕಳೆದ 30 ವರ್ಷಗಳಿಂದಲೂ ಯೋಜನೆಗಳಾಗಿದ್ದರೂ ಸಹ ನಮ್ಮಲ್ಲಿ ಬಡವ ಮತ್ತು ಬಲ್ಲಿದರ ನಡುವಿನ ಅಂತರ ವಿಸ್ತೃತವಾಗುತ್ತಿದೆ. ಶೇಕಡ 60ಕ್ಕೂ ಹೆಚ್ಚು ಜನ ಬಡತನದ ರೇಖೆಯ ಕೆಳಗಿದ್ದಾರೆ.

ನಗರ ಪ್ರದೇಶಗಳಲ್ಲಿ ಪತ್ರಿಕೆಗಳ ಕೇಂದ್ರೀಕರಣ ಮತ್ತೊಂದು ಗಮನಾರ್ಹ ಸಂಗತಿ. ಇಂಗ್ಲಿಷ್ ಮತ್ತು ಪ್ರಾಂತೀಯ ಭಾಷೆಗಳಲ್ಲಿನ ಅಧಿಕ ಪ್ರಸಾರದ ಪ್ರಮುಖ ಪತ್ರಿಕೆಗಳು ನಗರ ಕೇಂದ್ರಗಳಲ್ಲಿ ಮಾತ್ರವೇ ಕೇಂದ್ರೀಕೃತವಾಗಿವೆ. ಗ್ರಾಮಗಳನ್ನು ಅವು ಸಾಮಾನ್ಯವಾಗಿ ತಲುಪುವುದೇ ಇಲ್ಲ.

ಪತ್ರಿಕಾ ಬಾಹುಳ್ಯ ಕೂಡ ಅವುಗಳ ಬೆಳವಣಿಗೆಗೆ ಮಾರಕವಾಗಿದೆ. ನಮ್ಮಲ್ಲಿ ಪರಿಮಿತ ಓದುಗರಿಗಾಗಿ ಪರಸ್ಪರ ಸ್ಪರ್ಧೆಯಲ್ಲಿ ತೊಡಗಿರುವ ಪತ್ರಿಕೆಗಳೇ ಅಪಾರ. ಅಲ್ಪಸ್ವಲ್ಪ ಹಣ ಹೊಂದಿರುವ ಓದುಗ ಪತ್ರಿಕೆ ಮತ್ತು ನಿಯತಕಾಲಿಕಗಳನ್ನು ಆರಿಸಿಕೊಳ್ಳುವ ಸಂದರ್ಭದಲ್ಲಿ ವಿಪರೀತ ಪ್ರಯಾಸ ಪಡಬೇಕು. ದುಬಾರಿ ಬೆಲೆಯಿಂದಾಗಿ ಸಂಕೀರ್ಣ ಪತ್ರಿಕೆ ಮತ್ತು ಗ್ರಂಥಗಳು ಭಾರತದಲ್ಲಿ ಓದುಗರ ಮಾರುಕಟ್ಟೆ ಪ್ರವೇಶಿಸಲು ಬಹಳ ಶ್ರಮಪಡಬೇಕು. ಗ್ರಾಮಗಳನ್ನು ಅವು ತಲುಪುವ ಮಾತಂತೂ ದೂರವೇ.

ಈ ಅಡಚಣೆಗಳಿಂದ ಪತ್ರಿಕಾ ಉದ್ಯಮ ಕ್ಷೇತ್ರವೂ ಮುಕ್ತವಾಗಿಲ್ಲ. ಬ್ರಿಟಿಷ್ ಆಡಳಿತ ಪರಂಪರೆಯಿಂದಾದ ಇಂಗ್ಲಿಷ್ ಪ್ರಾಬಲ್ಯ. ಇಂಗ್ಲಿಷ್ ತಿಳಿಯದ ಗ್ರಾಮಾಂತರ ಶ್ರೋತೃಗಳನ್ನು ಪತ್ರಿಕೆಗಳು ತಲುಪುವಲ್ಲಿ ದೊಡ್ಡ ಕಂಟಕವಾಗಿ ಪರಿಣಮಿಸಿದೆ.

ಈ ನಮ್ಮ ಉಪಖಂಡದಲ್ಲಿ ಮಾತನಾಡುವ ಭಾಷೆಗಳ ಸಂಖ್ಯಾಬಾಹುಳ್ಯವೂ ಒಂದು ಸಮಸ್ಯೆಯೇ. ಇದರಿಂದಾಗಿ ಯಾವುದೇ ಒಂದು ಭಾಷೆ ಮಾತನಾಡುವ ಪ್ರದೇಶದ ಓದುಗರ ಸಂಖ್ಯೆ ಯಾವಾಗಲೂ ಪರಿಮಿತ ಎಂಬ ಸಂಗತಿಯನ್ನು ದೃಢೀಕರಿಸುತ್ತದೆ.

ಯಾವುದೇ ಒಂದು ದೇಶ ಅಭಿವೃದ್ಧಿ ಹೊಂದಿದೆ ಎಂದು ಭಾವಿಸಬೇಕಾದಲ್ಲಿ ತಲಾ 1000 ನಿವಾಸಿಗಳಿಗೆ ಹತ್ತು ಅಥವಾ ಅಧಿಕ ದೈನಿಕ ಪತ್ರಿಕಾ ಪ್ರತಿಗಳು ಲಭ್ಯವಾಗುವಂತಿರಬೇಕು ಎಂಬುದು ಯುನೆಸ್ಕೋ ನಿಗದಿ. ಭಾರತದಲ್ಲಿ ಲಭ್ಯವಿರುವ ಪತ್ರಿಕಾ ಪ್ರತಿಗಳ ಸಂಖ್ಯಾ ಪ್ರಮಾಣ ನಾವರೂ ಕೇವಲ 1.3. ಭಾರತದಷ್ಟೇ ಹಿಂದುಳಿದ ಯಾವುದೇ ದೇಶಕ್ಕೆ ಹೋಲಿಸಿದಲ್ಲಿ ಅಪಮಾನಕಾರಿಯಾದ ಸಂಖ್ಯೆ ಇದು.

ಪರಿಹಾರೋಪಾಯ :

ಯಾವ ದೇಶದ ಅಭಿವೃದ್ಧಿಯಲ್ಲಿ ಮುದ್ರಣ ಮಾಧ್ಯಮಗಳು ನೇರವಾಗಿ ಭಾಗವಹಿಸಬೇಕೋ ಅಲ್ಲಿ ಮೊದಲು ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಉಂಟುಮಾಡುವುದೇ

ಮೊದಲ ಪರಿಹಾರೋಪಾಯ. ಎಲ್ಲಾ ಭಾರತೀಯ ಭಾಷೆಗಳಲ್ಲೂ ಯೋಗ್ಯ ಬೆಲೆಗೆ ಗ್ರಾಮ ಪತ್ರಿಕೆಗಳು, ಸಂಕೀರ್ಣ ಪತ್ರಿಕೆಗಳು, ಗ್ರಂಥಗಳು ಹಾಗೂ ಕೈಪೊತ್ತಿಗೆಗಳನ್ನು ಹೆಚ್ಚಾಗಿ ಪ್ರಕಟಿಸಬೇಕು ಮತ್ತು ಅವುಗಳು ಜನರಿಗೆ ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು.

ಸಣ್ಣ ಹಾಗೂ ಗ್ರಾಮಾಂತರ ಭಾಷಾ ಪತ್ರಿಕೆಗಳ ಅಭಿವೃದ್ಧಿಗೆ ಆದರ್ಶವಾದ ವಾತಾವರಣ ನಿರ್ಮಿಸಲು ಅವುಗಳಿಗೆ ಯಥೇಚ್ಛ ಧನಸಹಾಯ ಮಾಡಲು ಸರ್ಕಾರೀ ಜಾಹೀರಾತು ನೀತಿಯಲ್ಲಿ ಮಾರ್ಪಾಡಾಗಬೇಕು.

1954ರಲ್ಲಿ ಪತ್ರಿಕಾ ಆಯೋಗ ಸಲ್ಲಿಸಿದ ತನ್ನ ವರದಿಯಲ್ಲಿ ಅನೇಕ ಶಿಫಾರಸ್ಸುಗಳನ್ನು ಮಾಡಿದೆ. ಇಂದಿಗೂ ಅವುಗಳಲ್ಲಿ ಅನೇಕ ಸಲಹೆಗಳು ಪ್ರಯೋಜನಕಾರಿ. ಮುದ್ರಣ ಸಂಪರ್ಕ ನಿರತ ಉದ್ಯಮಗಳಿಗೆ ಸಹಾಯ ಮಾಡಲು ಸುಲಭ ಸಾಲದ ಮೂಲಕ ಧನಸಹಾಯ ಒದಗಿಸುವ ಯೋಜನೆಗಳನ್ನು ಹಾಕಿಕೊಳ್ಳಬೇಕು. ಇದಕ್ಕೆ ಪ್ರತಿಯಾಗಿ ಉದ್ಯಮ ಅರ್ಥಪೂರ್ಣವಾದ ವಿಷಯಗಳ ಪ್ರಕಟಣೆಯ ಮೂಲಕ ಸುಪ್ತ ಓದುಗರನ್ನು ಆಕರ್ಷಿಸಲು ಯತ್ನಿಸಬೇಕು.

ಗ್ರಾಮಾಂತರ ಜನತೆಯ ವರ್ಗೀಕರಣ :

ಗ್ರಾಮಾಂತರ ಜನತೆಯನ್ನು ಮೂರು ಗುಂಪುಗಳಾಗಿ ವರ್ಗೀಕರಿಸಬಹುದು : (1) ಅನಕ್ಷರಸ್ಥರು, (2) ನವ–ಅಕ್ಷರಸ್ಥರು ಮತ್ತು (3) ಅಕ್ಷರಸ್ಥರು.

ಅನಕ್ಷರಸ್ಥರನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳುವುದಾದರೆ, ಪತ್ರಿಕೆಗಳು ತಾವೇ ಸ್ವತಃ ಸಾಕ್ಷರತಾ ಚಳುವಳಿಯನ್ನು ನಡೆಸಿ ಎಲ್ಲಾ ಗ್ರಾಮಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿದ ಹೊರತು ಮುದ್ರಣ ಮಾಧ್ಯಮಗಳಿಗೆ ಯಾವುದೇ ಭವಿಷ್ಯ ಇಲ್ಲ. ಆದರೆ ಇದೊಂದು ದುಃಸಾಧ್ಯವಾದ ಕಾರ್ಯ. ಎಲೆಕ್ಟ್ರಾನಿಕ್ ಮಾಧ್ಯಮಗಳಾದ ಬಾನುಲಿ ಮತ್ತು ದೂರದರ್ಶನಗಳು ಸುದ್ದಿ ಮತ್ತು ವಿಷಯಗಳನ್ನು ಚಿತ್ರಿಸುವ ಮೂಲಕ ಇಲ್ಲಿ ಬಹು ಪ್ರಯೋಜನಕಾರಿ ಪಾತ್ರ ವಹಿಸಬಲ್ಲವು. ಆದರೆ ಒಂದು ಮುಖ್ಯ ಸಂಗತಿಯನ್ನು ಮರೆಯಕೂಡದು. ಪತ್ರಿಕೆಗಳಲ್ಲಿ ಪ್ರಕಟವಾಗುವ ದಿನನಿತ್ಯದ ಸಂಗತಿಗಳು ಗ್ರಾಮದ ಶಾಲಾ ಉಪಾಧ್ಯಾಯ ಮತ್ತು ಗ್ರಾಮಸೇವಕರ ಮೂಲಕ ಅನಕ್ಷರಸ್ಥರಿಗೂ ತಿಳಿಯುತ್ತದೆ.

ಭಾರತ ಸೇರಿದಂತೆ ಬಹುಪಾಲು ಎಲ್ಲಾ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ ಸಾಮಾನ್ಯವಾಗಿ ಸರ್ಕಾರವೇ ನವ ಅಕ್ಷರಸ್ಥರಿಗಾಗಿ ಪತ್ರಿಕೆಗಳನ್ನು ನಡೆಸುತ್ತದೆ. ಏಕೆಂದರೆ ಅಂತಹ ಪ್ರಯತ್ನಗಳು ವ್ಯಾಪಾರೀ ಲಾಭದ ದೃಷ್ಟಿಯಿಂದ ಸಾಧ್ಯವಾಗದು. ನವ-ಅಕ್ಷರಸ್ಥರಿಗಾಗಿಯೇ ಇರುವ ಪತ್ರಿಕೆಯ ದರ್ಶನ ಬೇಕಾದಲ್ಲಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಿಸುತ್ತಿರುವ 'ಬೆಳಕು' ಪತ್ರಿಕೆಯನ್ನು ಗಮನಿಸಬಹುದು. ಹೊಸದಾಗಿ ಅಕ್ಷರ ಕಲಿತವರ ಶಿಕ್ಷಣ ಮುಂದುವರಿಕೆಯ ಸಾಧನವಾಗಿ ಬಳಸಲಾಗುತ್ತಿದೆ. ಇದು ಕನ್ನಡ ಭಾಷೆಯಲ್ಲಿ ಸಾಪ್ತಾಹಿಕವಾಗಿ ಪ್ರಕಟವಾಗುತ್ತಿದೆ. ದಪ್ಪಕ್ಷರದ ಮೊಳೆಗಳು, ಸರಳ ಮತ್ತು ಚಿಕ್ಕ ವಾಕ್ಯಗಳು, ಸಾಮಾನ್ಯ ಪರಿಚಿತ ಪದಗಳನ್ನೇ ಈ ಪತ್ರಿಕೆಯಲ್ಲಿ ಬಳಸಲಾಗುತ್ತಿದೆ. ಸ್ಥಳೀಯ, ರಾಜ್ಯ ಹಾಗೂ ಪ್ರಪಂಚದ ಸುದ್ದಿಗಳನ್ನು ಚಿತ್ರ ಸಹಿತ ಪ್ರಕಟಿಸಲಾಗುತ್ತಿದೆ.

ಗ್ರಾಮಾಂತರ ಭಿತ್ತಿ ಪತ್ರಿಕೆಗಳು, ನಿಯತಕಾಲಿಕಗಳು ಮತ್ತು ಸ್ಥಳೀಯ ಭಾಷೆಗಳಲ್ಲಿನ ಕಲ್ಲಚ್ಚು ಪತ್ರಿಕೆಗಳು ನವ-ಅಕ್ಷರಸ್ಥರು ಮತ್ತು ಗ್ರಾಮಾಂತರ ಅಕ್ಷರಸ್ಥರಿಗೆ ಸಂಪರ್ಕದ ಉತ್ತಮ ವಿಧಾನಗಳು. ಉತ್ತಮವಾದ ಮತ್ತು ಆಕರ್ಷಕವಾದ ಭಿತ್ತಿ ಪತ್ರಿಕೆಯಲ್ಲಿ ಎಚ್ಚರಿಕೆ ಅವಶ್ಯಕ. ಸುದ್ದಿಗಳು ಚಿಕ್ಕದಾಗಿದ್ದು ದಪ್ಪ ಅಕ್ಷರಗಳಲ್ಲಿ ಮುದ್ರಿತವಾಗಿರಬೇಕು. ಯುಕ್ತ ಪ್ರಮಾಣದಲ್ಲಿ ಸ್ಥಳದ ವಿತರಣೆಯಾಗಬೇಕು. ಚಿತ್ರಗಳು ಗಮನ ಸೆಳೆಯುವಂತಿದ್ದು ವಿನ್ಯಾಸ ರಚನೆಯಲ್ಲಿ

ಜಾಗರೂಕತೆ ವಹಿಸಬೇಕು. ಓದುಗರಿಗೆ ಪರಿಚಿತವಾಗಿರುವ ಮತ್ತು ರುಚಿಸುವ ಸುದ್ದಿಗಳನ್ನೇ ಪ್ರಕಟಿಸಬೇಕು. ಆಕರ್ಷಕ ವಿಷಯಗಳ ಪ್ರಕಟಣೆ ಓದುಗರ ಸಂಖ್ಯೆಯನ್ನು ಹೆಚ್ಚಿಸುತ್ತದೆ.

ಗ್ರಾಮಾಂತರ ಪತ್ರಿಕೆಗಳಲ್ಲಿ ಈ ಮೊದಲೇ ತಿಳಿಸಿದಂತೆ ಸರಳವಾದ ಭಾಷೆಯನ್ನು ಮಾತ್ರ ಬಳಸಬೇಕು. ಈ ರೀತಿಯ ಭಾಷಾ ಪ್ರಯೋಗದಲ್ಲಿ ಸೂಕ್ತ ತರಬೇತಿಯನ್ನು ಗ್ರಾಮಾಂತರ ಪತ್ರಿಕೆಗಳಲ್ಲಿ ಕೆಲಸ ಮಾಡುವ ವರದಿಗಾರ, ಉಪಸಂಪಾದಕ ಹಾಗೂ ಇತರರಿಗೆ ನೀಡಬೇಕು. ಏಕೆಂದರೆ ಅವರು ಗ್ರಾಮಗಳಲ್ಲಿರುವ ನವ–ಅಕ್ಷರಸ್ಥರಿಗೆ ಅರ್ಥವಾಗುವಂತೆ ಸಾಮಾನ್ಯ ಪದಗಳನ್ನು ಬಳಸಿ ಸುದ್ದಿ ಮತ್ತು ಇತರ ಲೇಖನಗಳನ್ನು ಬರೆಯಬೇಕಾಗುತ್ತದೆ. ಆದ್ದರಿಂದ ಗ್ರಾಮಾಂತರ ಪತ್ರಿಕೆಯ ಪ್ರಗತಿ ಹಾಗೂ ಅಭಿವೃದ್ಧಿಗಾಗಿ ಪತ್ರಿಕಾ ಬರವಣಿಗೆಯ ಮೂಲ ಕಲೆಯಲ್ಲಿ ತರಬೇತಿ ಅವಶ್ಯಕ.

ಪತ್ರಿಕಾ ಬರವಣಿಗೆಯ ಎಲ್ಲಾ ಮೂಲತತ್ವಗಳು ಇವುಗಳಿಗೂ ಅನ್ವಯಿಸುತ್ತವೆ. ಸರಳತೆ, ವೈವಿಧ್ಯ, ಸಂಕ್ಷಿಪ್ತತೆ ಮತ್ತು ರೋಚಕ ಕ್ರಿಯಾಪದಗಳ ಉಪಯೋಗ ವಿಷಯಗಳನ್ನು ಓದಲು ಹೆಚ್ಚು ಅರ್ಹವನ್ನಾಗಿಸುತ್ತದೆ. ಭಾರತೀಯ ಭಾಷೆಗಳಲ್ಲಿ ಇದುವರೆಗೂ ಯಾವುದೇ ಪದಗಳ ಸಂಶೋಧನಾ ಕಾರ್ಯ ನಡೆದಿಲ್ಲ. ಈ ಕ್ಷೇತ್ರದಲ್ಲಿ ಸ್ವಲ್ಪವಾದರೂ ಸಂಶೋಧನೆ ನಡೆದರೆ ಗ್ರಾಮಾಂತರ ಪತ್ರಿಕೆಯನ್ನು ಖಂಡಿತವಾಗಿಯೂ ಉತ್ತಮಗೊಳಿಸುವಲ್ಲಿ ಸಹಕಾರಿಯಾಗುತ್ತದೆ.

ಅನೇಕ ಭಾರತೀಯ ಭಾಷಾ ಪತ್ರಿಕೆ ಮತ್ತು ಸಂಕೀರ್ಣ ಪತ್ರಿಕೆಗಳಲ್ಲಿ ವಿನ್ಯಾಸವನ್ನು ಪೂರ್ಣವಾಗಿ ಉಪೇಕ್ಷಿಸಿರುವುದು ಆತಂಕಕಾರಿಯಾದ ಪ್ರವೃತ್ತಿಯಾಗಿದೆ. ಈ ಮುಖ್ಯ ಅಂಶದತ್ತ ಮೊದಲು ಗಮನ ಹರಿಸಬೇಕು. ಗ್ರಾಮಾಂತರ ಪತ್ರಿಕೆಗಳಿಗೆ 12, 13 ಅಥವಾ 16 ಪಾಯಿಂಟು ಅಕ್ಷರ ಮೊಳೆಯಲ್ಲಿ ಜೋಡಿಸಲಾದ ವಿಷಯಗಳು ಮತ್ತು ಟ್ಯಾಬ್ಲಾಯ್ಡ್ ರೂಪ ಹೆಚ್ಚು ಸೂಕ್ತವಾಗಿದೆ. ಶಿರೋನಾಮೆಗಳನ್ನು ದಪ್ಪ ಅಕ್ಷರಗಳಲ್ಲಿ ಜೋಡಿಸುವುದರಿಂದ ಓದಲು ಸುಲಭವಾಗುತ್ತದೆ.

ಚಿತ್ರಗಳು ಪತ್ರಿಕಾ ವಿಷಯಕ್ಕೆ ಜೀವ ನೀಡುತ್ತವೆ. ಗ್ರಾಮಸ್ಥರಿಗೆ 'ನೋಟವೇ ನಂಬಿಕೆ'. ಅಭಿನಯದಿಂದ ಕೂಡಿದ ಛಾಯಾಚಿತ್ರಗಳು ಹೆಚ್ಚು ಪರಿಣಾಮಕಾರಿ. ರೇಖಾ ಚಿತ್ರಗಳನ್ನು ಗ್ರಾಮೀಣ ಜನರಿಗೆ ನೀಡುವುದು ಸೂಕ್ತವಲ್ಲ. ಏಕೆಂದರೆ ಅವರು ಅವುಗಳನ್ನು ಅಪಾರ್ಥಮಾಡಿಕೊಳ್ಳುವ ಸಾಧ್ಯತೆಯೇ ಹೆಚ್ಚು. ವರ್ಣ ಚಿತ್ರಗಳು ಸಂದೇಶಗಳಿಗೆ ಸತ್ವ ನೀಡುತ್ತವೆ.

ಓದುಗರಿಗೆ ಅಪರಿಚಿತ ವಸ್ತುಗಳ ಚಿತ್ರಗಳು ರುಚಿಸದೇ ಇರಬಹುದು. ಓದುಗರ ಸಾಮಾಜಿಕ ಮೌಲ್ಯಗಳು ಅವರ ವಿಷಯ ಗ್ರಹಿಕೆಯ ಮೇಲೆ ಪ್ರಭಾವ ಬೀರುವ ಕಾರಣ ಓದುಗರ ಸಾಂಸ್ಕೃತಿಕ ಹಿನ್ನೆಲೆಯನ್ನು ಬರೆಯುವುದಕ್ಕಿಂತ ಮುಂಚೆ ಗಮನದಲ್ಲಿರಿಸಿಕೊಳ್ಳುವುದು ಉತ್ತಮ. ಸ್ಥಳೀಯ ಆಸಕ್ತಿ, ಸೇವಾ ಮನೋಭಾವದ ಕೊರತೆ ಮತ್ತು ಓದುಗರ ಬಗ್ಗೆ ತಾತ್ಸಾರವನ್ನು ಕೆಲವು ಭಾರತೀಯ ಪತ್ರಿಕೆಗಳು ತೋರುತ್ತವೆ ಎಂಬ ಗುರುತರವಾದ ಆಪಾದನೆ ಉಂಟು. ಚಂಚಲ್ ಸರ್ಕಾರ ಅವರು ಇದನ್ನು ರುಜುವಾತುಪಡಿಸಲು ತಮ್ಮ 'ಛಾಲೆಂಜ್ ಅಂಡ್ ಸ್ಟ್ಯಾಗ್ನೇಶನ್' ಮತ್ತು 'ಎಮರ್ಜಿಂಗ್ ಎಸ್ಟೇಟ್' ಗ್ರಂಥಗಳಲ್ಲಿ ಅನೇಕ ನಿದರ್ಶನಗಳನ್ನು ನೀಡುತ್ತಾರೆ. ಮುದ್ರಣ ಮಾಧ್ಯಮಗಳು ತಮ್ಮ ವಿಧಾನ ಮತ್ತು ವಿಷಯಗಳಲ್ಲಿ ಸಮುದಾಯ ನಿಷ್ಠೆಯನ್ನು ತೋರಿಸಬೇಕು. ಸ್ಥಳೀಯ ಆಸಕ್ತಿಯ ವಿಷಯಗಳು ಮತ್ತು ಸಮಸ್ಯೆಗಳ ಪ್ರಕಟಣೆ ಅಧಿಕಾರಿಗಳ ದೃಷ್ಟಿಯನ್ನು ಸೆಳೆಯುತ್ತವೆ.

ಮಾದರಿ ಸಮೀಕ್ಷೆಗಳು:

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪತ್ರಿಕೋದ್ಯಮ ವಿಭಾಗ ಇತ್ತೀಚೆಗೆ

ಮೈಸೂರು ನಗರದ ಸಮೀಪವಿರುವ ಹಿನಕಲ್ ಮತ್ತು ಗಂಜಾಂ ಗ್ರಾಮಗಳಲ್ಲಿ ಎರಡು ಸಂಪರ್ಕ ಸಮೀಕ್ಷೆಗಳನ್ನು ನಡೆಸಿದೆ. ಅವರ ಕೆಲವು ಮುಖ್ಯಾಂಶಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತ.

ಬಾನುಲಿ ಮಾಧ್ಯಮ ಇತರೆ ಸಂಪರ್ಕ ಮಾಧ್ಯಮಗಳಿಗಿಂತ ಹೆಚ್ಚು ಪ್ರಭಾವಶಾಲೀ ಎಂಬುದನ್ನು ಈ ಸಮೀಕ್ಷೆ ಬಹಿರಂಗಗೊಳಿಸಿತು. ಈ ಮಾಧ್ಯಮ ತನ್ನ ಚಲನಚಿತ್ರ ಸಂಗೀತ ಮತ್ತು ಇತರ ಮನರಂಜನ ಕಾರ್ಯಕ್ರಮಗಳಿಂದಾಗಿ ರಂಜನೋದ್ದೇಶಗಳನ್ನೇ ಹೆಚ್ಚಾಗಿ ಪೂರೈಸುತ್ತಿದೆ. ಅಂತರ ವ್ಯಕ್ತಿ ಸಂಪರ್ಕ ಮಾತ್ರ ಸರ್ವೋಚ್ಚವಾಗಿತ್ತು. ಇದಕ್ಕೆ ಒಂದು ದೃಷ್ಟಾಂತ ನೀಡಬಹುದು.

ಈ ಸಮೀಕ್ಷೆ ಗ್ರಾಮಗಳಿಂದ ಇಪ್ಪತ್ತು ಮೈಲಿ ದೂರದಲ್ಲಿರುವ ಮಂಡ್ಯದಲ್ಲಿ ಶಾಲಾ ಬಾಲಕರಿಗೆ ಬಲವಂತವಾಗಿ ಸಂತಾನಹರಣ ಮಾಡಲಾಗುತ್ತಿದೆ ಎಂಬ ಗುಲ್ಲು ಅಂತರ ವ್ಯಕ್ತಿ ಸಂಪರ್ಕದಿಂದಾಗಿ ಕಾಡ್ಗಿಚ್ಚಿನಂತೆ ಹಬ್ಬಿತು. ಸಮೂಹ ಮಾಧ್ಯಮಗಳ ಯಾವುದೇ ಪ್ರಮಾಣದ ಪ್ರಚಾರವೂ ಗ್ರಾಮಸ್ಥರಲ್ಲಿ ನಂಬಿಕೆ ಹುಟ್ಟಿಸಲಿಲ್ಲ. ಸಮೀಕ್ಷೆಗಾಗಿ ಅಲ್ಲಿಗೆ ತೆರಳಿದ್ದ ಪತ್ರಿಕೋದ್ಯಮ ವಿಭಾಗದ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳನ್ನು ಸಹ ಕುಟುಂಬ ಯೋಜನಾ ಗುಂಪಿನ ವೈದ್ಯಕೀಯ ಸಿಬ್ಬಂದಿ ವರ್ಗದವರೆಂದೇ ಅಪಾರ್ಥ ಮಾಡಿಕೊಂಡಿದ್ದರು! ವ್ಯಕ್ತಿಗತ ಸಂಪರ್ಕ ಎಷ್ಟು ಪ್ರಬಲವಾಗಿತ್ತೆಂದರೆ ಗ್ರಾಮದ ಹಿರಿಯರು ಎಷ್ಟೇ ಪ್ರಯತ್ನಿಸಿದ್ದಾಗ್ಯೂ ಸಮೀಕ್ಷಾ ತಂಡದ ವಿದ್ಯಾರ್ಥಿಗಳ ಜೊತೆ ಮಾತನಾಡಲು ಗ್ರಾಮಸ್ಥರು ನಿರಾಕರಿಸಿದರು.

ಈ ಎರಡೂ ಗ್ರಾಮಗಳಲ್ಲೂ ಗ್ರಾಮಸ್ಥರು ರಾಷ್ಟ್ರ ಮತ್ತು ರಾಜ್ಯದ ನಾಯಕರ ಹೆಸರುಗಳನ್ನು ಗುರುತಿಸಲು ಅಸಮರ್ಥರಾಗಿದ್ದರು. ಆದರೆ ಇದೇ ಸಂದರ್ಭದಲ್ಲಿ ಸಾಂಪ್ರದಾಯಿಕ ಮಾಧ್ಯಮಗಳಾದ ದಾಸರಪದ ಮತ್ತು ಹರಿಕಥೆಗಳು ಬಹು ಜೀವಂತವಾಗಿದ್ದವು. ಇವು ಮನರಂಜನಾ ಉದ್ದೇಶಗಳನ್ನು ಮಾತ್ರ ನೆರವೇರಿಸುತ್ತಿದ್ದವು.

ಈ ಗ್ರಾಮಗಳಲ್ಲಿ ಹೊಸದಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸಿ ಅವುಗಳ ಮೇಲ್ವಿಚಾರಣೆಯನ್ನು ಗ್ರಾಮದ ಕಾರ್ಯಕರ್ತ ಅಥವಾ ಶಾಲಾ ಅಧ್ಯಾಪಕರಿಗೆ ವಹಿಸುವುದು, ಗ್ರಾಮಸ್ಥರಿಗಾಗಿ ಅವರು ಪತ್ರಿಕೆಗಳನ್ನು ಓದಿ ಹೇಳಿ ಸುದ್ದಿ ಪ್ರಚಾರ ಮಾಡುವ ಕಾರ್ಯದ ಜವಾಬ್ದಾರಿಯನ್ನು ವಹಿಸಬೇಕೆಂಬ ಸಲಹೆಯನ್ನು ಈ ಸಮೀಕ್ಷೆ ನೀಡಿತು.

ಕೃಷಿ, ಆರೋಗ್ಯ, ಶಿಕ್ಷಣ, ವಿಜ್ಞಾನ ಮತ್ತು ಕುಟುಂಬ ಯೋಜನೆ ವಿಚಾರಗಳ ಪರಿಣಾಮಕಾರಿ ಪ್ರಚಾರಕ್ಕಾಗಿ ಸರಳ ಶೈಲಿಯಲ್ಲಿ ಒಂದು ಗ್ರಾಮಾಂತರ ಕನ್ನಡ ವಾರಪತ್ರಿಕೆಯನ್ನು ಪ್ರಾರಂಭಿಸಲು ಸಂಶೋಧಕರು ಶಿಫಾರಸ್ಸು ಮಾಡಿದ್ದಾರೆ. ಸಮುದಾಯ ಬಾನುಲಿಗ್ರಾಹಕಗಳನ್ನು ಅಧಿಕಗೊಳಿಸುವುದು, ಬಾನುಲಿ ಕಾರ್ಯಕ್ರಮಗಳ ನಂತರ ವಿಚಾರ ವಿನಿಮಯಗೋಷ್ಠಿಗಳನ್ನೇರ್ಪಡಿಸುವುದು ಮತ್ತು ಪ್ರಚಾರ ವಿಭಾಗಗಳಿಂದ ನಿಯಮಿತವಾಗಿ ಚಲನಚಿತ್ರ ಕಾರ್ಯಕ್ರಮಗಳನ್ನು ಏರ್ಪಡಿಸುವ ಇತರ ಸಲಹೆಗಳನ್ನು ಮಾಡಲಾಯಿತು. ಪ್ರಮುಖ ಸಾಂಪ್ರದಾಯಿಕ ಮಾಧ್ಯಮಗಳ ಬಳಕೆ ಮತ್ತು ಅಭಿಪ್ರಾಯ ನಿರ್ಮಾಪಕರ ತರಬೇತಿಯ ಅವಶ್ಯಕತೆಯನ್ನು ಸಮೀಕ್ಷೆಯಲ್ಲಿ ಒತ್ತಿ ಹೇಳಲಾಗಿದೆ.

ಮುದ್ರಣ ಮಾಧ್ಯಮಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದ ನಂತರ, ಎಲೆಕ್ಟ್ರಾನಿಕ್ ಮತ್ತು ಸಾಂಪ್ರದಾಯಿಕ ಮಾಧ್ಯಮಗಳ ಪ್ರಯೋಜನಗಳನ್ನು ಉಪೇಕ್ಷೆ ಮಾಡಲಾಗದು. ಎಲ್ಲಿಯವರೆಗೆ ಭಾರತದಲ್ಲಿ ಸಾಕ್ಷರತಾ ಪ್ರಮಾಣ ಕಡಿಮೆ ಇರುವುದೋ ಅಲ್ಲಿಯವರೆಗೂ ಬಾನುಲಿ ಮತ್ತು ದೂರದರ್ಶನಗಳು ಸುದ್ದಿ ವಿತರಣೆ ಕಾರ್ಯದಲ್ಲಿ ಬಹಳ ಸೇವೆ ಸಲ್ಲಿಸುತ್ತವೆ. ಆದುದರಿಂದ, ಎಲ್ಲಾ ಸಂಪರ್ಕ ಮಾಧ್ಯಮಗಳು ಮೂಲತಃ ಪರಸ್ಪರ ಪೂರಕ.

ಅಭಿವೃದ್ಧಿ ವಿಷಯಗಳನ್ನು ಪ್ರಚಾರ ಮಾಡಲು ಮನರಂಜನಾತ್ಮಕ ಅಂಶಗಳನ್ನೇ

ಮಾಧ್ಯಮವನ್ನಾಗಿ ಬಳಸಿಕೊಳ್ಳುವ ಮೂಲಕ ಮಾನಸಿಕ ಅಡೆತಡೆಗಳನ್ನು ನಿವಾರಿಸುವ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ಜೊತೆಗೆ, ಎಲೆಕ್ಟ್ರಾನಿಕ್ ಮತ್ತು ಸಾಂಪ್ರದಾಯಿಕ ಮಾಧ್ಯಮಗಳನ್ನು ಉಪಯೋಗಿಸಿ ಸಾಕ್ಷರತಾ ಕಾರ್ಯಕ್ರಮಗಳನ್ನು ವಿಸ್ತರಿಸಬಹುದು ಮತ್ತು ಮುದ್ರಣ ಮಾಧ್ಯಮಗಳನ್ನು ತನ್ಮೂಲಕ ಜನಪ್ರಿಯಗೊಳಿಸಿ ಗ್ರಾಮಾಂತರ ಸಂಪರ್ಕದಲ್ಲಿ ಅದನ್ನು ಪರಿಣಾಮಕಾರಿಯನ್ನಾಗಿ ಮಾಡಬಹುದು.

ಎಸ್. ಶ್ರೀಧರಮೂರ್ತಿ

ಕರ್ನಾಟಕದಲ್ಲಿ ಪ್ರವಾಸೋದ್ಯಮ

ಕರ್ನಾಟಕ ನೆಲದ ಮೇಲೆ ಕಾಲಿಟ್ಟು ಹೋದ ಅನ್ಯದೇಶೀಯರು ಅಪಾರ. ವಲಸೆ, ಯುದ್ಧ, ವ್ಯಾಪಾರ, ರಾಯಭಾರ ಇತ್ಯಾದಿ ಇತ್ಯಾದಿ ಕಾರಣಗಳಲ್ಲದೆ, ಅಲೆಕುತೂಹಲದಿಂದ ದೇಶ ನೋಡುವ ಆಸಕ್ತಿಯಿಂದ ಬಂದವರಿರಬಹುದು. ಕುತೂಹಲಾಸಕ್ತಿಯಿಂದ ಬರುವ, ಮಾಮೂಲಿ ಜಂಜಡದಿಂದ ಸ್ವಲ್ಪ ಬಿಡುವು ಪಡೆದು ಆರಾಮ ಪಡೆಯಲು ಆಗಮಿಸುವ ಮಂದಿಯನ್ನು ಪ್ರವಾಸಿಗಳೆನ್ನುತ್ತೇವೆ. ಇಂಥ ಪ್ರವಾಸಿಗಳು ಪ್ರಾಚೀನಕಾಲದಿಂದಲೇ ಬರುತ್ತಿರಬಹುದು. ಆದರೆ ಅವಕ್ಕೆ ದಾಖಲೆಗಳಿಲ್ಲ. ಪುರಾಣ ಕಥೆಯೊಂದರಲ್ಲಿ ಬಹುಪ್ರಾಚೀನ ಕಾಲದಲ್ಲಿ ಅಗಸ್ತ್ಯಮುನಿ ವಿಂಧ್ಯಾಚಲವನ್ನು ದಾಟಿ ದಕ್ಷಿಣಕ್ಕೆ ಬಂದ ಎಂದಿದೆ. ಆತ ಕರ್ನಾಟಕಕ್ಕೂ ಬಂದಿರಬಹುದು. ಇಮ್ಮಡಿ ಪುಲಿಕೇಶಿಯ ಕಾಲದಲ್ಲಿ ಹ್ಯೂಯನ್‌ತ್ಸಾಂಗ್ ಎಂಬ ಚೀನಾ ಪ್ರವಾಸಿ ಬಂದಿದ್ದು ನಾಡು ಸಂಚರಿಸಿ ದಾಖಲೆ ಉಳಿಸಿ ಹೋಗಿದ್ದಾನೆ. ವಿಜಯನಗರ ಕಾಲದಲ್ಲಿಯೂ ಅಬ್ದುರ್ ರಜಾಕ್, ಬಾರ್ಬೋಸ ಇತ್ಯಾದಿ ಪ್ರವಾಸಿಗಳು ಬಂದಿದ್ದುಂಟು. ಕರ್ನಾಟಕದ ಹಲವೆಡೆಗಳಲ್ಲಿ ದೊರೆತಿರುವ ಗ್ರೀಕ್ ನಾಣ್ಯಗಳ ಸಾಕ್ಷ್ಯವನ್ನು ಗಮನಿಸಿದರೆ ಗ್ರೀಕ್ ಪ್ರವಾಸಿಗಳೂ ನಮ್ಮ ನಾಡಿಗೆ ಬಂದಿರುವ ಸಾಧ್ಯತೆಗಳಿವೆ. ರೈಲುಮಾರ್ಗ, ಬಸ್ಸುಮಾರ್ಗಗಳ ವಿಸ್ತರಣೆಯಿಂದ ಪ್ರವಾಸಿಗಳ ಸಂಖ್ಯೆ ಅಧಿಕವಾಯಿತಾದರೂ ಪ್ರವಾಸ ಒಂದು ಉದ್ಯಮವಾಗಿ ಪರಿಗಣಿತವಾಗಿರಲಿಲ್ಲ. ಪ್ರವಾಸ ಉದ್ಯಮವಾಗಿ ಪರಿಗಣಿತವಾದದ್ದು ಇತ್ತೀಚೆಗೆ.

ಮೊದಲ ಜಾಗತಿಕ ಯುದ್ಧಾನಂತರ, ಹವ್ಯಾಸವಾಗಿದ್ದ ಪ್ರವಾಸ ಉದ್ಯಮವಾಗಿ ಪರಿಣಮಿಸಿತು; ಇಂದು ಜಾಗತಿಕ ವಿದ್ಯಮಾನವಾದ ವ್ಯವಸ್ಥಿತ ವ್ಯವಹಾರ. ಸಂಪರ್ಕ, ಸಾರಿಗೆಗಳು ಆಧುನೀಕರಣಗೊಂಡಂತೆ, ರಾಷ್ಟ್ರ ರಾಷ್ಟ್ರಗಳು ನಿಕಟಗೊಂಡಂತೆ ಅಂತರ್ರಾಷ್ಟ್ರೀಯ ಪ್ರವಾಸೋದ್ಯಮ ಎಂಬ ನೂತನ ಉದ್ಯಮ ಬೆಳೆಯತೊಡಗಿತು. ವಾಯುಮಾರ್ಗ, ಜಲಮಾರ್ಗ, ರೈಲು ಹಾಗೂ ರಸ್ತೆಮಾರ್ಗಗಳ ಸಾರಿಗೆ, ವಸತಿಸೌಕರ್ಯ, ಮನರಂಜನೆ ಹಾಗೂ ಕೊಳ್ಳುವಿಕೆಯ ಕೇಂದ್ರಗಳು, ಸಂಪರ್ಕ ಹಾಗೂ ಮಾಹಿತಿ ಸೇವೆಗಳು ಇತ್ಯಾದಿ ಈ ಉದ್ಯಮದ ಅಂಗವಾಗಿ ದುಡಿಯತೊಡಗಿದವು. ಇಂದು ಜಾಗತಿಕ ಪ್ರವಾಸೋದ್ಯಮ ಸಂಸ್ಥೆ ಎಂಬ ಅಂತರ್ರಾಷ್ಟ್ರೀಯ ಸಂಸ್ಥೆಯೇ ಇದೆ. ಇದು ಜಗತ್ತಿನಾದ್ಯಂತ ಪ್ರವಾಸೋದ್ಯಮವನ್ನು ಹೆಚ್ಚಳಗೊಳಿಸುವ ಗುರಿ ಇಟ್ಟುಕೊಂಡಿದೆ. ಇದಕ್ಕೆ ಪೂರಕವಾದ ತಾಂತ್ರಿಕ ಮಾಹಿತಿಗಳನ್ನು ಒದಗಿಸುವ, ವೃತ್ತಿತರಬೇತಿ ನೀಡುವ, ಸಂಶೋಧನೆ ನಡೆಸುವ ಕಾರ್ಯಗಳನ್ನು ಕೈಗೊಳ್ಳುತ್ತಿದೆ. ಭಾರತವೂ ಈ ಜಾಗತಿಕ ಪ್ರವಾಸೋದ್ಯಮ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯ; ಅಲ್ಲದೆ ದಕ್ಷಿಣ ಏಷ್ಯ ಪ್ರಾದೇಶಿಕ ಪ್ರವಾಸ ಆಯೋಗದ ಅಧ್ಯಕ್ಷ ರಾಷ್ಟ್ರವಾಗಿಯೂ ಚುನಾಯಿತವಾಗಿದೆ.

ಭಾರತದಲ್ಲಿ ಪ್ರವಾಸೋದ್ಯಮ ಪ್ರಚಾರ ಪ್ರವರ್ತನೆಗೆ 1948ರಷ್ಟು ಹಿಂದೆಯೇ ತೊಡಗಿದ್ದರೂ ಇದು ಪೂರ್ಣ ಪ್ರಮಾಣದಲ್ಲಿ ಕಾರ್ಯಶೀಲವಾಗಲು 66–67ರವರೆಗೆ ಕಾಯಬೇಕಾಯಿತು. 1966ರಲ್ಲಿ ಭಾರತ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ಲಿಮಿಟೆಡ್ ಆರಂಭ

ವಾಯಿತು. 1967ರಲ್ಲಿ ಪ್ರವಾಸೋದ್ಯಮ ಹಾಗೂ ಪೌರ ವಾಯುಸಾರಿಗೆ ಸಚಿವಾಲಯ ರೂಪುಗೊಂಡಿತು. ಕರ್ನಾಟಕವನ್ನು ಒಳಗೊಂಡಂತೆ ಇಡೀ ಭಾರತದಲ್ಲಿ ಪ್ರವಾಸೋದ್ಯಮ ಹೊಣೆಗಾರಿಕೆಯನ್ನು ನಿರ್ವಹಿಸುವ ಈ ಇಲಾಖೆಗೆ ಅದರದೇ ಆದ ನಿರ್ದೇಶನಾಲಯವಿದೆ. ಇದರ ಕಾರ್ಯವೆಂದರೆ ಪ್ರಚಾರಪ್ರವರ್ತನೆ ಹಾಗೂ ಸಂಘಟನೆ. ಭಾರತದಲ್ಲಿಯ ಪ್ರವಾಸೀ ಆಕರ್ಷಣೆಗಳ ಬಗ್ಗೆ ಭಾರತದೊಳಗೆ ಹಾಗೂ ವಿದೇಶಗಳಲ್ಲಿ ಮಾಹಿತಿಗಳನ್ನು ಪ್ರಸಾರಮಾಡುತ್ತಾ ಪ್ರವಾಸಿಗರನ್ನು ಆಕರ್ಷಿಸುವುದು, ದೇಶದಲ್ಲಿ ಸೌಕರ್ಯಗಳನ್ನು ಉತ್ತಮಗೊಳಿಸುವುದು, ಉತ್ತಮ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು ಇದರ ಕಾರ್ಯ. ಇದಕ್ಕೆ ನೆರವೀಯುವ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಇದೆ. ಈ ಇಲಾಖೆ 15 ಪ್ರಚಾರ ಪ್ರವರ್ತನ ಶಾಖೆಗಳನ್ನು ವಿದೇಶಗಳಲ್ಲಿ ತೆರೆದಿದೆ. ಈ ನಿರ್ದೇಶನಾಲಯದ ಜೊತೆಗೆ ಭಾರತ ಪ್ರವಾಸೋದ್ಯಮ ಕಾರ್ಪೊರೇಷನ್ ನಿಕಟ ಸಹಕಾರದಿಂದ ವರ್ತಿಸುತ್ತದೆ. ಕಾರ್ಪೊರೇಷನ್ನಿನ ಕಾರ್ಯವೂ ಅಂತರರಾಷ್ಟ್ರೀಯ ಪ್ರವಾಸೋದ್ಯಮ ಪ್ರಚಾರ ಪ್ರವರ್ತನೆ. ಸ್ವದೇಶೀ ಪ್ರವಾಸೋದ್ಯಮ ರಾಜ್ಯಗಳಿಗೆ ಬಿಟ್ಟದ್ದು. ಈ ಕಾರ್ಪೊರೇಷನ್ ರೂಪುಗೊಂಡದ್ದು 1966ರ ಅಕ್ಟೋಬರ್ 1ರಂದು. ಇದಕ್ಕೆ ಮೊದಲು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿದ್ದ ಮೂರು ಸಂಸ್ಥೆಗಳು–ಇಂಡಿಯಾ ಟೂರಿಸಂ ಟ್ರಾನ್ಸ್‌ಪೋರ್ಟ್ ಅಂಡರ್‌ಟೇಕಿಂಗ್ ಲಿಮಿಟೆಡ್, ದಿ ಹೋಟೆಲ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಇಂಡಿಯನ್ ಟೂರಿಸಂ ಕಾರ್ಪೊರೇಷನ್ ಲಿಮಿಟೆಡ್–ಮಿಳಿತವಾಗಿ ಈ ಸಂಸ್ಥೆಯಾಯಿತು. ಅಶೋಕ ಹೋಟೆಲ್ಸ್ ಲಿಮಿಟೆಡ್ ಹಾಗೂ ಜನಪಥ ಹೋಟೆಲ್ಸ್ ಲಿಮಿಟೆಡ್ ಎಂಬ ಸಂಸ್ಥೆಗಳು 1970 ಮಾರ್ಚ್ 28ರಂದು ಈ ಕಾರ್ಪೊರೇಷನ್ ಜೊತೆಗೆ ಲೀನವಾದುವು. 30 ಕೋಟಿ ಅಧಿಕೃತ ಮೂಲಧನವುಳ್ಳ ಈ ಕಾರ್ಪೊರೇಷನ್ ನಮ್ಮ ರಾಷ್ಟ್ರದ ಅತ್ಯಂತ ದೊಡ್ಡದಾದ ಬಹುಶಾಖೆಗಳುಳ್ಳ ಏಕೈಕ ಪ್ರವಾಸೋದ್ಯಮ ಸಂಸ್ಥೆ. ಇದರ ನಿಯಂತ್ರಣದಲ್ಲಿ ಬರುವ ವ್ಯವಹಾರ ವಿಶಾಲ. ಹೋಟೆಲ್‌ಗಳ ನಿರ್ಮಾಣ ಹಾಗೂ ವ್ಯವಸ್ಥಾಪನೆ, ಟ್ಯಾಕ್ಸಿ ಹಾಗೂ ದೂರ ಪ್ರಯಾಣದ ಕೋಚುಗಳ ಸೇವೆಸೌಕರ್ಯ, ಹೋಟೆಲ್ ಹಾಗೂ ರೆಸ್ಟುರಾನ್ಟುಗಳ ನಿರ್ಮಾಣ, ಪ್ರವಾಸೋದ್ಯಮಕ್ಕೆ ಸಂಬಂಧಿಸಿದ ವಾಣಿಜ್ಯ ಉದ್ಯಮಗಳ ಮೇಲುಸ್ತುವಾರಿ. ಇದರ ಆಶ್ರಯದಲ್ಲಿ ಅತ್ಯಂತ ನಿಷ್ಣಾತ ಸೃಜನಶೀಲ ಪಡೆಯೊಂದಿದ್ದು ಅನ್ಯಾದೃಶ ಗುಣಮಟ್ಟದ ಪರಿಣಾಮಕಾರಿ ಪ್ರಚಾರ ಸಾಮಗ್ರಿಗಳನ್ನು ಸಿದ್ಧಗೊಳಿಸುತ್ತದೆ. ಈ ಮೂಲಕ ಬಂದಿರುವ ಹಲವಾರು ಜಾಹಿರಾತುಗಳು, ಬ್ರೋಷರ್‌ಗಳು, ಭಿತ್ತಿಪತ್ರಗಳು, ಚಿತ್ರಮಯ ಪೋಸ್ಟ್‌ಕಾರ್ಡುಗಳು ಹಾಗೂ ಸಾಕ್ಷ್ಯಚಿತ್ರಗಳು ಜಾಗತಿಕ ಮನ್ನಣೆಗೆ ಪಾತ್ರವಾಗಿವೆ.

1975ನೇ ವರ್ಷವನ್ನು ದಕ್ಷಿಣ ಏಷ್ಯ ಪ್ರವಾಸೋದ್ಯಮ ವರ್ಷ ಎಂದು ಜಾಗತಿಕ ಪ್ರವಾಸೋದ್ಯಮ ಸಂಸ್ಥೆ ಘೋಷಿಸಿದಾಗ, ಈ ಅವಕಾಶವನ್ನು ಬಳಸಿಕೊಂಡು ಭಾರತದ ಪ್ರವಾಸೋದ್ಯಮ ಇಲಾಖೆ ಅಪಾರ ಪ್ರಚಾರಮಾಡಿ ಭಾರತದ ಪ್ರವಾಸೀ ಆಕರ್ಷಣೆಗಳ ಬಗ್ಗೆ ವಿದೇಶೀಗರುವ ಅರಿಯುವಂತೆ ಮಾಡಲು ಯತ್ನಿಸಿತು. ಭಾರತದಲ್ಲಿಯೂ ಪ್ರವಾಸೋದ್ಯಮ ಪ್ರಜ್ಞೆಯನ್ನು ಮೂಡಿಸಲು ಪ್ರಯತ್ನಿಸಿತು. ಆ ವರ್ಷ ಭಾರತಕ್ಕೆ ಬಂದ ಪ್ರವಾಸಿಗಳ ಸಂಖ್ಯೆ 4,23,161 ಮಂದಿ ವಿದೇಶಿಯರು. ಮರುವರ್ಷ ಅಂದರೆ 1976ರಲ್ಲಿ ಬಂದವರು 5,33.955 ; ಹಾಗೂ ಭಾರತ ಗಳಿಸಿದ ವಿದೇಶೀ ವಿನಿಮಯ 225 ಕೋಟಿ ರೂ.ಗಳು. ಇದರೊಂದಿಗೆ 1966ರಲ್ಲಿ ಕಾರ್ಪೊರೇಷನ್ ಹುಟ್ಟಿದ ವರ್ಷದಲ್ಲಿ ಬಂದ ಪ್ರವಾಸಿಗರ ಸಂಖ್ಯೆ 1,59,603 ಹಾಗೂ ಗಳಿಸಿದ ವಿದೇಶೀ ವಿನಿಮಯವಾದ 22.6 ಕೋಟಿ ರೂ.ಗಳನ್ನು ಹೋಲಿಸಿದರೆ ಹೆಚ್ಚಳದ ಸ್ಪಷ್ಟತೆ ಗೊತ್ತಾಗುತ್ತದೆ.

ಈ ರಾಷ್ಟ್ರೀಯ ಕಾರ್ಪೊರೇಷನ್ನಿನ ಹತೋಟಿಯಲ್ಲಿರುವ ಸಂಸ್ಥೆಗಳು ಕರ್ನಾಟಕದಲ್ಲಿ ಮೂರಿವೆ: ಬೆಂಗಳೂರಿನಲ್ಲಿರುವ ಪಂಚತಾರಾ ಹೋಟೆಲ್ ಅಶೋಕ, ಮೈಸೂರಿನಲ್ಲಿರುವ ಲಲಿತಮಹಲ್ ವಿಲಾಸೀ ಹೋಟೆಲ್, ಹಾಸನದಲ್ಲಿರುವ ಮೋಟೆಲ್. ಬೆಂಗಳೂರು ಮಹಾತ್ಮ

ಗಾಂಧಿ ರಸ್ತೆಯಲ್ಲಿದ್ದ ಕೇಂದ್ರ ಸರ್ಕಾರದ ಪ್ರವಾಸೀ ಕಾರ್ಯಾಲಯವನ್ನು ರಾಜ್ಯ ಇಲಾಖೆ 1963ರಲ್ಲಿ ತನ್ನ ಕೈಗೆ ತೆಗೆದುಕೊಂಡಿತು. ಪ್ರವಾಸಿಗಳಿಗೆ ಅಗತ್ಯ ಮಾಹಿತಿಗಳನ್ನು ಇಲ್ಲಿ ಒದಗಿಸಲಾಗುತ್ತದೆ. ಬೆಂಗಳೂರು ನಗರ ರೈಲ್ವೆ ನಿಲ್ದಾಣ ಹಾಗೂ ಎಚ್.ಎ.ಎಲ್. ವಿಮಾನ ನಿಲ್ದಾಣಗಳಲ್ಲಿ ಪ್ರವಾಸೀ ಸ್ವಾಗತ ಕೇಂದ್ರಗಳಿವೆ.

ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಸಲಹೆಯಂತೆ, ಕರ್ನಾಟಕ ಸರಕಾರದಲ್ಲಿ 1974ರಲ್ಲಿ ಪ್ರವಾಸೋದ್ಯಮಕ್ಕೇ ಒಂದು ಪ್ರತ್ಯೇಕ ಇಲಾಖೆ ರೂಪುತಾಳುವವರೆಗೆ ಪ್ರಚಾರ ಹಾಗೂ ಪ್ರವಾಸೋದ್ಯಮ ಇಲಾಖೆ ಎಂಬ ಸಂಯುಕ್ತ ಇಲಾಖೆ ಈ ಕಾರ್ಯವನ್ನು ನಿರ್ವಹಿಸುತ್ತಿತ್ತು. ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಪ್ರವಾಸೋದ್ಯಮದ ಸುದ್ದಿಯೇ ಇರಲಿಲ್ಲ. ಇದರ ಪ್ರಾಮುಖ್ಯವನ್ನು ಮನಗಂಡದ್ದು ಎರಡನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಂದೇ. 60 61ರಲ್ಲಿ ಮಾತ್ರವೇ ವಿದೇಶೀ ಹಾಗೂ ಸ್ವದೇಶಿ ಪ್ರವಾಸಿಗರಿಗೆ ವಿಶ್ರಾಂತಿ ಗೃಹಗಳನ್ನು ನಿರ್ಮಿಸಿ, ಇತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ ಸಾಕಷ್ಟು ಗಮನ ಹರಿಸಿದ್ದು. ಎರಡನೆಯ ಯೋಜನೆಯಲ್ಲಿ ಹಾಸನ, ಬಿಜಾಪುರ (2), ಐಹೊಳೆ, ಬಾದಾಮಿ, ಬೃಂದಾವನ, ಜೋಗ್ ಜಲಪಾತ, ಮಡಿಕೇರಿ, ತುಂಗಭದ್ರಾ ಜಲಾಶಯಗಳಲ್ಲಿ ಒಟ್ಟು 9 ವಿಶ್ರಾಂತಿಗೃಹಗಳನ್ನು ನಿರ್ಮಿಸುವ ಯೋಜನೆ ಹಾಕಲಾಯಿತು. ಹಾಗೆಯೇ ಜೋಗ್ ಬಳಿ ಪ್ರವಾಸಿ ಹೋಟೆಲೊಂದನ್ನು ಎರಡೂವರೆ ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಯಿತು. 1960–61ರಲ್ಲಿ ನಂದಿಬೆಟ್ಟದಲ್ಲಿಯೂ ಕೆಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಯಿತು. ಬಿದರೆಯ ಪ್ರವಾಸೀ ಬಂಗಲೆಯನ್ನು 20.000 ವೆಚ್ಚದಲ್ಲಿ ವಿಸ್ತರಿಸಲಾಯಿತು. ಪ್ರವಾಸೀ ಆಕರ್ಷಣೆಗೆಂದು ಜೋಗ್ ಜಲಪಾತದಲ್ಲಿ ಫ್ಲಡ್‌ಲೈಟ್ ವ್ಯವಸ್ಥೆಯನ್ನು ಮಾಡಲಾಯಿತು. ಅಲ್ಲದೆ ಕೊಲ್ಲೂರು, ಮೂಡಬಿದ್ರೆ, ಕಾರ್ಕಳಗಳಲ್ಲಿ ಪ್ರವಾಸೀ ಮಂದಿರಗಳು ನಿರ್ಮಾಣವಾದವು.

51–61 ದಶಕದ ಕೊನೆಯಲ್ಲಿ ಮೈಸೂರು ಮಹಾರಾಜರ ನೇತೃತ್ವದಲ್ಲಿ ವನ್ಯಜೀವಿಗಳ ಸಂರಕ್ಷಣೆ ಹಾಗೂ ಸಂವರ್ಧನೆ ಆರಂಭವಾಯಿತು. ನಶಿಸುತ್ತಿರುವ ಪ್ರಾಣಿಸಂಪದವನ್ನು ಉಳಿಸಿಕೊಳ್ಳುವ ಕಾರ್ಯಕ್ರಮಗಳು ರೂಪುಗೊಳ್ಳತೊಡಗಿದವು ಪ್ರವಾಸೋದ್ಯಮವನ್ನು ಉತ್ಕರ್ಷಗೊಳಿಸಲು ಬಂಡೀಪುರ, ನಾಗರಹೊಳೆ, ದಾಂಡೇಲಿಗಳಲ್ಲಿ ವನ್ಯಮೃಗ ಸಂರಕ್ಷಣಾಲಯಗಳನ್ನು ರೂಪಿಸಿ ಅಭಿವೃದ್ಧಿಗೊಳಿಸಲಾಯಿತು. ಈ ಪ್ರದೇಶಗಳಿಗೆ ರಸ್ತೆಗಳನ್ನು ಆಧುನೀಕರಣಗೊಳಿಸಿ, ಎಲ್ಲ ಋತುಗಳಲ್ಲಿಯೂ ವಾಹನ ಸಂಚಾರಕ್ಕೆ ಅಣಿಗೊಳಿಸಲಾಯಿತು. ಬಂಡೀಪುರ, ಅರಣ್ಯ ಧಾಮದಲ್ಲಿ ಎರಡು ಅರಣ್ಯ ವಸತಿಗೃಹಗಳನ್ನು ಕಟ್ಟಲಾಗಿದೆ. ನಾಗರಹೊಳೆ ಏರಿಗೆ ಅಡ್ಡಲಾಗಿ ಒಂದು ಸಣ್ಣ ಅಣೆಕಟ್ಟು ಹಾಕಿ ನೀರಿನ ಕೊಳವನ್ನು ನಿರ್ಮಿಸಿ ವನ್ಯಮೃಗಗಳಿಗೆ ನೀರುದಾಣವನ್ನು ಒದಗಿಸಲಾಗಿದೆ

ರಾಜ್ಯ ಪ್ರವಾಸೋದ್ಯಮ ಇಲಾಖೆಯಲ್ಲಿ ಮೂರು ಶಾಖೆಗಳಿವೆ: ಅಭಿವೃದ್ಧಿ, ಯೋಜನೆ ಹಾಗೂ ಸ್ವಾಗತ ಸತ್ಕಾರ. ವಾರ್ಷಿಕ ಯೋಜನೆ, ಪಂಚವಾರ್ಷಿಕ ಯೋಜನೆ ಆಯವ್ಯಯ ಸಿದ್ಧತೆ ಇತ್ಯಾದಿಗಳಿಗೆ ಸಂಬಂಧಿಸಿದ ಎಲ್ಲ ಕಾರ್ಯಗಳ ನಿರ್ವಹಣೆ ಯೋಜನೆಯ ಶಾಖೆಗೆ ಸೇರಿದ ಪ್ರವಾಸೀ ಅಧಿಕಾರಿಯದು. ಸ್ವಾಗತ ಸತ್ಕಾರ ಶಾಖೆಗೆ ಸೇರಿದ ಪ್ರವಾಸಿ ಅಧಿಕಾರಿಯ ವ್ಯಾಪ್ತಿಗೆ ಬರುವ ಕಾರ್ಯಗಳೆಂದರೆ: ಇಲಾಖೆಯ ಅತಿಥಿಗಳ ಭೇಟಿಗೆ ಸಂಬಂಧಿಸಿದ ಎಲ್ಲ ಪ್ರಚಾರಕಾರ್ಯ, ಪ್ರವಾಸ ಏಜೆಂಟರು ಕಾರು ಮಾಲೀಕರು ಹಾಗೂ ಹೋಟೆಲ್ ಉದ್ಯಮಿಗಳನ್ನು ಆರಿಸಿ ಮನ್ನಣೆ ನೀಡುವುದು. ಪ್ರವಾಸಿಗರ ಅನುಕೂಲಕ್ಕಾಗಿ ಕಾರ್ಯಶೀಲವಾಗಿರಬೇಕಾದ 9 ಪ್ರವಾಸೀ ಕಾರ್ಯಾಲಯಗಳು ಕರ್ನಾಟಕದಲ್ಲಿದ್ದು ಇವು ಈ ಅಧಿಕಾರಿಯ ಹತೋಟಿಯಲ್ಲಿರುತ್ತವೆ. ಅಭಿವೃದ್ಧಿ ಅಧಿಕಾರಿ ಆಡಳಿತ ಹಾಗೂ ಲೆಕ್ಕಪತ್ರಗಳ ವ್ಯವಹಾರಗಳನ್ನು ನೋಡಿಕೊಳ್ಳುತ್ತಾನೆ.

ಇಂದು ಐಷಾರಾಮಿಕವಾಗಿ ಪ್ರವಾಸೋದ್ಯಮ ಸರ್ಕಾರಿ ಉದ್ಯಮವಾಗಿದ್ದರೂ ಸಣ್ಣಪುಟ್ಟ ಪ್ರಮಾಣದಲ್ಲಿ ಖಾಸಗೀ ಉದ್ಯಮಿಗಳೂ ಪ್ರವಾಸಗಳನ್ನು ಏರ್ಪಡಿಸುತ್ತಾರೆ. ಜನತಾ ಟೂರಿಸ್ಟ್

ಜನತಾ ಟ್ರಾವೆಲ್ಸ್, ಪ್ರಕಾಶ್ ಟ್ರಾವೆಲ್ಸ್ ಇತ್ಯಾದಿ ಖಾಸಗಿ ಉದ್ಯಮಿಗಳು ವಿಹಾರ ಏರ್ಪಡಿಸುವ ಏಜೆಂಟರಾಗಿ ರಾಜ್ಯದಲ್ಲಿ ಕಾರ್ಯಶೀಲರಾಗಿದ್ದಾರೆ. ಕೇಂದ್ರ ಸರ್ಕಾರ ಇಂಥ ವಿಹಾರ ಪ್ರವಾಸೀ ಏಜೆಂಟರನ್ನು ಮಾನ್ಯಮಾಡುವ ಕೆಲಸವನ್ನು ರಾಜ್ಯಸರ್ಕಾರಕ್ಕೆ ವಹಿಸಿದೆ. ಹಾಗಾಗಿ ಈ ಇಲಾಖೆಯ ವತಿಯಿಂದ ಪ್ರತಿವರ್ಷ ಅಂಥ ಏಜೆಂಟರನ್ನು ಪರಿಶೀಲಿಸಿ ಮಾನ್ಯ ಮಾಡಲಾಗುತ್ತದೆ. ಈ ಬಗ್ಗೆ ದಾಖಲೆಗಳನ್ನು ಇಟ್ಟು ಏಜೆಂಟರ ಚಟುವಟಿಕೆಗಳನ್ನು ಅವಲೋಕಿಸುತ್ತಿರಲಾಗುತ್ತದೆ.

ರಾಜ್ಯದಲ್ಲಿ ಹೋಟೆಲ್‌ಗಳ ನಿರ್ಮಾಣದಲ್ಲಿ ಇದ್ದಕ್ಕಿದ್ದಂತೆ ಉತ್ಕರ್ಷ ಕಾಣಿಸಿಕೊಂಡು ಕಳೆದ ನಾಲ್ಕು ವರ್ಷಗಳಲ್ಲಿ ಬಹುಸಂಖ್ಯೆಯಲ್ಲಿ ಹೋಟೆಲುಗಳು ತಲೆಯೆತ್ತಿವೆ. ಶ್ರೇಣಿಗನುಗುಣವಾಗಿ ವರ್ಗೀಕರಿಸುವ ವ್ಯವಸ್ಥೆ ಜಾರಿಗೆ ಬಂದ ಮೇಲೆ ನಿರ್ದಿಷ್ಟ ನಿಯಮಾವಳಿಗೆ ಅನುಸಾರವಾಗಿ ಇರುವ ಹೋಟೆಲುಗಳನ್ನು ಆಯಾ ಶ್ರೇಣಿಗೆ ದಾಖಲಿಸಬಹುದೆಂದು ಈ ಇಲಾಖೆ ಕೇಂದ್ರಸರ್ಕಾರಕ್ಕೆ ಶಿಫಾರಸು ಮಾಡುತ್ತದೆ. ಅನಂತರ ತಾರಾಶ್ರೇಣಿಗಳನ್ನು ಕೊಡಲಾಗುತ್ತದೆ. ಮಾನ್ಯಪಡೆದ ಹೋಟೆಲುಗಳ ವ್ಯವಸ್ಥೆಯ ಮೇಲೆ ಸದಾ ಕಣ್ಣಿಟ್ಟಿರಲಾಗುತ್ತದೆ.

ಪ್ರವಾಸೋದ್ಯಮದ ಬಗ್ಗೆ ಆಳ ತಿಳುವಳಿಕೆಯಿಲ್ಲದ ಮಂದಿಯಿಂದ ಇದನ್ನು ಅಭಿವೃದ್ಧಿಗೊಳಿಸುವುದು ಕಷ್ಟವಾಗುತ್ತದೆ. ಪ್ರವಾಸಿಗರ ಮನಸ್ಸನ್ನು ಮುದಗೊಳಿಸುವುದು ಅಸಾಧ್ಯವಾಗುತ್ತದೆ. ಆದರಿಂದ ಈ ಬಗ್ಗೆ ಗಮನಕೊಟ್ಟು 1976–77ರಿಂದ ರಾಜ್ಯಪ್ರವಾಸೋದ್ಯಮದ ಇಲಾಖೆ ವೃತ್ತಿತರಬೇತಿ ಯೋಜನೆಯನ್ನು ಆರಂಭಿಸಿದೆ. ರಾಜ್ಯಾದ್ಯಂತ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸೋದ್ಯಮ ಪ್ರಚಾರಕ ತರಬೇತಿ ಪಡೆದ ಕಾರ್ಯಕರ್ತರನ್ನು ನೇಮಿಸುವ ಉದ್ದೇಶವಿರುವ ಈ ಯೋಜನೆಗೆ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯದ ಅನುಮೋದನೆ ಸಿಕ್ಕಿದೆ. ಒಂದು ವರ್ಷ ಕಾಲಾವಧಿಯ ಈ ತರಬೇತಿಯಲ್ಲಿ 4 ತಿಂಗಳ ಕಾಲ ಸಿದ್ಧಾಂತವನ್ನು ಕುರಿತ ತೀವ್ರ ತರಬೇತಿ ಇರುತ್ತದೆ. ಇದಾದನಂತರ ನಡೆವ ಪರೀಕ್ಷೆಯಲ್ಲಿ ಯಶಸ್ವಿಯಾದವರಿಗೆ ಕರ್ನಾಟಕ ವಿವಿಧ ಪ್ರವಾಸಿ ಸ್ಥಳಗಳಲ್ಲಿ ಎಂಟು ತಿಂಗಳ ಪ್ರಾಯೋಗಿಕ ತರಬೇತಿ ನೀಡಲಾಗುತ್ತಿದೆ. ಈ ಯೋಜನೆಯ ಜೊತೆಗೆ ಕಾರ್ಯಕರ್ತರಿಗೆ ವಿದೇಶಿ ಭಾಷೆಗಳನ್ನು ಕಲಿಸುವ ಯೋಜನೆಯನ್ನು ಈ ಇಲಾಖೆ ನಿರ್ವಹಿಸುತ್ತದೆ. ಇವುಗಳಿಗೆ 77–78ರ ಸಾಲಿಗೆ ಎರಡು ಲಕ್ಷ ರೂಗಳ ಮಂಜೂರು ಆಗಿದೆ.

ಪ್ರಚಾರ ಪ್ರವರ್ತನೆಯ ತರಬೇತಿಯನ್ನು ಪಡೆದ ಮಂದಿಯಲ್ಲಿ ಆಯ್ದ ಎ. ಬಿ. ಸಿ. ಎಂಬ ಭಿನ್ನ ಶ್ರೇಣಿಗಳಲ್ಲಿ ಕ್ರಮವಾಗಿ 300, 275, 250ರೂ. ಒಟ್ಟು ಮೊತ್ತದ ಸಂಬಳದ ಮೇಲೆ ಇಲಾಖೆಯಲ್ಲಿ ರಿಸೆಪ್ಷನಿಸ್ಟ್ ಎಂದು ನೇಮಕ ಮಾಡಿಕೊಳ್ಳುತ್ತಾರೆ.

ರಾಜ್ಯ ಪ್ರವಾಸೋದ್ಯಮ ಇಲಾಖೆಯ ಹೆಗಲೆಣೆಯಾಗಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ದುಡಿಯುತ್ತಿದೆ. ಪ್ರವಾಸೋದ್ಯಮವನ್ನು ಬೆಳಸುವ ಹಾಗೂ ಪ್ರಚಾರಮಾಡುವ ಉದ್ದೇಶದಿಂದ, ರಾಜ್ಯದಲ್ಲಿನ ಸೌಂದರ್ಯ ಸಂಪತ್ತಿನ ಹಕ್ಕಿನೋಟವನ್ನು ಪ್ರವಾಸಿಗಳಿಗೆ ನೀಡುವ ದೃಷ್ಟಿಯಿಂದ ಈ ಕಾರ್ಪೊರೇಷನ್ ರೂಪುಗೊಂಡಿತು. ಇದರ ಮುಖ್ಯ ಧ್ಯೇಯಗಳೆಂದರೆ: ಪ್ರವಾಸಿಗಳಿಗೆ ಊಟ ಹಾಗೂ ವಸತಿ ಸೌಕರ್ಯಗಳನ್ನು ಒದಗಿಸುವುದು ; ಪ್ರಯಾಣ ಹಾಗೂ ಸಾಗಾಣಿಕೆ ಸೌಲಭ್ಯಗಳನ್ನು ದೊರಕಿಸುವುದು ; ವಿಹಾರಪ್ರವಾಸ ಹಾಗೂ ವೀಕ್ಷಣಾ ಪ್ರವಾಸಗಳನ್ನು ವ್ಯವಸ್ಥೆಗೊಳಿಸುವುದು ; ಕಲಾತ್ಮಕ ಹಾಗೂ ವಾಣಿಜ್ಯಾತ್ಮಕ ಮಾಲಿಕೆಗಳ ಪ್ರದರ್ಶನ ವ್ಯವಸ್ಥೆ ; ಔದ್ಯೋಗಿಕ ಹಾಗೂ ಸಾಂಸ್ಕೃತಿಕ ಸಾಧನೆಗಳ ಪ್ರದರ್ಶನ ಏರ್ಪಡಿಸುವಿಕೆ ; ಗ್ರಂಥಾಲಯ ಹಾಗೂ ವಾಚನಾಲಯ ಸೌಲಭ್ಯಗಳ ನೀಡುವಿಕೆ ; ಮಾರ್ಗದರ್ಶನ ಸೌಲಭ್ಯಗಳ ಒದಗಿಸುವಿಕೆ; ವೀಕ್ಷಣಾ ಸೌಲಭ್ಯ, ವೈದ್ಯಕೀಯ ಸೌಲಭ್ಯ, ಬ್ಯಾಂಕ್ ಸೌಲಭ್ಯಗಳನ್ನು ಶೀಘ್ರದಲ್ಲಿ ಒದಗಿಸುವಿಕೆ; ಎಲ್ಲ ವಿಧವಾದ ಮನರಂಜನೆ–ಕ್ಯಾಸಿನೊ ಚಿತ್ರಪ್ರದ

ರ್ಶನ, ನಾಟಕ, ಸಂಗೀತ, ನೃತ್ಯ, ಕ್ರೀಡೆ ಇತ್ಯಾದಿ–ಒದಗಿಸುವುದು. ಪ್ರವಾಸಿಗಳ ಹಾಗೂ ಪಯಣಿಗರ ಇತರ ಯಾವುದೇ ಬೇಡಿಕೆಗಳನ್ನು ಪೂರೈಸುವುದು.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ಎಂದರೆ ಅರ್ಧ ಸರ್ಕಾರಿ ಹಾಗೂ ಅರ್ಧ ಖಾಸಗಿ ಸಂಸ್ಥೆ. ಇದು 1956ರ ಕಂಪೆನಿಗಳ ಕಾಯಿದೆ ಪ್ರಕಾರ ನೋಂದಾಯಿತವಾಗಿರುವ ಪ್ರೈವೇಟ್ ಲಿಮಿಟೆಡ್ ಕಂಪೆನಿ. ಇದರ ಅಧಿಕೃತ ಷೇರು ಬಂಡವಾಳ 5 ಕೋಟಿ ರೂ.ಗಳು. ಚಲಾಯಿತ ಬಂಡವಾಳವಾದ ಒಂದು ಕೋಟಿ ರೂಪಾಯಿಗಳಲ್ಲಿ ಸರ್ಕಾರದ ಪಾಲು ಹಣದ ರೂಪದಲ್ಲಿ 28.2 ಲಕ್ಷ ರೂ. ಸ್ಥಿರಾಸ್ತಿಗಳ ರೂಪದಲ್ಲಿ 15ಲಕ್ಷ ರೂಪಾಯಿಗಳಷ್ಟಿದೆ.

ಆರಂಭವಾದಂದಿನಿಂದ ಆದಾಯ ಬರುವ ಯೋಜನೆಗಳಾವುದನ್ನೂ ಕೈಗೊಂಡಿರದ ಕಾರ್ಪೊರೇಷನ್ ಅದಕ್ಕೆ ನೀಡುವ ಕಾರಣ ಹಣಾಭಾವ. ಇಲ್ಲಿಯವರೆಗೆ ಪ್ರವಾಸೋದ್ಯಮದ ಅತ್ಯಂತ ಮೂಲ ಆಗತ್ಯಗಳಾದ ಸಾರಿಗೆ, ಪ್ರವಾಸಿ ವಸತಿ ಮಂದಿರಗಳು ಹಾಗೂ ಪ್ರಚಾರದತ್ತ ಮಾತ್ರವೇ ಇದರ ಕಾರ್ಯಚಟುವಟಿಕೆಗಳು ಕೇಂದ್ರೀಕರಿಸಿವೆ.

ಕಾರ್ಪೊರೇಷನ್ನಿಗೆ ಆದಾಯ ತರುವ ಮುಖ್ಯ ಮೂಲವೆಂದರೆ ಸಾರಿಗೆ ವಿಭಾಗ. 1975ರ ವೇಳೆಗೆ ಇದರ ಬಳಿ 6 ಬಸ್‌ಗಳಿದ್ದವು ಫೆಬ್ರವರಿ 1976ರಲ್ಲಿ ಕರ್ನಾಟಕ ಸರ್ಕಾರ ಖಾಸಗಿ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡಿದ ಮೇಲೆ ಕಾರ್ಪೊರೇಷನ್ನಿಗೆ ಮತ್ತೆ 9 ಲಕ್ಷುರಿ ಬಸ್‌ಗಳು ದೊರೆತವು. 15 ಸೂಪರ್ ಲಕ್ಷುರಿ ಬಸ್‌ಗಳ ಒಂದು ದಿನ ನಿಯಂತ್ರಿತ ವೀಕ್ಷಣಾ ಪ್ರವಾಸಗಳನ್ನು ಮೈಸೂರು–ಶ್ರೀರಂಗಪಟ್ಟಣ–ಬೃಂದಾವನ ; ಬೇಲೂರು–ಹಳೇಬೀಡು - ಶ್ರವಣಬೆಳಗೊಳ, ಬೆಂಗಳೂರು ಸುತ್ತಮುತ್ತ ಏರ್ಪಡಿಸಲಾಗುತ್ತಿದೆ. ಈ ಪ್ರವಾಸ ಕಾರ್ಯಕ್ರಮ ಅತ್ಯಂತ ಜನಪ್ರಿಯವೂ ಆಗಿದೆ. ಅಲ್ಲದೆ ಈ ಬಸ್‌ಗಳನ್ನು ಪ್ರವಾಸಿಗಳಿಗೆ, ವಿದ್ಯಾರ್ಥಿ ಸಮುದಾಯಕ್ಕೆ, ಪ್ರವಾಸೀ ಏಜೆಂಟರಿಗೆ ಅನುಕೂಲ ದರದಲ್ಲಿ ಸಾಂದರ್ಭಿಕ ಕರಾರುಗಳ ಮೇಲೆಯೂ ಕೊಡಲಾಗುವುದು. ಎರಡರಿಂದ ನಾಲ್ಕು ದಿನಗಳವರೆಗೆ ದೂರ ಪ್ರವಾಸಗಳನ್ನು ಆಗತ್ಯಬಿದ್ದಲ್ಲಿ ಏರ್ಪಡಿಸಲಾಗುವುದು. ರಾಜ್ಯದ ಇತರ ಪ್ರೇಕ್ಷಣೀಯ ಸ್ಥಳಗಳಲ್ಲಿಯೂ ಇಂಥ ಪುಟ್ಟ ಪ್ರವಾಸ ವ್ಯವಸ್ಥೆಗಳನ್ನು ಮಾಡುವ ಯೋಜನೆ ಪರಿಶೀಲನೆಯಲ್ಲಿದೆ. 1975–76ರ ವರ್ಷದಲ್ಲಿ ಕಾರ್ಪೊರೇಷನ್ 10 ಲಕ್ಷ ರೂ.ಗಳನ್ನು ಗಳಿಸಿತು. 76–77ರ ಮೊದಲ ಆರುತಿಂಗಳಲ್ಲಿಯೇ ಈ ಆದಾಯ 10 ಲಕ್ಷಗಳನ್ನು ಮೀರಿತ್ತು. 1977ರ ಕೊನೆಯ ವೇಳೆಗೆ 25 ಲಕ್ಷ ರೂ.ಗಳನ್ನು ಮುಟ್ಟುವ ನಿರೀಕ್ಷೆ ಇತ್ತು. ಸದ್ಯದಲ್ಲಿಯೇ ಇನ್ನೂ ಆರು ಲಕ್ಷುರಿ ಬಸ್‌ಗಳನ್ನು ಹಾಗೂ ಎರಡು ಮಿನಿಬಸ್‌ಗಳನ್ನು ಸಂಸ್ಥೆ ಒಳಗೊಳ್ಳುವ ನಿರೀಕ್ಷೆ ಇದೆ.

ಪ್ರವಾಸಿಗಳಿಗೆ ಯೋಗ್ಯದರದಲ್ಲಿ ವಸತಿ ಸೌಲಭ್ಯಗಳನ್ನು ಒದಗಿಸಲು ಕಾರ್ಪೊರೇಷನ್ ಯತ್ನಿಸುತ್ತಿದೆ. ಐಹೊಳೆ, ಬಾದಾಮಿ, ಬಿದರೆ, ಬಿಜಾಪುರ, ಗುಲ್ಬರ್ಗ, ಕೃಷ್ಣರಾಜಸಾಗರ, ಕೆಮ್ಮಣ್ಣುಗುಂಡಿ, ಗಿರಿಧಾಮ, ಮಂಗಳೂರು, ಮಡಿಕೇರಿ, ಮೈಸೂರು, ಪಾಗೋಡು, ತುಂಗಭದ್ರಾ ಜಲಾಶಯ ಮೊದಲಾದೆಡೆಗಳಲ್ಲಿ ಸರ್ಕಾರದ ವಶದಲ್ಲಿದ್ದ ಪ್ರವಾಸಿ ಮಂದಿರಗಳನ್ನು ಕಾರ್ಪೊರೇಷನ್ನಿಗೆ ವಹಿಸಿಕೊಡಲಾಗಿದೆ. ಈ ಕೆಲವು ವಸತಿ ಗೃಹಗಳಲ್ಲಿ ಊಟ ವ್ಯವಸ್ಥೆಯನ್ನು ಮಾಡಿರುವುದುಂಟು. ಇತ್ತೀಚೆಗೆ ಮೈಸೂರಿನ ಮಾಡ್ರನ್ ಹಿಂದೂ ಹೋಟೆಲನ್ನು ಕಾರ್ಪೊರೇಷನ್ ವಹಿಸಿಕೊಂಡು, ತನ್ನ ನೂರು ಮೈಲಿ ಫಾಸಲೆಯಲ್ಲಿ ಅಸಂಖ್ಯಾತ ಪ್ರವಾಸೀ ವೀಕ್ಷಣಾ ಸ್ಥಳಗಳನ್ನೊಳಗೊಂಡಿರುವ ಮೈಸೂರಿನಲ್ಲಿ ಪ್ರವಾಸಿಗಳಿಗೆ ಅನುಕೂಲ ಮಾಡಿಕೊಟ್ಟಿದೆ.

ಪ್ರವಾಸಿಗಳಿಗೆ ಇತ್ತ ಬರುವಂತೆ ಪ್ರಚೋದನೆಯೀಯುವ ಪ್ರಚಾರ ಸಾಹಿತ್ಯ ಅತ್ಯಂತ ಪ್ರಮುಖವಾದದ್ದು. ರಾಜ್ಯದಲ್ಲಿನ ಹಲವಾರು ಪ್ರವಾಸಿ ಆಕರ್ಷಣೆಗಳ ಬಗ್ಗೆ ಕಾರ್ಪೊರೇಷನ್ ಪ್ರಚಾರ ಸಾಮಗ್ರಿಗಳನ್ನು ಸಿದ್ಧಪಡಿಸಿದೆ. ಮೈಸೂರು, ಬೆಂಗಳೂರು ನಗರಗಳ ಬಗ್ಗೆ ಹಂಪೆ ಬಿಜಾಪುರ, ಬೇಲೂರು ಮೊದಲಾದ ಇತಿಹಾಸ ಪ್ರಸಿದ್ಧ ಸ್ಥಳಗಳ ಬಗ್ಗೆ ಫೋಲ್ಡರ್‌ಗಳನ್ನೂ

ಚಿತ್ರಮಯ ಪೋಸ್ಟ್ ಕಾರ್ಡ್‌ಗಳನ್ನು, ವಿವಿಧ ಬಗೆಯ ವರ್ಣರಂಜಿತ ಭಿತ್ತಿಪತ್ರಗಳನ್ನು, ರಾಜ್ಯದ ಪ್ರವಾಸಿ ರಸ್ತೆಯ ನಕ್ಷೆಯನ್ನು ಹೊರಡಿಸಿದೆ. ಅಲ್ಲದೆ ಪ್ರಚಾರ ಸಾಧನವಾಗಿ ಮೂರು ವರ್ಣ ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿದೆ: ಮೈಸೂರಿನ ವನ್ಯಜೀವನ, ಭವ್ಯ-ವೈಭವದ ನಗರ ಮತ್ತು ಕರ್ನಾಟಕ ವೈಭವ.

ರಾಜ್ಯದಲ್ಲಿನ ಪ್ರವಾಸಿ ಚಟುವಟಿಕೆಗಳನ್ನು ಪ್ರಸಾರ ಮಾಡುವ ಉದ್ದೇಶದಿಂದ ಕಾರ್ಪೊರೇಷನ್ ವತಿಯಿಂದ ವಾರ್ತಾಪತ್ರವೊಂದು ಹೊರಬರುತ್ತಿದೆ; ಉದ್ಯಮಕ್ಕೆ ಸಂಬಂಧಿಸಿದವರನ್ನು ಮುಟ್ಟುತ್ತಿದೆ. ಈ ವಾರ್ತಾಪತ್ರವನ್ನು ನಿಯತಕಾಲಿಕವಾಗಿ ಪರಿವರ್ತಿಸುವ ಯೋಜನೆ ಇದೆ. ಸದ್ಯದಲ್ಲಿಯೇ ಪ್ರವಾಸಿ ಮಾರ್ಗದರ್ಶಿ ಪುಸ್ತಿಕೆಯನ್ನು ಹೊರತರುವ ಉದ್ದೇಶವಿದೆ ಎಂದು ಕಾರ್ಪೊರೇಷನ್ ಹೇಳಿಕೊಂಡಿದೆ.

ಜಗತ್ತಿನಾದ್ಯಂತ ಪ್ರವಾಸೋದ್ಯಮವು ನಾಗಾಲೋಟದಲ್ಲಿ ಓಡುತ್ತಿರುವಾಗ, ಅಪಾರ ಪ್ರಾಮುಖ್ಯ ಗಳಿಸುತ್ತಿರುವಾಗ ಭಾರತ ಅದರಲ್ಲಿಯೂ ಕರ್ನಾಟಕ ಹಿಂದೆ ಬೀಳುವುದರಲ್ಲಿ ಯಾವ ಅರ್ಥವೂ ಇಲ್ಲ. ನಾನಾ ಕಡೆಗಳಿಂದ ಪ್ರವಾಸಿಗಳು ವಿಪುಲವಾಗಿ ಬಂದು ಹೋದರೆ ಜಾಗತಿಕವಾಗಿ ನಮ್ಮ ನಾಡಿನ ಪ್ರತಿಷ್ಠೆ ಬೆಳೆಯುವುದಷ್ಟೇ ಅಲ್ಲ. ತಕ್ಕ ರೀತಿಯಲ್ಲಿ ವ್ಯವಸ್ಥೆಗೊಂಡ ಪಕ್ಷದಲ್ಲಿ ಈ ಉದ್ಯಮದಿಂದ ರಾಷ್ಟ್ರಕ್ಕೆ ಆರ್ಥಿಕವಾಗಿ ಲಾಭವಾಗುತ್ತದೆ. ಅಪಾರ ವಿದೇಶಿ ವಿನಿಮಯ ಗಳಿಕೆಗೂ ಸಹಕಾರಿ. ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿರುವ ನಮ್ಮ ದೇಶದಲ್ಲಿ ಪ್ರವಾಸೋದ್ಯಮವು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಉದ್ಯೋಗಗಳನ್ನು ಸೃಷ್ಟಿಸಬಲ್ಲುದು. ಅಂತರ್ರಾಷ್ಟ್ರೀಯ ಶಾಂತಿ ಹಾಗೂ ಪರಸ್ಪರ ಅರಿವಿಗೆ ಪೂರಕವಾದ ಈ ಉದ್ಯಮವು, ವಾತಾವರಣವನ್ನು ಕಲುಷಿತಗೊಳಿಸದ ಸ್ವಚ್ಛ ಉದ್ಯಮ.

ಕಾವೇರಿಯಿಂದ ಗೋದಾವರಿಗೆ ಇರುವ ಕನ್ನಡ ನಾಡು ತನ್ನಲ್ಲಿರುವ ಸಂಪದದಿಂದ ಪ್ರವಾಸೋದ್ಯಮದಲ್ಲಿ ಜಗತ್ತಿನ ಯಾವ ನಾಡನ್ನೇ ಹಿಂದೆ ಹಾಕಬಲ್ಲುದು. ಪ್ರವಾಸಿಗಳ ಸ್ವರ್ಗವಾಗಲು ಏನು ಬೇಕೋ ಎಲ್ಲವೂ ಇಲ್ಲಿದೆ. ಭಿನ್ನರುಚಿಯ ಪ್ರವಾಸಿಗಳೆಲ್ಲರನ್ನೂ ಸಂತೃಪ್ತಿಗೊಳಿಸುವ ಅಕ್ಷಯಪಾತ್ರೆಯಾಗಬಲ್ಲುದು. ಧಾರ್ಮಿಕ ದೃಷ್ಟಿಯಿಂದ ಬರಲಿ, ಐತಿಹಾಸಿಕ ಪ್ರಜ್ಞೆಯಿಂದ ಬರಲಿ, ನಿಸರ್ಗಪ್ರೇಮಿಗಳೂ ಬರಲಿ, ಪ್ರಾಚ್ಯಪ್ರೇಮಿಗಳೂ ಬರಲಿ, ಕುತೂಹಲದಿಂದ ಬರಲಿ, ಮೋಜಿಗಾಗಿ ಬರಲಿ. ನಿಸರ್ಗದ ಅದ್ಭುತ ಕೊಡುಗೆಗಳ ಜೊತೆಗೆ ಮಾನವ ನಿರ್ಮಿತ ಕಲಾ ಸಂಪತ್ತುಗಳ ಆಗರ ಇದು. ಪ್ರವಾಸೀ ಆಕರ್ಷಣೆಗಳ ಸಾಲು ಸಾಲು: ಮೈಸೂರು, ಶ್ರೀರಂಗಪಟ್ಟಣ, ಚಿತ್ರದುರ್ಗ, ಬಿಜಾಪುರ, ಗುಲ್ಬರ್ಗ, ಹಂಪೆ ಮೊದಲಾದ ಇತಿಹಾಸಪ್ರಸಿದ್ಧ ಸ್ಥಳಗಳು, ಐತಿಹಾಸಿಕ ಸ್ಮಾರಕಗಳು; ಜಗತ್ಪ್ರಸಿದ್ಧ 57 ಅಡಿ ಎತ್ತರದ ಭವ್ಯ ಗೊಮ್ಮಟ; ಬೆರಗುಪಡಿಸುವ ಬೇಲೂರು, ಹಳೇಬೀಡು, ಸೋಮನಾಥಪುರದ ಹೊಯ್ಸಳ ದೇವಾಲಯಗಳು; ಬಾದಾಮಿ, ಪಟ್ಟದಕಲ್ಲು, ಐಹೊಳೆಯ ಚಾಲುಕ್ಯ ಶಿಲ್ಪಗಳು; ಧ್ವನಿಮುದ್ರಣದ ಗೋಳಗುಮ್ಮಟ; ಕೊಡಗು ಮಲೆನಾಡು, ಕಾನನಗಳ ಅದ್ಭುತ ದೃಶ್ಯಗಳು: ಆಗುಂಬೆಯಂಥ ನಿಸರ್ಗ ಸೌಂದರ್ಯ ವೀಕ್ಷಣಾ ಕೇಂದ್ರ: ಬಂಡೀಪುರ, ನಾಗರಹೊಳೆ, ದಾಂಡೇಲಿಗಳ ವನ್ಯಮೃಗ ಸಂರಕ್ಷಣಾ ಕೇಂದ್ರಗಳು; ರಂಗನತಿಟ್ಟಿನ ಪಕ್ಷಿಧಾಮ; ನಿಸರ್ಗಸಮುದ್ರ. ಜೋಗ್‌ಜಲಪಾತದ ಭವ್ಯ ದೃಶ್ಯಾವಳಿ; ಕೃಷ್ಣರಾಜಸಾಗರ, ತುಂಗಭದ್ರಾ ಜಲಾಶಯ. ಆಕರ್ಷಿಸುವ ಸುಂದರ ದೀಪಾಲಂಕೃತ ಬೃಂದಾವನಗಳು; ಕರಾವಳಿಯುದ್ದಕ್ಕೂ ಕಡಲತಡಿಯ ಆರಾಮಧಾಮಗಳು—ಸುರತ್ಕಲ್, ಮಲ್ಪೆ, ಕವಡಿ, ಭಟ್ಕಳ, ಕಾರವಾರ, ಮರವಂತೆ, ಅಲ್ಲಲ್ಲಿ ಪುಟ್ಟ ಹಸಿರುದ್ವೀಪ ಸಮುದಾಯಗಳು: ಪಶ್ಚಿಮ ಘಟ್ಟಗಳ ಪರ್ವತಸ್ತೋಮಗಳು: ಗೋಪಾಲಸ್ವಾಮಿ ಬೆಟ್ಟ, ಬಿಳಿಗಿರಿರಂಗನಬೆಟ್ಟ, ರಾಮನಾಥ, ರಾಮಗಡ, ಕೊಡಚಾದ್ರಿ ತಂಗುದಾಣಗಳು; ಕೆಮ್ಮಣ್ಣುಗುಂಡಿ ಹಾಗೂ ನಂದಿಯ ಸುಂದರ ಗಿರಿಧಾಮಗಳು; ಚಾಮುಂಡಿಬೆಟ್ಟ, ಮೇಲುಕೋಟೆ, ನಂಜನಗೂಡು, ಉಡುಪಿ, ಧರ್ಮಸ್ಥಳ, ಶೃಂಗೇರಿ, ಗೋಕರ್ಣ, ಬಾಬಾಬುಡನ್‌ಗಿರಿ, ಕೂಡಲಸಂಗಮ, ಸವದತ್ತಿ ಇತ್ಯಾದಿ ಧಾರ್ಮಿಕ

ಪ್ರಸಿದ್ಧ ಕ್ಷೇತ್ರಗಳು ; ದಸರಾ ಮಹೋತ್ಸವ, ಕರಗ ಉತ್ಸವ, ವೈರಾಗ್ಯ ಕಾರ್ಯಕ್ರಮ ಇತ್ಯಾದಿ ವಿಶೇಷ ಆಕರ್ಷಣೆಗಳು ; ಹಲವಾರು ಔದ್ಯೋಗಿಕ ಕ್ಷೇತ್ರಗಳು ; ಬೆಂಗಳೂರು ಮೈಸೂರು ನಗರಗಳಲ್ಲಿ ಇರುವ ಹಲವಾರು ವೀಕ್ಷಣಾ ಸ್ಥಳಗಳು. ಸಸ್ಯಸಂಪದ, ಪ್ರಾಣಿಸಂಪದ, ಭೌಗೋಳಿಕ ಆಕರ್ಷಣೆಗಳ ಜೊತೆಗೆ ಬೆನ್ನು ಪಟ್ಟುಕೊಳ್ಳುವಂಥ ಸಾಂಸ್ಕೃತಿಕ ಸಂಪದವಿದೆ. ಜೊತೆಗೆ ಜಗತ್ಪ್ರಸಿದ್ಧ ಗಂಧ, ದಂತ, ರೇಶಿಮೆಯ ಕುಶಲ ಕಲೆಗಾರಿಕೆಯ ವಸ್ತುಗಳು ದೊರೆಯುತ್ತವೆ.

ಜಾಗತಿಕ ಪ್ರವಾಸಿಗರ ಸಂಖ್ಯೆಯನ್ನು ಗಮನಿಸಿದಾಗ ಪ್ರಮಾಣದ ದೃಷ್ಟಿಯಲ್ಲಿ ಭಾರತವನ್ನು ಸಂದರ್ಶಿಸುತ್ತಿರುವವರ ಸಂಖ್ಯೆ ಬಹಳ ಕಡಿಮೆ. ಭಾರತಕ್ಕೆ ಬಂದವರೂ ಉತ್ತರ ಭಾರತವನ್ನು ಮಾತ್ರ ಸುತ್ತುವುದೇ ಹೆಚ್ಚು. ದಕ್ಷಿಣ ಭಾರತದ ಬಗ್ಗೆ ಈ ನಿರ್ಲಕ್ಷ್ಯಕ್ಕೆ ಕಾರಣ ಅವರಿಗೆ ಈ ಬಗ್ಗೆ ಸರಿಯಾದ ಮಾಹಿತಿ ಇಲ್ಲದಿರುವುದೂ ಆಗಿರಬಹುದು, ದೊರೆವ ಸೌಲಭ್ಯಗಳು ಅಗತ್ಯವಾಗಿಲ್ಲದಿರುವುದೂ ಆಗಿರಬಹುದು. ಹಾಗಾಗಿ ಕೇಂದ್ರ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಹೊಸ ಯೋಜನೆಯೊಂದನ್ನು ಹಾಕಿಕೊಂಡಿದೆ. "ದಕ್ಷಿಣಕ್ಕೆ ಬನ್ನಿ" (ಡೆಸ್ಟಿನೇಷನ್ ಸೌತ್) ಎನ್ನಲಾದ ಈ ಯೋಜನೆಯಲ್ಲಿ ಪ್ರಥಮ ಅಂಗವಾಗಿ ಯೂರೋಪಿನ ಆಹ್ವಾನಿತ ಮೂರು ತಂಡದ ಪ್ರವಾಸೀ ಲೇಖಕರಿಂದ ದಕ್ಷಿಣ ಪ್ರವಾಸ ಮಾಡಿಸಿ ಅವರ ಮೂಲಕ ದಕ್ಷಿಣ ಭಾರತದಲ್ಲಿ ಮೈತುಂಬಿ ನಿಂತಿರುವ ಪ್ರವಾಸೀ ಆಕರ್ಷಣೆಗಳ ಬಗ್ಗೆ ಪ್ರಚಾರ ಕೊಡುವುದು. ಪೆಟ್ರೋಲ್ ಬೆಲೆಗಳು ದುಬಾರಿಯಾಗಿರುವುದರಿಂದ ಸಣ್ಣ ಸಣ್ಣ ಗುಂಪುಗಳಲ್ಲಿ ಪ್ರವಾಸಿಗಳು ಬರುವುದು ಕಡಿಮೆಯಾಗುತ್ತಿದ್ದು ದೊಡ್ಡ ದೊಡ್ಡ ಗುಂಪುಗಳಲ್ಲಿ ಬರುತ್ತಿದ್ದಾರೆ. ಹಾಗಾಗಿ ದೊಡ್ಡ ಗುಂಪುಗಳಿಗೆ ಸೌಲಭ್ಯಗಳನ್ನು ಒಟ್ಟಿಗೆ ಒದಗಿಸುವ ಹೊಣೆ ಈ ಇಲಾಖೆಯದಾಗಿದೆ.

ಹೆಚ್ಚು ಪ್ರವಾಸಿಗಳನ್ನು ಆಕರ್ಷಿಸಲು, ಈ ಉದ್ಯಮವನ್ನು ಮತ್ತಷ್ಟು ದಟ್ಟವಾಗಿಸಲು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ಹಲವಾರು ಯೋಜನೆಗಳನ್ನು ಹಾಕಿಕೊಂಡಿವೆ.

ಪ್ರವಾಸೋದ್ಯಮ ಇಲಾಖೆ ನಿರ್ವಹಣ ವಿಭಾಗ, ಅಂಕಿಅಂಶ ವಿಭಾಗ, ಹಾಗೂ ಮಾಹಿತಿ ವಿಭಾಗಗಳನ್ನು ತೆರೆಯುವ ಸನ್ನಾಹದಲ್ಲಿದೆ. ತಲಕಾವೇರಿಯಲ್ಲಿರುವ ಪ್ರವಾಸಿ ವಿಶ್ರಾಂತಿಗೃಹ, ದೇವರಾಯನದುರ್ಗ, ಸೋಮನಾಥಪುರ, ಶ್ರವಣಬೆಳಗೊಳದಲ್ಲಿರುವ ಪ್ರವಾಸೀ ಕ್ಯಾಂಟೀನ್, ಐಹೊಳೆ ಹಾಗೂ ಮಾಗೋಡು ಜಲಪಾತದ ಬಳಿಯ ಟೂರಿಸ್ಟ್ ಹೋಂಗಳ ನಿರ್ವಹಣೆ ಈ ಇಲಾಖೆಯದಾಗಿದೆ. ಪ್ರವಾಸೋದ್ಯಮ ನಿಧಿಗಳಿಂದ ಕಟ್ಟಲಾದ ವಿವಿಧ ಪ್ರಮುಖ ಬಂಗಲೆಗಳೂ ರಾಜ್ಯದಾದ್ಯಂತ ಇದ್ದು ಇಂದು ಅರಣ್ಯ, ತೋಟಗಾರಿಕೆ ಹಾಗೂ ಲೋಕೋಪಯೋಗಿ ಇಲಾಖೆಗಳ ವಶದಲ್ಲಿದೆ. ಬೆಳಗಾವಿ, ಬಳ್ಳಾರಿ, ತುಮಕೂರು, ಬಿದರೆ, ಗುಲ್ಬರ್ಗ, ಹಿರಿಯೂರ ಇತ್ಯಾದಿಯಾದ ಪ್ರವಾಸಿಗಳು ಹಾದುಹೋಗುವ ಪ್ರಮುಖ ಊರುಗಳಲ್ಲಿನ ಈ ಬಂಗಲೆಗಳಲ್ಲಿನ ವಸತಿಸೌಕರ್ಯ ಕೇವಲ ರಾಜ್ಯಸರ್ಕಾರದ ಅಧಿಕಾರಿಗಳಿಗೆ ಮಾತ್ರ ಒದಗುತ್ತಿದೆ. ಇವುಗಳನ್ನು ಪ್ರವಾಸೋದ್ಯಮ ಇಲಾಖೆ ತನ್ನ ವಶಕ್ಕೆ ತೆಗೆದುಕೊಳ್ಳುವ ನಿರೀಕ್ಷೆ ಇದೆ.

ಜಾಗತಿಕ ಬೃಹದ್ದಾವಾಗಿರುವ ಪ್ರವಾಸೋದ್ಯಮದ ಬಗ್ಗೆ ಸ್ಪಷ್ಟಚಿತ್ರ ಬರಬೇಕಾದರೆ ಅದನ್ನು ವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಣೆ ಮಾಡಬೇಕಾದರೆ ಅಂಕಿಅಂಶ ಜ್ಞಾನ ಮುಖ್ಯ. ಇಂದು ಕರ್ನಾಟಕಕ್ಕೆ ಎಷ್ಟು ಮಂದಿ ಪ್ರವಾಸಿಗಳು ಬರುತ್ತಾರೆ. ಎಷ್ಟು ಮಂದಿ ಹೊರಹೋಗುತ್ತಾರೆ ಎಂದು ತಿಳಿಯಲು ಯಾವುದೇ ವಿಧಾನವೂ ಇಲ್ಲ. ಆದ್ದರಿಂದ ಈ ಬಗ್ಗೆ ಒಂದು ವಿಭಾಗವನ್ನು ತೆರೆಯುವ ಸೂಚನೆಗಳು ಕಾಣುತ್ತಿವೆ.

ಕರ್ನಾಟಕವನ್ನು ಪ್ರವೇಶಿಸುವ ಪ್ರವಾಸಿಗರು ಅನೇಕ ಕಟ್ಟುಕಟ್ಟಳೆಗೆ ಒಳಗಾಗಿರುತ್ತಾರೆ. ಅನ್ಯ ಅಪರಿಚಿತ ನಾಡಿನಲ್ಲಿ ಬಂದಿಳಿದ ವಿದೇಶಿಯರಿಗೆ ನ್ಯಾಯಬದ್ಧವಲ್ಲದ ಇನ್ನೂ ಅನೇಕ ತಕರಾರುಗಳುಂಟಾಗುವುದುಂಟು. ಕುಶಲ ಕಲಾವಸ್ತುಗಳನ್ನು ಕೊಳ್ಳುವಾಗ ಮೋಸ ಹೋಗಬಹುದು, ಹೋಟೆಲುಗಳಲ್ಲಿ ಅತೃಪ್ತಿಕರ ಸೇವೆ ದೊರೆಯಬಹುದು. ಪ್ರವಾಸಿ ಏಜೆಂಟರು

ಕಾರು ಕಾರ್ಯನಿರ್ವಾಹಕರು, ಮಾರ್ಗದರ್ಶಕರು, ಸರ್ಕಾರಿಭೃತ್ಯರು ತೊಂದರೆಗಳನ್ನೊಡ್ಡಬಹುದು. ಅಂಥ ಸಂದರ್ಭದಲ್ಲಿ ಪ್ರವಾಸಿಗಳಿಗೆ ತಮ್ಮ ಅಹವಾಲನ್ನು ಸಲ್ಲಿಸಲು, ಕೊರತೆಗಳನ್ನು ನೀಗಿಸಿಕೊಳ್ಳಲು ಒಂದು ವಿಭಾಗ ಬೇಕಾದುದರಿಂದ, ದೂರು ವಿಭಾಗವನ್ನು ಇಲಾಖೆ ಸದ್ಯದಲ್ಲಿಯೇ ಒಳಗೊಳ್ಳುವ ಸಂಭವವಿದೆ.

ಪ್ರವಾಸೋದ್ಯಮಕ್ಕೆ ಅತ್ಯಂತ ಪ್ರಮುಖವಾದ ಆಸರೆ ಎಂದರೆ ನಾಡಿನ ರಕ್ತನಾಳಗಳಂತಿರಬೇಕಾದ ರಸ್ತೆ ಮಾರ್ಗಗಳ ಸೌಕರ್ಯಗಳು. 1956ರಲ್ಲಿ ಉದಯವಾದ ವಿಶಾಲ ಕರ್ನಾಟಕದಲ್ಲಿ 42,940 ಕಿಮೀ ಉದ್ದದ ರಸ್ತೆಗಳಿದ್ದುವು. ಇತ್ತೀಚೆಗೆ ನಡೆದ ಪರಿಣಾಮಕಾರಿ ಕೆಲಸಗಳ ಪರಿಣಾಮವಾಗಿ 1973ರ ವೇಳೆಗೆ 79,947 ಕಿಮೀ ಉದ್ದದ ರಸ್ತೆಗಳಾಗಿವೆ. ಇವರಲ್ಲಿ ರಾಷ್ಟ್ರೀಯ ಹೆದ್ದಾರಿ 1968 ಕಿಮೀ, ರಾಜ್ಯ ಹೆದ್ದಾರಿ 6086 ಕಿಮೀ, ರೈಲ್ವೆ ಮಾರ್ಗ 7806 ಕಿಮೀ.

ಇಂದು ಕಾಂಟ್ರಾಕ್ಟ್ ಬಸ್ ಕ್ಯಾರೇಜುಗಳ ರಾಷ್ಟ್ರೀಕರಣವಾಗಿರುವುದರಿಂದ ಖಾಸಗಿ ಉದ್ಯಮಗಳು ಪ್ರವಾಸಿಗರಿಗೆ ನೆರವಾಗುವುದು ತಪ್ಪಿರುವುದರಿಂದ ರಾಜ್ಯದ ಹೊಣೆ ಹೆಚ್ಚಾಗಿದೆ. ಬಿಜಾಪುರ, ಬಾಗಲಕೋಟೆ, ಬೇಳಗಾವಿ, ಹಂಪೆ, ಹಾಸನ ಇತ್ಯಾದಿ ಎಡೆಗಳಲ್ಲಿ ಪ್ರದೇಶದ ಸುತ್ತಮುತ್ತ ವೀಕ್ಷಿಸಬಿಚ್ಛಿಸುವ ಪ್ರವಾಸಿಗರಿಗೆ ಸ್ಥಳೀಯ ಪ್ರವಾಸಿ ಬಸ್‌ಗಳ ಅಗತ್ಯವಿದೆ.

ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಸಮಗ್ರ ಅಭಿವೃದ್ಧಿಗೊಳಿಸುವ ಇಪ್ಪತ್ತೊಂದರೆ ಲಕ್ಷರೂಗಳ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಅನುಮೋದಿಸಿದೆ. ರಾಜ್ಯ ಯೋಜನಾಂಗ, 55 ತಾಲ್ಲೂಕುಗಳನ್ನು ಮಾನ್ಯಮಾಡಿದೆ. ಮೊದಲ ಯೋಜನೆಯಲ್ಲಿ 22 ತಾಲ್ಲೂಕುಗಳನ್ನು ಉಳಿದವನ್ನು ಎರಡನೆ ಯೋಜನೆಯಲ್ಲಿ ಪರಿಗಣಿಸಲಾಗುತ್ತದೆ. ಇಲ್ಲಿ ಅಭಿವೃದ್ಧಿಗೊಳಿಸಬೇಕೆಂದಿರುವ ಎಲ್ಲ ಪ್ರಮುಖ ಪ್ರವಾಸಿ ಸ್ಥಳಗಳ ಬಗ್ಗೆ ವರದಿ ಸಿದ್ಧಗೊಂಡಿದೆ.

ಬೃಂದಾವನದಲ್ಲಿ ದೀಪಾಲಂಕಾರವನ್ನು ನವೀಕರಿಸುವ ಐದು ಲಕ್ಷರೂಗಳ ಯೋಜನೆ ಸಿದ್ಧಗೊಳ್ಳುತ್ತಿದೆ. ಶ್ರವಣಬೆಳಗೊಳ, ಜೋಗ್‌ಜಲಪಾತ, ಗೋಳಗುಮ್ಮಟಗಳಲ್ಲಿ ಹಗ್ಗದೇರು (ರೋಪ್‌ವೇ) ಗಳನ್ನು ನಿರ್ಮಿಸುವ ಯೋಜನೆ ಇದೆ.

ಕರ್ನಾಟಕದಲ್ಲಿನ ಎಲ್ಲ ಪ್ರಮುಖ ಕೊಳಗಳಲ್ಲಿ ಹಾಗೂ ಜಲಾಶಯಗಳಲ್ಲಿ ಮತ್ತು 320 ಕಿಮೀ. ಉದ್ದದ ಕರಾವಳಿಯ ಉದ್ದಕ್ಕೂ ಅಲ್ಲಲ್ಲಿ ಕಾಶ್ಮೀರಿ ಶೈಲಿಯ ದೋಣಿಮನೆಗಳನ್ನು ಒದಗಿಸುವ ಯೋಜನೆ ಕಾರ್ಪೊರೇಷನ್ನಿಗಿದೆ. ತುಂಗಭದ್ರ ಜಲಾಶಯದ ಬಳಿ ಜಪಾನಿ ಶೈಲಿಯ ತೋಟ (ಉಪವನ) ವನ್ನು ಈ ವರ್ಷ ನಿರ್ಮಿಸುವ ಯೋಜನೆಯೂ ಇದೆ.

ಇಂದು ಮೈಸೂರು ನಗರದಲ್ಲಿ ಮಾತ್ರ ಉಳಿದಿರುವ ಷಾಪಸಂದ್ ಟಾಂಗಾ ಗಾಡಿಗಳು ವಿದೇಶಿಯರಿಗೆ ಬಲುಪ್ರಿಯವಾಗಿರುವ ಕಾರಣದಿಂದ ಈ ಬಗೆಯ ಗಾಡಿಗಳನ್ನು ಬಿಜಾಪುರ, ಗುಲ್ಬರ್ಗ, ಬಿದರೆ ಮತ್ತು ಹೊಸಪೇಟೆ ಪ್ರವಾಸಿ ಕೇಂದ್ರಗಳಲ್ಲಿ ಜನಪ್ರಿಯಗೊಳಿಸಲಾಗುತ್ತಿದೆ.

ಹೋಟೆಲ್ ಉದ್ಯಮಕ್ಕೆ ಉತ್ತೇಜನ ನೀಡುತ್ತಿದ್ದ, ಖಾಸಗಿ ಉದ್ದಿಮೆದಾರರಿಗೆ ಹಲವಾರು ಬಗೆಯ ಪ್ರೋತ್ಸಾಹಗಳನ್ನು ನೀಡಲಾಗುತ್ತಿದೆ. ಕರ್ನಾಟಕದಲ್ಲಿನ ಕೆಲವು ಬ್ಯಾಂಕುಗಳು ಹೋಟೆಲುಗಳನ್ನು ಆದ್ಯತೆಯ ಉದ್ಯಮವಾಗಿ ಪರಿಗಣಿಸಿ ಸಾಲಗಳನ್ನು ನೀಡುತ್ತಿವೆ. ಪ್ರವಾಸಿ ಸ್ಥಳದ ಸುತ್ತಮುತ್ತ ಹೋಟೆಲು ತೆರೆಯಲು ಇಚ್ಛಿಸುವವರಿಗೆ ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ದರದಲ್ಲಿ ಸರ್ಕಾರಿ ನೆಲವನ್ನು ನೀಡಲಾಗುತ್ತಿದೆ. ಐದು ವರ್ಷಗಳವರೆಗೆ ವರಮಾನ ತೆರಿಗೆಯನ್ನು ಮನ್ನಾ ಮಾಡಲಾಗುತ್ತದೆ. ಇಂಡಿಯನ್ ಫೈನಾನ್ಸ್ ಕಾರ್ಪೊರೇಷನ್, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್‌ಗಳೇ ಈ ಯೋಜನೆಯ ಶೇ. 80 ಭಾಗ ವೆಚ್ಚವನ್ನು ಭರಿಸುತ್ತವೆ.

ಹೋಟೆಲ್ ಉದ್ದಿಮೆದಾರರು, ಸಾರಿಗೆ ಕಾರ್ಯನಿರ್ವಾಹಕರು ಹಾಗೂ ಇತರ ಪ್ರವಾಸೋದ್ಯಮಿಗಳು ಗಳಿಸಿದ ವಿದೇಶಿ ವಿನಿಮಯದಲ್ಲಿ ತಾವೇ ಶೇಕಡ ಹತ್ತು ಭಾಗವನ್ನು ಇಟ್ಟುಕೊಂಡು ವಿದೇಶಗಳಲ್ಲಿ ಪ್ರಚಾರ ಪ್ರವರ್ತನೆಗೆ ಬಳಸಿಕೊಳ್ಳಬಹುದು ಎಂದು ಯೋಜನೆ ಈಗಾಗಲೇ

ಕಾರ್ಯಗತವಾಗಿದೆ. ಕರ್ನಾಟಕ ರಾಜ್ಯ ಹಣಕಾಸು ಕಾರ್ಪೊರೇಷನ್ ಕರ್ನಾಟಕದಲ್ಲಿನ ಹೋಟೆಲ್ ಉದ್ಯಮದ ಬಗ್ಗೆ ಸರ್ವೇಕ್ಷಣೆ ನಡೆಸಿತು. ಸರ್ವೇಕ್ಷಣೆಯಲ್ಲಿ ಬಂದ 164 ಹೋಟೆಲುಗಳ ಪೈಕಿ ಬಹುತೇಕ ಬೆಂಗಳೂರಿನಂಥ ದೊಡ್ಡ ನಗರಗಳಲ್ಲಿಯೇ ದಟ್ಟಯಿಸಿಕೊಂಡಿರುವುದು ಕಂಡುಬಂತು. ಈ ಹೋಟೆಲುಗಳು ಸಾಮಾನ್ಯವಾಗಿ ವ್ಯಾಪಾರಸ್ಥರೊಂದಿಗೆ ಹೆಚ್ಚು ವ್ಯವಹಾರಗಳನ್ನಿಟ್ಟುಕೊಂಡಿವೆ. ವಿವಿಧ ಪ್ರವಾಸೀಕೇಂದ್ರಗಳಿಗೆ ಹೋಗುವ ಪ್ರವಾಸಿಗರತ್ತ ಶೀಘ್ರಗಮನ ಹರಿಸಬೇಕಾಗಿದೆ.

ಪ್ರವಾಸ ಕಾರ್ಯಕ್ರಮವನ್ನು ನಿರ್ಧರಿಸಿಕೊಂಡಮೇಲೆ ಪ್ರವಾಸಿಯ ಮುಖ್ಯ ಅಗತ್ಯ ವಸತಿ ಮತ್ತು ಆಹಾರ ತಾನೇ. ಇವೆರಡನ್ನು ಒದಗಿಸದಿದ್ದ ಮೇಲೆ ಪ್ರವಾಸೋದ್ಯಮವನ್ನು ಬೆಳೆಸುವುದು ಹೇಗೆ ?

ಏರ್ ಇಂಡಿಯ ಹಾಗೂ ಇಂಡಿಯನ್ ಏರ್‌ಲೈನ್ಸ್‌ಗಳು ಇತ್ತೀಚೆಗೆ ಪ್ರವಾಸ ರಿಯಾಯತಿಗಳನ್ನು ಕೊಡುತ್ತಿರುವುದರಿಂದ, ಮಧ್ಯಮ ವರ್ಗದ ಪ್ರವಾಸಿಗಳ ಸಂಖ್ಯೆ ಹೆಚ್ಚುಳಗೊಳ್ಳುತ್ತಿದೆ. ಕಳೆದ ವರ್ಷದಿಂದ ಮುಂಬಯಿ–ಬೆಂಗಳೂರು ಏರ್-ಬಸ್‌ಗಳ ಓಡಾಟವನ್ನು ಆರಂಭಿಸಿರುವುದರಿಂದ ಆಗಮಿಸುವವರ ಸಂಖ್ಯೆಯಲ್ಲಿ ಸ್ಪಷ್ಟ ಹೆಚ್ಚಳ ಕಂಡುಬಂದಿದೆ. ರೈಲ್ವೆ ಇಲಾಖೆಯೂ ಪ್ರವಾಸೋದ್ಯಮವನ್ನು ಉತ್ತೇಜಿಸುವ ಸಲುವಾಗಿ ವಿವಿಧ ರಿಯಾಯತಿಗಳನ್ನು ನೀಡುತ್ತಿದೆ.

ಭಾರತದ ಪುರಾತತ್ವ ಇಲಾಖೆಯವರು ಬೆಂಗಳೂರಿನಲ್ಲಿ ತಮ್ಮ ಕಾರ್ಯಾಲಯವನ್ನು ತೆರೆದಿದ್ದು, ಕರ್ನಾಟಕದಾದ್ಯಂತ ಪ್ರಾಕ್ತನ ಆಸಕ್ತಿ ಕೆರಳಿಸುವ ವಿವಿಧ ಸ್ಥಳಗಳಲ್ಲಿ ಪ್ರಾಚೀನ ಮೌಲಿಕ ವಸ್ತುಗಳ ರಿಪೇರಿ, ಸೌಂದರ್ಯವರ್ಧನೆಗಳನ್ನು ವ್ಯಾಪಕವಾಗಿ ಕೈಗೊಂಡಿದ್ದಾರೆ. ಇಂದು ಕರ್ನಾಟಕದಲ್ಲಿ 484 ರಾಷ್ಟ್ರೀಯ ಸ್ಮಾರಕಗಳಿವೆ. ಭಾರತದಲ್ಲಿಯೇ ಈ ಸಂಬಂಧವಾಗಿ ಎರಡನೆಯ ಸ್ಥಾನ ನಮ್ಮ ನಾಡಿನದು.

ಯುನೆಸ್ಕೊ ತಜ್ಞನೊಬ್ಬನನ್ನು ಆಹ್ವಾನಿಸಿ, ಭಾರತದಲ್ಲಿನ ಜಾಗತಿಕ ಆಸಕ್ತಿ ಕೆರಳಿಸಬಲ್ಲ ಸಾಂಸ್ಕೃತಿಕ ಮಹತ್ವದ ಪ್ರದೇಶಗಳ ಸರ್ವೇಕ್ಷಣೆ ಮಾಡುವಂತೆ ಕೇಂದ್ರಸರ್ಕಾರ ಕೇಳಿತ್ತು. ಬೇಲೂರು, ಹಳೇಬೀಡು, ಸೋಮನಾಥಪುರ, ಐಹೊಳೆ, ಬಾದಾಮಿ, ಪಟ್ಟದಕಲ್ಲು, ಬಿಜಾಪುರ ಹಾಗೂ ಹಂಪೆಯನ್ನು ಆತ ಶಿಫಾರಸು ಮಾಡಿದ್ದಾನೆ. ರಾಜ್ಯಸರ್ಕಾರ ಈಗಾಗಲೇ ಈ ಪ್ರದೇಶಗಳ ಸ್ಮಾರಕಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಸಮಗ್ರ ಯೋಜನೆಯನ್ನು ಹಾಕಲು ಒಂದು ಸ್ಮಾರಕ ಸಮಿತಿಯನ್ನು ನೇಮಿಸಿದೆ.

ಹುಲಿಗಳ ಸಂತಾನ ನಶಿಸುವುದನ್ನು ತಡೆಗಟ್ಟಲು ಹಾಕಿರುವ ಪ್ರಾಜೆಕ್ಟ್ ಟೈಗರ್ ಎಂಬ ಅಂತರ್ರಾಷ್ಟ್ರೀಯ ಯೋಜನೆಯಲ್ಲಿ ಭಾರತದ ಪಾಲೂ ಇದೆ. ಈ ಯೋಜನೆಯಲ್ಲಿ ಬರುವ ಭಾರತದ ಒಂಬತ್ತು ಹುಲಿ ಸಂರಕ್ಷಣಾಲಯಗಳ ಪೈಕಿ ಕರ್ನಾಟಕದಲ್ಲಿನ ಬಂಡೀಪುರ ವನ್ಯಮೃಗ ಸಂರಕ್ಷಣಾ ಕೇಂದ್ರವೂ ಒಂದು.

1977-78 ರ ವಾರ್ಷಿಕ ಯೋಜನೆಯಲ್ಲಿ ರಾಜ್ಯದ ಆಯವ್ಯಯದಲ್ಲಿ ಪ್ರವಾಸೋದ್ಯಮ ಇಲಾಖೆಗೆ 12 ಲಕ್ಷ ರೂಗಳನ್ನು ಮೀಸಲಿಡಲಾಗಿದೆ. ಈ ಬಾರಿ ಕಾರ್ಯಗತಗೊಳ್ಳಬೇಕಾಗಿರುವ ಯೋಜನೆಗಳೆಂದರೆ ಬೇಲೂರು, ಹಳೇಬೀಡುಗಳಲ್ಲಿ ಟೂರಿಸ್ಟ್ ಕಾಟೇಜುಗಳ ನಿರ್ಮಾಣ, ಗೋಕರ್ಣದಲ್ಲಿ ಪ್ರವಾಸಿ ವಿಶ್ರಾಂತಿಗೃಹದ ಕಟ್ಟುವಿಕೆ, ಬನ್ನೇರುಘಟ್ಟದಲ್ಲಿ ಕೆಫೆಟೇರಿಯ ಕೊಳಗಳ ನಿರ್ಮಾಣ, ಶ್ರೀರಂಗಪಟ್ಟಣದಲ್ಲಿ ಒಂದು ಮೋಟೆಲ್, ದಾಂಡೇಲಿಯಲ್ಲಿ ಟೂರಿಸ್ಟ್ ಲಾಡ್ಜ್, ಬಂಡೀಪುರದ ಪ್ರವಾಸಿ ತಂಗುದಾಣದಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದು, ಸಾಧ್ಯವಾದಷ್ಟು ಹೆಚ್ಚಿನ ಪ್ರವಾಸಿ ಕೇಂದ್ರಗಳಲ್ಲಿ ಸ್ಥಳೀಯ ಸಾರಿಗೆ ಸೌಲಭ್ಯಗಳನ್ನು ಒದಗಿಸುವುದು.

ಪ್ರಚಾರ ಮಾಧ್ಯಮಕ್ಕೆ 77-78 ರಲ್ಲಿ 3 ಲಕ್ಷ ರೂಗಳನ್ನು ನೀಡಲಾಗಿದೆ. ಹೆಚ್ಚಿನ ಪ್ರವಾಸ ಸಾಹಿತ್ಯವನ್ನು ದುಬಾರಿಯಾಗದ ವೆಚ್ಚದಲ್ಲಿ ಪ್ರಕಟಿಸುವ, ಪ್ರವಾಸಿ ಆಕರ್ಷಣೆಗಳ ಬಗ್ಗೆ

ಕಪ್ಪು ಬಿಳುಪು ವರ್ಣದ ಸಾಕ್ಷ್ಯಚಿತ್ರಗಳನ್ನು ತಯಾರಿಸುವ ಇಂಗಿತ ಪ್ರವಾಸೋದ್ಯಮ ಇಲಾಖೆಗಿದೆ. ಅಲ್ಲದೆ ಕಾಂಗ್ರೆಸ್ ವಸ್ತುಪ್ರದರ್ಶನ, ದಸರಾ ವಸ್ತುಪ್ರದರ್ಶನ, ಪಾಂಡಿಚೆರಿ ಹಾಗೂ ಮದರಾಸುಗಳಲ್ಲಿ ನಡೆದ ಪ್ರವಾಸಿ ಮೇಳ ಮೊದಲಾದ ಪ್ರದರ್ಶನಗಳಲ್ಲಿ ಭಾಗವಹಿಸಿ ಪ್ರವಾಸೋದ್ಯಮವನ್ನು ಜನಪ್ರಿಯಗೊಳಿಸುವ ಯೋಜನೆಯಿದೆ. ಪ್ರಮುಖ ದಿನಪತ್ರಿಕೆಗಳಲ್ಲಿ ನಿಯತಕಾಲಿಕಗಳಲ್ಲಿ ಜಾಹಿರಾತುಗಳನ್ನು ನೀಡುವುದು ಸರ್ವೇಸಾಮಾನ್ಯ.

ರಾಷ್ಟ್ರ ಹಾಗೂ ರಾಜ್ಯಮಟ್ಟಗಳಲ್ಲಿ ವಿದೇಶಿ ಪ್ರವಾಸೋದ್ಯಮಕ್ಕೆ ನೀಡಿರುವ ಪ್ರಾಮುಖ್ಯದ ಅರ್ಧದಷ್ಟನ್ನೂ ಸ್ವದೇಶಿ ಪ್ರವಾಸೋದ್ಯಮಕ್ಕೆ ನೀಡಿಲ್ಲದಿರುವುದು ವಿಚಾರಾರ್ಹ ಕೌತುಕ, ಹಲವು ಪ್ರಾಂತ್ಯಗಳಿಂದ ಕೂಡಿದ ಬೃಹತ್ ಭಾರತದಲ್ಲಿ ಒಳಾಂತರ ಪ್ರವಾಸಗಳನ್ನು ಪ್ರಚೋದಿಸಲು ನಡೆಸಲು ಅಮಿತ ಅವಕಾಶಗಳಿವೆ, ಅಂತರ ರಾಜ್ಯಪ್ರವಾಸಗಳು, ಜೊತೆಗೆ ರಾಜ್ಯದ ಒಳಗೆ ಪ್ರವಾಸಗಳನ್ನು ಹೆಚ್ಚು ಹೆಚ್ಚು ಉತ್ತೇಜಿಸಿ. ನಾಡಿನ ಜನತೆಗೆ ಹೆಚ್ಚು ಸೌಲಭ್ಯಗಳನ್ನು ಒದಗಿಸುವುದು ಅತ್ಯಂತ ಅವಶ್ಯಕ ಕಾರ್ಯವಾಗಿದೆ. ಕನ್ನಡ ಪ್ರವಾಸೋದ್ಯಮ ಇಲಾಖೆ ಕನ್ನಡದಲ್ಲಿಯೇ ಇನ್ನೂ ಪ್ರಚಾರ ಸಾಹಿತ್ಯವನ್ನು ಪ್ರಕಟಿಸಿಲ್ಲ ಎನ್ನುವ ಅಂಶ ಖೇದಕಾರಕ ಸತ್ಯ.

ಇವೆಲ್ಲ ಆದರೂ ಪ್ರವಾಸೋದ್ಯಮದ ಬಗ್ಗೆ ಒಂದು ರಾಷ್ಟ್ರೀಯ ನೀತಿ ರೂಪಗೊಳ್ಳದಿರುವುದು ಆಶ್ಚರ್ಯದ ವಿಷಯ. ಪ್ರವಾಸೋದ್ಯಮವನ್ನು ಒಂದು ಗಂಭೀರ ಉದ್ಯಮವಾಗಿ ಇನ್ನು ಪರಿಗಣಿಸಿಯೇ ಇಲ್ಲವೇನೋ ಎಂದು ಭಾಸವಾಗುತ್ತದೆ. ಖಾಸಗಿ ಪ್ರವಾಸೋದ್ಯಮಕ್ಕೆ ಅವಕಾಶ ಕಲ್ಪಿಸದಿರುವುದು ಒಂದು ಕೊರತೆಯಾಗಿದೆ. ಸರ್ಕಾರದೇ ರಾಷ್ಟ್ರೀಕರಣಕ್ಕೊಳಪಡಿಸಿದ ಈ ಉದ್ಯಮಕ್ಕೆ ಅನೇಕ ಕಟ್ಟುನಿಟ್ಟುಗಳ ಚೌಕಟ್ಟಿನ ಜೊತೆಗೆ, ವ್ಯವಸ್ಥಿತ ಕಾಳಜಿ ಇಲ್ಲದಿರುವಿಕೆ ಮುಖ್ಯ ಕೊರತೆಯಾಗಿದೆ. ಕಲ್ಪನಾಶ್ರೀಮಂತಿಕೆಯುಳ್ಳ, ವ್ಯಾಪಾರಿ ದಕ್ಷತೆಯುಳ್ಳ, ಜೊತೆಗೆ ಸಹೃದಯ ಸೌಜನ್ಯವುಳ್ಳ ಸೂತ್ರಸಂಚಾಲಕರು ಈ ಉದ್ಯಮವನ್ನು ಪ್ರವೇಶಿಸುವ ತನಕ ಏನೂ ಹೇಳುವ ಹಾಗಿಲ್ಲ.

ಪು. ತಿ. ನರಸಿಂಹಾಚಾರ್

ಚಿಂತನ-೬

೧

ಜಗತ್ತು

ಜಗತ್ತನ್ನು ಮಿಥ್ಯೆ, ಮಾಯೆ ಎಂದು ಕರೆದರೆ ವಾಸ್ತವವಾದಿಗಳು ನಗುತ್ತಾರೆ. ಹೀಗೆ ನಗುವವರಲ್ಲಿ ತರುಣ ವಿಚಾರವಾದಿಗಳು ಮುಂದಾಳುಗಳು. ಆದರೆ ಬುದ್ಧಿ ಬೆಳೆದಂತೆಲ್ಲ ಈ ತರದ ನಗು ಕಡಿಮೆಯಾಗುತ್ತದೆ. ಈಗ ಈ ಸಾಮಾನ್ಯ ವಿಚಾರವನ್ನೇ ತೆಗೆದುಕೊಳ್ಳಿ. ನಾವು ನಿಂತಿರುವ ನೆಲ ಸೂರ್ಯನ ಸುತ್ತಲೂ ಮಹಾವೇಗದಿಂದ ಸುತ್ತುತ್ತಿದೆ. ಶಾಲೆಗೆ ಹೋಗುವ ಎಲ್ಲ ಮಕ್ಕಳಿಗೂ ಪಾಠವಾದ ವಿಷಯವಿದು. ಆದರೆ ಈ ಸಂಗತಿ ಈ ಲೋಕದಲ್ಲಿ ಬಾಹ್ಯಾಕಾಶ ವಿಹಾರಿಗಳಾದ ಹತ್ತಿಪ್ಪತ್ತು ಮಂದಿಗೆ ಹೊರತು ಮಿಕ್ಕವರಿಗೆ ಅನುಭವಕ್ಕೆ ಬರುವ ವಿಷಯವಲ್ಲ. ಭೂಮಿಯನ್ನು ಕುರಿತು ಅದರ ಸ್ಥಿರತೆಯೇ ನಮಗೆ ನಿತ್ಯ ನಿರಂತರ ಅನುಭವಕ್ಕೆ ಬರುವಂಥಾದ್ದು. ನಮ್ಮ ವ್ಯವಹಾರದಲ್ಲಿ ಈ ಅನುಭವಕ್ಕೆ ವಿರುದ್ಧವಾದ ಯಾವ ತೊಡಕೂ ಕಂಡುಬರುವುದಿಲ್ಲ. ಶಾಲಾ ಕಾಲೇಜುಗಳನ್ನು ಪ್ರವೇಶಿಸದ ನಮ್ಮ ಹಿರಿಯರಲ್ಲಿ ಯಾರೂ—ಅವರೇನು ದಡ್ಡರಲ್ಲ—ಭೂಚಲನವನ್ನು ನಂಬುವುದಿಲ್ಲ. ಆದರೆ ನಮ್ಮ ಇಂದ್ರಿಯಗಳಿಂದ ನಾವು ಪಡೆದುಕೊಳ್ಳುತ್ತಿರುವ ಈ ಭೂಸ್ಥಿರತೆಯ ಅನುಭವವನ್ನು ಕಿತ್ತೊಗೆದ ಹೊರತು ಮಾನವನಿಗೆ ಖಗೋಳದ ಖಚಿತಜ್ಞಾನ ಸಿಕ್ಕುವುದಿಲ್ಲ. ಆತ ಭೂಪರಿಧಿಯನ್ನು ದಾಟಿ ಅಂತರಿಕ್ಷಗಾಮಿಯಾಗಿ ಚಂದ್ರಾದಿಲೋಕಗಳನ್ನು ತಲಪುವ ಸಾಹಸಕ್ಕೂ ಕೈಹಚ್ಚಲಾರ. ಗ್ರಹಗಾಮಿಯ ಅನುಭವಗಳಲ್ಲಿ, ಅಂತರಿಕ್ಷ ವೀಕ್ಷಣ ಪಟುವಿನ ದೃಷ್ಟಿಯಲ್ಲಿ ಈ ಭೂಸ್ಥಿರತೆ ಒಂದು ಮಾಯೆ, ಕಸದಂತೆ ಕಳೆಯಬೇಕಾದ ಅಜ್ಞಾನ. ಹೀಗೆ ಬುದ್ಧಿ ಪ್ರೌಢವಾದ ಹಾಗೆಲ್ಲ ಅನುಭವ ವಿಶಾಲವಾದ ಹಾಗೆಲ್ಲ, ಅದು ಕೇವಲ ಇಂದ್ರಿಯಾನುಭೂತಿಯನ್ನು ತಿರಸ್ಕರಿಸಿ ಮಾಯೆಯ ದರ್ಜೆಗೆ ತಳ್ಳುತ್ತದೆ.

ಈಗ ವಿಜ್ಞಾನ ಪ್ರತ್ಯಕ್ಷಾನುಭೂತಿಗೆ ಅಷ್ಟಾಗಿ ಜಗ್ಗಿ ಬಿದ್ದಿಲ್ಲ. ಅದರ ವಸ್ತುಸ್ಥಿತಿಯ ಜ್ಞಾನವೆಲ್ಲ ಅನುಮಿತಿಯ ಕಕ್ಷೆಯಲ್ಲಿ ಸುತ್ತುತ್ತಿದೆ. ವಿಜ್ಞಾನಿಯ ದೃಷ್ಟಿಗೆ ಗೋಚರವಾಗುತ್ತಿರುವ ಈ ವಿಶ್ವದ ಸ್ವರೂಪವೇ ಬೇರೆ. ನಮ್ಮಂಥ ಸಾಮಾನ್ಯರದ್ದೇ ಬೇರೆ. ಆತ ತನ್ನೀ ಅಸ್ಪೃಶ್ಯಲೋಕದಲ್ಲಿ ವಿಹರಿಸುತ್ತಾ ಆ ಲೋಕದ ಮಹಾತ್ಮ್ಯವನ್ನು ರೇಡಿಯೋ, ಕ್ಷಕಿರಣ, ಅಂತರಿಕ್ಷೋದ್ಯಮದ ಮುಂತಾದ ಪವಾಡಗಳಲ್ಲಿ ಆಗಾಗ ಮೆರೆಸುತ್ತಾ, ಈ ವ್ಯಾವಹಾರಿಕ ಮಾಯಾಲೋಕವಿಹಾರಿಗಳಾದ ನಮ್ಮನ್ನು ಚಕಿತಗೊಳಿಸುತ್ತಿರುತ್ತಾನೆ.

ಈ ಬೌದ್ಧಿಕಾನುಭೂತಿಗಳನ್ನು ಕೂಡ ಮಾಯೆಯ ದರ್ಜೆಗೆ ಇಳಿಸುವ ಮಹಾನುಭಾವರುಂಟು. ವಿಜ್ಞಾನಿಯಿಂದ ಸುಖಸಾಧನ ಸೌಕರ್ಯಗಳು ಜಗತ್ತಿನಲ್ಲಿ ಹರಡುತ್ತವೆ. ಆದರೆ ಸಂತೋಷ ಸಾಮರಸ್ಯಗಳು ಹರಡುತ್ತವೆ ಎಂದು ಹೇಳಲಾಗುವುದಿಲ್ಲ. ಅರ್ಥದ ವಿಷಯದಲ್ಲಿ ಅದರ ಕೈವಾಡ ಬಹಳುಂಟು. ಕಾಮಕ್ರೋಧಾದಿ ಅರಿಷಡ್ವರ್ಗಕ್ಕೆ ಅದರ ಪವಾಡಗಳ ಇಂಬುಂಟು.

ಆದರೆ ಧರ್ಮದ ವಿಷಯದಲ್ಲೂ ಮೋಕ್ಷದ ವಿಷಯದಲ್ಲೂ ಅದು ಉದಾಸೀನ. ಆದರೆ ಸಂತೋಷ ಸಮಾಧಾನಗಳಿಗೆ ಧರ್ಮಿಷ್ಠರೂ ಮುಮುಕ್ಷುಗಳೂ ಮೂಲ ನೆಲೆ. ಇವರ ಸ್ಫುರಣಗಳು ಬುದ್ಧಿಶೀತವಾದವು ಇವರು ಇಂದ್ರಿಯಲೋಲುಪರಲ್ಲ. ಪ್ರತಿಷ್ಠಾಕಾಮಿಗಳಲ್ಲ. ತಮ್ಮ ಕಾಮಕ್ರೋಧಾದಿಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ ವೀರರಿವರು. ನಮ್ಮಂಥ ದುರ್ಬಲರೂ ಈ ಬಲವನ್ನು ಸಂಪಾದಿಸಲು ತಕ್ಕ ಸಾಧನಮಾರ್ಗವನ್ನು ಈ ಆತ್ಮಸಂಪನ್ನರು ಹಾಕಿಕೊಟ್ಟಿದ್ದಾರೆ. ಶ್ರೀಮದ್ ಭಾಗವತದ ಸಪ್ತಮಸ್ಕಂದದಲ್ಲಿ ಇವರ ವಿವರಣೆ ಇದೆ. ಅಸಂಕಲ್ಪಾತ್ ಜಯೇತ್ ಕಾಮಂ ಕ್ರೋಧಂ ಕಾಮವಿವರ್ಜನಾತ್ ಮುಂತಾದ ಹೃದ್ಯ ವಾಕ್ಯಗಳಲ್ಲಿ.

ಯಾವ ಜನವೇ ಆಗಲಿ ನಾಡೇ ಆಗಲಿ ಜೀವಂತವಾಗಿದೆ, ಪ್ರೌಢವಾಗಿದೆ ಎನ್ನಿಸಿಕೊಳ್ಳಬೇಕಾದರೆ ಆ ಜನದಲ್ಲಿ ಆ ನಾಡಿನಲ್ಲಿ ಲೋಕೋತ್ತರ ಸ್ಫುರಿತಗಳಿಗೆ ಎಡೆ ಇರಬೇಕು. ಇದನ್ನು ಬಹು ಮನೋಜ್ಞವಾಗಿ ಒಂದು ಸುಭಾಷಿತ ತಿಳಿಸುತ್ತದೆ:

> “ ಯಥಾ ಶರೀರಂ ಕಲ ಜೀವಿತೇನ ವಿನಾಕೃತಂ ಕಾಷ್ಠಮಿವಾವಭಾತಿ
> ತಸ್ಯೈವ ತಜ್ಜೀವಿತಮಪ್ಯವೈಮಿ ಲೋಕೋತ್ತರೇಣ ಸ್ಫುರಿತೇನ ಹೀನಂ

“ ಜೀವದಿಂದ ಬೇರ್ಪಟ್ಟ ಶರೀರ ಹೇಗೆ ಕಟ್ಟಿಗೆಗೆ ಸಮವೋ ಹಾಗೆಯೇ ಲೋಕೋತ್ತರಸ್ಫುರಿತಗಳಿಲ್ಲದ ಬದುಕೂ ಸಹ ಕಟ್ಟಿಗೆಗೆ ಸಮಾನ. ” ಸಂತೋಷ, ಸ್ವಾತಂತ್ರ್ಯ ಹಾಗೂ ಸಮಾಧಾನಗಳಿಗೆ ಆಸೆಪಡುವ ತ್ರಿವರ್ಗ ನಿರಪೇಕ್ಷರಾದ ಮುಮುಕ್ಷುಗಳಿಗೆ ಮಾತ್ರ ಇಂಥ ಸ್ಫುರಿತಗಳು ಬರುತ್ತವೆ, ನಮ್ಮಂಥ ಭವಿಗಳ ಉದ್ಧಾರಕ್ಕೆ.

೨

ದೇವರು

ಬೆಳಿಗ್ಗೆ ಏಳುತ್ತಲೂ ದೇವರನ್ನು ನೆನೆಯುವುದು ನಮ್ಮ ಸಂಪ್ರದಾಯ. ಆದರೆ ದೇವರಿದ್ದಾನೋ ಇಲ್ಲವೋ ಇದು ಇಂದಿನ ಬುದ್ಧಿವಂತರನ್ನು ಕಾಡುವ ಪ್ರಶ್ನೆ. ಇದ್ದಾನೆ ಎಂದರೂ ಜಗತ್ತು ನಡೆಯುತ್ತದೆ, ಇಲ್ಲ ಎಂದರೂ ನಡೆಯುತ್ತದೆ. ಈ ವಿಷಯದಲ್ಲಿ ನಾವೇಕೆ ತಲೆಕೆಡಿಸಿಕೊಳ್ಳಬೇಕು ಎಂಬ ಉದಾಸೀನ ಪಕ್ಷದಲ್ಲೂ ಬಹಳ ಜನರಿದ್ದಾರೆ. ದೇವರ ವಿಷಯದಲ್ಲಿ “ನಿತ್ಯಸ್ಪಷ್ಟ ” ಎಂಬ ವಿಶೇಷಣ ನನ್ನ ಕಿವಿಗೆ ಎಲ್ಲಿಯೋ ಬಿತ್ತು. ನಿಜಗುಣಶಿವಯೋಗಿಗಳದಿರಬಹುದು. ಈ ಮಾತು ನನಗೆ ತುಂಬ ಹಿಡಿಸುತ್ತದೆ. ಈಗ ಇಲ್ಲಿ ಕಾಫಿ ಇದೆಯೇ ಎಂದರೆ ನೋಡಿದರುಂಟು ಇಲ್ಲದಿದ್ದರೆ ಇಲ್ಲ. ಅದು ಇಲ್ಲ–ಉಂಟು ಎಂಬ ಲಕ್ಷಣದ್ದು. ದೇವರು ಎನ್ನುವ ಭಾವವೂ ಅಷ್ಟೇ. ಮನಸ್ಸಿಗೆ ತಂದುಕೊಂಡರೆ ಉಂಟು ಇಲ್ಲದಿದ್ದರೆ ಇಲ್ಲ. ಮಾನವನ ಎಲ್ಲ ಮೌಲ್ಯಗಳೂ ಹೀಗೆಯೇ ಆಚರಣೆಯಲ್ಲಿದ್ದರೆ ಉಂಟು ಇಲ್ಲದಿದ್ದರೆ ಇಲ್ಲ. ಇವೆಲ್ಲ ನಿತ್ಯವೂ ಸ್ಪಷ್ಟವಾಗಬೇಕಾದಂಥ ಮೂರ್ತವಾಗಬೇಕಾದಂಥ ಅಮೂರ್ತ ಹೃದಯಸ್ಪಂದನಗಳು, ಸ್ವಾಂತ ಸ್ಫೂರ್ಜನಗಳು, ಆತ್ಮಾವಿಷ್ಕರಣಗಳು.

ಆರೋಚಕನಾದವನೂ ತನ್ನಿಂದ ತಾನು ಬಿಡಿಸಿಕೊಂಡು ಪಾರಾಗಬೇಕೆಂಬ ಮನಃಪ್ರವೃತ್ತಿಯುಳ್ಳವನೂ ಆದ ಯಾವ ಗಂಡಸಾದರೂ ಸರಿಯೆ ಹೆಂಗಸಾದರೂ ಸರಿಯೆ ತಮ್ಮ ತಮ್ಮ ದೈವವನ್ನು ತಾವೇ ಕಲ್ಪಿಸಿಕೊಳ್ಳಬೇಕಾಗುತ್ತದೆ. ದೇವರು ಅಂಥವರಿಗೆ ಸಿದ್ಧವಸ್ತುವಲ್ಲ. ನಿರ್ಮಿಸಬೇಕಾದ ವಸ್ತು. ಧ್ಯಾನ, ಆವಾಹನ, ಅರ್ಚನ, ಭಜನಾದಿ ತಂತ್ರಗಳಿಂದ ಈ ದೈವಜಾಗರವನ್ನು ನಾವು ತಂದುಕೊಳ್ಳಬಹುದು.

ಅವರವರ ವಾಕ್ಸರ್ಪಿಣೀ ಪ್ರಾರ್ಥನಾ ಫಲ, ಪ್ರತಿಭಾ ಪ್ರವೃತ್ತಿಯ ನಿರ್ಮಿತಿ. ದುಷ್ಯಂತ ಮಹಾರಾಜ ಮಾತಲಿಯೊಡನೆ ಸ್ವರ್ಗಲೋಕದಲ್ಲಿ ಸಂಚರಿಸುತ್ತಿದ್ದಾಗ, ದೇವಗಂಗೆಯ ತೀರದಲ್ಲಿ ತಪೋನಿಷ್ಠೆಯಲ್ಲಿರುವ ದೇವಋಷಿಗಳನ್ನು ಕಂಡು ಆಶ್ಚರ್ಯಪಡುತ್ತಾನೆ. ಎಲ್ಲರೂ ಈ

ಭೋಗಸ್ಥಾನಕ್ಕೆ ಬಂದು ಸುಖಿಸಬೇಕೆಂದು ತಪಸ್ಸು ಮಾಡುತ್ತಿದ್ದಾರೆ ಭೂಲೋಕದಲ್ಲಿ ಆದರೆ ಇಲ್ಲೂ ಇವರು ಸಂಯಮವನ್ನೇ ವರಿಸುತ್ತಿದ್ದಾರಲ್ಲ ಎಂಬ ಬೆರಗು ರಾಜನಿಗೆ. ಅದಕ್ಕೆ ಮಾತಲಿ ಎನ್ನುತ್ತಾನೆ : ಉತ್ಸರ್ಪಿಣೀಖಲು ಮಹತಾಂ ಪ್ರಾರ್ಥನಾ. ಮಹಾತ್ಮರ ಕೋರಿಕೆ ಏರಿಕೆಯಲ್ಲೇ ಇರುತ್ತದೆಯಲ್ಲವೆ? ಎಂದು, ಈ ಏರಿಕೆಯ ತುಟ್ಟತುದಿಯಲ್ಲಿದ್ದಾನೆ ದೇವರು, ಪಾರ್ವತಿ ಪರಮೇಶ್ವರ, ಲಕ್ಷ್ಮೀನಾರಾಯಣ. ನೀನು ಯಾರೆಂದರೆ ಅವರು ಈ ಜಗತ್ತಿನ ವಿಷಯದಲ್ಲಿ ಯಾವುದು ಹೃದಯಕ್ಕೆ ಮುಟ್ಟಿ ಅರಿವಿಗೆ ಎಟುಕದೋ ಆ ವಿಸ್ಮಯಭಾವ, ಬುದ್ಧಿಯ ಬೆಳಕಿನ ಅಂಚಿನಲ್ಲಿರುವ ಮೋಹಕವೂ ಅಜ್ಞೇಯವೂ ಆದ ಕತ್ತಲು, ವ್ಯಾಕುಲತೆ ಅದೇ ದೇವರು. ಪ್ರಕೃತಿ ಎಂಬ ದ್ರೌಪದಿಯ ಸೀರೆಯನ್ನು ಮನುಷ್ಯನ ಬುದ್ಧಿಯೆಂಬ ದುಃಶ್ಯಾಸನ ಎಷ್ಟು ಎಳೆದೆಳೆದು ಗುಡ್ಡೆ ಹಾಕಿದರೂ ಆಕೆ ಎಂದೂ ನಗ್ನಳಾಗಳು. ಕೃಷ್ಣ ಎಂಬ ಅತೀಂದ್ರಿಯ ಸತ್ವ ಆಕೆಯ ಬೆನ್ನ ಹಿಂದೆ ನಿಂತು ಅಕ್ಷಯವಾಗಲಿ ಎಂದು ಹರಸುತ್ತಲೇ ಇರುತ್ತದೆ.

ಈ ವಿಸ್ಮಯಭಾವವೇ ಎಲ್ಲ ಕಾವ್ಯದ ಎಲ್ಲ ಭಕ್ತಿಯ ಮೂಲ, ನಾವರಿಯದೆಯೇ ಭಗವಂತನ ನಿರಂತರ ಸಂಪರ್ಕದಲ್ಲಿದ್ದೇವೆ. ಏಕೆಂದರೆ ಪರಮೇಶ್ವರನನ್ನು ಅಷ್ಟದೇಹಿ ಎಂದು ಯೋಗಿಗಳು ಕರೆದಿದ್ದಾರಲ್ಲವೆ? ಈ ಎಂಟು ಯಾವದು? ಗಾಳಿ, ನೀರು, ಸೂರ್ಯ, ಚಂದ್ರ, ಆಕಾಶ, ಭೂಮಿ, ಮಹಾವಾಲ್ಮೀಕ್ಯಾನುಯಾಯಿಗಳಾಗಿ ಮಹತ್ಕಾರ್ಯದಲ್ಲಿ ತೊಡಗಿರುವ ಮಹಾತ್ಮರು, ಅವರ ಸಾಧನ ಸಂಪತ್ತಿಗಳೂ ಸಹಾಯಕರೂ—ಎಲ್ಲ ಪರಮೇಶ್ವರನ ದೇಹಗಳು. ನಾವು ಮುಟ್ಟಿ ಮುಟ್ಟಿ ಅನುಭವಿಸಬಲ್ಲಂಥವು. ಇವುಗಳ ಸೋಂಕಿಲ್ಲದೆ ಬದುಕುವುದೇ ಕಷ್ಟ. ಈ ಆಶ್ಚರ್ಯಕರವಾದ ಶಿವಸ್ಪರ್ಶವನ್ನು ಪರಿಭಾವಿಸಿ ಸುಖಿಗಳಾಗೋಣ, ರಸಿಕರಾಗೋಣ, ಭವಭೀತಿಯನ್ನಳಿಯೋಣ.

೩

ಶಿಷ್ಟಾಚಾರ

ಸಮಾಜಗಳ ಶ್ರೀಮಂತಿಕೆ ಹಾಗೂ ಕಾರ್ಪಣ್ಯದ ಪ್ರಮಾಣವನ್ನು ಅಲ್ಲಿ ಪ್ರಚಲಿತವಾಗಿರುವ ಅರ್ಥಕಾಮಗಳ ಬಾಹುಲ್ಯ ಕೃಶತೆಗಳು ನಿರ್ಧರಿಸುತ್ತವೆ. ಅರ್ಥಕಾಮಗಳಿಲ್ಲದೆ ಬದುಕೇ ದುಸ್ತರ. ಆದರೆ ಇವು ಸ್ವೈರ ವೃತ್ತಿಗಳು. ಇವುಗಳನ್ನು ಹತೋಟಿಯಲ್ಲಿಡದಿದ್ದರೆ ಆ ಸಮಾಜ ಕೇಡಿಗೀಡಾಗುತ್ತದೆ. ಎಷ್ಟೋ ನಾಗರೀಕತೆಗಳೂ ಸಾಮ್ರಾಜ್ಯಗಳೂ ತಮ್ಮ ತಮ್ಮ ಅರ್ಥಕಾಮಗಳನ್ನು ನಿಯಂತ್ರಿಸುವ ಶಕ್ತಿಯನ್ನು ಕಳೆದುಕೊಂಡು ನಾಶವನ್ನೈದಿವೆ. ಪುರುಷಾರ್ಥಗಳಲ್ಲಿ ನಾಲ್ಕನೆಯದಾದ ಮುಕ್ತಿಯ ಸಿದ್ಧಿ ಇವುಗಳಿಂದ ಬಿಡಿಸಿಕೊಳ್ಳುವುದೇ ಆಗಿದೆ. ಆದರೆ ಮೂರನೆಯದಾದ ಧರ್ಮದ ಗುರಿ ಇವುಗಳ ನಾಶವಲ್ಲ; ನಿಯಂತ್ರಣ—ಬಹುಜನ ಹಿತಾಯ, ಬಹುಜನ ಸುಖಾಯ. ಆದುದರಿಂದ ಕಾಲಕಾಲಕ್ಕೂ ಬದಲಾಗುವ ಈ ಅರ್ಥಕಾಮಗಳ ಸ್ವರೂಪಗಳನ್ನೂ ಗತಿಗಳನ್ನೂ ಅವಲಂಬಿಸಿ ಅವು ಬದಲಾದಂತೆ ಧರ್ಮದ ಸ್ವರೂಪ ಹಾಗೂ ಪ್ರಕ್ರಿಯೆ ಬದಲಾಗುತ್ತಾ ಹೋಗುತ್ತದೆ. ಈ ಬದಲಾವಣೆ ನಿಂತುಹೋದ ಸಮಾಜ ಪ್ರಗತಿಶೂನ್ಯವಾದ ಸಮಾಜ. ಹಳೆಯ ನಿಬಂಧನೆಗಳಲ್ಲೂ ಸೂತ್ರಗಳಲ್ಲೂ ಜನಕ್ಕೆ ಜಿಹಾಸೆ ಹುಟ್ಟಿ, ಹೊಸತು ತಣ್ಣ ಮನಸ್ಸಿನ ಪ್ರಾಜ್ಞರಿಂದ ನಿರ್ಮಾಣವಾಗದೆ, ಜನ ಅರ್ಥ ಕಾಮಗಳ ಹೊಡೆತಕ್ಕೆ ಸಿಕ್ಕಿ ನೆಮ್ಮದಿಗೆಡುತ್ತದೆ. ಬ್ರೇಕಿಲ್ಲದ ವೇಗದ ಗಾಡಿಯಲ್ಲಿ ಪ್ರಯಾಣ ಯಾರಿಗೂ ಕಷ್ಟ. ಆದುದರಿಂದ ಹಿಂದಿನವರು ನಮಗೆ ಬಿಟ್ಟುಹೋಗಿರುವ ಧರ್ಮಶಾಸ್ತ್ರ ಹಾಗೂ ಆಚಾರಸಂಹಿತೆಗಳ ಪುನರವಲೋಕನ ಮತ್ತು ವಿಮರ್ಶೆ ಈಗ ಅತ್ಯವಶ್ಯ. ಇದು ಶುದ್ಧಾಂತಃಕರಣವುಳ್ಳ ಪ್ರಾಜ್ಞರಿಂದ ನಡೆಯಬೇಕಾದ ಕಾರ್ಯ. ಅವರು ಪೂರ್ವಗ್ರಹಪೀಡಿತರಾಗಿರಬಾರದು; ಸದ್ಯದಲ್ಲಿ ಪ್ರಚಲಿತವಾಗಿರುವ ಪ್ರವೃತ್ತಿಗಳನ್ನು ರಾಗ—ದ್ವೇಷ—ಮೋಹಗಳಿಗೀಡಾಗದೆ ನೋಡತಕ್ಕವರಾಗಿರಬೇಕು. ಹಿಂದಿನವರು ಈ ದಿಶೆಯಲ್ಲಿ

ನಮಗಿಂತ ತುಂಬ ಮುಂದುವರಿದವರು ಎನಿಸುತ್ತದೆ. ಈ ಒಂದು ಸಂಗತಿಯನ್ನು ನೋಡಿರಿ, ಚಾರಿಣಿಯಾದ ಒಬ್ಬ ಹೆಂಗಸು ಸತ್ತರೆ ಆಕೆಯ ಗೂಢಪತಿಗೂ ಊಢ ಎಂದರೆ ಮದುವೆಯಾದ ಪತಿಗೂ ಅಶೌಚವನ್ನು ವಿಧಿಸುತ್ತದೆ ಧರ್ಮಶಾಸ್ತ್ರ. ಒಂದು ಸಾಮಾಜಿಕ ಪರಿಸ್ಥಿತಿಯನ್ನು ಗುರುತಿಸಿ ಅದಕ್ಕೊಂದು ಸ್ಥಾನಮಾನವನ್ನು ಕಲ್ಪಿಸುವ ಹವಣಿಕೆ ಇಲ್ಲಿ ಕಂಡುಬರುತ್ತದೆ. ಹೀಗೆಯೇ ಇನ್ನೂ ಅನೇಕ ಸ್ವಾರಸ್ಯವಾದ ಸಂಗತಿಗಳು ಈ ಅಧ್ಯಯನದಿಂದ ಹೊರಬೀಳುತ್ತವೆ. ಈ ನಿಯಮಗಳಲ್ಲಿ ಎಷ್ಟೋ ಈಗ ಆಚರಣೆಯಲ್ಲಿಲ್ಲ. ಯಾವುವು ಜೀವಂತವಾಗಿ ಅನುಷ್ಠಾನದಲ್ಲಿವೆ, ಯಾವುವು ಇಲ್ಲ, ಯಾವವನ್ನು ಕಟ್ಟಿಕೊಳ್ಳಬೇಕು, ಯಾವವನ್ನು ಬಿಡಬೇಕು, ಯಾವ ಹೊಸ ಸೂತ್ರಗಳನ್ನು ಸೇರಿಸಬೇಕು—ಇದನ್ನು ಪ್ರಾಜ್ಞರೆಲ್ಲರೂ ಆಲೋಚಿಸಬೇಕು. ಯಾವುದು ಶಿಷ್ಟ ಸಮ್ಮತವೋ ಅದು ಎಲ್ಲರೂ ಸ್ವೀಕರಿಸಬೇಕಾದ ಆಚಾರ. ಶಿಷ್ಟರೆಂದರೆ ಯಾರು? ಭಗವಾನ್ ಬೋಧಾಯನರು ಅವರ ಲಕ್ಷಣವನ್ನು ಈ ರೀತಿಯಾಗಿ ನಿರೂಪಿಸಿದ್ದಾರೆ: "ಶಿಷ್ಟಾಃ ಖಲು ವಿಗತಮತ್ಸರಾಃ ನಿರಹಂಕಾರಾಃ ಕುಂಭೀಧಾನ್ಯಾಃ ಅಲೋಲುಪಾಃ ದಂಭದರ್ಪಲೋಭಮೋಹಕ್ರೋಧವಿವರ್ಜಿತಾಃ ಇತಿ. ಸದಾಚಾರ ಯಾವುದು? ದಯಾದಾಕ್ಷಿಣ್ಯ ವಿನಯಾದ್ಯನ್ವಿತೇ ವೃತ್ತ ವಿಶೇಷ ಆಚಾರಃ ನಾತಾಪ್ಯಶ ಗುಣವಂತ ಶಿಷ್ಟಾ ಇತಿ ಚ. ಆದರೆ ಈ ಕಾಲದಲ್ಲಿ ಇಂಥವರನ್ನೆಲ್ಲಿ ಕಾಣಬೇಕು? ಅದಕ್ಕೇ ಸಮಾಜ ಕಟ್ಟು ಹರಿದ ಹಂಚಿನಂತಿದೆ. ಸದ್ಯಕ್ಕೆ ನಾವು ಯಾರನ್ನು ಸತ್ಪುರುಷರೆಂದು ಭಾವಿಸುತ್ತೇವೋ ಅವರು ಹೇಳಿದಂತೆ ಸ್ವಲ್ಪಮಟ್ಟಿಗಾದರೂ ಕೇಳೋಣ :—

ಆಚಾರಲಕ್ಷಣೋ ಧರ್ಮಃ ಸಂತಶ್ಚಾಚಾರಲಕ್ಷಣಾಃ
ಸಾಧೂನಾಂ ಚ ಯಥಾವೃತ್ತಂ ಏತದಾಚಾರಲಕ್ಷಣಂ—
ಕರ್ಮಣಾ ಮನಸಾ ವಾಚಾ ಯ ಯತ್ನಾದ್ಧರ್ಮಂ ಸಮಾಚರೇತ್
ಅಸ್ವರ್ಗ್ಯಂ ಲೋಕವಿದ್ವಿಷ್ಟಂ ಧರ್ಮಮಪ್ಯಾಚರೇನ್ನತು

"ಸಂತರು ಹೇಗೆ ನಡೆದುಕೊಳ್ಳುತ್ತಾರೋ ಅದೇ ಆಚಾರ ಅದೇ ಧರ್ಮದ ಲಕ್ಷಣ. ನಮ್ಮನ್ನು ಉತ್ತಮ ಸ್ಥಿತಿಗೇರಿಸದ ಹಾಗೂ ಜನಕ್ಕೆ ಜಿಹಾಸೆ ಹುಟ್ಟಿಸುವ ಯಾವ ಕೆಲಸವನ್ನೂ" ಆಚಾರವನ್ನೂ ಅದು ಒಂದು ವೇಳೆ ಧರ್ಮವೆನಿಸಿಕೊಂಡಿದ್ದರೂ ಕೂಡ ನಾವು ಮಾಡಬಾರದು. ಸದ್ಯಕ್ಕೆ ಈ ನಿಯಮಗಳು ಸಾಕಲ್ಲವೆ?

೬

ಸುಭಾಷಿತಗಳು

ಈ ಜಗತ್ತು, ಅದರಲ್ಲೂ ಮನುಷ್ಯನ ಸ್ವಭಾವ, ಹಿಂದೆ ಹೇಗಿತ್ತೋ ಇಂದೂ ಹಾಗೆಯೇ ಇದೆ, ಮುಂದೆಯೂ ಹಾಗೆಯೇ ಇರುತ್ತದೆ. ಅದಕ್ಕಾಗಿಯೇ ಸುಭಾಷಿತಗಳು ಯಾವ ಕಾಲದ್ದಾದರೂ ಸರಿಯೆ, ಯಾವ ದೇಶದ್ದಾದರೂ ಸರಿಯೆ, ನಮಗೆ ಪ್ರಿಯವಾಗಿರುವುದು. ಕೆಲವು ನಮ್ಮ ಆಲೋಚನೆಯನ್ನು ಕುಮರಿಸುತ್ತವೆ, ಕೆಲವು ಲೋಕದ ವಿಚಿತ್ರ ನಡೆವಳಿಕೆಗಳಿಗೆ ಕನ್ನಡಿ ಹಿಡಿಯುತ್ತವೆ, ಕೆಲವು ಜ್ಞಾನದ ಮಡುವಾಗಿವೆ, ಕೆಲವು ನಿಜವನ್ನು ತಿಳಿಸುವುದರ ಜೊತೆಗೆ ನಗೆಯನ್ನೂ ಬರಿಸುತ್ತವೆ. ಈಗ ಹೆಚ್ಚು ಕೆಲಸವಿಲ್ಲದೆ, ಆದರೆ ಚೆನ್ನಾಗಿ ಮೇದುಕೊಂಡಿರುವ ದೇವಸ್ಥಾನದ ಎತ್ತನ್ನು ಕುರಿತ ಈ ಪದ್ಯವನ್ನು ನೋಡಿ:

ನ್ಯಾಸ ಭಾರಗ್ರಹೇ ಶಕ್ತಿಃ ನ ಚ ವಾಹಗುಣಃ ಕೃಷಾ—
ದೇವಾಲಯ ಬಲೀವರ್ದಃ ತಥಾಪ್ಯಶ್ನಾತಿ ಶೋಭನಂ

ಹೇರನ್ನು ಹೊರಲಾರದು, ನೇಗಿಲನ್ನೆಳೆಯಲಾರದು, ಆದರೂ ಪುಷ್ಕಳವಾಗಿಯೇ ಮೇಯುತ್ತಿದೆ

ಈ ದೇವಸ್ಥಾನದ ಎತ್ತು. ನೋಡಿದಿರಾ, ನಮ್ಮ ದೇಶದಲ್ಲಿ ಇಂಥ ಸಂಸ್ಥೆಗಳೂ ಬಲೀವರ್ದಗಳೂ ಎಷ್ಟು ಬೇಕು ನಿಮಗೆ.

ಚಂದ್ರನನ್ನು ಕುರಿತ ಒಂದು ಪದ್ಯ ಹೀಗಿದೆ:

ಕ್ಷೀಣಶ್ಚಂದ್ರೋ ವಿಶತಿತರಣೇರ್ಮಂಡಲಂ ಮಾಸಿ ಮಾಸಿ
ಲಬ್ಧ್ವಾ ಕಾಂಚಿತ್ ಪುನರಪಿ ಕಲಾಂ ದೂರ ದೂರಾಸುಮಾರ್ತೀ
ಸಂಪೂರ್ಣಶ್ಚೇತ್ ಕಥಮಪಿ ತಥಾ ಸ್ಪರ್ಧಯೇ ದೇತಿ ಭಾನೋ
ನೋಗಕಾ ಜಗನ್ಯಾತ್ ವಿರಮತಿ ಜಡೋನಾಪಿ ದೈನ್ಯಾತ್ ನ್ಯರಂಸೇತ್ ಧಾರಾಧರಸ್ಯ

ಚಂದ್ರ ಏನೂ ಇಲ್ಲದವನಾದಾಗ ಸೂರ್ಯನ ಮನೆ ಬಾಗಿಲಲ್ಲೇ ಕಾಯುತ್ತಿರುತ್ತಾನೆ, ಏಕೆ, ಕಾಲಿಗೇ ಬೀಳುತ್ತಾನೆ, ಎನ್ನಿ. ಅಮಾವಾಸ್ಯೆಯ ದಿನ, ಒಂದಿಷ್ಟು ಕಳೆಯನ್ನು ಪಡೆದು ಕೊಳುತ್ತಾ ಕೊಳ್ಳುತ್ತಾ ಪಡೆದ ಹಾಗೆಲ್ಲ ದೂರ ದೂರ ಸರಿಯುತ್ತಿರುತ್ತಾನೆ, ಕೊನೆಗೊಂದು ದಿನ ತುಂಬಿಕೊಳ್ಳುತ್ತಲೂ ಇವನಿಗೇನು ನಾನು ಕಡಿಮೆ ಎಂದುಕೊಂಡು ಎದುರು ದಿಕ್ಕಿನಲ್ಲೇ ಮೂಡಿ ಬಿಡುತ್ತಾನೆ. ಈ ಕೆಲಸಕ್ಕೆ ಬಾರದ ದುಷ್ಟ ತನ್ನ ದುಷ್ಟತನವನ್ನೂ ಬಿಡುವೊಲ್ಲ . ದೈನ್ಯವನ್ನೂ ಬಿಡವೊಲ್ಲ. ಇದಕ್ಕೆ ಬೇರೆ ವ್ಯಾಖ್ಯಾನ ಅವಶ್ಯಕವಿಲ್ಲವಷ್ಟೆ.

ಅನುಭವಸ್ಥನೊಬ್ಬ ಆಡಿದ ಮಾತಿದು :

ಪ್ರಾವಿಣ್ ಮೇಘಸ್ಯ ಮಾಲಿನ್ಯೇ ಕೋ ದೇಷೋ ಭೂರಿವರ್ಷಿಣಃ
ಶಾರದಾಭ್ರಸ್ಯ ಶುಭ್ರತ್ವಂ ವದ ಕುತ್ರೋಪಯುಜ್ಯತೇ–

ಸಾಕು ಬೇಕಾದಷ್ಟು ಮಳೆಗರೆಯುವ ಮುಂಗಾರು ಮೋಡ ಶುದ್ಧವಾಗಿಲ್ಲದಿದ್ದರೇನಂತೆ, ಅದೇನು ಮಹಾದೋಷವೇ ? ಶರತ್ಕಾಲದ ಮೋಡ ಬೆಳ್ಳಗೆ ಶುಭ್ರವಾಗಿದೆ, ಅದರಿಂದ ಯಾರಿಗೆ ಏನಾ ದಂತಾಯಿತು ? ಒಳ್ಳೆ ಅನುಭವಿಯ ಮಾತು. ಒಂದು ನರಿಯ ಕಥೆಯನ್ನು ಖಲೀಲ್ ಗಿಬ್ರಾನ್ ಎಂಬ ಕವಿ ಸ್ವಾರಸ್ಯವಾಗಿ ಹೇಳಿದ್ದಾನೆ. ಒಂದು ನರಿ ಬೆಳಿಗ್ಗೆ ಎದ್ದು ತನ್ನ ನೆರಳನ್ನು ನೋಡಿ ಕೊಂಡಿತಂತೆ. ಅದು ಉದ್ದವಾಗಿ ತೋರವಾಗಿತ್ತು. ಅದನ್ನು ಕಂಡು ಈ ದಿನ ನಾನು ಒಂದು ಒಂಟೆಯನ್ನೇ ಹೊಡೆದು ತಿಂದುಬಿಡುತ್ತೇನೆ ಎಂದುಕೊಂಡು ಮಧ್ಯಾಹ್ನದವರೆಗೂ ಒಂಟೆಯನ್ನು ಹುಡುಕುತ್ತಾ ಅಲೆಯಿತಂತೆ ಆ ನರಿ. ಹೀಗೆ ದಣಿದು ಮಧ್ಯಾಹ್ನ ತನ್ನ ನೆರಳನ್ನು ತಿರುಗಿ ನೋಡುತ್ತದೆ, ಚೋಟುದ್ದ ತನ್ನ ಕಾಲಡಿಯಲ್ಲೇ ಅದು ಬಿದ್ದಿದೆ. ಅದನ್ನು ಕಂಡು ಈಗ ನನಗೆ ಒಂದು ಮುಂಡಿಲಿ ಸಿಕ್ಕಿದರೂ ಸಾಕು ಎಂದುಕೊಂಡಿತಂತೆ. ನಮ್ಮ ಆಸೆ ನಮ್ಮ ಸಾಮರ್ಥ್ಯ ದ್ದಳತೆ ಮೀರಬಾರದಲ್ಲವೆ ?

ಪುಸ್ತಕ ಲೋಕ

ಕೃಷಿ ಮಾರುಕಟ್ಟೆಗಳು :–ಲೇಖಕರು ಶ್ರೀ ಡಿ. ವೆಂಕಟರಾವ್ ಎಂ. ಎ., ಪ್ರಕಾಶಕರು ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ. ಬೆಲೆ ರೂ. 5-00

'ಕೃಷಿ ಮಾರುಕಟ್ಟೆಗಳು' ಮೈಸೂರು ವಿಶ್ವವಿದ್ಯಾಲಯ ಪ್ರಸಾರಾಂಗದ ಗೃಹಸರಸ್ವತೀ ಗ್ರಂಥಮಾಲೆಯ ಪ್ರಕಟಣೆ. ಅರ್ಥಶಾಸ್ತ್ರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಹಲವಾರು ಗ್ರಂಥಗಳನ್ನು ಬರೆದಿರುವ ಶ್ರೀ ಡಿ. ವೆಂಕಟರಾವ್ ಪ್ರಸ್ತುತ ಗ್ರಂಥದ ಲೇಖಕರು. ಈ ಗ್ರಂಥಮಾಲೆಯನ್ನು ಕುರಿತು ಪ್ರಾರಂಭದಲ್ಲಿಯೇ ಸವಿಸ್ತಾರ ಪ್ರಸ್ತಾಪ ಮಾಡಲಾಗಿದೆ. "....ಸುಸಂಸ್ಕೃತ ವ್ಯಕ್ತಿಗೆ ಅತ್ಯಗತ್ಯವಾದ ತಿಳಿವಿನ ಎಲ್ಲ ವಿಭಾಗಗಳನ್ನೂ ಅವು ಒಳಗೊಳ್ಳುತ್ತವೆ. ಉನ್ನತ ಶಿಕ್ಷಣವನ್ನು ಪಡೆಯುವ ಅವಕಾಶವನ್ನೂ ಹೊಂದದ ಸಾಮಾನ್ಯ ಜನರ ಜ್ಞಾನ ತೃಷೆಯನ್ನು ತೃಪ್ತಿಗೊಳಿಸುವುದು, ಇನ್ನೂ ಓದಬೇಕೆಂಬ ಆಸೆಯನ್ನು ಅವರಲ್ಲಿ ಕೆರಳಿಸುವುದು ಈ ಪುಸ್ತಕಗಳ ಗುರಿ...." ಎಂದು ಹೇಳಲಾಗಿದೆ. ಬಹುಶಃ ಈ ಎಲ್ಲಾ ಗುರಿಗಳನ್ನೂ ಒಟ್ಟಿಗೇ ಸಾಧಿಸುವುದು ಸಾಹಸದ ಕಾರ್ಯವೇ ಸರಿ. ಆದರೂ ಕನ್ನಡ ಮಾಧ್ಯಮವನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಜಾರಿಗೆ ತರುವಲ್ಲಿ ಮೈಸೂರು ವಿಶ್ವವಿದ್ಯಾಲಯ ಇಟ್ಟ ದಿಟ್ಟ ಹೆಜ್ಜೆ, ಕನ್ನಡ ಪುಸ್ತಕಗಳ ಕೊರತೆಯನ್ನು ನೀಗಲು ಪ್ರಸಾರಾಂಗ ಕೈಗೊಂಡ ಕಾರ್ಯಕ್ರಮಗಳು ಶ್ಲಾಘನೀಯವಾದವುಗಳು.

ಕೃಷಿ ಕ್ಷೇತ್ರದಲ್ಲಿ ಇಂದು ಕ್ರಾಂತಿಕಾರಕ ಬದಲಾವಣೆಗಳು ಆಗುತ್ತಿರುವುದು ಸರ್ವವಿದಿತ. ಆಹಾರದ ವಿಷಯದಲ್ಲಿ ಸ್ವಾವಲಂಬನೆಯನ್ನು ಸಾಧಿಸುವುದು ನಮ್ಮ ಯೋಜನಾ ಕಾರ್ಯಕ್ರಮಗಳ ಗುರಿಗಳಲ್ಲೊಂದು. ಆದರೆ ನಾವಿನ್ನೂ ಸ್ವಾವಲಂಬನೆಯನ್ನು ಸಾಧಿಸದಿರುವುದು ಖೇದಸ್ಪಷ್ಟಕರ. ಕಳೆದ ದಶಕದಿಂದೀಚೆಗೆ ಕೃಷಿ ವಿಧಾನಗಳು, ಭೂಬಳಕೆ, ಸಾಲ ಮಾರಾಟಗಳ ವಿಷಯದಲ್ಲಿ ಗಮನಾರ್ಹ ಬದಲಾವಣೆಗಳಾಗಿವೆ. ಕೇವಲ ತನ್ನ ಜೀವನಕ್ಕಾಗಿ ಮಾತ್ರ ಆಹಾರವನ್ನು ಬೆಳೆದುಕೊಳ್ಳುತ್ತಿದ್ದ ರೈತ ಇಂದು ಮಾರುಕಟ್ಟೆಗಾಗಿ ಆಹಾರ ಮತ್ತು ಹಣದ ಬೆಳೆಗಳನ್ನೂ ಬೆಳೆಯುತ್ತಿದ್ದಾನೆ. ಉತ್ಪಾದನೆಯೇ ಕಡಿಮೆಯಿದ್ದಾಗ, 'ಮಾರಾಟ ಹೆಚ್ಚಳ'ವೇ ಇಲ್ಲದಿದ್ದಾಗ ಮಾರುಕಟ್ಟೆಯ ಅಗತ್ಯ ಕಂಡುಬರುವುದೇ ಇಲ್ಲ. ಆದರೆ ಇಂದು ವ್ಯವಸ್ಥಿತ ಮಾರುಕಟ್ಟೆಗಳ ಅಗತ್ಯ ಹೆಚ್ಚಾಗಿ ಕಂಡುಬರುತ್ತಿದ್ದು, ನಿಯಂತ್ರಿತ ಮಾರುಕಟ್ಟೆಗಳು ಹಾಗೂ ಸಹಕಾರಿ ಮಾರಾಟ ಸಂಘಗಳ ಸ್ಥಾಪನೆಯಾಗಿದೆ. ಹರಾಜು, ಟೆಂಡರ್ ಪದ್ಧತಿ, ಒಂದೇ ಬಗೆಯ ತೂಕ–ಅಳತೆ, ವರ್ಗೀಕರಣ, ಉಗ್ರಾಣ ಸೌಲಭ್ಯ ಮೊದಲಾದುವುಗಳನ್ನು ಒದಗಿಸಲಾಗಿದೆ. ವ್ಯವಸ್ಥಿತ ಮಾರುಕಟ್ಟೆಯೊಂದು ಋತುಮಾನ ಬೆಲೆ ಏರಿಳಿತಗಳನ್ನು ನಿಷ್ಕ್ರಿಯಗೊಳಿಸಿ ಬೆಳೆಗಾರರಿಗೆ ಯೋಗ್ಯ ಬೆಲೆಯನ್ನು ಒದಗಿಸುತ್ತದೆ. ಅನೇಕ ಸುಧಾರಣೆಗಳನ್ನು ಈ ದಿಸೆಯಲ್ಲಿ ಮಾಡಲಾಗಿದೆಯಾದರೂ ಅವುಗಳ ಪ್ರಯೋಜನ ರೈತರಿಗೆ ಎಷ್ಟರ ಮಟ್ಟಿಗೆ ಆಗಿದೆ ಎಂಬುದು ಮುಖ್ಯ. ನಿಯಂತ್ರಿತ ಮಾರುಕಟ್ಟೆಗಳಲ್ಲೂ ಸಹ ದಲ್ಲಾಳಿ ಮತ್ತು ಮಧ್ಯವರ್ತಿಗಳ ಹಾವಳಿ ತಪ್ಪಿದಂತೆ ಕಂಡುಬರುತ್ತಿಲ್ಲ. ಅನಿಯಂತ್ರಿತ ಮಾರುಕಟ್ಟೆಯ ಹಲವಾರು ಲೋಪದೋಷಗಳು ನಿಯಂತ್ರಿತ ಮಾರುಕಟ್ಟೆಗಳಲ್ಲಿ ಇನ್ನೂ ಉಳಿದುಕೊಂಡಿವೆ.

ಸಹಕಾರಿ ಮಾರಾಟ ಚಳುವಳಿ 1912ರಲ್ಲೇ ಪ್ರಾರಂಭವಾಯಿತು. ಆದರೂ ಇನ್ನೂ ಸಾಲ-ಮಾರಾಟಗಳ ಸಮರ್ಪಕ ಜೋಡಣೆಯಾಗಿಲ್ಲ. ಉತ್ಪಾದಕ-ಅನುಭೋಗಿ ಹತ್ತಿರವಾಗಲೂ

ಇಲ್ಲ, ರೈತನ ಕಷ್ಟ ಪರಿಹಾರವಾಗಲೂ ಇಲ್ಲ. ಸಹಕಾರಿ ಮಾರಾಟ ಸಂಘಗಳ ದೋಷಗಳನ್ನು ಲೇಖಕರು ಯಶಸ್ವಿಯಾಗಿ ಹೇಳಿದ್ದಾರೆ (ಪುಟ 75). ಈ ಸಂಘಗಳನ್ನು ಅಭಿವೃದ್ಧಿಗೊಳಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಕುರಿತ ಲೇಖಕರ ವಿವೇಚನೆ ಅತ್ಯಂತ ಉಪಯುಕ್ತವಾಗಿದೆ. ‘ಕರ್ನಾಟಕದಲ್ಲಿ ಮಾರುಕಟ್ಟೆಗಳ ಬೆಳವಣಿಗೆ’ ಎಂಬ ಅಧ್ಯಾಯವು ಕೃತಿಯ ಪ್ರಾಯೋಗಿಕ ಮೌಲ್ಯವನ್ನು ಹೆಚ್ಚಿಸಿದೆ.

ವಿಮರ್ಶಾತ್ಮಕವಲ್ಲದಿದ್ದರೂ, ಗ್ರಂಥಮಾಲೆಯ ಉದ್ದೇಶಗಳ ಚೌಕಟ್ಟಿನಲ್ಲಿಯೇ ವಿಷಯಗಳನ್ನು ಸಮರ್ಥವಾಗಿ ಓದುಗರ ಮುಂದಿಡಲು ಲೇಖಕರು ಪ್ರಯತ್ನಿಸಿದ್ದಾರೆ. ಈ ದಿಸೆಯಲ್ಲಿ ಗ್ರಂಥಮಾಲೆಯ ಉದ್ದೇಶ ಸಾರ್ಥಕವಾಗಿದೆಯೆಂದೇ ಹೇಳಬೇಕು. ಯಾವುದನ್ನೇ ಆಗಲಿ ಸರಳವಾಗಿ ಹೇಳುವ ಕಲೆಯನ್ನು ಮೈಗೂಡಿಸಿಕೊಂಡಿರುವ ಶ್ರೀ ಡಿ. ವೆಂಕಟರಾವ್ ಬರೆದಿರುವ ‘ಕೃಷಿಮಾರುಕಟ್ಟೆಗಳು’ ಗ್ರಂಥವು ಗೃಹಸರಸ್ವತೀ ಗ್ರಂಥಮಾಲೆಗೆ ಒಂದು ಉತ್ತಮ ಸೇರ್ಪಡೆಯಾಗಿದೆ.

ಈಚನೂರು ರಾಜರತ್ನಂ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ .... ನಾಲ್ಕು ರೂಪಾಯಿ

ಇತರರಿಗೆ .... ಆರು ರೂಪಾಯಿ

ಸಂಸ್ಥೆಗಳಿಗೆ .... ಎಂಟು ರೂಪಾಯಿ

(ಅಜೀವ ಸದಸ್ಯತ್ವ: ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ ಮೈಸೂರು–೫೭೦ ೦೦೬